ಗುರುವಾರ, ಫೆಬ್ರುವರಿ 9, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 40 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗೆ ಉಪಯೋಗವಾಗುವ ಪ್ರಚಲಿತ ವಿದ್ಯಮಾನ 'ಆರ್ಟ್‌ಪಾರ್ಕ್' ಕುರಿತ ಮಾಹಿತಿ ಇಲ್ಲಿದೆ.

ಆಳ-ಅಗಲ
ನಡುಕ ಹುಟ್ಟಿಸುವ ಭೂಮಿಯಾಳದ ಕದಲಿಕೆ

'ಫೆ.14ರಂದು 'ಗೋವು ಅಪ್ಪಿಕೊ ದಿನ' ಆಚರಿಸಿ' 9

₹31,500 ಕನಿಷ್ಠ ವೇತನ ನಿಗದಿಗೆ ಆಗ್ರಹ 8

ಸೆನ್ಸೆಕ್ಸ್	ನಿಫ್ಟಿ	₹/$
60,663 ▲	17,871 ▲	82.51 ▲

ಕೇಂದ್ರ ಭೂ ಸಾರಿಗೆ ಸಚಿವಾಲಯದ ಒಪ್ಪಿಗೆ • ಗತಿಶಕ್ತಿ ಯೋಜನೆಯಡಿ ಕಾಮಗಾರಿ

ಹೆದ್ದಾರಿ ಅಭಿವೃದ್ಧಿಗೆ ₹3,579 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಆರು ಕಡೆಗಳಲ್ಲಿ ₹3,579 ಕೋಟಿ ಮೊತ್ತದಲ್ಲಿ ಹೆದ್ದಾರಿಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವಾಲಯ ಒಪ್ಪಿಗೆ ನೀಡಿದೆ.

ಈ ಸಂಬಂಧ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಬುಧವಾರ ಸರಣಿ ಟ್ವೀಟ್‌ಗಳನ್ನು ಮಾಡಿದ್ದು, 'ಗತಿ ಶಕ್ತಿ ಯೋಜನೆಯಡಿ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, ಕರ್ನಾಟಕ ಪ್ರಗತಿಯ ಪಥದಲ್ಲಿದೆ' ಎಂದು ಹೇಳಿಕೊಂಡಿದ್ದಾರೆ.

ಮಹಾರಾಷ್ಟ್ರ-ಕರ್ನಾಟಕ ಗಡಿಯ ರಾಷ್ಟ್ರೀಯ ಹೆದ್ದಾರಿ '166 ಇ'ಯಲ್ಲಿ ಕನಮಡಿ- ಬಿಜ್ಜೋಡಿ- ತಿಕೋಟಾ ದ್ವಿಪಥ ರಸ್ತೆಯನ್ನು ₹196.05 ಕೋಟಿ ವೆಚ್ಚದಲ್ಲಿ ವಿಸ್ತರಿಸಲು ಒಪ್ಪಿಗೆ ನೀಡಲಾಗಿದೆ.

ಮಹಾರಾಷ್ಟ್ರ ಗಡಿಯ ರಾಷ್ಟ್ರೀಯ ಹೆದ್ದಾರಿ 548 ಬಿ ಯಲ್ಲಿ ಮುರುಂನಿಂದ ಐಬಿ ವೃತ್ತದವರೆಗೆ ₹957 ಕೋಟಿ ಮೊತ್ತದಲ್ಲಿ ಹೆದ್ದಾರಿ ವಿಸ್ತರಣೆ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತದೆ. ಇದರಿಂದ ಕಲಬುರಗಿ ಹಾಗೂ ವಿಜಯಪುರ ಜಿಲ್ಲೆಗಳ ಜನರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಗಡ್ಕರಿ ಪ್ರತಿಪಾದಿಸಿದ್ದಾರೆ.

ಕೊಪ್ಪಳ ಹಾಗೂ ಗದಗ ಜಿಲ್ಲೆಗಳಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 367ರಲ್ಲಿ ಭಾನಾಪುರ-ಗದ್ದನಕೇರಿ ವಿಭಾಗದ ಕುಕನೂರು, ಯಲಬುರ್ಗಾ ಹಾಗೂ ಗಜೇಂದ್ರಗಡದಲ್ಲಿ ಬೈಪಾಸ್ ನಿರ್ಮಿಸಲಾಗುತ್ತದೆ. ಇದಕ್ಕೆ ₹ 333.96 ಕೋಟಿ ವೆಚ್ಚ ಮಾಡಲಾಗುತ್ತದೆ. 'ಹಾವೇರಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಗಜೇಂದ್ರಗಡದಲ್ಲಿ (ಉಣಚಗೇರಿಯಲ್ಲಿ ಪ್ರಾರಂಭಗೊಂಡು ಕೊಡಗಾನೂರ, ಪುರ್ತಗೇರಿ ಹಾಗೂ ರಾಜೂರ ಒಳಗೊಂಡು) ಬೈಪಾಸ್ ನಿರ್ಮಾಣಕ್ಕೆ ₹110 ಕೋಟಿ ವೆಚ್ಚ ಆಗಲಿದೆ. ಇದರಲ್ಲಿ ಭೂಸ್ವಾಧೀನ ವೆಚ್ಚವೂ ಸೇರಿದೆ' ಎಂದು ಸಂಸದ ಶಿವಕುಮಾರ ಉದಾಸಿ ತಿಳಿಸಿದ್ದಾರೆ.

ಅದೇ ರೀತಿ, ಬಾಗಲಕೋಟೆ ಜಿಲ್ಲೆಯ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 367ರಲ್ಲಿ ಸರ್ಜಾಪುರದಿಂದ ಪಟ್ಟಣಕಲ್ಲುವಿನವರೆಗೆ ₹445.62 ಕೋಟಿ ವೆಚ್ಚದಲ್ಲಿ ವಿಸ್ತರಣೆ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತದೆ. ಈ ಯೋಜನೆಗಳಿಗೆ ಅನುಮೋದನೆ ಕೊಡಲಾಗಿದೆ ಎಂದು ಗಡ್ಕರಿ ಮಾಹಿತಿ ನೀಡಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಮೈಸೂರು ಹಾಗೂ ಕುಶಾಲನಗರ ಭಾಗದಲ್ಲಿ ₹909.86 ಕೋಟಿ ಮೊತ್ತದಲ್ಲಿ ನಾಲ್ಕು ಪಥಗಳ ಹೆದ್ದಾರಿ ಅಭಿವೃದ್ಧಿಪಡಿಸಲಾಗುತ್ತದೆ. ಕುಶಾಲನಗರ ಬೈಪಾಸ್‌ನ ಪ್ರಾರಂಭದಲ್ಲಿ ಗುಡ್ಡೆ ಹೊಸೂರಿನಿಂದ ಈ ಕಾಮಗಾರಿ ನಡೆಸಲಾಗುತ್ತದೆ. ಅದೇ ರೀತಿಯಲ್ಲಿ, ಇಲವಾಲ-ಕೆ.ಆರ್.ನಗರ ರಸ್ತೆ ಜಂಕ್ಷನ್‌ನ ಯಲಚಹಳ್ಳಿಯಿಂದ ಶ್ರೀರಂಗಪಟ್ಟಣದ ಬೈಪಾಸ್ ವರೆಗೆ ನಾಲ್ಕು ಪಥದ ಹೆದ್ದಾರಿ ಅಭಿವೃದ್ಧಿ ಮಾಡಲಾಗುವುದು. ಈ ಯೋಜನೆಗೆ ₹739.39 ಕೋಟಿ ವೆಚ್ಚ ಮಾಡಲಾಗುತ್ತದೆ. ಈ ಯೋಜನೆಗಳಿಗೆ ಸಹ ಅನುಮೋದನೆ ನೀಡಲಾಗಿದೆ ಎಂದು ಸಚಿವ ಗಡ್ಕರಿ ಅವರು ತಿಳಿಸಿದ್ದಾರೆ.

ಚಾಮುಂಡಿ ಬೆಟ್ಟ, ಕೊಡಚಾದ್ರಿ ಸೇರಿ 15 ಕಡೆ ರೋಪ್‌ವೇ

ನವದೆಹಲಿ: ಉಡುಪಿ ಜಿಲ್ಲೆಯ ಕೊಡಚಾದ್ರಿ ಪರ್ವತದಲ್ಲಿ ರೋಪ್‌ವೇ ಯೋಜನೆ ಆರಂಭಿಸಲು ಕಾರ್ಯಸಾಧ್ಯತಾ ಅಧ್ಯಯನ ನಡೆಸಲಾಗಿದೆ. ಉಳಿದ 14 ಬೆಟ್ಟಗಳಲ್ಲಿ ಈ ಯೋಜನೆಯ ಆರಂಭಕ್ಕೆ ಪೂರ್ವ ಕಾರ್ಯಸಾಧ್ಯತಾ ಅಧ್ಯಯನ ಮಾಡಲಾಗಿದೆ ಎಂದು ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಬುಧವಾರ ಸದಸ್ಯ ನಾರಾಯಣ ಕೊರಗಪ್ಪ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, 'ಕರ್ನಾಟಕ ಸರ್ಕಾರವು 15 ಯೋಜನೆಗಳ ಪ್ರಸ್ತಾವ ಕಳುಹಿಸಿದೆ' ಎಂದು ತಿಳಿಸಿದ್ದಾರೆ.

ಈ ಸಲದ ಕೇಂದ್ರ ಬಜೆಟ್‌ನಲ್ಲಿ ಪರ್ವತಮಾಲಾ ಯೋಜನೆಯನ್ನು ಪ್ರಕಟಿಸಲಾಗಿದೆ. ಈ ಯೋಜನೆಯ ಆರಂಭವಾದರೆ ಗುಡ್ಡಗಾಡು ಪ್ರದೇಶಗಳಿಗೆ ಜನರ ಸುಲಲಿತ ಪ್ರಯಾಣಕ್ಕೆ ಅನುಕೂಲವಾಗಲಿದೆ.

ಮೈಸೂರಿನ ಚಾಮುಂಡಿ ಬೆಟ್ಟ

ರೋಪ್‌ವೇ ಯೋಜನೆಗಳಿಗಾಗಿ ಸಾಮಾನ್ಯ ಕಾರ್ಯಾಚರಣೆಯ ವಿಧಾನವನ್ನು ಅಭಿವೃದ್ಧಿಪಡಿಸುವಂತೆ ಎಲ್ಲ ರಾಜ್ಯ ಸರ್ಕಾರಗಳಿಗೆ ಸಚಿವಾಲಯ ಈಗಾಗಲೇ ನಿರ್ದೇಶನ ನೀಡಿದೆ ಎಂದು ಅವರು ಹೇಳಿದ್ದಾರೆ.

ಎಲ್ಲೆಲ್ಲಿ ರೋಪ್‌ವೇ ಪ್ರಸ್ತಾವ: ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಬೆಟ್ಟ, ಚಿಕ್ಕಮಗಳೂರಿನ ಮುಳ್ಳಯ್ಯನ ಗಿರಿ, ಕೆಮ್ಮಣ್ಣುಗುಂಡಿ, ಮೈಸೂರಿನ ಚಾಮುಂಡಿ ಬೆಟ್ಟ, ಉಡುಪಿ ಜಿಲ್ಲೆಯ ಕೊಡಚಾದ್ರಿ ಪರ್ವತ, ತುಮಕೂರಿನ ದೇವರಾಯನ ದುರ್ಗ, ಮಧುಗಿರಿ ಕೋಟೆ, ಕೊಪ್ಪಳದ ಅಂಜನಾದ್ರಿ ಬೆಟ್ಟ, ಶಿವಮೊಗ್ಗ ಜಿಲ್ಲೆಯ ಜೋಗ ಜಲಪಾತ, ಸಾಗರ ಹಿನ್ನೀರು, ಉತ್ತರ ಕನ್ನಡದ ಯಾಣ, ಜೋಯ್ಡಾ ಹಾಗೂ ಚಪೇಲಿ, ಕೊಡಗು ಜಿಲ್ಲೆಯ ಕುಮಾರ ಪರ್ವತ, ಬೆಳಗಾವಿ ಜಿಲ್ಲೆಯ ರಾಜ್‌ಹೌಸ್‌ಗಡ.

ಒಳ ಪುಟಗಳು
ಭಾಗವತ್ ವಿರುದ್ಧ ದೂರು ದಾಖಲು 5
ಡಬಲ್ ಎಂಜಿನ್ ಸರ್ಕಾರದ ಮಹಾಮೋಸ: ಎಚ್‌ಡಿಕೆ 8
ಮಗುವಿಗೆ ಜನ್ಮ ನೀಡಿದ ಲಿಂಗತ್ವ ಅಲ್ಪಸಂಖ್ಯಾತ 12

ರೆಪೊ ದರ ಮತ್ತೆ ಹೆಚ್ಚಿಸಿದ ಆರ್‌ಬಿಐ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಬುಧವಾರ ನಿರೀಕ್ಷೆಯಂತೆಯೇ ಶೇಕಡ 0.25ರಷ್ಟು ಹೆಚ್ಚಿಸಿದೆ. ಹಣದುಬ್ಬರವು ಹೆಚ್ಚಿನ ಪ್ರಮಾಣದಲ್ಲಿಯೇ ಉಳಿದಿರುವ ಕಾರಣ, ಮುಂದಿನ ದಿನಗಳಲ್ಲಿ ರೆಪೊ ದರವನ್ನು ಇನ್ನಷ್ಟು ಹೆಚ್ಚಿಸುವ ಆಯ್ಕೆಯನ್ನು ಮುಕ್ತವಾಗಿ ಇರಿಸಿಕೊಂಡಿದೆ.

ರೆಪೊ ದರ ಹೆಚ್ಚಳದ ಪರಿಣಾಮವಾಗಿ ಗೃಹ ಸಾಲ, ವಾಹನ ಸಾಲ, ವೈಯಕ್ತಿಕ ಸಾಲ, ಕಾರ್ಪೊರೇಟ್ ಸಾಲದ ಮೇಲಿನ ಬಡ್ಡಿ ದರವು ಹೆಚ್ಚಾಗಲಿದೆ.

ಬುಧವಾರ ನಡೆದ ಹಣಕಾಸು ನೀತಿ ಸಮಿತಿಯ ಸಭೆಯಲ್ಲಿ ಆರ್‌ಬಿಐ, ರೆಪೊ ದರ ಹೆಚ್ಚಿಸುವ ತೀರ್ಮಾನವನ್ನು ಬಹುಮತದ ಆಧಾರದಲ್ಲಿ ಕೈಗೊಂಡಿದೆ.

ಸಮಿತಿಯ ಆರು ಸದಸ್ಯರ ಪೈಕಿ ನಾಲ್ಕು ಜನ ದರ ಹೆಚ್ಚಳದ ಪರವಾಗಿ, ಇಬ್ಬರು ಸದಸ್ಯರು ವಿರುದ್ಧವಾಗಿ ಮತ ಚಲಾಯಿಸಿದರು. ಈಗ ರೆಪೊ ದರವು ಶೇ 6.50ಕ್ಕೆ ತಲುಪಿದೆ.

ಬುಧವಾರದ ದರ ಹೆಚ್ಚಳವನ್ನೂ ಪರಿಗಣಿಸಿದರೆ, ಹಿಂದಿನ ವರ್ಷದ ಮೇ ತಿಂಗಳ ನಂತರದಲ್ಲಿ ಆರ್‌ಬಿಐ ಸತತವಾಗಿ ಆರು ಬಾರಿ ರೆಪೊ ಏರಿಕೆ ಮಾಡಿದಂತಾಗಿದೆ. ಮೇ ತಿಂಗಳ ನಂತರದಲ್ಲಿ ಒಟ್ಟು ಶೇ 2.50ರಷ್ಟು ಹೆಚ್ಚಳ ಆದಂತಾಗಿದೆ.

ಚಿಲ್ಲರೆ ಹಣದುಬ್ಬರ ದರವು ನವೆಂಬರ್, ಡಿಸೆಂಬರ್‌ನಲ್ಲಿ ಶೇ 6ಕ್ಕಿಂತ ಕಡಿಮೆ ಆಗಿದೆ.

13ನೇ ಪುಟ ನೋಡಿ

ಹಣದುಬ್ಬರದ ಸಮಸ್ಯೆ



ಚಿಲ್ಲರೆ ಹಣದುಬ್ಬರ ಪ್ರಮಾಣವು 2023-24ರಲ್ಲಿ ತಗ್ಗುವ ನಿರೀಕ್ಷೆ ಇದೆಯಾದರೂ, ಅದು ಶೇ 4ಕ್ಕಿಂತ ಹೆಚ್ಚಿನ ಮಟ್ಟದಲ್ಲಿಯೇ ಉಳಿಯಲಿದೆ. ಹಣದುಬ್ಬರ ದರವನ್ನು ಶೇ 4ರ ಮಟ್ಟದಲ್ಲಿ ನಿಯಂತ್ರಿಸುವ ಹೊಣೆ ಆರ್‌ಬಿಐ ಮೇಲಿದೆ. ಹಣದುಬ್ಬರವನ್ನು ನಿಯಂತ್ರಿಸಲು ಆರ್‌ಬಿಐ ರೆಪೊ ದರ ಹೆಚ್ಚಿಸುತ್ತಿದೆ.

ವಾಟ್ಸ್‌ಆ್ಯಪ್‌ನಲ್ಲಿ ಸಿಗಲಿವೆ ಎಲ್‌ಐಸಿ ಸೇವೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಅತಿದೊಡ್ಡ ವಿಮಾ ಕಂಪನಿಯಾದ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಗ್ರಾಹಕರು ಇನ್ನು ಮುಂದೆ ಒಂಬತ್ತಕ್ಕೂ ಅಧಿಕ ಸೇವೆಗಳನ್ನು ವಾಟ್ಸ್‌ಆ್ಯಪ್ ಮೂಲಕವೇ ಪಡೆದುಕೊಳ್ಳಬಹುದು.

ವಿಮಾ ಪಾಲಿಸಿಗಳಿಗೆ ಸಂಬಂಧಿಸಿದ ಮಾಹಿತಿ ಮತ್ತು ಸೇವೆಗಳನ್ನು ಗ್ರಾಹಕರಿಗೆ ನೀಡಲು ಎಲ್‌ಐಸಿ ವಾಟ್ಸ್‌ಆ್ಯಪ್ ಚಾಟ್‌ಬಾಟ್ ಸೌಲಭ್ಯ ಆರಂಭಿಸಿದೆ. ಇದು ಯಾವುದೇ ಹೊತ್ತಿನಲ್ಲಿ ಸೇವೆಗೆ ಲಭ್ಯವಿರಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

12ನೇ ಪುಟ ನೋಡಿ

ವಿರೋಧ ಪಕ್ಷಗಳ ವಿರುದ್ಧ ಹರಿಹಾಯ್ದ ಪ್ರಧಾನಿ ಮೋದಿ

ದೇಶಕ್ಕೆ ಹೊರೆಯಾದ ದಶಕ

ನವದೆಹಲಿ (ಪಿಟಿಐ): '2004 ರಿಂದ 2014ರ ಅವಧಿಯಲ್ಲಿ ಹಗರಣಗಳೇ ಸದ್ದು ಮಾಡಿದವು. ರಾಷ್ಟ್ರದ ಹಲವೆಡೆ ಉಗ್ರರ ದಾಳಿಗಳು ನಡೆದವು. ಆ ದಶಕವು ದೇಶಕ್ಕೆ ಹೊರೆಯಾಗಿ ಪರಿಣಮಿಸಿತು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಯುಪಿಎ ಸರ್ಕಾರದ 10 ವರ್ಷಗಳ ಆಡಳಿತವನ್ನು ಟೀಕಿಸಿದ್ದಾರೆ.

ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆ ವೇಳೆ ಬುಧವಾರ ಲೋಕಸಭೆಯಲ್ಲಿ ಮಾತನಾಡಿದ ಅವರು, ವಿಡಂಬನಾಕಾರ ಕಾಕಾ ಹತ್ರಾಸಿ ಹಾಗೂ ಕವಿ ದುಷ್ಯಂತ್‌ಕುಮಾರ್ ಅವರ ಪದ್ಯಗಳನ್ನು ಉಲ್ಲೇಖಿಸಿ ವಿರೋಧ ಪಕ್ಷಗಳ ಕಾಲೆಳೆದಿದ್ದಾರೆ.

'2008ರ ಮುಂಬೈ ದಾಳಿಯನ್ನು ಯಾರೂ ಮರೆಯುವುದಿಲ್ಲ. ಆಗ ಆಡಳಿತದಲ್ಲಿದ್ದ ಸರ್ಕಾರವು ಭಯೋತ್ಪಾದನೆ ವಿರುದ್ಧ ದಿಟ್ಟ ನಿರ್ಧಾರ ಕೈಗೊಳ್ಳಲು ವಿಫಲವಾಗಿತ್ತು. ಹೀಗಾಗಿ ಈ ದೇಶದ ಮುಗ್ಧ ನಾಗರಿಕರು ಜೀವ ಕಳೆದುಕೊಳ್ಳಬೇಕಾಯಿತು' ಎಂದು ಕಿಡಿಕಾರಿದ್ದಾರೆ.

ಬೆಂಗಳೂರಿನಲ್ಲಿ ಈಚೆಗೆ ನಡೆದ ಇಂಧನ ಸಪ್ತಾಹದಲ್ಲಿ ಪ್ಲಾಸ್ಟಿಕ್ ಬಾಟಲಿಗಳನ್ನು ಮರುಬಳಸಿ ತಯಾರಿಸಿ ನೀಡಲಾಗಿದ್ದ ವಿಶೇಷ ಜಾಕೆಟ್ ಅನ್ನು ಮೋದಿ ಬುಧವಾರ ಧರಿಸಿದ್ದರು –ಪಿಟಿಐ ಚಿತ್ರ

9ನೇ ಪುಟ ನೋಡಿ

'ಮೋದಿಯಿಂದ ಅದಾನಿ ರಕ್ಷಣೆ'

'ಅದಾನಿ ಸಮೂಹದ ವಿರುದ್ಧ ಗಂಭೀರ ಆರೋಪ ಕೇಳಿಬಂದರೂ ಮೋದಿ ಅವರು ತನಿಖೆಗೆ ಆದೇಶಿಸಿಲ್ಲ. ಅವರು ಅದಾನಿಯನ್ನು ರಕ್ಷಿಸುತ್ತಿರುವುದು ಇದರಿಂದ ಸ್ಪಷ್ಟವಾಗುತ್ತದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾನು ಕ್ಲಿಷ್ಟಕರ ಪ್ರಶ್ನೆಗಳನ್ನೇನೂ ಕೇಳಿರಲಿಲ್ಲ. ಅದಾನಿ ಎಷ್ಟು ಬಾರಿ ನಿಮ್ಮ ಜೊತೆ ಪ್ರಯಾಣ ಬೆಳೆಸಿದ್ದರು, ಎಷ್ಟು ಬಾರಿ ಭೇಟಿಯಾಗಿದ್ದರು ಎಂಬುದನ್ನಷ್ಟೇ ಕೇಳಿದ್ದೆ. ಅದಕ್ಕೂ ಅವರಿಂದ ಉತ್ತರ ಸಿಕ್ಕಿಲ್ಲ' ಎಂದಿದ್ದಾರೆ.

9ನೇ ಪುಟ ನೋಡಿ

ಟರ್ಕಿ, ಸಿರಿಯಾದಲ್ಲಿ ಆಕ್ರಂದನ, ಒಬ್ಬ ಭಾರತೀಯ ನಾಪತ್ತೆ

ಭೂಕಂಪ: 11,700ಕ್ಕೂ ಅಧಿಕ ಸಾವು

ಗಾಝಿಯಾನ್‌ಟೆಪ್, ಅಂಕಾರಾ (ಟರ್ಕಿ) (ಎಪಿ/ಎಎಫ್‌ಪಿ): ದಶಕದಲ್ಲೇ ಅತ್ಯಂತ ಭೀಕರವೆನಿಸಿದ ಭೂಕಂಪದಿಂದ ಟರ್ಕಿ ಮತ್ತು ಸಿರಿಯಾದಲ್ಲಿ ಮೃತರ ಸಂಖ್ಯೆ ದಿನೇ ದಿನೇ ಏರುತ್ತಿದೆ. ಈ ದುರಂತದಲ್ಲಿ ಮಡಿದವರ ಸಂಖ್ಯೆ ಬುಧವಾರ 11,719ಕ್ಕೆ ತಲುಪಿದೆ.

ಕಟ್ಟಡಗಳ ಅವಶೇಷಗಳಡಿ ಜೀವಂತ ಸಮಾಧಿಯಾದವರ ಶವಗಳನ್ನು ಹೊರತೆಗೆಯುವ ಕೆಲಸ ಹಗಲು- ರಾತ್ರಿ ಮುಂದುವರಿದಿದೆ. ಬದುಕುಳಿದವರಿಗಾಗಿ ಶೋಧ ಮತ್ತು ರಕ್ಷಣಾ ಕಾರ್ಯವನ್ನು ವಿಪತ್ತು ಸ್ಪಂದನಾ ಪಡೆಗಳ ಸಿಬ್ಬಂದಿ ಕೊರೆವ ಚಳಿ ಲೆಕ್ಕಿಸದೇ ನಡೆಸುತ್ತಿದ್ದಾರೆ.

ಟರ್ಕಿಯಲ್ಲಿ ಬೆಂಗಳೂರು ಮೂಲದ ಕಂಪನಿಯ ಸಿಬ್ಬಂದಿಯೊಬ್ಬರು ಕಾಣೆಯಾಗಿದ್ದು, ಇತರ 10 ಭಾರತೀಯರು ಹಾನಿಗೊಳಗಾದ ಪ್ರದೇಶದಲ್ಲಿ ಸಿಲುಕಿದ್ದಾರೆ. ಆದರೆ, ಅವರೆಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ಭಾರತ ಸರ್ಕಾರ ಹೇಳಿದೆ.

'ಕಾಣೆಯಾದ ವ್ಯಕ್ತಿಯ ಕುಟುಂಬ ಮತ್ತು ಕಂಪನಿಯ ಜತೆ ನಮ್ಮ ಅಧಿಕಾರಿಗಳು ಸಂಪರ್ಕದಲ್ಲಿದ್ದಾರೆ. ಸಂತ್ರಸ್ತರಿಗಾಗಿ ಸೇನೆಯ ನಾಲ್ಕು ವಿಮಾನಗಳಲ್ಲಿ ವೈದ್ಯಕೀಯ ನೆರವು, ಔಷಧ, ರಕ್ಷಣಾ ಸಿಬ್ಬಂದಿ ತಂಡ ಹಾಗೂ ಪರಿಹಾರ ಸಾಮಗ್ರಿಗಳನ್ನು ಕೇಂದ್ರ ಸರ್ಕಾರ ಈಗಾಗಲೇ ಟರ್ಕಿಗೆ ಕಳುಹಿಸಿದೆ' ಎಂದು ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ (ಪಶ್ಚಿಮ) ಸಂಜಯ್ ವರ್ಮಾ ಹೇಳಿದ್ದಾರೆ.

12ನೇ ಪುಟ ನೋಡಿ

ಜೋಶಿಮಠ: ಭೂಕಂಪ ಸಾಧ್ಯತೆ

ಹೈದರಾಬಾದ್: ಜೋಶಿಮಠ ಪ್ರದೇಶ ಸೇರಿದಂತೆ ಉತ್ತರಾಖಂಡದಲ್ಲಿ ಭಾರಿ ಭೂಕಂಪ ಸಂಭವಿಸಬಹುದು ಎಂದು ಹೈದರಾಬಾದ್ ಮೂಲದ ಸಂಸ್ಥೆಯೊಂದು ಎಚ್ಚರಿಸಿದೆ. ಸಿಎಸ್‌ಐಆರ್‌ನ ರಾಷ್ಟ್ರೀಯ ಭೂಭೌತ ಸಂಶೋಧನಾ ಸಂಸ್ಥೆ (ಎನ್‌ಜಿಆರ್‌ಐ) ಈ ಎಚ್ಚರಿಕೆ ನೀಡಿದೆ. ಮೇಲ್ಮೈ, ಒಳಭಾಗ ಸೇರಿದಂತೆ ಭೂಮಿಯ ರಚನೆ ಕುರಿತು ಸಂಶೋಧನೆ ನಡೆಸುವ ಈ ಪ್ರತಿಷ್ಠಿತ ಸಂಸ್ಥೆಯು ಜೋಶಿಮಠ ಕುಸಿತ ವಿದ್ಯಮಾನದ ಮೇಲೆಯೂ ನಿಗಾ ವಹಿಸಿದೆ.

12ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೆಪಿಎಸ್‌ಸಿ: ಕಿರಿಯ ಸದಸ್ಯರೊಬ್ಬರಿಂದ ಅಡ್ಡಗಾಲು– ಆರೋಪ

ಪಿಡಬ್ಲ್ಯುಡಿ 335 ಜೆಇ ಹುದ್ದೆ: ಅಂತಿಮ ಆಯ್ಕೆ ಪಟ್ಟಿ ವಿಳಂಬ

• ರಾಜೇಶ್ ರೈ ಚಟ್ಲ

ಬೆಂಗಳೂರು: ಲೋಕೋಪಯೋಗಿ ಇಲಾಖೆಯ (ಪಿಡಬ್ಲ್ಯುಡಿ) ಕಿರಿಯ ಎಂಜಿನಿಯರ್ (ಜೆಇ) 335 ಹುದ್ದೆಗಳಿಗೆ 1:1 ಅನುಪಾತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಪಟ್ಟಿ ಮೂರು ಬಾರಿ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸಭೆಯಲ್ಲಿ ಮಂಡನೆಯಾದರೂ ಅನುಮೋದನೆ ಸಿಕ್ಕಿಲ್ಲ.

ಪ್ರಜಾವಾಣಿ ವಿಶೇಷ

‘ತಾತ್ಕಾಲಿಕ ಪಟ್ಟಿ ಸಿದ್ಧಗೊಂಡು ಈಗಾಗಲೇ ತಿಂಗಳು ಕಳೆದಿರುವುದರಿಂದ, ಫೆ. 7ರಂದು ನಡೆದ ಆಯೋಗದ ಸಭೆಯಲ್ಲಿ ಎಲ್ಲ ಸದಸ್ಯರ ಅನುಮೋದನೆ ಪಡೆದು ಆಯ್ಕೆ ಪಟ್ಟಿ ಬಿಡುಗಡೆ ಮಾಡಲು ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್ ಮುಂದಾಗಿದ್ದರು. ಆಯೋಗದ 12 ಸದಸ್ಯರ ಪೈಕಿ ಏಳು ಸದಸ್ಯರು ಸಭೆಗೆ ಹಾಜರಾಗಿದ್ದರು. ಗೈರಾದವರನ್ನು ಸಂಪರ್ಕಿಸಿದಾಗ, ಕಿರಿಯರೊಬ್ಬರನ್ನು ಬಿಟ್ಟು ಉಳಿದವರು ಒಪ್ಪಿಗೆ ಸೂಚಿಸಿದ್ದರು’ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

‘ಫೆ. 10 ಮತ್ತೆ ಸಭೆ ಸೇರಲು ಕಾರ್ಯದರ್ಶಿ ಫೆ. 7ರ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಭೆಯಲ್ಲಿದ್ದ ಎಲ್ಲರೂ ಒಪ್ಪಿಗೆ ಸೂಚಿಸಿದ್ದಾರೆ. ಆದರೆ, ‘ಸಭೆಯ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ಹೀಗಾಗಿ ಮುಂದೂಡಲು ಸೂಚಿಸಿದ್ದೇನೆ’ ಎಂದು ಇತರ ಸದಸ್ಯರಿಗೆ ಅಧ್ಯಕ್ಷರು ಬುಧವಾರ ಮಾಹಿತಿ ನೀಡಿದ್ದಾರೆ’ ಎಂದು ಮೂಲಗಳು ಹೇಳಿವೆ.

> **ಅಂತಿಮ ಆಯ್ಕೆ ಪಟ್ಟಿಯನ್ನು ಸಭೆಗೆ ಮಂಡಿಸಿದ್ದೇನೆ. ಆದರೆ, ಕೆಲವು ಸದಸ್ಯರ ವೈಯಕ್ತಿಕ ಕಾರಣಕ್ಕೆ ಅಂತಿಮ ಪಟ್ಟಿ ಪ್ರಕಟಿಸಲು ಅನುಮೋದನೆ ಸಿಕ್ಕಿಲ್ಲ**
> **ವಿಕಾಸ್ ಕಿಶೋರ್ ಸುರಳ್ಕರ್,** ಕಾರ್ಯದರ್ಶಿ, ಕೆಪಿಎಸ್‌ಸಿ

‘ನೇಮಕಾತಿ ಪ್ರಕ್ರಿಯೆ ವೇಳೆ ಪಾಲಿಸಬೇಕಾದ ನಿಯಮಗಳ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಫೆ. 2ರಂದು ಹೊರಡಿಸಿದ್ದ ಸುತ್ತೋಲೆ ಪ್ರಕಾರವೇ ಆಯ್ಕೆ ಪಟ್ಟಿಯನ್ನು ಕಾರ್ಯದರ್ಶಿ ಪರಿಷ್ಕರಿಸಿದ್ದರು. ಅಲ್ಲದೆ, ಸಹಾಯಕ ಎಂಜಿನಿಯರ್ (ಎಇ) ಹುದ್ದೆಗೆ ಆಯ್ಕೆಯಾದವರನ್ನು ಪಟ್ಟಿಯಿಂದ ಕೈಬಿಟ್ಟು ಜೆಇ ಪಟ್ಟಿ ಅಂತಿಮಗೊಳಿಸಲಾಗಿತ್ತು. ಹೀಗಾಗಿ, ಅನುಮೋದನೆ ನೀಡದೇ ಇರಲು ಯಾವುದೇ ಕಾರಣ ಇರಲಿಲ್ಲ. ಹೀಗಾಗಿ, ಇತರ ಸದಸ್ಯರು ಪಟ್ಟಿಗೆ ಅನುಮೋದನೆ ನೀಡುವಂತೆ ಅಧ್ಯಕ್ಷರಲ್ಲಿ ಒತ್ತಾಯಿಸಿದ್ದರು. ಆದರೆ, ‘ಆಯ್ಕೆ ಪಟ್ಟಿಯನ್ನು ನಾನು ನೋಡಬೇಕಿದೆ’ ಎಂದು ಕಿರಿಯ ಸದಸ್ಯರೊಬ್ಬರು ಹೇಳಿದ್ದರಿಂದ, ಅಧ್ಯಕ್ಷರು ಪಟ್ಟಿ ಪ್ರಕಟಣೆಗೆ ಒಪ್ಪಿಗೆ ನೀಡಲಿಲ್ಲ’ ಎಂದೂ ಮೂಲಗಳು ಹೇಳಿವೆ.

ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಅವರಿಗೆ ಕರೆ ಮಾಡಿ, ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿ ಸಂಪರ್ಕಿಸಲು ಯತ್ನಿಸಿದರೂ, ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳಿಗೆ ಹೆಚ್ಚಿನ ಅವಕಾಶ

ನೇಮಕಾತಿ ಪ್ರಕ್ರಿಯೆಗಳ ಕುರಿತು ಇದೇ 2ರಂದು ರಾಜ್ಯ ಸರ್ಕಾರ ಪರಿಷ್ಕೃತ ಸುತ್ತೋಲೆ ಹೊರಡಿಸಿದೆ. ಅದರ ಪ್ರಕಾರ, ಅಂತಿಮ ಆಯ್ಕೆ ಪಟ್ಟಿ ಇನ್ನೂ ಪ್ರಕಟಿಸದೇ ಇರುವ ನೇಮಕಾತಿಗಳಲ್ಲಿ, ನೇಮಕಾತಿ ಪ್ರಾಧಿಕಾರಗಳು (ಕೆಪಿಎಸ್‌ಸಿ, ಕೆಇಎ) ಇತರ ವೃಂದದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಮೊದಲು ತಯಾರಿಸಬೇಕು. ಆ ಪಟ್ಟಿಯಲ್ಲಿ ಕಲ್ಯಾಣ ಕರ್ನಾಟಕ (ಕೆಕೆ) ಭಾಗದ ಅಭ್ಯರ್ಥಿಗಳಿದ್ದರೆ ಅವರನ್ನು ‘ಕೆಕೆ ಮೀಸಲಾತಿ’ಯಡಿ ಪರಿಗಣಿಸದೆ, ಸ್ವಂತ ಅರ್ಹತೆಯಡಿ ಪರಿಗಣಿಸಬೇಕು. ಆ ನಂತರ ‘ಕೆಕೆ ಮೀಸಲಾತಿ’ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ಇದರಿಂದಾಗಿ, ‘ಕೆಕೆ ಮೀಸಲಾತಿ’ ಅಡಿಯಲ್ಲಿ ಅಲ್ಲದೆಯೂ, ಆ ಭಾಗದ ಅಭ್ಯರ್ಥಿಗಳಿಗೆ ಆಯ್ಕೆಯಾಗುವ ಭಾಗ್ಯ ಸಿಗಲಿದೆ. ಪಿಡಬ್ಲ್ಯುಡಿ ಸಹಾಯಕ ಎಂಜಿನಿಯರ್ ಹುದ್ದೆ ಆಯ್ಕೆ ಅಂತಿಮ ಪಟ್ಟಿ (ಜ. 26) ಈ ಸುತ್ತೋಲೆಗಿಂತ ಮೊದಲೇ ಪ್ರಕಟಗೊಂಡಿದ್ದರಿಂದ ಅದಕ್ಕೆ ಅನ್ವಯ ಆಗಿಲ್ಲ. ಆದರೆ, ಕಿರಿಯ ಎಂಜಿನಿಯರ್ ಆಯ್ಕೆ ಪಟ್ಟಿಗೆ ಅನ್ವಯವಾಗಿದೆ.

ಕೆಐಎಡಿಬಿ ಅಧಿಕಾರಿಗಳು ಸೇರಿ ಐವರ ವಿರುದ್ಧ ಎಫ್‌ಐಆರ್

ನಕಲಿ ದಾಖಲೆಗೆ ₹4.06 ಕೋಟಿ ಪರಿಹಾರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಖಲೆಗಳನ್ನು ಪರಿಶೀಲಿಸದೆ ₹4.06 ಕೋಟಿ ಪರಿಹಾರ ವಿತರಿಸಿದ ಆರೋಪದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ(-ಕೆಐಎಡಿಬಿ) ಅಧಿಕಾರಿಗಳು ಸೇರಿ ಐವರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಮೆಟ್ರೊ ರೈಲು ಮಾರ್ಗ ನಿರ್ಮಾಣಕ್ಕೆ ಬೆನ್ನಿಗಾನಹಳ್ಳಿ ಗ್ರಾಮದ ಸರ್ವೆ ನಂಬರ್ 83/2ರ ಜಾಗದ ವ್ಯಾಜ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥಗೊಂಡಿತ್ತು. ಆದರೆ, ಆ ಜಾಗ ಬಾಡಿಗೆಗೆ ಪಡೆದಿದ್ದ ವ್ಯಕ್ತಿಯೊಬ್ಬರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಅದು ಹೈಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿದೆ.

ಇದೇ ಸರ್ವೆ ನಂಬರ್‌ನಲ್ಲಿ 142.56 ಚದರ ಮೀಟರ್ ಜಾಗವನ್ನು ಮೆಟ್ರೊ ರೈಲು ಮಾರ್ಗಕ್ಕೆ ಸ್ವಾಧೀನಪಡಿಸಿಕೊಳ್ಳಲಾಗಿದೆ. ವ್ಯಾಜ್ಯ ಹೈಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿ ಇರುವುದರಿಂದ ಪರಿಹಾರ ವಿತರಣೆ ಮಾಡುವಾಗ ಎಚ್ಚರಿಕೆ ವಹಿಸುವಂತೆ ಕೆಐಎಡಿಬಿ ವಿಶೇಷ ಭೂಸ್ವಾಧೀನಾಧಿಕಾರಿಗೆ (ಮೆಟ್ರೊ) ಬಿಎಂಆರ್‌ಸಿಎಲ್ ಪ್ರಧಾನ ವ್ಯವಸ್ಥಾಪಕ (ಭೂಸ್ವಾಧೀನ) ಎಂ.ಎಸ್.ಚನ್ನಪ್ಪ ಗೌಡರ್ ಪತ್ರ ಬರೆದಿದ್ದರು.

ಪರಿಹಾರ ಪಡೆದಿದ್ದಾರೆ ಎನ್ನಲಾದ ತಿರುಮಲೇಶ್, ಮೊಹಮ್ಮದ್ ಮಜೇಕ್ ಅಹಮದ್, ಬಿ.ಎಂ.ಉದಯ್, ಬಿ.ಎಂ. ವಿನಯ್ ಅವರನ್ನು ಆರೋಪಿಗಳನ್ನಾಗಿಸಿ ಹಲಸೂರು ಗೇಟ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

‘ನಕಲಿ ದಾಖಲೆ ಸೃಷ್ಟಿಸಿಕೊಂಡು ಕೆಐಎಡಿಬಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ಪರಿಹಾರ ಪಡೆದು ಮೋಸ ಮಾಡಲಾಗಿದೆ’ ಎಂದು ಎಂ.ಯತೀಶ್ ನೀಡಿರುವ ದೂರು ಆಧರಿಸಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

‘ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗೂ ಇದೇ ಸರ್ವೆ ನಂಬರ್‌ನ ಜಾಗವನ್ನು ಸ್ವಾಧೀನ ಮಾಡಿಕೊಳ್ಳಲಾಗಿದೆ. ಆದರೆ, ವ್ಯಾಜ್ಯ ಇರುವುದರಿಂದ ಇನ್ನೂ ಪರಿಹಾರ ವಿತರಣೆ ಮಾಡಿಲ್ಲ. ಇದೆಲ್ಲವೂ ಗೊತ್ತಿದ್ದರೂ, ಕೆಐಎಡಿಬಿ ಅಧಿಕಾರಿಗಳು ಪರಿಹಾರ ವಿತರಣೆ ಮಾಡಿದ್ದಾರೆ’ ಎಂದು ದೂರುದಾರ ಯತೀಶ್ ದೂರುತ್ತಾರೆ.

‘ಈಗಾಗಲೇ ಪರಿಹಾರ ಪಡೆದಿರುವವರು ಬಾಡಿಗೆಗೆ ಇರುವ ಜಾಗಕ್ಕೂ ಮೆಟ್ರೊ ರೈಲು ಮಾರ್ಗಕ್ಕೂ ಸಂಬಂಧವೇ ಇಲ್ಲ. ರಸ್ತೆಯ ಒಂದು ಬದಿಯಲ್ಲಿ ಮೆಟ್ರೊ ರೈಲು ಮಾರ್ಗವಿದ್ದರೆ, ಇನ್ನೊಂದು ಬದಿಯಲ್ಲಿ ಈ ಶೆಡ್‌ಗಳಿವೆ. ಆದರೂ, ಪರಿಹಾರ ನೀಡಲಾಗಿದೆ’ ಎಂದು ಅವರು ಆರೋಪಿಸಿದರು. ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕೆಐಎಡಿಬಿ ವಿಶೇಷ ಭೂಸ್ವಾಧೀನಾಧಿಕಾರಿ(ಮೆಟ್ರೊ) ಪ್ರಸನ್ನ ಕುಮಾರ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಆದರೆ, ಅವರು ಕರೆ ಸ್ವೀಕರಿಸಲಿಲ್ಲ.

ಯಾರ ಕೈವಾಡ–ತನಿಖೆಯಿಂದ ಬಯಲು

ಕೆಐಎಡಿಬಿ ಕಚೇರಿಯಲ್ಲಿ ಯಾವ ಅಧಿಕಾರಿಯ ಕೈವಾಡ ಇದೆ ಎಂಬುದು ಇನ್ನೂ ಸ್ಪಷ್ಟವಾಗದ ಕಾರಣ ಯಾವುದೇ ಅಧಿಕಾರಿಯ ಹೆಸರನ್ನು ಎಫ್‌ಐ-ಆರ್‌ನಲ್ಲಿ ನಮೂದಿಸಿಲ್ಲ. ತನಿಖೆಯಲ್ಲಿ ಯಾರ ಕೈವಾಡ ಇದೆ ಎಂಬುದು ಗೊತ್ತಾಗಲಿದೆ ಎಂದು ಪೊಲೀಸರು ಸ್ಪಷ್ಟಪಡಿಸಿದರು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

(CIN): L85110KA1993PLC013869 ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು – 560 106.
ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ–ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

31ನೇ ಡಿಸೆಂಬರ್ 2022ರ ಮೂರನೇ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಅವಧಿಗೆ ಕೊನೆಗೊಂಡ ಅಪರಿಶೋಧಿತ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್ಸ್‌ಗಳಲ್ಲಿ)

ಕ್ರ. ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ	ಒಂಬತ್ತು ತಿಂಗಳ ಅವಧಿಗೆ ಕೊನೆಗೊಂಡ	ತ್ರೈಮಾಸಿಕಕ್ಕೆ ಕೊನೆಗೊಂಡ	ವರ್ಷಕ್ಕೆ ಕೊನೆಗೊಂಡ
		31 ಡಿಸೆಂಬರ್ 2022 (ಅಪರಿಶೋಧಿತ)	31 ಡಿಸೆಂಬರ್ 2022 (ಅಪರಿಶೋಧಿತ)	31 ಡಿಸೆಂಬರ್ 2021 (ಅಪರಿಶೋಧಿತ)	31 ಮಾರ್ಚ್ 2022 (ಪರಿಶೋಧಿತ)
1.	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	1,995.40	6,123.19	2,026.07	7,879.64
2.	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	(101.98)	(216.71)	41.49	81.52
3.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	(101.98)	(216.71)	41.49	(522.02)
4.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳ ನಂತರ)	(96.68)	(190.99)	35.16	(534.65)
5.	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	(129.73)	(187.86)	41.81	(510.43)
6.	ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ.10 ಪ್ರತಿ ಷೇರಿಗೆ)				128.85
7.	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ				1,910.83
8.	ಪ್ರತಿ ಷೇರಿನ ಗಳಿಕೆ (ಪ್ರತಿ ರೂ. 10 ಕ್ಕೆ) ಕಾರ್ಯಾಚರಣೆಗಳನ್ನು ಮುಂದುವರಿಸುವದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ				
	ಎ) ಮೂಲಭೂತ:	(5.92)	(12.19)	2.72	(23.70)
	ಬಿ) ಡೈಲ್ಯೂಟೆಡ್:	(5.92)	(12.19)	2.72	(23.70)

ಸೂಚನೆ :

1. 31ನೇ ಡಿಸೆಂಬರ್ 2022ರ ಮೂರನೇ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಅವಧಿಗೆ ಕೊನೆಗೊಂಡ ಪ್ರತ್ಯೇಕವಾದ ಅಪರಿಶೋಧಿತ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ	ಒಂಬತ್ತು ತಿಂಗಳ ಅವಧಿಗೆ ಕೊನೆಗೊಂಡ	ತ್ರೈಮಾಸಿಕಕ್ಕೆ ಕೊನೆಗೊಂಡ	ವರ್ಷಕ್ಕೆ ಕೊನೆಗೊಂಡ
	31 ಡಿಸೆಂಬರ್ 2022 (ಅಪರಿಶೋಧಿತ)	31 ಡಿಸೆಂಬರ್ 2022 (ಅಪರಿಶೋಧಿತ)	31 ಡಿಸೆಂಬರ್ 2021 (ಅಪರಿಶೋಧಿತ)	31 ಮಾರ್ಚ್ 2022 (ಪರಿಶೋಧಿತ)
ನಿರ್ವಹಣೆಯಿಂದ ಬಂದ ನಿವ್ವಳ ಮಾರಾಟ / ವರಮಾನ	1,040.02	3,089.85	860.81	3,538.17
ಲಾಭ ತೆರಿಗೆಯ ಮುಂಚೆ	(10.53)	(43.86)	45.15	153.76
ಲಾಭ ತೆರಿಗೆಯ ನಂತರ	(9.36)	(34.23)	32.04	117.66

2. ಈ ಮೇಲಿನ ಅಪರಿಶೋಧಿತ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳನ್ನು ಕಂಪನಿಯ ಲೆಕ್ಕಪರಿಶೋಧಕ ಸಮಿತಿಯು 6ನೇ ಫೆಬ್ರುವರಿ, 2023 ರಂದು ನಡೆದ ಸಭೆಯಲ್ಲಿ ಪರಿಶೀಲಿಸಿದ್ದು ಹಾಗೂ ನಿರ್ದೇಶಕ ಮಂಡಳಿಯು 7ನೇ ಫೆಬ್ರುವರಿ, 2023 ರಂದು ನಡೆದ ಸಭೆಯಲ್ಲಿ ಅನುಮೋದಿಸಿದೆ.
3. ಈ ಮೇಲಿನವು ಅಪರಿಶೋಧಿತ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಸಮಗ್ರ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿದ್ದು, 2015ರ ಸೆಬಿ (ಪಟ್ಟಿ ಕರಾರು ಮಾಡುವುದು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿಗಳ ನಿಯಮಾವಳಿ 33 ರಂತೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಲಾಗಿದೆ. ತ್ರೈಮಾಸಿಕ ಅವಧಿಗೆ ಕೊನೆಗೊಂಡ ಪ್ರತ್ಯೇಕವಾದ ಮತ್ತು ಸಮಗ್ರ ಹಣಕಾಸಿನ ಫಲಿತಾಂಶಗಳು ಸ್ಟಾಕ್ ಎಕ್ಸ್‌ಚೇಂಜ್‌ನ ಜಾಲತಾಣದಲ್ಲಿ www.nseindia.com, www.bseindia.com ಮತ್ತು ನಮ್ಮ ಕಂಪನಿಯ ಜಾಲತಾಣದಲ್ಲಿ www.centumelectronics.com ಲಭ್ಯವಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ನ ಪರವಾಗಿ
ಸಹಿ/–
ಅಪ್ಪಾರಾವ್ ವಿ ಮಲ್ಲವರಪು
ಅಧ್ಯಕ್ಷರು ಮತ್ತು ನಿರ್ವಾಹಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ: ಫೆಬ್ರುವರಿ 07, 2023

ನಗರದ ಬೆಳ್ಳಂದೂರಿನಲ್ಲಿರುವ ಅದ್ವೈತ್ ಹುಂಡೈ ಮಳಿಗೆಯಲ್ಲಿ ಆಯಾನಿಕ್5 ಇ.ವಿ. ಕಾರನ್ನು ಇಸ್ರೊ ವಿಜ್ಞಾನಿಗಳಾದ ಪ್ರದೀಪ್ ಕುಮಾರ್ ಗುಪ್ತ ಮತ್ತು ವಿ. ರಾಮನಾಥನ್ ಅವರು ಈಚೆಗೆ ಅನಾವರಣ ಮಾಡಿದರು. ಅದ್ವೈತ್ ಹುಂಡೈ ಕಂಪನಿಯ ಮಾರಾಟ ಮತ್ತು ಮಾರುಕಟ್ಟೆ ವಿಭಾಗದ ನಿರ್ದೇಶಕ ಅಜಯ್ ಸಿಂಗ್, ಹುಂಡೈ ಮೋಟರ್ ಕಂಪನಿಯ ಅಧಿಕಾರಿ ಸಾಹಿಲ್ ಕುಮಾರ್, ಎಚ್‌ಡಿಎಫ್‌ಸಿ ಬ್ಯಾಂಕ್ ಅಧಿಕಾರಿ ಜೋವಿಯಲ್ ರಾಜ್ ಇದ್ದಾರೆ.

ಚೀನಾ ಹ್ಯಾಕರ್‌ಗಳ ದಾಳಿ: ‘ಕ್ವಾಡ್’ನಿಂದ ಸೈಬರ್ ಸುರಕ್ಷತಾ ಕಾರ್ಯಕ್ರಮ

ನವದೆಹಲಿ: ಚೀನಾ ಮೂಲದ ಹ್ಯಾಕರ್‌ಗಳು ದೇಶದ ಇಂಟರ್‌ನೆಟ್ ಮೂಲಸೌಕರ್ಯಗಳನ್ನು ಗುರಿಯಾಗಿಸಿ ನಡೆಸುತ್ತಿರುವ ದಾಳಿಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಕ್ವಾಡ್ ಸದಸ್ಯ ರಾಷ್ಟ್ರಗಳ ಸಹಯೋಗದಲ್ಲಿ ಭಾರತವು ಈ ಅಪಾಯದ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲು ಮುಂದಾಗಿದೆ.

‘ಕ್ವಾಡ್ ಸೈಬರ್ ಚಾಲೆಂಜ್’ ಹೆಸರಿನ ಈ ಕಾರ್ಯಕ್ರಮದಲ್ಲಿ ಅಮೆರಿಕ, ಆಸ್ಟ್ರೇಲಿಯಾ, ಜಪಾನ್ ದೇಶಗಳು ಪಾಲ್ಗೊಳ್ಳಲಿವೆ. ಹಿಂದೂಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿರುವ ಇಂಟರ್‌ನೆಟ್ ಬಳಕೆದಾರರು ಕೂಡ ಪಾಲ್ಗೊಳ್ಳಲಿದ್ದಾರೆ.

ಇಂದು ಬನ್ನೇರುಘಟ್ಟ ಉದ್ಯಾನಕ್ಕೆ ರಜೆ

ಆನೇಕಲ್: ಜಿ20 ದೇಶಗಳ ಪ್ರತಿನಿಧಿಗಳು ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಫೆ. 9ರಂದು ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ರಜೆ ಘೋಷಿಸಲಾಗಿದೆ. ಭದ್ರತೆ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸುನೀಲ್ ಪನ್ವಾರ್ ತಿಳಿಸಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಭಾರತ ಜಿ20 ದೇಶಗಳ ಆತಿಥ್ಯ ವಹಿಸಿದೆ. ಈ ಹಿನ್ನೆಲೆಯಲ್ಲಿ ಪರಿಸರ ಮತ್ತು ಹವಾಮಾನ ಸಂಬಂಧ ಕಾರ್ಯಕಾರಿ ಗುಂಪಿನ ಪ್ರತಿನಿಧಿಗಳು ಬನ್ನೇರುಘಟ್ಟಕ್ಕೆ ಭೇಟಿ ನೀಡುತ್ತಿದ್ದಾರೆ.

ವಿವಿಧ ದೇಶಗಳ 150 ಪ್ರತಿನಿಧಿಗಳು ಭೇಟಿ ನೀಡುತ್ತಿದ್ದು, ಪ್ರತಿನಿಧಿಗಳನ್ನು ಸ್ವಾಗತಿಸಲು ಬನ್ನೇರುಘಟ್ಟ ಜೈವಿಕ ಉದ್ಯಾನ ಸಜ್ಜಾಗಿದೆ ಎಂದು ತಿಳಿಸಿದ್ದಾರೆ. ಹಾಗಾಗಿ ಉದ್ಯಾನ, ಸಫಾರಿ ಮತ್ತು ಚಿಟ್ಟೆ ಉದ್ಯಾನವು ಭದ್ರತೆ ದೃಷ್ಟಿಯಿಂದ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿರುವುದಿಲ್ಲ ಎಂದು ತಿಳಿಸಿದ್ದಾರೆ.

ಬಿಗಿ ಬಂದೋಬಸ್ತ್: ಪೊಲೀಸರು ಬುಧವಾರದಿಂದಲೇ ಬಿಗಿ ಬಂದೋಬಸ್ತ್ ಕೈಗೊಂಡಿದ್ದಾರೆ.

ನಗರದಲ್ಲಿ ಇಂದು

ಸಾಂಸ್ಕೃತಿಕ ಸಿಂಚನ ಮತ್ತು ಪ್ರಶಸ್ತಿ ಪ್ರದಾನ: ಉದ್ಘಾಟನೆ: ಗಂಗಾಂಬಿಕೆ ಮಲ್ಲಿಕಾರ್ಜುನ, ಅಧ್ಯಕ್ಷತೆ: ಗಂಡಸಿ ಸದಾನಂದಸ್ವಾಮಿ, ಪ್ರಶಸ್ತಿ ಪ್ರದಾನ: ಟೈಗರ್ ಅಶೋಕ್ ಕುಮಾರ್, ಮಾಲತಿ ಸುಧೀರ್, ಮಹೇಂದ್ರ ಮುನ್ನೋತ್, ಅತಿಥಿಗಳು: ಭಾ.ಮ. ಹರೀಶ್, ರವಿ ಡಿ. ಚನ್ನಣ್ಣನವರ್, ಅಪ್ಪು ವೆಂಕಟೇಶ್, ಆಯೋಜನೆ: ಇದು ನಿಮ್ಮ ವಾಹಿನಿ ಕಲಾ ವೇದಿಕೆ, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 9.30

‘ದರ್ಪಣ’ ಕಾಲೇಜು ದಿನಾಚರಣೆ ಸಮಾರಂಭ 2022–23: ಅತಿಥಿಗಳು: ಪಿ. ಕೃಷ್ಣಕಾಂತ್, ಪ್ರಮೋದ್ ಕೆ. ಶೆಟ್ಟಿ, ಜಿ.ವಿ. ವಿಶ್ವನಾಥ್, ಎನ್. ಬಿ. ಭಟ್, ಅನಂತ ಕೆ. ಅತ್ರೆ, ಅಧ್ಯಕ್ಷತೆ: ಕೆ.ಎಸ್. ಸಮೀರಸಿಂಹ, ಆಯೋಜನೆ ಮತ್ತು ಸ್ಥಳ: ವಿಜಯ ವಿಭಜಿತ ಪದವಿಪೂರ್ವ ಕಾಲೇಜು, ಆರ್.ವಿ. ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ವಾರ್ಷಿಕೋತ್ಸವ ಹಾಗೂ ಸಾಂಸ್ಕೃತಿಕ ಸಂಭ್ರಮ: ಉದ್ಘಾಟನೆ: ಎಂ. ಕೃಷ್ಣಪ್ಪ, ಅತಿಥಿಗಳು: ಪ್ರೇಮ್, ದಯಾನಂದ್ ಎಸ್.ಪಿ., ಎಸ್. ಮಹಾದೇವಯ್ಯ, ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘ, ಸ್ಥಳ: ಬಸವೇಶ್ವರ ಪದವಿಪೂರ್ವ, ಪದವಿ, ಶಿಕ್ಷಣ ಮಹಾವಿದ್ಯಾಲಯ, ವಿಜಯನಗರ, ಬೆಳಿಗ್ಗೆ 10.30

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿ ತರಗತಿಗಳ ಉದ್ಘಾಟನೆ: ಕೆ. ಜಯಪ್ರಕಾಶ್ ಹೆಗ್ಡೆ, ಅಧ್ಯಕ್ಷತೆ: ಜಯಕರ್ ಎಸ್.ಎಂ., ಅತಿಥಿಗಳು: ಎನ್. ಮಹೇಶ್ ಬಾಬು, ಆರ್. ಅನುರಾಧ ಪಟೇಲ್, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಹಿಂದುಳಿದ ವರ್ಗಗಳ ಕೋಶ, ಜ್ಞಾನಭಾರತಿ ಆವರಣ, ಮಧ್ಯಾಹ್ನ 2.30

ಪ್ರಶಸ್ತಿ ಪತ್ರ ಪ್ರದಾನ ಸಮಾರಂಭ: ಅತಿಥಿಗಳು: ಥಾವರಚಂದ್ ಗೆಹಲೋತ್, ಬಿ.ಸಿ. ನಾಗೇಶ್, ಪಿ.ಜಿ.ಆರ್ ಸಿಂಧ್ಯ, ರಶ್ಮಿ ವಿ. ಮಹೇಶ್, ರಿತೇಶ್ ಕುಮಾರ್ ಸಿಂಗ್, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಥಳ: ಗಾಜಿನ ಮನೆ, ರಾಜಭವನ, ಸಂಜೆ 4

ಕಿಗ್ಗ ರಾಜಶೇಖರ್ ಎಸ್.ಜಿ. ಅವರು ಸಂಪಾದಿಸಿದ ಶಾಂತವೇರಿ ಗೋಪಾಲಗೌಡರ ‘ಸಮಾಜವಾದದ ಸಹ್ಯಾದ್ರಿ’ ಪುಸ್ತಕ ಬಿಡುಗಡೆ: ಬಿ.ಟಿ. ಲಲಿತಾ ನಾಯಕ್, ಅಧ್ಯಕ್ಷತೆ: ಎಚ್. ಎನ್. ನಾಗಮೋಹನದಾಸ್, ಅತಿಥಿಗಳು: ಎಸ್.ಜಿ. ಸಿದ್ಧರಾಮಯ್ಯ, ಮಾವಳ್ಳಿ ಶಂಕರ್, ಸತೀಶ್ ಕುಮಾರ್ ಎಸ್. ಹೊಸಮನಿ, ಉಪಸ್ಥಿತಿ: ಕಿಗ್ಗ ರಾಜಶೇಖರ್ ಎಸ್.ಜಿ., ರಾಮ ಮನೋಹರ ಶಾಂತವೇರಿ, ಪ್ರಸ್ತಾವನೆ: ಬಿ. ರಾಜಶೇಖರಮೂರ್ತಿ, ಆಯೋಜನೆ: ಜನ ಪ್ರಕಾಶನ, ಸ್ಥಳ: ಬಾಪೂಜಿ ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಸಂಜೆ 4.30

ಆರ್.ವಿ. ಪ್ರಭಾಕರ ಯುವ ರಂಗ ಸಂಘಟನಾ ಪ್ರಶಸ್ತಿ ಪ್ರದಾನ: ಟಿ.ಎಸ್. ನಾಗಾಭರಣ, ಅಧ್ಯಕ್ಷತೆ: ಎ. ಪದ್ಮನಾಭ, ಅತಿಥಿ: ಕೆ.ವಿ ನಾಗರಾಜಮೂರ್ತಿ, ಉಪಸ್ಥಿತಿ: ಗುಣಸಾಯಿ, ಪ್ರಶಸ್ತಿ ಪುರಸ್ಕೃತರು: ಹನು ರಾಮಸಂಜೀವ, ಆಯೋಜನೆ: ಭಾರತ ಯಾತ್ರಾ ಕೇಂದ್ರ, ರಂಗಸೌರಭ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ, ಸಂಜೆ 4.30

ಪ್ರವಚನ ವಾಹಿನಿ ಕಾರ್ಯಕ್ರಮ: ‘ಸಂಕಷ್ಟಹರ ಗಣಪತಿ ಪೂಜೆ’, ಆಯೋಜನೆ ಮತ್ತು ಸ್ಥಳ: ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಚಿನ್ಮಯ ನೃತ್ಯ ಶಾಲೆ ವಿದ್ಯಾರ್ಥಿಗಳು

ನೃತ್ಯ ಪ್ರದರ್ಶನ: ಚಿನ್ಮಯ ನೃತ್ಯ ಶಾಲೆ ವಿದ್ಯಾರ್ಥಿಗಳು, ಮಾರ್ಗದರ್ಶನ: ತೇಜಸ್ವಿನಿ ಬಾಲಾಜಿ, ರೇಖಾ ದಿನೇಶ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಬೈರತಿ ಮಣಿಸಲು ಕಾಂಗ್ರೆಸ್, ಜೆಡಿಎಸ್ ಹವಣಿಕೆ

ಕೆ.ಆರ್.ಪುರ



ಬೈರತಿ ಬಸವರಾಜ
ಹಾಲಿ ಶಾಸಕ (ಬಿಜೆಪಿ)

ಹಾಲಿ ಮತದಾರರ ವಿವರ

2,54,747 ಪುರುಷರು

2,32,636 ಮಹಿಳೆಯರು

4,26,423 ಒಟ್ಟು

163 ತೃತೀಯ ಲಿಂಗಿಗಳು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಕಾಂಗ್ರೆಸ್	1,35,230	1,06,299	66,725
ಬಿಜೆಪಿ	1,02,468	82,298	56,939
ಜೆಡಿಎಸ್	6565	3,955	6,276

2019ರ ಉಪಚುನಾವಣೆ

ಬೈರತಿ ಬಸವರಾಜ (ಬಿಜೆಪಿ)-**1,39,879**

ಎಂ. ನಾರಾಯಣಸ್ವಾಮಿ (ಕಾಂಗ್ರೆಸ್)-**76,436**

ಸಿ. ಕೃಷ್ಣಮೂರ್ತಿ (ಜೆಡಿಎಸ್)-**2.048**

• ವಿಶಾಖ ಎನ್.

ಪ್ರಜಾ ಮತ ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

ಕ್ಷೇತ್ರ ಸ್ಥಿತಿ-ಗತಿ

ಬೆಂಗಳೂರು: ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಪ್ರತಿನಿಧಿಸುವ ಕೆ.ಆರ್.ಪುರ ಕ್ಷೇತ್ರದ ಪ್ರಮುಖ ಪ್ರದೇಶಗಳು ಅಭಿವೃದ್ಧಿಯ ಮಿಂಚು ಕಂಡಿದ್ದರೆ, 15 ವರ್ಷಗಳ ಹಿಂದೆ ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶಗಳಿಗಿನ್ನೂ ಪೂರ್ಣಪ್ರಮಾಣದ ಅದೃಷ್ಟ ಒಲಿದಿಲ್ಲ.

2008ರಲ್ಲಿ ಹೊಸದಾಗಿ ಸೃಷ್ಟಿಯಾದ ಕ್ಷೇತ್ರದ ಪೈಕಿ ಒಂದಾದ, ಇಲ್ಲಿ ಮೊದಲ ಬಾರಿಗೆ ಬಿಜೆಪಿಯ ನಂದೀಶ್ ರೆಡ್ಡಿ ಗೆದ್ದಿದ್ದರು. ರೆಡ್ಡಿ ವಿರುದ್ಧ ಸತತ ಹೋರಾಟ ನಡೆಸುವ ಜತೆಗೆ, ಮತಗಳ ಮೇಲೆ ಕಣ್ಣಿಟ್ಟ 'ದಾನ', ಕಾಂಗ್ರೆಸ್ ಅಲೆ, ಬಿಜೆಪಿ ವಿಭಜನೆಯಾಗಿದ್ದರ ಲಾಭಪಡೆದ ಬೈರತಿ 2013ರಲ್ಲಿ ನಿರಾಯಾಸವಾಗಿ ಗೆದ್ದು ಬಂದರು. ಆ ಬಳಿಕ, ತಮ್ಮ ದಾನ, ಭೇದ, ಕೊಡುಗೆಗಳ ಕಾರಣಕ್ಕೆ ಕ್ಷೇತ್ರವನ್ನು ಭದ್ರಮುಷ್ಟಿಯಡಿ ಹಿಡಿದುಕೊಂಡ ಅವರು, ಎದುರಾಳಿಗಳೇ ಇಲ್ಲದಂತೆ ನೋಡಿಕೊಂಡರು.

2018ರಲ್ಲಿ ಮರು ಆಯ್ಕೆಯಾದ ಅವರು, 2019ರಲ್ಲಿ ಕಾಂಗ್ರೆಸ್‌ಗೆ ರಾಜೀನಾಮೆ ಕೊಟ್ಟು ಬಿಜೆಪಿ ಸೇರಿ, ಉಪಚುನಾವಣೆಯಲ್ಲಿ ಮತ್ತೆ ಗೆಲುವು ಪಡೆದರು. ಕ್ಷೇತ್ರದಲ್ಲಿ ಬಲಿಷ್ಠ ಎದುರಾಳಿಯಾಗಬಹುದಾಗಿದ್ದ ಪೂರ್ಣಿಮಾ ಅವರು 2018ರಲ್ಲಿ ಬಿಜೆಪಿ ಸೇರಿ, ಹಿರಿಯೂರಿನಿಂದ ಶಾಸಕರಾಗಿ ಆಯ್ಕೆಯಾದರು. ಬೈರತಿ ಬಿಜೆಪಿ ಸೇರಿ ಅಲ್ಲಿ ತನ್ನ ಹಿಡಿತ ಭದ್ರಗೊಳಿಸಿಕೊಂಡಿದ್ದರಿಂದಾಗಿ, ಮೂರು ಬಾರಿ ಪ್ರತಿಸ್ಪರ್ಧಿಯಾಗಿದ್ದ ನಂದೀಶ್ ರೆಡ್ಡಿ, ಅವರ ಜತೆಗೆ ನಿಲ್ಲಬೇಕಾಯಿತು.

ಕೆಲವು ತಿಂಗಳುಗಳಿಂದ ನಂದೀಶ್ ರೆಡ್ಡಿ ಪಕ್ಷದ ಚಟುವಟಿಕೆಗಳಿಂದ ಹೊರಗೆ ಉಳಿದಿದ್ದರು. ಈಗ ರಾಜ್ಯ ಉಪಾಧ್ಯಕ್ಷ ಜವಾಬ್ದಾರಿಯನ್ನು ಅವರಿಗೆ ಪಕ್ಷ ವಹಿಸಿರುವುದರಿಂದ ಬೈರತಿ ಬಸವರಾಜ ಅವರ ಉಮೇದುವಾರಿಕೆ ಬಹುತೇಕ ಖಚಿತ. ನಂದೀಶ್ ರೆಡ್ಡಿ ಬೆಂಬಲಿಸುವ ಕಾರ್ಯಕರ್ತರಿಗೆ ಇರುವ ಅಸಮಾಧಾನವನ್ನು 'ಒಳಏಟು' ಎಂದು ಕಾಂಗ್ರೆಸ್ ಟಿಕೆಟ್‌ನ ಕನಸು ಕಾಣುತ್ತಿರುವವರು ಭಾವಿಸಿದ್ದಾರೆ.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯೂ ಆಗಿರುವ, ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್‌ನ ಮಾಲೀಕ ಡಿ.ಕೆ. ಮೋಹನ್‌ಬಾಬು, ಮಾಜಿ ಶಾಸಕ ಎ.ಕೃಷ್ಣಪ್ಪ ಅವರ ಸಹೋದರ ಡಿ.ಎ. ಗೋಪಾಲ, ವಿಧಾನಪರಿಷತ್ ಮಾಜಿ ಸದಸ್ಯ ಎ.ನಾರಾಯಣಸ್ವಾಮಿ ಇಲ್ಲಿ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ.

2018ರ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಡಿ.ಎ. ಗೋಪಾಲ ಸ್ಪರ್ಧಿಸಿದ್ದರು. ಈ ಸಲ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಅವರಾಗಿರುವುದರಿಂದ ಜೆಡಿಎಸ್‌ನಿಂದ ಯಾವ ಆಕಾಂಕ್ಷಿಯ ಹೆಸರೂ ಪ್ರಸ್ತಾಪವಾಗುತ್ತಿಲ್ಲ.

ಗ್ರೇಟರ್ ಬೆಂಗಳೂರು ಭಾಗಗಳನ್ನು ಹೊಂದಿದ ದೊಡ್ಡ ವಿಧಾನಸಭಾ ಕ್ಷೇತ್ರ ಕೆ.ಆರ್. ಪುರ. ಮೇಡಹಳ್ಳಿ, ಸಣ್ಣ ತಿಮ್ಮನಹಳ್ಳಿ, ಭಟ್ಟರಹಳ್ಳಿ, ಕೆ.ಆರ್. ಪುರ, ರಾಮಮೂರ್ತಿನಗರ, ಚಿಕ್ಕಬಸವನಪುರ, ದೂರವಾಣಿ ನಗರ, ವಿಜ್ಞಾನಪುರ, ದೇವಸಂದ್ರ, ಕೆ. ನಾರಾಯಣಪುರ, ಸಿಂಗಯ್ಯನಪಾಳ್ಯ, ವಿಮಾನಪುರ ಮೊದಲಾದ ಪ್ರದೇಶಗಳನ್ನು ಇದು ಒಳಗೊಂಡಿದೆ.

ಟಿನ್ ಫ್ಯಾಕ್ಟರಿಯಿಂದ ಮೇಡಹಳ್ಳಿವರೆಗಿನ ಟ್ರಾಫಿಕ್ ಸಮಸ್ಯೆಗೆ ಇನ್ನೂ ಮುಕ್ತಿ ದೊರೆತಿಲ್ಲ. ರಾಜಕಾಲುವೆ, ಚರಂಡಿ ಸಮಸ್ಯೆಗಳು ಕೂಡ ಹಾಗೆಯೇ ಇವೆ. ಕಾವೇರಿ ನೀರಿನ ಸಂಪರ್ಕ ಕಲ್ಪಿಸುವ ಕೆಲಸದ ಕುರಿತು ಅಲ್ಲಲ್ಲಿ ತಗಾದೆಗಳು ಉಳಿದುಕೊಂಡಿವೆ. ಭ್ರಷ್ಟಾಚಾರದ ಬಗೆಗೆ ಮುಕ್ತವಾಗಿ ಮಾತನಾಡುವ ಮತದಾರರೂ ಇಲ್ಲಿದ್ದಾರೆ.

ಮಹದೇವಪುರ ಹಾಗೂ ಕೆ.ಆರ್. ಪುರ ವ್ಯಾಪ್ತಿಗಳನ್ನು ಒಳಗೊಳ್ಳುವ ಸರ್ಕಾರಿ ಆಸ್ಪತ್ರೆಯನ್ನು 100 ಹಾಸಿಗೆ ಸಾಮರ್ಥ್ಯದಿಂದ 150 ಹಾಸಿಗೆಗಳಿಗೆ ಹೆಚ್ಚಿಸುವ ಪ್ರಕ್ರಿಯೆ ನಡೆದಿರುವುದರ ಕುರಿತು ಸ್ಥಳೀಯರಿಗೆ ಸಂತಸವಿದೆ. ಕೆ.ಆರ್. ಪುರದ ಪ್ರಥಮ ದರ್ಜೆ ಕಾಲೇಜಿನ ಕ್ರೀಡಾಂಗಣ, ಸಭಾಂಗಣದ ಕಾಮಗಾರಿ ಇನ್ನೂ ಮುಗಿದಿಲ್ಲ ಎನ್ನುವುದರ ಕುರಿತು ಅಸಮಾಧಾನವೂ ಇದೆ.

ಕಿರಿದಾದ ರಸ್ತೆಗಳ ಮೇಲೆ ಕೊಳಚೆ ನೀರು ಹರಿಯುತ್ತಿರುವುದರ ಕಡೆಗೆ ಬೆರಳು ತೋರುತ್ತಿರುವ ಮತದಾರರಿಗೆ ತಮ್ಮ ಎದುರು ಇನ್ನೂ ಯಾರು ಯಾರು ನಿಲ್ಲುವರೋ ಎಂಬ ಕುತೂಹಲ ಇದೆ.

ಏರೋ ಇಂಡಿಯಾ: ವಿಪತ್ತು ನಿರ್ವಹಣೆ ಯೋಜನೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರೋ ಇಂಡಿಯಾ ವೈಮಾನಿಕ ಪ್ರದರ್ಶನದಲ್ಲಿ ವಿಪತ್ತು ನಿರ್ವಹಣೆಗಾಗಿ ಇದೇ ಮೊದಲ ಬಾರಿ 'ಕರ್ನಾಟಕ ಭೌಗೋಳಿಕ ತಂತ್ರಜ್ಞಾನ ವ್ಯವಸ್ಥೆ' ಆಧಾರಿತ ವಿಪತ್ತು ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸಲಾಗಿದೆ.

ಫೆ.13ರಿಂದ 17ರವರೆಗೆ ನಡೆಯುವ ಪ್ರದರ್ಶನದಲ್ಲಿ ಉದ್ದಿಮೆದಾರರು, ಹೂಡಿಕೆದಾರರು, ಪ್ರದರ್ಶಕರು, ಅಧಿಕಾರಿಗಳು ಸೇರಿ ಪ್ರತಿದಿನ ಒಂದು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ.

ಈ ವೈಮಾನಿಕ ಪ್ರದರ್ಶನದ ಸ್ಥಳದಲ್ಲಿ ಆಕಸ್ಮಿಕವಾಗಿ ಸಂಭವಿಸುವ ವಿಮಾನ ಅಪಘಾತ, ಬಾಂಬ್ ಸ್ಫೋಟ, ಕಾಲ್ತುಳಿತ, ಅಗ್ನಿ ಅವಘಡ ಇತ್ಯಾದಿ ವಿಪತ್ತುಗಳನ್ನು ಸಮರ್ಥವಾಗಿ ಎದುರಿಸಲು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣೆ ಪ್ರಾಧಿಕಾರವು (ಕೆಎಸ್‌ಡಿಎಂಎ) ಈ ಯೋಜನೆಯನ್ನು ಸಿದ್ಧಪಡಿಸಿದೆ. ಆಧುನಿಕ ತಂತ್ರಜ್ಞಾನ, ಭೌಗೋಳಿಕ ಮಾಹಿತಿ ವ್ಯವಸ್ಥೆ ಮತ್ತು ದೂರಸಂವೇದಿ ವಿಜ್ಞಾನ ಆಧರಿತ ವ್ಯವಸ್ಥೆಯನ್ನು ಬಳಸಿಕೊಂಡು ವಿಪತ್ತು ನಿರ್ವಹಣಾ ಯೋಜನೆಯನ್ನು ರೂಪಿಸಲಾಗಿದೆ.

ಏರೋ ಇಂಡಿಯಾ ಪ್ರದರ್ಶನಗಳಲ್ಲಿನ ಹಿಂದಿನ ಅನುಭವಗಳು ಮತ್ತು ಕಲಿತ ಪಾಠಗಳವನ್ನು ಈ ಬಾರಿ ಪರಿಗಣಿಸಲಾಗಿದೆ. ವೈಮಾನಿಕ ಪ್ರದರ್ಶನದ ಹೊರಾಂಗಣ ಮತ್ತು ಒಳಾಂಗಣದಲ್ಲಿ ಸಂಭವಿಸುವ ವಿಪತ್ತುಗಳನ್ನು ನಿರ್ವಹಿಸಲು ಹಾಗೂ ಅಗತ್ಯವಿರುವ ಸಂಪನ್ಮೂಲಗಳನ್ನು ಗುರುತಿಸಲು 'ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ'ಯನ್ನು (ಕೆಜಿಐಎಸ್) ಬಳಸಲು ಉದ್ದೇಶಿಸಲಾಗಿದೆ.

ಯಲಹಂಕದ ವಾಯುನೆಲೆ ಸುತ್ತಲಿನ ಪ್ರದೇಶಗಳ ವಿಶ್ಲೇಷಣೆಯನ್ನು ಕೈಗೊಂಡು ಮೂಲ ನಕ್ಷೆಯನ್ನು ತಯಾರಿಸಲಾಗಿದೆ. ವೈಮಾನಿಕ ಪ್ರದರ್ಶನ ಪ್ರದೇಶದ ವ್ಯಾಪ್ತಿಯನ್ನು ಹೊರಾಂಗಣ ಮತ್ತು ಒಳಾಂಗಣ ಗ್ರಿಡ್ ಮತ್ತು ಉಪಗ್ರಿಡ್‌ಗಳನ್ನಾಗಿ ಗುರುತಿಸಲಾಗಿದೆ. ಒಟ್ಟಾರೆ ಪ್ರದೇಶವನ್ನು ಒಂಬತ್ತು ಗ್ರಿಡ್‌ಗಳನ್ನಾಗಿ ಗುರುತಿಸಲಾಗಿದೆ.

ಜತೆಗೆ, ವೈಮಾನಿಕ ಪ್ರದರ್ಶನದ 'ಸಮಗ್ರ ಸಂವಹನ ನಿಯಂತ್ರಣ ಕೇಂದ್ರ'ವು ಹೊರಾಂಗಣ ಮತ್ತು ಒಳಾಂಗಣ ವಿಪತ್ತು ನಿರ್ವಹಣೆಗೆ ಅಗತ್ಯವಿರುವ ಸಮನ್ವಯ ಸಾಧಿಸುವಲ್ಲಿ ಪ್ರಮುಖ ಪಾತ್ರವಹಿಸಲಿದೆ. ವಾಯು ನೆಲೆ ಆವರಣದ ಹೊರಗೆ ಸಂಭವಿಸಬಹುದಾದ ಯಾವುದೇ ರೀತಿಯ ತುರ್ತು ಪರಿಸ್ಥಿತಿ ಮತ್ತು ವಿಪತ್ತುಗಳನ್ನು ಎದುರಿಸಲು ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ಯೋಜನೆಯನ್ನು ರೂಪಿಸಲಾಗಿದೆ. ವಿಪತ್ತುಗಳಿಂದ ಸಾರ್ವಜನಿಕರು ಮತ್ತು ಆಸ್ತಿಗಳಿಗೆ ಹಾನಿಯಾಗುವುದನ್ನು ತಡೆಗಟ್ಟುವುದು ಹಾಗೂ ತಕ್ಷಣದ ಚಿಕಿತ್ಸೆ ವ್ಯವಸ್ಥೆ ಕಲ್ಪಿಸುವುದು ಮತ್ತು ಸಂತ್ರಸ್ತರನ್ನು ಸುರಕ್ಷಿತ ಸ್ಥಳಗಳಿಗೆ ಕಳುಹಿಸಿ ಉಪಚರಿಸಲು ಯೋಜನೆ ರೂಪಿಸಲಾಗಿದೆ.

ಬಿಕ್ಕಟ್ಟು ನಿರ್ವಹಣೆಗಾಗಿ 'ಜಿಯೋಸ್ಪೇಷಿಯಲ್' ತಂತ್ರಜ್ಞಾನ

'ವಿವಿಧ ಇಲಾಖೆಗಳನ್ನು ಸೇರಿಸಿಕೊಂಡು ವಿಪತ್ತುಗಳನ್ನು ತ್ವರಿತಗತಿಯಲ್ಲಿ ನಿಯಂತ್ರಿಸುವ ಮೂಲಕ ಹಾನಿಯ ಪ್ರಮಾಣ ಕಡಿಮೆಗೊಳಿಸುವುದು ವಿಪತ್ತು ನಿರ್ವಹಣೆ ಯೋಜನೆಯ ಉದ್ದೇಶ. ಬಿಬಿಎಂಪಿ, ಜಲಮಂಡಳಿ ಸೇರಿದಂತೆ ವಿವಿಧ ಇಲಾಖೆಗಳು ಕೈಗೊಳ್ಳಬೇಕಾದ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಪ್ರಮಾಣೀಕೃತ ಕಾರ್ಯಾಚರಣೆ ವಿಧಾನ(ಎಸ್‌ಒಪಿ) ರೂಪಿಸಲಾಗಿದೆ' ಎಂದು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಡಾ ಮನೋಜ್ ರಾಜನ್ ತಿಳಿಸಿದ್ದಾರೆ.

'ವಿಪತ್ತು ನಿರ್ವಹಣೆಯಲ್ಲಿ ಅತ್ಯಂತ ಪ್ರಮುಖವಾಗಿ ಕಾರ್ಯನಿರ್ವಹಿಸುವ ಸಮಗ್ರ ಸಂಪರ್ಕ ಕಮಾಂಡ್ ಸೆಂಟರ್ (ಐಸಿಸಿಸಿ) ಎಲ್ಲ ಚಟುವಟಿಕೆಗಳ ಬಗ್ಗೆ ನಿಗಾವಹಿಸಿ ಸಮನ್ವಯ ಸಾಧಿಸಲಿದೆ. ವಿಪತ್ತು ನಿರ್ವಹಣೆ ಸಂದರ್ಭದಲ್ಲಿ ಆಧುನಿಕ ತಂತ್ರಜ್ಞಾನದ ಮೂಲಕ ನಿರ್ಧಾರಗಳನ್ನು ಕೈಗೊಳ್ಳುವ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ಬಿಕ್ಕಟ್ಟು ನಿರ್ವಹಣೆಗಾಗಿ ಇದೇ ಪ್ರಥಮ ಬಾರಿ ಏರೋ ಇಂಡಿಯಾ ಪ್ರದರ್ಶನ ನಡೆಯುವ ಸ್ಥಳದಲ್ಲಿ ಜಿಯೋಸ್ಪೇಷಿಯಲ್ ಪರಿಸರವನ್ನು ರಿಮೋಟ್ ಸೆನ್ಸಿಂಗ್ ಡೇಟಾದೊಂದಿಗೆ ಸಂಯೋಜಿಸಿದ್ದೇವೆ' ಎಂದು ಅವರು ವಿವರಿಸಿದ್ದಾರೆ.

ವಿಪತ್ತು ನಿರ್ವಹಣಾ ಕೋಶ ಸ್ಥಾಪನೆ

ವಿಪತ್ತು ನಿರ್ವಹಣಾ ಕೋಶವನ್ನು ಸಹ ಸ್ಥಾಪಿಸಲಾಗಿದೆ. ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಅಗ್ನಿಶಾಮಕ, ಆರೋಗ್ಯ ಇಲಾಖೆಗಳ ನೋಡಲ್ ಅಧಿಕಾರಿಗಳು ಕಾರ್ಯಾಚರಣೆ ನಿಯಂತ್ರಣ ಕೇಂದ್ರಗಳಲ್ಲಿ ಭಾರತೀಯ ವಾಯುಸೇನೆ ಸಿಬ್ಬಂದಿ ಜತೆ ನೇರ ಸಂಪರ್ಕವನ್ನು ಈ ಕೋಶ ಹೊಂದಿರುತ್ತದೆ. ರಕ್ಷಣೆ ಮತ್ತು ತೆರವು ಕಾರ್ಯಾಚರಣೆಗೆ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆ. ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆಯು ವೈಮಾನಿಕ ಪ್ರದರ್ಶನದಲ್ಲಿ 10ರಿಂದ 20 ಟನ್ ಸಾಮರ್ಥ್ಯದ ಕ್ರೇನ್‌ಗಳನ್ನು ನಿಯೋಜಿಸಿದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 50 ಟನ್ ಸಾಮರ್ಥ್ಯದ ಕ್ರೇನ್‌ಗಳನ್ನು ಸನ್ನದ್ಧ ಸ್ಥಿತಿಯಲ್ಲಿರಿಸಲಾಗಿದೆ.

ಬಿಆರ್‌ಎಸ್: ಫೆ.17ಕ್ಕೆ ವಿಚಾರಣೆ

ನವದೆಹಲಿ: ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಪಕ್ಷದ ಶಾಸಕರ ಖರೀದಿಯತ್ನ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಿದ್ದ ಆದೇಶವನ್ನು ಎತ್ತಿಹಿಡಿದ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ತೆಲಂಗಾಣ ಪೊಲೀಸರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಫೆ.17ರಂದು ನಡೆಸುವುದಾಗಿ ಸುಪ್ರೀಂ ಕೋರ್ಟ್ ಬುಧವಾರ ತಿಳಿಸಿದೆ.

G20 ಭಾರತ 2023 INDIA
ವಸುಧೈವ ಕುಟುಂಬಕಂ
ಒಂದು ಭೂಮಿ ಒಂದು ಕುಟುಂಬ ಒಂದು ಭವಿಷ್ಯ

ಕರ್ನಾಟಕ ಸರ್ಕಾರ
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಫೆಬ್ರವರಿ- 9

ಜೀತ ಪದ್ಧತಿ ನಿರ್ಮೂಲನಾ ದಿನ
ಕರ್ನಾಟಕವನ್ನು ಜೀತ ವಿಮುಕ್ತಿಗೊಳಿಸೋಣ
ಜೀತ ಮುಕ್ತ ಸಮಾಜ ನಿರ್ಮಿಸೋಣ

- ಸಮಾಜದ ಸರ್ವತೋಮುಖ ಅಭಿವೃದ್ಧಿ ಸಾಧಿಸಲು ಹಾಗೂ ಕಾರ್ಮಿಕರ ಶೋಷಣೆಯನ್ನು ತಡೆಗಟ್ಟಲು ರಾಜ್ಯ ಸರ್ಕಾರ ಬದ್ಧವಾಗಿದೆ. ಫೆಬ್ರವರಿ 9, 2021 ರಿಂದ ಪ್ರತೀ ಸಾಲಿನಲ್ಲೂ ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಿ, ಪೂರಕ ಕ್ರಮಗಳನ್ನು ವಹಿಸಲಾಗುತ್ತಿದೆ.
- 07.02.2022 ರಿಂದ ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಜೀತ ವಿಮುಕ್ತರಿಗೆ ನೀಡುವ ತುರ್ತು ಪರಿಹಾರ ನಿಧಿಯನ್ನು ರೂ.20,000/- ದಿಂದ ರೂ.30,000/- ಕ್ಕೆ ಪರಿಷ್ಕರಿಸಿದೆ.
- 26.05.2022 ರಂದು ಜೀತ ಕಾರ್ಮಿಕರ ಪುನರ್ವಸತಿ ಯೋಜನೆ ಹಾಗೂ ಜೀತ ಕಾರ್ಮಿಕ ಪದ್ಧತಿ(ರದ್ದತಿ) ಕಾಯ್ದೆ1976 ರಡಿ ಅಪರಾಧಿಗಳಿಗೆ ಶಿಕ್ಷೆ ನೀಡುವ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರವನ್ನು ನಡೆಸಲಾಗಿದ್ದು, ಮಾದರಿ ಕಾರ್ಯ ವಿಧಾನವನ್ನು ಬಿಡುಗಡೆಗೊಳಿಸಲಾಗಿದೆ.
- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರಡಿ ಅನುಚ್ಛೇದ 58A ರಡಿ ಗ್ರಾಮ ಪಂಚಾಯಿತಿ ಪ್ರಕಾರ್ಯಗಳ ಅನುಸಾರ ಜೀತ ಕಾರ್ಮಿಕರು ಕಂಡು ಬಂದಲ್ಲಿ ಗ್ರಾಮ ಪಂಚಾಯಿತಿ ಅಧಿಕಾರಿಯು ಅದನ್ನು ಆಯಾ ಉಪವಿಭಾಗಾಧಿಕಾರಿಗಳಿಗೆ ನಿಗದಿತ ನಮೂನೆಯಲ್ಲಿ ವರದಿ ಮಾಡತಕ್ಕದ್ದು.
- ಜೀತ ವಿಮುಕ್ತರ ಪುನರ್ವಸತಿ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಜಿಲ್ಲಾ ಹಾಗೂ ಉಪವಿಭಾಗ ಹಂತದಲ್ಲಿ ವಿವಿಧ ಇಲಾಖೆ ಹಾಗೂ ಸರ್ಕಾರೇತರ ಸಂಸ್ಥೆಗಳನ್ನೊಳಗೊಂಡ ಜಾಗೃತ ಸಮಿತಿಗಳನ್ನು ರಚಿಸಲಾಗಿದೆ.
- ಜಿಲ್ಲಾ ಹಂತದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಿದ್ದು, ಯೋಜನೆಯ ಫಲಾನುಭವಿಗಳಿಗೆ ಅನುದಾನೇತರ ಪುನರ್ವಸತಿ ಸೌಲಭ್ಯಗಳನ್ನು ವಿತರಿಸಲು ಕ್ರಮವಹಿಸಲಾಗಿದೆ (ವಸತಿ, ನಿವೇಶನ, ನರೇಗಾ ಉದ್ಯೋಗ ಚೀಟಿ, ಕೌಶಲ್ಯ ತರಬೇತಿ, ಸಾಲ ಸೌಲಭ್ಯ ನೆರವು, ಜೀತ ವಿಮುಕ್ತರ ಸ್ವಸಹಾಯ ಗುಂಪುಗಳ ರಚನೆ, ಮೂಲಭೂತ ವೈಯಕ್ತಿಕ ದಾಖಲಾತಿಗಳು, ಸಾಮಾಜಿಕ ಭದ್ರತೆ ಯೋಜನೆಯಡಿ ಪಿಂಚಣಿ).

ಕಾರ್ಮಿಕ ಸಂಬಂಧಿತ ಯಾವುದೇ ಸಮಸ್ಯೆಗಳನ್ನು 24x7 ಸಹಾಯವಾಣಿ 155214 ಕ್ಕೆ ಕರೆ ಮಾಡಿ.
ಬಾಲ ಜೀತ ಕಾರ್ಮಿಕ ಸಂಬಂಧಿತ ಯಾವುದೇ ಸಮಸ್ಯೆಗಳನ್ನು ತಿಳಿಸಲು 1098 ಕ್ಕೆ ಕರೆ ಮಾಡಿ.

PanchayatRaj.Kar | panchayatraj.kar | CommrPR | Panchayat Raj Commissionerate Karnataka

ಗೌರವಯುತ ಸ್ಮರಣೆ

ಶ್ರೀ ಜೆ. ಪಿ. ನಾರಾಯಣಸ್ವಾಮಿ
2-2-1952 to 9-2-2017
ಸಂಸ್ಥಾಪಕರು – ಜೆ. ಪಿ. ಗ್ರೂಪ್

ನೀವು ನಮ್ಮ ಜೊತೆಯಲ್ಲಿ ಇಲ್ಲದಿದ್ದರೂ ಸಹ ನಮಗೆ ಇನ್ನೂ ಹೆಚ್ಚು ಕೆಲಸ ಮಾಡಲು,
ಹೊಸದಾಗಿ ಆಲೋಚಿಸಲು, ಪ್ರಾಮಾಣಿಕವಾಗಿರಲು, ಹೊಸ ಎಲ್ಲೆಗಳನ್ನು ಮೀರಲು,
ಹಾಗೂ ಉನ್ನತ ಮಟ್ಟಗಳನ್ನು ಏರಲು,
ನಿಮ್ಮ ಧೀಮಂತ ಚೈತನ್ಯದಿಂದ ಸದಾ ಪ್ರೇರಣೆ ನೀಡುತ್ತಿದ್ದೀರಿ.

ನೀವು ಸದಾ ನಮ್ಮ ದಾರಿದೀಪ ಮತ್ತು ಮಾರ್ಗದರ್ಶಕರಾಗಿರುತ್ತೀರಿ.

ಸದಾ ಸ್ಮರಿಸುವ
ಕುಟುಂಬ ಸದಸ್ಯರು ಹಾಗೂ ಸಿಬ್ಬಂದಿ ವರ್ಗ

JP GROUP

के आई ओ सी एल लिमिटेड
KIOCL LIMITED
(A Government of India Enterprise)
CIN - L13100KA1976GOI002974
Tel. & Fax No. 080 - 25531525, E-mail : cs@kioclltd.in,
website : www.kioclltd.in
KUDREMUKH

UNAUDITED FINANCIAL RESULTS FOR THE QUARTER AND NINE MONTHS ENDED 31ST DECEMBER, 2022

(₹ in Lakhs except EPS)

Particulars	Quarter ended			Nine Months ended	
	31.12.2022	30.09.2022	31.12.2021	31.12.2022	31.12.2021
	(Un-Audited)	(Un-Audited)	(Un-Audited)	(Un-Audited)	(Un-Audited)
1	2	3	4	5	6
Total Income from Operations	28,789	15,447	36,379	80,868	186,766
Net Profit / (Loss) for the period (before tax, Exceptional and/or Extraordinary items)	(3,388)	(10,271)	(8,668)	(18,037)	17,004
Net Profit / (Loss) for the period before tax (after Exceptional and/or Extraordinary items)	(3,388)	(10,271)	(8,668)	(18,037)	17,004
Net Profit / (Loss) for the period after tax (after Exceptional and/or Extraordinary items)	(3,388)	(10,222)	(6,613)	(17,988)	11,946
Total Comprehensive Income for the period [(Comprising Profit / (Loss) for the period (after tax) and Other Comprehensive Income (after tax)]	(3,388)	(10,222)	(6,613)	(17,988)	11,946
Equity Share Capital	60,775	60,775	60,775	60,775	60,775
Reserves (excluding Revaluation Reserve) as shown in the Audited Balance Sheet of the previous year.	-	-	-	-	-
Earnings Per Share (of Rs. 10/- each) (for continuing and discontinued operations) Basic & Diluted	(0.56)	(1.68)	(1.09)	(2.96)	1.97

Note:
1. The above is an extract of the detailed Un-audited Financial Results filed with the Stock Exchanges under Regulation 33 of the SEBI (Listing Obligations and Disclosure Requirements) Regulations 2015. The full format of the Financial Results for the quarter and Nine months ended 31st December, 2022 are available on the Stock Exchange(s) website **www.nseindia.com**, **www.bseindia.com**, **www.msei.in** and on Company website at **www.kioclltd.in**
2. The above results of the Company have been reviewed by the Audit Committee and approved by the Board of Directors at their Meeting held on **08.02.2023**

By Order of the Board
for KIOCL Limited
Sd/-
(B.K. MAHAPATRA)
DIRECTOR (FINANCE)-Addl. Charge
DIN: 09613777

Place: Bengaluru
Date: 08.02.2023

ವೃತ್ತಿಪರ ಶಿಕ್ಷಣ ಪೂರೈಸಿದ ಶಿಕ್ಷಕರ ಮಕ್ಕಳಿಗೆ ಧನಸಹಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ ಸೇರಿದಂತೆ ತಮ್ಮ ಮಕ್ಕಳ ವೃತ್ತಿಪರ ಶಿಕ್ಷಣಕ್ಕೆ (ಸ್ನಾತಕೋತ್ತರ ಪದವಿ ಒಳಗೊಂಡು) ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಶೈಕ್ಷಣಿಕ ಸಾಲ ಪಡೆದ ಶಿಕ್ಷಕರು, ಉಪನ್ಯಾಸಕರ ಮಕ್ಕಳಿಗೆ ಧನಸಹಾಯ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಶಿಕ್ಷಕರ ಕಲ್ಯಾಣ ನಿಧಿಯ ಆಜೀವ ಸದಸ್ಯತ್ವ ಹೊಂದಿರುವ ಸರ್ಕಾರಿ, ಅನುದಾನಿತ, ಪ್ರಾಥಮಿಕ, ಪ್ರೌಢ, ಪದವಿ ಹಾಗೂ ಸ್ನಾತಕೋತ್ತರ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕ, ಉಪನ್ಯಾಸಕರ ಮಕ್ಕಳಿಗೆ ಸಹಾಯಧನ ನೀಡಲಾಗುತ್ತಿದೆ. ಅವರು 2021–22ನೇ ಸಾಲಿನಲ್ಲಿ ಅಂತಿಮ ವರ್ಷದಲ್ಲಿ ವೃತ್ತಿಪರ ಕೋರ್ಸ್‌ಗಳನ್ನು ವ್ಯಾಸಂಗ ಮಾಡಿರಬೇಕು.

ವಿದ್ಯಾರ್ಥಿಗಳು ಒಂದರಿಂದ 10ನೇ ತರಗತಿಯವರೆಗೆ ಸರ್ಕಾರಿ, ಅನುದಾನಿತ ಶಾಲೆಗಳಲ್ಲಿ ಓದಿರಬೇಕು. ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆದ ನಂತರ ಧನ ಸಹಾಯಕ್ಕಾಗಿ ಕಲ್ಯಾಣ ನಿಧಿಯ ಕಚೇರಿಗೆ ಅರ್ಜಿ ಸಲ್ಲಿಸಿರಬೇಕು. ಒಂದು ಕುಟುಂಬದ ಒಬ್ಬರಿಗೆ ಮಾತ್ರ ನೆರವು ನೀಡಲಾಗುವುದು. ಮಂಜೂರಾದ ಹಣವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು. ಫೆ. 28ರ ಒಳಗೆ ಅರ್ಜಿ ಸಲ್ಲಿಸಬೇಕು.

ಮಾಹಿತಿಗೆ www.schooleducation.kar.nic.in ಸಂಪರ್ಕಿಸಬಹುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತ ಆರ್.ವಿಶಾಲ್ ಹೇಳಿದ್ದಾರೆ.

ಬಿಬಿಎಂಪಿ ಮತ್ತು ಬೆಸ್ಕಾಂ ಅಧಿಕಾರಿಗಳಿಂದ ಕೊರತೆ ನಿವಾರಣೆ

ಜನಸ್ಪಂದನ: ದೂರುಗಳಿಗೆ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಫೆಬ್ರುವರಿ 4ರಂದು ಆಯೋಜಿಸಿದ್ದ 'ಜನಸ್ಪಂದನ'ದಲ್ಲಿ ಜನ ಹೇಳಿಕೊಂಡ ಕುಂದುಕೊರತೆಗಳಲ್ಲಿ ಬಿಬಿಎಂಪಿ ಮತ್ತು ಬೆಸ್ಕಾಂ ಅಧಿಕಾರಿಗಳು ಹಲವು ಕೊರತೆಗಳನ್ನು ನೀಗಿಸಿದ್ದಾರೆ.

ತುರಹಳ್ಳಿ ರಸ್ತೆಯಲ್ಲಿರುವ ಶೋಭ ಫಾರೆಸ್ಟ್ ವ್ಯೂ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ 'ಚೇಂಜ್ ಮೇಕರ್ಸ್ ಆಫ್ ಕನಕಪುರ ರೋಡ್' ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಜನಸ್ಪಂದನ ಕಾರ್ಯಕ್ರಮದಲ್ಲಿ ಸುತ್ತಮುತ್ತಲ ಬಡಾವಣೆಗಳ ನಿವಾಸಿಗಳು, ಬೀದಿ ದೀಪ, ಪಾದಚಾರಿ ಮಾರ್ಗ ಸೇರಿ ಹಲವು ಸಮಸ್ಯೆಗಳನ್ನು ಹೇಳಿಕೊಂಡಿದ್ದರು.

ವಾಜರಹಳ್ಳಿ ಮೆಟ್ರೊ ನಿಲ್ದಾಣದ ಬಳಿ ಹಾಳಾಗಿದ್ದ ಪಾದಚಾರಿ ಮಾರ್ಗವನ್ನು ಜನಸ್ಪಂದನ ಕಾರ್ಯಕ್ರಮ ನಡೆದ ಮರುದಿನವೇ ಸರಿಪಡಿಸುವ ಕಾರ್ಯ ಆರಂಭಿಸಲಾಗಿದೆ.

ಹಾಲಿಡೇ ವಿಲೇಜ್ ರಸ್ತೆಯಲ್ಲಿ ಹಾಳಾಗಿದ್ದ ವಿದ್ಯುತ್ ಕಂಬದ ಎಂಸಿಬಿ- (ಮಿನಿಯೇಚರ್ ಸರ್ಕ್ಯೂಟ್ ಬ್ರೇಕರ್) ಬದಲಿಸಲಾಗಿದ್ದು, ಬೀದಿ ದೀಪಗಳು ಕಾರ್ಯನಿರ್ವಹಿಸುತ್ತಿವೆ.

ಟ್ರಿಂಕೊ ಲೇಔಟ್‌ನಲ್ಲಿ ಬಿಬಿಎಂಪಿ ಬೈಲಾ ಉಲ್ಲಂಘಿಸಿ ಕಟ್ಟುತ್ತಿರುವ ಕಟ್ಟಡಗಳಿಗೆ ಸೋಮವಾರವೇ ಬಿಬಿಎಂಪಿ ನೋಟಿಸ್ ನೀಡಿದೆ. ಶೋಭ ಫಾರೆಸ್ಟ್ ವ್ಯೂ ಅಪಾರ್ಟ್‌ಮೆಂಟ್ ಸಮುಚ್ಚಯದ ಹಿಂಬದಿಯಲ್ಲಿನ ಬನಶಂಕರಿ 6ನೇ ಬ್ಲಾಕ್‌ನಲ್ಲಿ ಟೈಮರ್ ಸಹಿತ ಎಇಡಿ ಬೀದಿ ದೀಪಗಳನ್ನು ಅಳವಡಿಸಿದೆ.

ವಾಜರಹಳ್ಳಿ ಮೆಟ್ರೊ ರೈಲು ನಿಲ್ದಾಣದ ಬಳಿ ಪಾದಚಾರಿ ಮಾರ್ಗದ ದುರಸ್ತಿ ಕಾಮಗಾರಿಯನ್ನು ಬಿಬಿಎಂಪಿ ಆರಂಭಿಸಿರುವುದು

'ರಾಜ್ ಮರದ ಬೇರು ವರದರಾಜು'

ಎಸ್.ಪಿ.ವರದರಾಜು ಪ್ರಶಸ್ತಿ ಪ್ರದಾನ: ನಟ ರಾಘವೇಂದ್ರ ರಾಜ್‌ಕುಮಾರ್ ಬಣ್ಣನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್‌ಕುಮಾರ್ ಎಂಬ ವಿನೀತಭಾವದ ಆಲದಮರಕ್ಕೆ ಪತ್ನಿ ಪಾರ್ವತಮ್ಮ, ತಮ್ಮ ವರದರಾಜು ಬೇರುಗಳಾಗಿದ್ದರು. ಸಿನಿಮಾದಲ್ಲಷ್ಟೇ ಅಲ್ಲ, ಬದುಕಿನಲ್ಲೂ ಸದಾ ಬೆನ್ನಿಗಿದ್ದರು ಎಂದು ನಟ ರಾಘವೇಂದ್ರ ರಾಜ್‌ಕುಮಾರ್ ಸ್ಮರಿಸಿದರು.

ಎಸ್.ಪಿ.ವರದರಾಜು ಅವರ ಆತ್ಮೀಯ ಬಳಗ ಬುಧವಾರ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ರಾಜ್‌ಕುಮಾರ್ ಅವರು ಅಭಿನಯಿಸುವ ಎಲ್ಲ ಚಿತ್ರಗಳ ಕಥೆಗಳನ್ನೂ ಚಿಕ್ಕಪ್ಪನೆ ಅಂತಿಮಗೊಳಿಸುತ್ತಿದ್ದರು. ಸಿನಿಮಾಕ್ಕಿಂತ ಹೆಚ್ಚಾಗಿ ವೈಯಕ್ತಿಕ ಬದುಕಿನಲ್ಲೂ ಕಾಳಜಿ ವಹಿಸುತ್ತಿದ್ದರು. ವಿನಯವಂತಿಕೆ, ಸರಳತೆ ಮೈಗೂಡಿಸಿಕೊಂಡಿದ್ದರು. ಕಾವೇರಿ ಗಲಾಟೆಯ ಸಮಯದಲ್ಲಿ ಹೋರಾಟ ಮಾಡುತ್ತಿರುವುದು ತಪ್ಪು, ನಿಲ್ಲಿಸಲು ಮನವಿ ಮಾಡಬೇಕೆಂದು ಪೊಲೀಸ್ ಆಯುಕ್ತರು ರಾಜ್ ಅವರಲ್ಲಿ ವಿನಂತಿಸಿದ್ದರು. ಆದರೆ, ವರದರಾಜು ಅದಕ್ಕೆ ಒಪ್ಪಲಿಲ್ಲ. ಕನ್ನಡ ಭಾಷೆ, ನೀರಿಗಾಗಿ ಹೋರಾಟ ನಡೆಸುವುದು ಸರಿಯಾದ ಕ್ರಮ. ಹಾಗೆ ಹೇಳಿದರೆ ತಪ್ಪಾಗುತ್ತದೆ ಎಂದು ಬೇರೆಯದೇ ರೀತಿ ಮನವಿ ಮಾಡಿಸಿದ್ದರು' ಎಂದು ಮೆಲುಕುಹಾಕಿದರು.

ಬೆಂಗಳೂರಿನಲ್ಲಿ ಬುಧವಾರ ಎಸ್.ಪಿ.ವರದರಾಜು ಅವರ ಆತ್ಮೀಯ ಬಳಗ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ರಂಗಭೂಮಿ ಕಲಾವಿದೆ ಡಿ.ಲಲಿತಮ್ಮ ನಟ ಬೆಂಗಳೂರು ನಾಗೇಶ್ ಅವರಿಗೆ 'ಎಸ್.ಪಿ.ವರದರಾಜು ಪ್ರಶಸ್ತಿ' ಪ್ರದಾನ ಮಾಡಲಾಯಿತು. (ಎಡದಿಂದ) ಬರಗೂರು ರಾಮಚಂದ್ರಪ್ಪ, ಬಿ.ಜಯಶ್ರೀ, ರಾಘವೇಂದ್ರ ರಾಜ್‌ಕುಮಾರ್, ಚೆನ್ನ, ದತ್ತಾತ್ರೇಯ, ಗ್ರೀನ್ ಹೌಸ್ ವಾಸು ಇದ್ದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಾಹಿತಿ ಬರಗೂರು ರಾಮಚಂದ್ರಪ್ಪ, 'ಪರದೆಯ ಮೇಲಿನ ಒಬ್ಬ ಹೀರೊ ಯಶಸ್ಸು ಪಡೆಯುವ ಹಿಂದೆ ನೂರಾರು ಜನರ ಶ್ರಮವಿರುತ್ತದೆ. ಅಂತಹ ಸಾಂಸ್ಕೃತಿಕ ವಲಯ ಕಟ್ಟಿದ ತೆರೆಯ ಮರೆಯ ಮೇರು ಪ್ರತಿಭೆ ವರದರಾಜು; ರಾಜ್‌ಕುಮಾರ್ ಅವರ ಚಿತ್ರಜೀವನದ ವಿನ್ಯಾಸ ರೂಪಿಸಿದವರು' ಎಂದರು.

ರಂಗಭೂಮಿ ಕಲಾವಿದೆ ಡಿ. ಲಲಿತಮ್ಮ, ನಟ ಬೆಂಗಳೂರು ನಾಗೇಶ್ ಅವರಿಗೆ ತಲಾ ₹ 10 ಸಾವಿರ ನಗದು ಒಳಗೊಂಡ 'ಎಸ್.ಪಿ.ವರದರಾಜು ಪ್ರಶಸ್ತಿ' ನೀಡಿ ಪುರಸ್ಕರಿಸಲಾಯಿತು. ಜತೆಗೆ ವರದರಾಜು ಕುಟುಂಬದ ಹೆಣ್ಣುಮಕ್ಕಳು ತಲಾ ₹ 25 ಸಾವಿರ ನಗದು ನೀಡಿ ಗೌರವಿಸಿದರು.

ಕಲಾವಿದರಾದ ದತ್ತಾತ್ರೇಯ (ದತ್ತಣ್ಣ), ಬಿ.ಜಯಶ್ರೀ ಇದ್ದರು.

SOBHA LIMITED

SOBHA
PASSION AT WORK

CIN : L45201KA1995PLC018475
Regd. Office: 'SOBHA', Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103.
Ph: +91-80-49320000, Fax: +91-80-49320444
email: investors@sobha.com
website: www.sobha.com

Extract of the unaudited consolidated financial results for the quarter and nine months ended 31 December 2022

(₹. in Million)

Particulars	3 months ended 31.12.2022 [Unaudited]	Preceding 3 months ended 30.09.2022 [Unaudited]	Corresponding 3 months ended 31.12.2021(*) [Unaudited]	Year to date figures for current period ended 31.12.2022 [Unaudited]	Year to date figures for the period ended 31.12.2021(*) [Unaudited]	Previous year ended 31.03.2022(*) [Audited]
Total income from operations	8,980	6,906	6,500	21,623	19,016	26,453
Profit before tax	351	344	812	780	2,119	2,366
Profit after tax	318	192	610	556	1,590	1,732
Total comprehensive income for the period (comprising profit for the period (after tax) and other comprehensive income (after tax))	318	159	615	531	1,572	1,723
Paid-up Equity Share Capital	948	948	948	948	948	948
Other equity						23,281
Earnings per Share (of ₹10/- each) (for continuing and discontinued operations)						
Basic and diluted EPS	3.35	2.03	6.43	5.86	16.77	18.27

*refer note 5

Notes :
(1) The key data of standalone financial results is as under:

(₹. in Million)

Particulars	3 months ended 31.12.2022 [Unaudited]	Preceding 3 months ended 30.09.2022 [Unaudited]	Corresponding 3 months ended 31.12.2021(*) [Unaudited]	Year to date figures for current period ended 31.12.2022 [Unaudited]	Year to date figures for the period ended 31.12.2021(*) [Unaudited]	Previous year ended 31.03.2022(*) [Audited]
Income from operations	9,190	6,695	6,380	21,733	18,879	26,352
Profit before tax	421	250	707	690	2,034	2,310
Profit after tax	366	138	536	512	1,523	1,690
Total comprehensive income	366	105	541	487	1,505	1,681

*refer note 5

(2) The consolidated unaudited financial results of Sobha Limited ('the Holding Company') and its subsidiaries (the Holding Company, along with its subsidiaries referred to as 'the Group') and its associate and joint venture for the quarter and nine months ended 31 December 2022 have been prepared in accordance with the recognition and measurement principles laid down in the applicable Indian Accounting Standards (Ind AS) as prescribed under Section 133 of the Companies Act, 2013 read with Rule 3 of the Companies (Indian Accounting Standards) Rules, 2015 as amended and in terms of Regulation 33 of the SEBI (Listing and Other Disclosure Requirements) Regulations, 2015. These consolidated unaudited financial results have been reviewed and recommended by the Audit Committee and approved by the Board of Directors at their meeting held on 07 February 2023.

(3) The Statutory auditors of the Holding Company have carried out a limited review as required under regulation 33 of SEBI (Listing Obligations and Disclosure Requirements) Regulations 2015 of the above consolidated unaudited financial results for the quarter and nine months ended 31 December 2022 and have issued an unmodified review report.

(4) The above consolidated unaudited financial results along with limited review report of the Statutory Auditors is being filed with the Bombay Stock Exchange and the National Stock Exchange and shall be available on the Company's website www.sobha.com

(5) The financial information for the previous reporting periods were restated for correction of certain items in accordance with Ind AS 8, Accounting Policies, Changes in Accounting Estimates and Errors which are described in more detailed as below:

(i) The Group had accrued for notional interest on advance from customers involving sale of real estate unit and had capitalised such interest to project cost. However, the Group received such consideration in accordance with the terms of the contract in proportion to the completion of such real estate project and accordingly does not involve any significant financing element.

(ii) The Holding Company has restated the accounting for revenue from the development and transfer of constructed area/revenue sharing arrangement in exchange of such development rights acquired under Joint Development Arrangement (JDAs) [not being jointly controlled operations] on gross basis in accordance with guidance on 'non-cash consideration' under Ind AS 115, Revenue from Contract with Customer.

(iii) The Holding Company has restated the capitalisation of borrowing cost on lands and land advances wherein no significant development activity had commenced and projects wherein substantially all activities necessary for their sale had been completed to capitalise appropriate borrowing cost and other directly attributable project cost to projects under construction in accordance with relevant Ind AS.

(iv) rectification of certain other items pertaining to (a) accounting of construction contracts, other operating income and expense (b) right of use asset (c) discounting of retention money and (d) reclassification of borrowings. Consequential impact of deferred tax has been recorded on these adjustments.

The effect of restatement on financial results line items for the previous periods/ year is as follows:

Impact on Statement of consolidated unaudited financial results

(₹. in Million)

Particulars	Note	3 months ended 31.12.2021 [Unaudited]	Year to date figures for the period ended 31.12.2021 [Unaudited]	Previous year ended 31.03.2022 [Audited]
Revenue from operations	(i), (ii), (iv)	(459)	(1,486)	(1,696)
Finance income	(iv)	(17)	(46)	(67)
Total income		**(475)**	**(1,532)**	**(1,763)**
Land purchase cost	(ii)	-	-	112
Changes in inventories	(i), (ii), (iii)	298	777	1,620
Employee benefits expense	(iv)	58	158	217
Finance expenses	(i), (iii)	(1,160)	(3,251)	(4,414)
Depreciation and amortization expense	(iv)	2	7	(2)
Other expenses	(iv)	(43)	(125)	(80)
Total expenses		**(845)**	**(2,434)**	**(2,547)**
Profit before tax		**370**	**902**	**785**
Deferred tax charge	(i), (ii), (iii), (iv)	87	230	221
Total comprehensive income for the period before OCI		**283**	**672**	**564**

Restatement in the earning per share

Particulars	3 months ended 31.12.2021 [Unaudited]	Year to date figures for the period ended 31.12.2021 [Unaudited]	Previous year ended 31.03.2022 [Audited]
Earning per equity share (face value ₹ 10 Each)			
Earnings per share (EPS) - (in ₹) - Reported	3.45	9.68	12.32
Earnings per share (EPS) - (in ₹) - Restated	6.43	16.77	18.27

(6) Previous period's / year's figures have been regrouped or reclassified wherever necessary to conform with the current period figures.

For and on behalf of the Board of Directors of
Sobha Limited

Bengaluru, India
07 February 2023

Jagadish Nangineni
Managing Director
DIN: 01871780

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

WANTED EXPERIENCED ACCOUNTANT FOR GARMENTS SHOWROOM IN CHICKPET,WITH COMPUTER KNOWLEDGE ESSENTIAL SALARY 20 TO 25K IMMEDIATE APPOINTMENT WhatsApp 9341254336

General

WANTED FEMALE kannada speaking relationship manager's For salary and more details contact: 70192 04627

BUSINESS

Business to Business

Business

LOANS/ FINANCE arranged, Quick Deals, through Banks/ Financial Institutions. Dr. Swamy-Vamshadhara Project Services-9342247637.

Business Offers

Finance

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

PERSONAL

Change of Name

I, ASHWANI KUMAR RANA, Resident at F-903, Ajmera Stone Park, Electronic City Phase-1, Bengaluru-560100 have changed my name to ASHWANI RANA vide affidavit dated 08/02/2023, sworn before notary N.Peruvazhuthi, Bangalore

ಕ್ಲಾಸಿಫೈಡ್ಸ್
CONNECT

Entry Free!
Grand Flea Market Presents
ಬೆಂಗಳೂರು ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಮೇಳ
Bangalore Arts and Crafts Mela
Enrich your Shopping Excellence
Art, Craft & Handlooms Exhibition
3rd to 12th February 2023
Timings: 11 AM - 7 PM
100+ Shopping Stalls | Live Performance & More
HANDLOOMS | HOME DECOR | HANDICRAFTS | CLOTHING | JEWELLERY

Organized By
Grand Flea Market
For Details Contact
9036658774 / 6364685716
Karnataka Chitrakala Parishath,
Kumara Krupa Road, Near Shivananda Circle
Bengaluru -560 001.
/GrandFleaMarket /GrandFleaMarket.events

CHANGE OF NAME
I, PADMANABHAN THYAKKTTU RAJIVNAIR residing at No. 1376, 6th Cross, Ramaiah Layout, Kammanahalli, Bangaloe-84 have changed my name to **PADMANABHAN THYKKATTU RAJIVNAIR,** vide affidavit dated 08-02-2023 before Notary T.V. Chandrashekara Reddy, Bangalore.

CHANGE OF NAME
I, GAURAV VINODKUMAR KALRA Residing at T-02, Srivatsav Prasiddi Apartment, Bikasipura Main Road, Near Delhi Public School South, Yelachenahally, Bangalore, Karnataka-560 062 have changed my name to **GAURAV KALRA** vide affidavit dated 07-02-2023 before Notary B.M. Chandrashekar, Bangalore. Henceforth, I shall be known as **GAURAV KALRA** only.

I, NIDHI RUDRASWAMY D/o. Rudraswamy T.B residing at No.148, 3rd cross, 7th C Main, K.H. Society, RPC Layout, Bangalore- 560040 wrongly mentioned my name as NIDHI THOLAHUNASE RUDRASWAMY in the old Passport No. K3228129. Hereby declaring that my correct name is NIDHI RUDRASWAMY only vide affidavit dated 21/01/2023 before notary K.C. Shashikala, Bangalore.

I,NASEEMA W/o.Mohammed Inayathulla (Passport No.N2917034) R/a#159,8th Cross, Maruthi`Layout, Vidyaranyapura Post, Bangalore- 560097 Have_Changed_My Name_to`NASEEMA MOHAMMED INAYATHULLA vide Affidavit`Dated 08-02-2023. Before Notary H.Sridhar`Rao, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
ಪ್ರಜಾವಾಣಿ
REAL ESTATE
BOOK YOUR PROPERTY AD IN DECCAN HERALD ALL KARNATAKA + PRAJAVANI BENGALURU ON FRIDAY + SATURDAY + SUNDAY
@1070/-* Per Sqcm
Single Column
conditions apply*
For More Details Contact:
9845114560 | 9731810277
9901641752 | 9886213331
080- 45557163 | 45557164

ಹಳ್ಳಿಕಾರರ ಹೊಸ ಮಠ ಲೋಕಾರ್ಪಣೆ

ಬೆಂಗಳೂರು: ಹಳ್ಳಿಕಾರರ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಇದೇ ಮೊದಲ ಬಾರಿಗೆ ಧಾರ್ಮಿಕ ಚೌಕಟ್ಟಿನಲ್ಲಿ ಒಗ್ಗೂಡಿಸಲಾಗುತ್ತಿದೆ ಎಂದು ಹಳ್ಳಿಕಾರ್ ಮಠದ ಟ್ರಸ್ಟ್‌ನ ಗೌರವ ಅಧ್ಯಕ್ಷ ಬಿ.ಎಂ ಪಟೇಲ್ ಪಾಂಡು ಹೇಳಿದರು.

'ತುಮಕೂರಿನ ತುರುವೇಕೆರೆ ತಾಲ್ಲೂಕು ಮಾಯಸಂದ್ರದ ಶೆಟ್ಟಿಗೊಂಡನಹಳ್ಳಿಯಲ್ಲಿ ಫೆ.10ರಿಂದ 12ರವರೆಗೆ ನೂತನವಾಗಿ ನಿರ್ಮಿಸಿದ ಹಳ್ಳಿಕಾರ ಮಠದ ಲೋಕಾರ್ಪಣೆ ಹಾಗೂ ನೂತನ ಸ್ವಾಮೀಜಿಯಾಗಿ ದೀಕ್ಷೆ ಮತ್ತು ಪೀಠಾರೋಹಣ ಕಾರ್ಯಕ್ರಮಗಳು ನಡೆಯಲಿವೆ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಫೆ 10ರಂದು ವಿವಿಧ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಫೆ.11ರಂದು ಕೃಷ್ಣ ಪ್ರತಿಮೆ ಸಮರ್ಪಣಾ ಕಾರ್ಯಕ್ರಮದ ಉದ್ಘಾಟನೆಯನ್ನು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಮಾಡಲಿದ್ದಾರೆ' ಎಂದು ಹಳ್ಳಿಕಾರ ಮಠದ ಟ್ರಸ್ಟ್‌ನ ಅಧ್ಯಕ್ಷ ನಾಗಯ್ಯ ತಿಳಿಸಿದರು.

ಫೆ. 12ರಂದು ಹಳ್ಳಿಕಾರ ಮಠದ ನೂತನ ಸ್ವಾಮೀಜಿ ದೀಕ್ಷೆ ಹಾಗೂ ಪೀಠಾರೋಹಣ ಕಾರ್ಯಕ್ರಮದಲ್ಲಿ ಆದಿ ಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ' ಎಂದರು.

'ಕೆಪಿಎಸ್‌ಸಿ: ಲೋಪ ಸರಿಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ನೇಮಕ ಪ್ರಕ್ರಿಯೆ ವೇಳೆ ಅರ್ಜಿ ಭರ್ತಿಯಲ್ಲಿ ಆಗಿದ್ದ ಲೋಪದಿಂದ ಸರ್ಕಾರಿ ಉದ್ಯೋಗ ಕಳೆದುಕೊಳ್ಳಲಿದ್ದ ಅಭ್ಯರ್ಥಿಯೊಬ್ಬರ ಮನವಿಗೆ ಹೈಕೋರ್ಟ್ ಸ್ಪಂದಿಸಿದೆ.

ಈ ಸಂಬಂಧ ಎನ್.ಹೇಮಂತ್ ಕುಮಾರ್ ಎಂಬುವರು ಸಲ್ಲಿಸಿದ್ದ ಅರ್ಜಿಯಲ್ಲಿ ಪರಿಶಿಷ್ಟ ಜಾತಿಯ ಬದಲಿಗೆ ಪರಿಶಿಷ್ಟ ಪಂಗಡವೆಂದು ಉಲ್ಲೇಖಿಸಿದ್ದನ್ನು ತಿದ್ದುಪಡಿ ಮಾಡಿ ಆಯ್ಕೆಗೆ ಪರಿಗಣಿಸುವಂತೆ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಕೆಪಿಎಸ್‌ಸಿಗೆ ಆದೇಶಿಸಿದೆ.

'ಈ ರೀತಿ ಒಬ್ಬ ಅಭ್ಯರ್ಥಿಯ ಲೋಪ ಸರಿಪಡಿಸಲು ಅವಕಾಶ ನೀಡಿದರೆ ಭವಿಷ್ಯದಲ್ಲಿ ಇದೇ ದೃಷ್ಟಾಂತವಾಗಿ ಬೇರೆಯವರೂ ಇಂತಹ ಅವಕಾಶವನ್ನು ಕೋರಲು ಆರಂಭಿಸುತ್ತಾರೆ' ಎಂಬ ಕೆಪಿಎಸ್‌ಸಿ ವಾದವನ್ನು ನ್ಯಾಯಪೀಠ ತಳ್ಳಿಹಾಕಿದೆ.

'ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕ ಗಳಿಸಿರುವ ಪರಿಶಿಷ್ಟ ಜಾತಿಯ ಅಭ್ಯರ್ಥಿಯ ಅಹವಾಲು ಆಲಿಸದೆ ಕೋರ್ಟ್ ಕಿವುಡನಾಗಲು ಸಾಧ್ಯವಿಲ್ಲ. ಮಾನವ ದೋಷ ಸಹಜ. ಅಭ್ಯರ್ಥಿಯೂ ಪ್ರಮಾದ ಎಸಗಿದ್ದಾರೆ. ಆದರೆ, ಇದನ್ನೇ ಮುಂದಿಟ್ಟುಕೊಂಡು ಅವರನ್ನು ಅವಕಾಶ ವಂಚಿತರನ್ನಾಗಿ ಮಾಡಲಾಗದು' ಎಂದು ನ್ಯಾಯಪೀಠ ಹೇಳಿದೆ.

'ಆಯೋಗವು ಅರ್ಜಿದಾರರು ಸಲ್ಲಿಸಿದ ಮನವಿಯನ್ನು ಪರಿಗಣಿಸಿ ಜಾತಿಯನ್ನು ತಿದ್ದುಪಡಿ ಮಾಡಬಹುದಿತ್ತು. ಆದರೆ, ಸರಿಪಡಿಸದೇ ಇದ್ದುದು ವ್ಯಾಜ್ಯಕ್ಕೆ ಕಾರಣವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಮೋಹನ್ ಭಾಗವತ್ ವಿರುದ್ಧ ಬಿಹಾರದಲ್ಲಿ ದೂರು ದಾಖಲು



ಮುಜಾಫರ್‌ಪುರ (ಪಿಟಿಐ): ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಇತ್ತೀಚೆಗೆ ಮಾಡಿದ್ದ ಭಾಷಣದಲ್ಲಿ ಬ್ರಾಹ್ಮಣರನ್ನು ಅವಮಾನಿಸಿದ್ದಾರೆ ಎಂದು ಆರೋಪಿಸಿ ಬಿಹಾರದ ನ್ಯಾಯಾಲಯದಲ್ಲಿ ಮಂಗಳವಾರ ದೂರು ದಾಖಲಿಸಲಾಗಿದೆ.

ಮುಂಬೈನಲ್ಲಿ ಸೋಮವಾರ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಭಾಗವತ್ ಅವರು ಮಾಡಿದ್ದ ಭಾಷಣಕ್ಕೆ ಸಂಬಂಧಿಸಿದ ಮಾಧ್ಯಮ ವರದಿಗಳನ್ನು ಉಲ್ಲೇಖಿಸಿ ವಕೀಲ ಸುಧೀರ್ ಕುಮಾರ್ ಓಜಾ ಅವರು ಮುಜಾಫರ್‌ಪುರದ ಸಿಜೆಎಂ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಆರ್‌ಎಸ್‌ಎಸ್ ಮುಖ್ಯಸ್ಥರು ತಮ್ಮ ಮರಾಠಿ ಭಾಷಣದಲ್ಲಿ, 'ಹಿಂದೂ ಸಮಾಜದಲ್ಲಿ ಚಾಲ್ತಿಯಲ್ಲಿರುವ ಕಠಿಣ ಜಾತಿ ವ್ಯವಸ್ಥೆಗೆ ಪಂಡಿತರು (ಪುರೋಹಿತ ವರ್ಗ) ಕಾರಣಕರ್ತರು' ಎಂದು ದೂಷಿಸಿದ್ದರು. ಈ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ಇದೇ 20ಕ್ಕೆ ನಿಗದಿಮಾಡಿದೆ.

ಬ್ಯಾಂಕ್ ಆಫ್ ಬರೋಡ ಲಾಭ ಏರಿಕೆ

ಬೆಂಗಳೂರು: ಬ್ಯಾಂಕ್ ಆಫ್ ಬರೋಡ, ಡಿಸೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ₹ 3,853 ಕೋಟಿ ಲಾಭ ಗಳಿಸಿದೆ. ಇದು ತ್ರೈಮಾಸಿಕವೊಂದರಲ್ಲಿ ಈ ಬ್ಯಾಂಕ್ ಗಳಿಸಿರುವ ಅತಿಹೆಚ್ಚಿನ ನಿವ್ವಳ ಲಾಭ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ಗಳಿಸಿದ್ದ ಲಾಭಕ್ಕೆ ಹೋಲಿಸಿದರೆ ಈ ಬಾರಿಯ ನಿವ್ವಳ ಲಾಭವು ಶೇಕಡ 75.4ರಷ್ಟು ಹೆಚ್ಚಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಸಕ್ತ ವರ್ಷದ ಮೊದಲ 3 ತ್ರೈಮಾಸಿಕಗಳಲ್ಲಿ ಬ್ಯಾಂಕ್ ಒಟ್ಟು ₹ 9,334 ಕೋಟಿ ಲಾಭ ದಾಖಲಿಸಿದೆ. ಒಟ್ಟು ಎನ್‌ಪಿಎ ಪ್ರಮಾಣವು ಶೇ 2.72ರಷ್ಟು ಕಡಿಮೆ ಆಗಿದೆ.

TENDERS INVITED BY ELECTRONICS CITY INDUSTRIAL TOWNSHIP AUTHORITY (ELCITA), BANGALORE

ELECTRONICS CITY INDUSTRIAL TOWNSHIP AUTHORITY (ELCITA), having its office at Sy. No. 7 (P), West Phase, Electronics City, Bangalore-560 100 has invited tenders as detailed below:

Sl. No.	Tender Name	Tender Number	Last date to apply	Closing Timings
1	Providing and Fixing of chain link fencing & construction of water tank at east phase, Electronics City, Bangalore 560 100.	ELCITA/ UDD/ 2022-23/ OW/ WORK INDENT 1864	15/02/2023	5:00 PM

Details of the Tenders can be downloaded from the e-procurement website: **eproc.karnataka.gov.in** under **Urban Development Department - Electronics city Industrial Township Authority. Also, details are available in www.elcita.in**

For queries Contact: **080-4660 2222 / write to : sustainability1@elcita.in**

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ನಂ.14, ರಜತಾ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು-560104.
ದೂ. 23300497 41159606 , 23359600 ಇ-ಮೇಲ್ : jscbinfo@jscbl.com

ಟೆಂಡರ್ ಮತ್ತು ಹರಾಜು ಮಾರಾಟ ಸೂಚನೆ

2002ರ ಹಣಕಾಸು ಆಸ್ತಿಗಳ ಭದ್ರತಾ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಅಡಿಯಲ್ಲಿ ಹರಾಜು ಮಾರಾಟ ಮುಂದುವರಿದಂತೆ

ಶ್ರೀ ನಿತಿನ್ ತಿಮ್ಮಪ್ಪ ಬಿನ್ ತಿಮ್ಮಪ್ಪ ವರಡಿ

ಶ್ರೀ ತಿಮ್ಮಪ್ಪ ವಿ.

ಶ್ರೀ ಕೃಷ್ಣ ಚೈತನ್ಯ ಬಿನ್ ಲೇಟ್ ದ್ವಾರಕನಾಥ್

ಶ್ರೀ ರೋಹಿತ್ ಪಟೇಲ್ ಬಿನ್ ಅಂಜನಪ್ಪ ವಿ.

ಶ್ರೀಮತಿ ಸ್ವರ್ಣಲತ ಡಿ. ಕೋಂ. ಲೇಟ್ ದ್ವಾರಕನಾಥ್

ಸಾಲಗಾರರಾದ ಮೆ॥ ಫ್ಯಾಮಿಲಿ ಫಿಲ್ಮ್ ಫ್ಯಾಕ್ಟರಿ, ಫ್ಲಾಟ್ ನಂ.416, ಮಹಾವೀರ್ ಸ್ಪ್ರಿಂಗ್ಸ್ ಅಪಾರ್ಟ್‌ಮೆಂಟ್, 17ನೇ ಹಂತ, 15ನೇ ಮುಖ್ಯರಸ್ತೆ, 5ನೇ ಹಂತ, ಜೆ.ಪಿ.ನಗರ, ಬೆಂಗಳೂರು-560 078, **ಇದನ್ನು ಪ್ರತಿನಿಧಿಸುವ ಪಾಲುದಾರರು 1) ಶ್ರೀ ರೋಹಿತ್ ಪಟೇಲ್** ಬಿನ್ ಆಂಜನಪ್ಪ ವಿ, ಫ್ಲಾಟ್ ನಂ.416, ಮಹಾವೀರ್ ಸ್ಪ್ರಿಂಗ್ಸ್ ಅಪಾರ್ಟ್‌ಮೆಂಟ್, 17ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, 5ನೇ ಹಂತ, ಜೆ.ಪಿ.ನಗರ, ಬೆಂಗಳೂರು-560 078. **2) ಶ್ರೀ ಕೃಷ್ಣ ಚೈತನ್ಯ** ಬಿನ್ ಲೇಟ್ ದ್ವಾರಕನಾಥ, ನಂ.780/ಬಿ, 80 ಅಡಿ ರಸ್ತೆ, 4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-34. **ಜಾಮೀನುದಾರರು ಶ್ರೀ. ನಿತಿನ್ ತಿಮ್ಮಪ್ಪ** ಬಿನ್ ತಿಮ್ಮಪ್ಪ ವರದಿ, ನಂ.162/ಎ, 16ನೇ ಮುಖ್ಯರಸ್ತೆ, 35ನೇ ಅಡ್ಡರಸ್ತೆ, ಬಿ.ಎಸ್.ಕೆ, 2ನೇ ಹಂತ, ಜಯನಗರ ಪಶ್ಚಿಮ, ಬೆಂಗಳೂರು-560070. **2)** ಶ್ರೀಮತಿ- ಸ್ವರ್ಣಲತ ಡಿ. ಕೋಂ. ಲೇಟ್ ದ್ವಾರಕನಾಥ್ ನಂ.780/ಬಿ, 80 ಅಡಿ ರಸ್ತೆ, 4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು 560034. **3) ಶ್ರೀ ತಿಮ್ಮಪ್ಪ ವಿ.,** ನಂ.1627/ಎ, 16ನೇ ಮುಖ್ಯರಸ್ತೆ, 35ನೇ ಕ್ರಾಸ್, ಬಿಎಸ್‌ಕೆ 2ನೇ ಹಂತ, ಜಯನಗರ ಪಶ್ಚಿಮ, ಬೆಂಗಳೂರು-560 070, ಇವರುಗಳು **ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ., ವಿಜಯನಗರ, ಬೆಂಗಳೂರು** ರವರಿಂದ ಪಡೆದ ಸಾಲ ಮರುಪಾವತಿ ಮಾಡುವಲ್ಲಿ ವಿಫಲರಾಗಿರುತ್ತಾರೆ. ಷರತ್ತು ಮತ್ತು ನಿಯಮಗಳ ಒಪ್ಪಂದದ ಅನುಸಾರ ಒಟ್ಟು ಮೊತ್ತ **ಲೋನ್ ನಂ. BL-138, ರೂ. 10,46,06,192/- (ರೂಪಾಯಿ ಹತ್ತು ಕೋಟಿ ನಲವತ್ತಾರು ಲಕ್ಷದ ಆರು ಸಾವಿರದ ಒಂದು ನೂರ ತೊಂಭತ್ತೆರಡು ಮಾತ್ರ) ದಿನಾಂಕ: 30.01.2023 ರಂದು ಇದ್ದಂತೆ** ಜೊತೆಗೆ ನಂತರ ಅನ್ವಯವಾಗುವ ದರದಲ್ಲಿ ಬಡ್ಡಿ ಮತ್ತು ಖರ್ಚು ವೆಚ್ಚಗಳು. ಸರ್ಫೇಸಿ ಕಾಯ್ದೆ 2002 ರ ಸೆಕ್ಷನ್ 13 (2) ರ ಅಡಿಯಲ್ಲಿ ಮತ್ತು ಕಾಯಿದೆಯ ಸೆಕ್ಷನ್ 13 (4) ರ ಅಡಿಯಲ್ಲಿ ನೀಡಲಾಗಿರುವ ಅಧಿಕಾರಗಳನ್ನು ಅನುಸರಿಸಲು ಮತ್ತು ಚಲಾಯಿಸಲು ಬ್ಯಾಂಕ್ ನೋಟಿಸ್ ನೀಡಿರುತ್ತಾರೆ, ಅಧಿಕೃತ ಅಧಿಕಾರಿ ಅಡಮಾನದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಮತ್ತು ಅದರ ವಿವರಗಳನ್ನು ಕೆಳಗೆ ಸಂಪೂರ್ಣವಾಗಿ ವಿವರಿಸಲಾಗಿದೆ, ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಸಂಬಂಧಿತ ನಿಯಮಗಳೊಂದಿಗೆ ಓದಿದ ಸರ್ಫೇಸಿ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಈ ಕೆಳಗಿನ ಆಸ್ತಿಯನ್ನು ಮಾರಾಟ ಮಾಡಲು ಬ್ಯಾಂಕ್ ನಿರ್ಧರಿಸಿದೆ.

ಸ್ವತ್ತಿನ ವಿವರ	ಟೆಂಡರ್ ತೆರೆಯುವ ದಿನಾಂಕ, ಸಮಯ ಮತ್ತು ಹರಾಜಿನ ಸ್ಥಳ	ಮೀಸಲು ಬೆಲೆ
01) ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳ ವಿವರ ಮತ್ತು ಆಧಾರ ಮಾಡಿರುವ ಸ್ವತ್ತುಗಳ ವಿವರ **ಶ್ರೀಮತಿ ಸ್ವರ್ಣಲತ ಡಿ.** ಇವರಿಗೆ ಸೇರಿದ ಸ್ವತ್ತು. ಬಿ.ಬಿ.ಎಂ.ಪಿ. ವಾರ್ಡ್ ನಂ.68, ಈಜೀಪುರ, ಬಿ.ಡಿ.ಎ. ಲೇಔಟ್, 4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560 034. ಇಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ : 12-20 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ : 19-80 ಮೀಟರ್‌ಗಳು ಹೀಗೆ ಒಟ್ಟಾರೆ 241 ಚದರ ಮೀಟರ್‌ಗಳು ವಿಸ್ತೀರ್ಣದ ಮುನಿಸಿಪಲ್ ನಂ.780/ಬಿ, ಪಿ.ಐ.ಡಿ. ನಂ.18-6-780/ಬಿ, ಹೊಂದಿರುವ ಸಂಪೂರ್ಣ ಸ್ವತ್ತು, ಸದರಿ ಸ್ವತ್ತಿನ ಚಕ್ಕುಬಂದಿ ಕೆಳಕಂಡಂತಿರುವುದು : ಪೂರ್ವಕ್ಕೆ: ನಿವೇಶನ ನಂ.281, ಪಶ್ಚಿಮಕ್ಕೆ: ನಿವೇಶನ ನಂ.780/ಎ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ನಿವೇಶನ ನಂ.783.	**13-03-2023 ಬೆಳಗ್ಗೆ 11.30 ಕ್ಕೆ** ನಿಗದಿತ ಆಸ್ತಿ ಆವರಣದಲ್ಲಿ	**ರೂ. 4,90,31,800/- (ರೂಪಾಯಿ ನಾಲ್ಕು ಕೋಟಿ ತೊಂಬತ್ತು ಲಕ್ಷದ ಮೂವತ್ತೊಂದು ಸಾವಿರದ ಎಂಟು ನೂರು ಮಾತ್ರ)** ಇಎಂಡಿ : ಮೀಸಲು ಬೆಲೆಯ 10% ರಂತೆ ರೂ.49,03,180/-
02) ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳ ವಿವರ ಮತ್ತು ಆಧಾರ ಮಾಡಿರುವ ಸ್ವತ್ತುಗಳ ವಿವರ **ಶ್ರೀ ತಿಮ್ಮಪ್ಪ ವಿ.** ಇವರಿಗೆ ಸೇರಿದ ಸ್ವತ್ತು. 16ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬಿ.ಬಿ.ಎಂ.ಪಿ. ವಾರ್ಡ್ ನಂ. 56, ಗಣೇಶ ಮಂದಿರ. ಬೆಂಗಳೂರು ಇಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ : 110 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : (45+63)/2 ಅಡಿ, ಒಟ್ಟು 5940.00 ಚದರ ಅಡಿ ವಿಸ್ತೀರ್ಣಗಳ ನೆಲಮಹಡಿ, ಮೊದಲನೇ ಮಹಡಿ, ಎರಡನೇ ಮಹಡಿ ಮತ್ತು ಟೆರೇಸ್ ಮಹಡಿಗಳನ್ನು ಒಳಗೊಂಡ ಕಟ್ಟಡವುಳ್ಳ ಮುನಿಸಿಪಲ್ ಹೊಸ ನಂ.1627/ಎ, (ಬಿಡಿಎ), ಪಿ.ಐ.ಡಿ. ನಂ.56-34-627/ಎ ಹೊಂದಿರುವ ಮನೆ ಸ್ಥಿರಾಸ್ತಿ, ಸದರಿ ಸ್ವತ್ತಿನ ಚಕ್ಕುಬಂದಿ : ಪೂವಕ್ಕೆ: ರಸ್ತೆ, ಪಶ್ಚಿಮಕ್ಕೆ : ನಿವೇಶನ ನಂ. 1635, ಉತ್ತರಕ್ಕೆ : ನಿವೇಶನ ನಂ. 1628, ದಕ್ಷಿಣಕ್ಕೆ : ನಿವೇಶನ ನಂ.1627.	**14-03-2023 ಬೆಳಗ್ಗೆ 11.30 ಕ್ಕೆ** ನಿಗದಿತ ಆಸ್ತಿ ಆವರಣದಲ್ಲಿ	**ರೂ. 11,16,57,200/- (ರೂಪಾಯಿ ಹನ್ನೊಂದು ಕೋಟಿ ಹದಿನಾರು ಲಕ್ಷದ ಐವತ್ತೇಳು ಸಾವಿರದ ಇನ್ನೂರು ಮಾತ್ರ)** ಇಎಂಡಿ : ಮೀಸಲು ಬೆಲೆಯ 10% ರಂತೆ ರೂ.1,11,65,720/-

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು: – (1) ಟೆಂಡರ್ ಫಾರಂಗಳನ್ನು **ಜನತಾ ಸೇವಾ ಕೋ-ಆಪರೇಟೀವ್ ಬ್ಯಾಂಕ್ ಲಿ., ನಂ.14, "ರಜತಾ ಭವನ" 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು.** (ದೂ. 080-23300497, 41159606) ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. (2) ಇಚ್ಚಿಸುವ ಬಿಡ್‌ದಾರರು ಅವರ ಬಿಡ್‌ಗಳನ್ನು ನಿಗದಿತ ಟೆಂಡರ್ ಫಾರಂಗಳಲ್ಲಿ ಮೊಹರಾದ ಲಕೋಟೆಯಲ್ಲಿ ಮೀಸಲು ಬೆಲೆಯ ಶೇ.10% ಮೊತ್ತವನ್ನು **ಜನತಾ ಸೇವಾ ಕೋ-ಆಪರೇಟೀವ್ ಬ್ಯಾಂಕ್ ಲಿ., ಬೆಂಗಳೂರು** ಪರವಾಗಿ ಪಡೆದ ಡಿಮ್ಯಾಂಡ್ ಡ್ರಾಫ್ಟ್/ಬ್ಯಾಂಕರ್ಸ್ ಚೆಕ್/ಪೇ ಆರ್ಡರ್‌ಗಳನ್ನು ಈ ಟೆಂಡರ್-ಹರಾಜು ಮಾರಾಟ ಸೂಚನೆ ಪ್ರಕಟವಾದ ದಿನಾಂಕದ ನಂತರ ಪಡೆದಿರಬೇಕು. (3) ಅನಿಗದಿತ ರೂಪದಲ್ಲಿರುವ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ, ಇಎಂಡಿಯೊಂದಿಗೆ ಟೆಂಡರ್‌ಗಳನ್ನು **ಜನತಾ ಸೇವಾ ಕೋ-ಆಪರೇಟೀವ್ ಬ್ಯಾಂಕ್ ಲಿ., ವಿಜಯನಗರ, ಬೆಂಗಳೂರು,** ಇವರಿಗೆ ದಿನಾಂಕ **11.03.2023** ಮತ್ತು **12.03.2023,** ಸಮಯ **ಸಂಜೆ 5.30** ರ ಒಳಗೆ ಸಲ್ಲಿಸಬೇಕು. ಇಎಂಡಿ ರಹಿತವಾದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. (4) ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ. (5) ಒಂದು ವೇಳೆ ಬಿಡ್ಡರ್‌ಗಳು ಯಶಸ್ವಿಯಾಗದಿದ್ದಲ್ಲಿ ಇಎಂಡಿ ಮೊತ್ತವನ್ನು ಬಡ್ಡಿರಹಿತವಾಗಿ ಹಿಂತಿರುಗಿಸಲಾಗುವುದು. (6) ಯಶಸ್ವಿ ಬಿಡ್‌ದಾರರು ಹರಾಜು ಮಾರಾಟದ ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಲು ವಿಫಲರಾದಲ್ಲಿ ಇಎಂಡಿ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (7) ಮೊಹರಾದ ಟೆಂಡರ್‌ಗಳನ್ನು ಅಧಿಕೃತ ಅಧಿಕಾರಿಯವರು ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ **ದಿನಾಂಕ 13.03.2023 ಮತ್ತು 14.03.2023ರಂದು ಬೆಳಗ್ಗೆ 11.30 ಗಂಟೆಗೆ** ತೆರೆಯುವರು. (8) ಟೆಂಡರ್‌ಗಳನ್ನು ತೆರೆದ ನಂತರ, ಉದ್ದೇಶಿತ ಬಿಡ್‌ದಾದರರಿಗೆ ಅಧಿಕೃತ ಅಧಿಕಾರಿಯ ವಿವೇಚನೆಯಿಂದ ಅವಕಾಶ ನೀಡಬಹುದು, ಆಫರ್ ಬೆಲೆಯನ್ನು ಹೆಚ್ಚಿಸಲು ತಮ್ಮ ನಡುವೆ ತೀವ್ರವಾದ ಬಿಡ್ಡಿಂಗ್ ಮಾಡಬಹುದು. (9) ಯಶಸ್ವಿ ಬಿಡ್‌ದಾರರು ಮಾರಾಟದ ಬೆಲೆಯ ಶೇ. 25% (ಇಎಂಡಿ ಹಣವನ್ನು ಸೇರಿ) ಹಣವನ್ನು ತಕ್ಷಣ ಹರಾಜಿನ ದಿನದಂದು ನಗದು ಅಥವಾ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಪಾವತಿಸಬೇಕು ಮತ್ತು ಬಾಕಿ ಉಳಿದ ಮಾರಾಟದ ಮೊತ್ತವನ್ನು ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗೆ ಪಾವತಿಸಬೇಕು. ಒಂದು ವೇಳೆ ಯಶಸ್ವಿ ಬಿಡ್‌ದಾರರು ಹಣ ಪಾವತಿಸದಿದ್ದಲ್ಲಿ ಈವರೆಗೆ ಪಾವತಿಸಿರುವ ಎಲ್ಲಾ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರುಮಾರಾಟ ಮಾಡಲಾಗುವುದು. (10) ಯಶಸ್ವಿ ಬಿಡ್ಡರ್ ಅನ್ವಯವಾಗುವಂತೆ ಕಾನೂನು ಬದ್ಧ ವೆಚ್ಚಗಳಾದ ತೆರಿಗೆಗಳು/ಶುಲ್ಕ/ಆಸ್ತಿ ತೆರಿಗೆ/ಬೆಸ್ಕಾಂ ಶುಲ್ಕ/ನೀರಿನ ಶುಲ್ಕ ವರ್ಗಾವಣೆ ವೆಚ್ಚಗಳಾದ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಅನ್ವಯವಾಗುವ ಕಾನೂನಿನಂತೆ ಪಾವತಿಸಿದಲ್ಲಿ ಆಸ್ತಿಯನ್ನು ಅವರ ಪರವಾಗಿ ವರ್ಗಾಯಿಸಿ ಕೊಡಲಾಗುವುದು. (11) ಅಧಿಕೃತ ಅಧಿಕಾರಿಯವರು ಯಾವುದೇ ಟೆಂಡರ್‌ನ್ನು ಸ್ವೀಕರಿಸುವ/ತಿರಸ್ಕರಿಸುವ ಅಥವಾ ಹರಾಜು ಮಾರಾಟವನ್ನು ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಯಾವುದೇ ಸೂಚನೆಯನ್ನು ನೀಡದೆ, ಜಾಹಿರಾತಿನಲ್ಲಿ ನೀಡಿರುವ ನಿಯಮ ಮತ್ತು ನಿಬಂಧನೆಗಳನ್ನು ಬದಲಾಯಿಸುವ ಅಧಿಕಾರವು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಒಳಪಟ್ಟಿದೆ. (12) ಮಾರಾಟವು ಬ್ಯಾಂಕ್ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. (13) ಈ ಮಾರಾಟವು ಇಚ್ಚಿಸುವ ಬಿಡ್‌ದಾರರು ಆಸ್ತಿಯನ್ನು **ಬೆಳಗ್ಗೆ 10.00 ಘಂಟೆಯಿಂದ ಸಂಜೆ 5.00 ರವರೆಗೆ,** ಷೆಡ್ಯೂಲಿನಲ್ಲಿ ತಿಳಿಸಿರುವ ವಿಳಾಸದಲ್ಲಿ ಅವರ ಸ್ವಂತ ಖರ್ಚಿನಲ್ಲಿ ಪರಿಶೀಲಿಸ ಬಹುದಾಗಿದೆ. (14) ಆಸ್ತಿಯನ್ನು **'ಎಲ್ಲಿ ಹೇಗಿದೆಯೋ ಹಾಗೆ' ಮತ್ತು 'ಎಲ್ಲಿ ಏನಿದೆಯೋ ಹಾಗೆ'** ಆಧಾರದ ಮೇಲೆ ಮಾರಾಟಮಾಡಲಾಗುವುದು. ಇಚ್ಚಿಸುವ ಬಿಡ್‌ದಾರರು ಆಸ್ತಿಯ ಮೇಲಿನ ಋಣಭಾರಗಳು (ಎನ್‌ಕಂಬರೆನ್ಸ್) ಟೈಟಲ್ ಮಾಲೀಕತ್ವ ಶಾಸನಬದ್ಧ ಮಂಜೂರಾತಿಗಳು ಮುಂತಾದವುಗಳನ್ನು ಪರಿಶೀಲಿಸಬೇಕು.

ಹೆಚ್ಚಿನ ವಿವರಗಳಿಗಾಗಿ ಉದ್ದೇಶಿತ ಬಿಡ್ಡುದಾರರು ಅಧಿಕೃತ ಅಧಿಕಾರಿ, ಜನತಾ ಸೇವಾ ಕೋ-ಆಪರೇಟೀವ್ ಬ್ಯಾಂಕ್ ಲಿ., ನಂ.14, "ರಜತಾ ಭವನ" 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು. (ದೂ. 080-23300497, 41159606) ಇ-ಮೇಲ್: jscbinfo@jscbl.com

ದಿನಾಂಕ : 06.02.2023
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಬಿ/ಟಿಆರ್‌ಡಿ.2022-23/11
ದಿನಾಂಕ : 01-02-2023
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
(1) ಬೆಂಗಳೂರು ಯಾರ್ಡ್‌ನಲ್ಲಿ ಪಿಟ್ ಲೈನ್ ಸಂ.3 ಮತ್ತು ಎಸ್‌ಎಂಬಿವಿ ಯಾರ್ಡ್‌ನಲ್ಲಿ ಪಿಟ್ ಲೈನ್ ಸಂ.3ಗಾಗಿ ಓಹೆಚ್‌ಇ ಒದಗಿಸುವುದು. (2) ಬೆಂಗಳೂರು ಸಿಟಿ ಯಾರ್ಡ್‌ನಲ್ಲಿ ಕ್ಯಾಟ್‌ವಾಕ್‌ನೊಂದಿಗೆ ಕ್ಯಾಮ್‌ಟೆಕ್ ವಿನ್ಯಾಸಕ್ಕೆ ಅನುಸಾರವಾಗಿ ಹಾಲಿ ಇರುವ ಪಿಟ್ ಲೈನ್‌ನ್ನು ಸೂಕ್ತವಾಗಿ ಕಳಚಿಹಾಕುವುದರಿಂದ ಪಿಟ್ ಲೈನ್ 3ರ ಮರುನಿರ್ಮಾಣಕ್ಕಾಗಿ ಓಹೆಚ್‌ಇ ಮಾರ್ಪಾಡುಗಳು.	ರೂ. 70,73,391.15

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **23-02-2023 ರಂದು 15:00 ಗಂಟೆವರೆಗೆ**
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟಿಆರ್‌ಡಿ
ಪಿಯುಬಿ/650/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23 ಬೆಂಗಳೂರು
S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಎಸ್‌ಬಿಸಿ-ಜಿಎಸ್‌ಯು-ಇಎನ್‌ಜಿಜಿ-2023-02
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ದಂಡು - ವೈಟ್‌ಫೀಲ್ಡ್ ಕ್ವಾಡ್ರುಪ್ಲಿಂಗ್ : ಕೃಷ್ಣರಾಜಪುರಂ - ವೈಟ್‌ಫೀಲ್ಡ್ ನಿಲ್ದಾಣಗಳ ನಡುವೆ ಹೊಸ ನಿಲ್ದಾಣ ಕಟ್ಟಡಗಳು, ಗೂಮ್ಟಿಗಳು, ಪ್ಲಾಟ್‌ಫಾರಂ, ಪಿಎಫ್ ಶೆಲ್ಟರ್, ಪಾದಚಾರಿ ಮೇಲ್ಸೇತುವೆಯ ನಿರ್ಮಾಣ.	ರೂ. 17,73,88,208.83

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **23-02-2023 ರಂದು 15:00 ಗಂಟೆವರೆಗೆ**
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಮುಖ್ಯ ಯೋಜನಾ ವ್ಯವಸ್ಥಾಪಕರು, ಗತಿ ಶಕ್ತಿ
ಪಿಯುಬಿ/651/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23 ಬೆಂಗಳೂರು
S.W.Railways SWRRLY SWRRLY

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. 06/ಬ್ರಿಡ್ಜ್/ಯುಬಿಎಲ್ 2022-23
ದಿನಾಂಕ : 01-02-2023
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ : ಎಸ್‌ಎಸ್‌ಇ/ಬಿಆರ್/ಬಿಜಿಎಂ ವ್ಯಾಪ್ತಿಯ ಅಡಿಯಲ್ಲಿನ ಕುಡಚಿ - ಉಗರ್‌ಖುರ್ದ್ ಸೆಕ್ಷನ್ ನಡುವೆ ಸೇತುವೆ ಸಂ. 184 ಮತ್ತು ಲೋಂಡಾ - ಟಿನಾಯ್ ಘಾಟ್ ನಡುವೆ ಸೇತುವೆ ಸಂ. 3 ಕ್ಕಾಗಿ ಬದಿಯ ಪಾಥ್‌ವೇ ವ್ಯವಸ್ಥೆಗಳನ್ನು ಒದಗಿಸುವುದು.	ರೂ. 1,55,99,639/-
2	ಹುಬ್ಬಳ್ಳಿ ವಿಭಾಗ : ಎಸ್‌ಎಸ್‌ಇ/ಸೇತುವೆಗಳು/ಹುಬ್ಬಳ್ಳಿ ವ್ಯಾಪ್ತಿಯ ಅಡಿಯಲ್ಲಿನ ಗದಗ - ಬಳ್ಳಾರಿ ಸೆಕ್ಷನ್‌ನಲ್ಲಿ ಸೇತುವೆ ಸಂ. 63 ಡೌನ್, 86/ಎ ಡೌನ್, 139/ಎ ಅಪ್, 139/ಎ ಡೌನ್, 157 ಅಪ್, 184 ಡೌನ್, 184 ಅಪ್, 184 ಲೂಪ್, 200 ಅಪ್, 200 ಡೌನ್, 204 ಅಪ್, 204 ಡೌನ್, 206 ಡೌನ್, 206 ಅಪ್, 240 ಡೌನ್, 240 ಅಪ್, 243 ಡೌನ್ ಮತ್ತು 243 ಅಪ್, ಬಳ್ಳಾರಿ - ರಾಯದುರ್ಗ ಸೆಕ್ಷನ್‌ನಲ್ಲಿ ಸೇತುವೆ ಸಂ. 4, 53, ಹೊಸಪೇಟೆ - ವ್ಯಾಸ ಕಾಲೋನಿ ಜಂಕ್ಷನ್ - ಕೊಟ್ಟೂರು ಸೆಕ್ಷನ್‌ನಲ್ಲಿ ಸೇತುವೆ ಸಂ. 39, 47, 66, 121, 133, 155, ತೋರಣಗಲ್ಲು ಜಂಕ್ಷನ್ - ರಣಜಿತ್‌ಪುರ ಸೆಕ್ಷನ್‌ನಲ್ಲಿ ಸೇತುವೆ ಸಂ. 3 ಮತ್ತು ಗಿಣಿಗೇರ - ರಾಯಚೂರು ಸೆಕ್ಷನ್‌ನಲ್ಲಿ ಸೇತುವೆ ಸಂ. 7ಗೆ ಇನ್ಸ್‌ಪೆಕ್ಷನ್ ಪ್ಲಾಟ್‌ಫಾರಂ ವ್ಯವಸ್ಥೆಯನ್ನು ಒದಗಿಸುವುದು.	ರೂ. 1,70,89,718/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **02-03-2023 ರಂದು 11:00 ಗಂಟೆಯವರೆಗೆ.**
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ
ಪಿಯುಬಿ/652/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23 ಹುಬ್ಬಳ್ಳಿ
S.W.Railways SWRRLY SWRRLY

ಕರ್ನಾಟಕ ಸರ್ಕಾರ

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಹಾರೋಹಳ್ಳಿ
ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ-562112
ದೂರವಾಣಿ ಸಂಖ್ಯೆ: 080-29760055 E-mail Id: tp.harohalli@gmail.com

ಸಂ./ಪ.ಪಂ.ಹಾ/ಆ.ಶಾ/ABC-Dog/ಸಿ.ಆರ್/01/2022-23 ದಿನಾಂಕ: 08-02-2023

ಟೆಂಡರ್ ಪ್ರಕಟಣೆ

ಪಟ್ಟಣ ಪಂಚಾಯಿತಿ ಹಾರೋಹಳ್ಳಿ ವ್ಯಾಪ್ತಿಯಲ್ಲಿರುವ ಬೀದಿ ನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆಯನ್ನು Animal birth control (Dogs) rules, 2001 and the prevention of cruelty to animal act, 1960 ಅನುಸಾರ ನಡೆಸಬೇಕಿದ್ದು 20th live stock census report-2019, Karnataka state govt ನ್ನು ಆಧಾರವಾಗಿಟ್ಟುಕೊಂಡು ಪಟ್ಟಣ ಪಂಚಾಯಿತಿ ಹಾರೋಹಳ್ಳಿ ವ್ಯಾಪ್ತಿಯಲ್ಲಿರುವ ಬೀದಿ ನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆಯನ್ನು ನೆರವೇರಿಸಲು ಅರ್ಹ ಕನ್ಸ್‌ಲ್ಟೆಂಟ್/ಏಜೆನ್ಸಿರವರಿಂದ ಇ-ಪ್ರಕ್ಯೂರ್‌ಮೆಂಟ್ (HTP/HS/ABC/ARV/CR1/2022-23) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ: **22-02-2023 ರ ಸಂಜೆ 4-30 ಗಂಟೆ** ಹೆಚ್ಚಿನ ವಿವರಗಳಿಗೆ ಮಾಹಿತಿಯನ್ನು ಟೆಂಡರ್ ದಸ್ತಾವೇಜಿನ ಮೂಲಕ ಪಡೆಯುವುದು.

Sl. No.	Details	EMD (in Rs)	Tender Form Fee	Estimated amount in Lakhs
1	Invited Proposals for animal Birth Control & Anti Rabies Vaccination Program and Eusthanising which are sick, rabid and rouge in the limit of TP Harohalli	12375/-	As per e-procurement	4.95 Lakhs

ಸಹಿ/- ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯಿತಿ, ಹಾರೋಹಳ್ಳಿ

ಸಹಿ/- ಮುಖ್ಯಾಧಿಕಾರಿಗಳು
ಪಟ್ಟಣ ಪಂಚಾಯಿತಿ, ಹಾರೋಹಳ್ಳಿ

ಕರ್ನಾಟಕ ಸರ್ಕಾರ

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ
ಆಯುಕ್ತರ ಕಛೇರಿ ಕೆ.ಆರ್.ವೃತ್ತ, ಬೆಂಗಳೂರು-560001,
ದೂ: 91-080-22212408, ಫ್ಯಾಕ್ಸ್: 91-080-22277528

ಸಂಖ್ಯೆ: UPOR:Project Tender:01/2022-23 ದಿನಾಂಕ : 07.02.2023

ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ

ಈ ಕಛೇರಿಯ ಯುಪಿಓಆರ್ ಮತ್ತು ಸ್ವಾಮಿತ್ವ ಯೋಜನೆಯ ಕಾರ್ಯಕ್ಕೆ ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ.

ಈ ಕಛೇರಿಯ ಯುಪಿಓಆರ್ ಮತ್ತು ಸ್ವಾಮಿತ್ವ ಯೋಜನೆಯ ಕಾರ್ಯಕ್ಕೆ ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಆಸಕ್ತಿ ಇರುವ ಖಾಸಗಿ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲೆಗಳು ಹಾಗೂ ಇದಕ್ಕೆ ಸಂಬಂಧಿಸಿದ ಇತರೆ ಮಾಹಿತಿಯನ್ನು **e-procurement portal http://www.epro.karnataka.gov.in** ನಲ್ಲಿ **ದಿನಾಂಕ: 09.02.2023 ರಿಂದ** ಲಭ್ಯವಿರುತ್ತದೆ. ಆಸಕ್ತಿಯುಳ್ಳ ಸಂಸ್ಥೆಗಳು ಇ-ಆಡಳಿತ ಕೇಂದ್ರದಲ್ಲಿ ನೊಂದಾಯಿಸಿಕೊಂಡು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 20.02.203, ಸಂಜೆ 5:00 ಗಂಟೆ** ಆಗಿರುತ್ತದೆ.

ಸಹಿ/-
ಸಿ.ಎನ್.ಶ್ರೀಧರ, ಭಾ.ಆ.ಸೇ
ಹೆಚ್ಚುವರಿ ನಿರ್ದೇಶಕರು
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳು, ಬೆಂಗಳೂರು

ವಾಸಾಸಂಇ/ವಾ.ಪ್ರ/4577/ಶಿರಡಿ ಸಾಯಿ/2022-23



3M INDIA LIMITED

CIN:L31300KA1987PLC013543, Regd Office: 48-51, Electronics City, Hosur Road, Bengaluru - 560100, Website: www.3m.com/in

Extract of the Standalone and Consolidated Financial Results for the quarter and nine months ended 31 December 2022

(Rs. in Lakhs, except per share data, unless otherwise stated)

Particulars	Standalone				Consolidated			
	3 months ended 31 December 2022 (Unaudited)	9 months ended 31 December 2022 (Unaudited)	3 months ended 31 December 2021 (Unaudited)	12 months ended 31 March 2022 (Audited)	3 months ended 31 December 2022 (Unaudited)	9 months ended 31 December 2022 (Unaudited)	3 months ended 31 December 2021 (Unaudited)	12 months ended 31 March 2022 (Audited)
Total income from operations (including other income)	94,341.38	2,80,314.93	76,975.30	3,11,301.92	1,00,501.96	2,97,152.49	83,397.01	3,37,295.68
Net Profit for the period (before tax, Exceptional and / or Extraordinary items)	15,123.30	39,297.94	9,119.69	35,969.60	16,734.06	42,312.54	8,898.40	36,751.81
Net Profit for the period before tax (after Exceptional and / or Extraordinary items)	15,123.30	39,297.94	9,119.69	35,969.60	16,734.06	42,312.54	8,898.40	36,751.81
Net Profit for the period after tax	11,277.17	29,287.72	6,773.81	26,617.51	12,480.69	31,529.99	6,674.44	27,197.11
Total comprehensive income for the period [Comprising Profit / (Loss) for the period (after tax) and other comprehensive income (after tax)]	11,161.99	29,227.48	6,709.96	26,727.38	12,345.08	31,458.02	6,601.44	27,324.37
Equity share capital	1,126.51	1,126.51	1,126.51	1,126.51	1,126.51	1,126.51	1,126.51	1,126.51
Reserves (excluding revaluation reserves as per Ind AS)				2,47,751.61				2,17,230.77
Earnings per share (in Rs.) (of Rs. 10/- each)								
a) Basic (in Rs.)	100.11	259.99	60.13	236.28	110.79	279.89	59.25	241.43
b) Diluted (in Rs.)	100.11	259.99	60.13	236.28	110.79	279.89	59.25	241.43

Notes:

1. The above standalone and consolidated financial results of 3M India Limited and its subsidiary, 3M Electro & Communication India Private Limited (hereafter refer to as the 'Group') have been reviewed by the Audit Committee and approved by the Board of Directors on 08 February 2023.
2. The above is an extract of the detailed format for the unaudited financial results for the quarter ended 31 December 2022 filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format for the unaudited financial results for the quarter ended 31 December 2022 are available on the BSE Limited website (www.bseindia.com), the National Stock Exchange of India Limited website (www.nseindia.com) and on the Company's website (https://www.3mindia.in/3M/en_IN/company-in/about-3m/financial-facts-local/).
3. The financial results of the Company have been prepared in accordance with Indian Accounting Standards (Ind AS) as notified by the Ministry of Corporate Affairs pursuant to Section 133 of the Companies Act, 2013 read with Rule 3 of the Companies (Indian Accounting Standard) Rules 2015, as amended and in terms of Regulation 33 of the SEBI (Listing Obligations and Disclosure Requirements) Regulations, 2015.

By Order of the Board
For 3M India Limited

Place: Bengaluru
Date: 08 February 2023

Ramesh Ramadurai
Managing Director

‘ಬೆಂಗಳೂರು ಚಲೋ’ ನಾಳೆ

ಬೆಂಗಳೂರು: ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ವತಿಯಿಂದ ಫೆ.10ರಂದು ಅರಣ್ಯ ವಾಸಿಗಳ ‘ಬೆಂಗಳೂರು ಚಲೋ’ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬಹಿರಂಗ ಸಭೆ ನಡೆಯಲಿದ್ದು, ಪ್ರಮುಖ ಹತ್ತು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲಾಗುವುದು ಎಂದು ವೇದಿಕೆ ಅಧ್ಯಕ್ಷ ರವೀಂದ್ರ ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿರಂತರ 32 ವರ್ಷಗಳಿಂದ ಅರಣ್ಯ ಭೂಮಿ ಹಕ್ಕುಗಳಿಗಾಗಿ ವೇದಿಕೆಯು ಹೋರಾಟ ನಡೆಸುತ್ತಿದ್ದರೂ ಸರ್ಕಾರ ಅರಣ್ಯವಾಸಿಗಳ ಸಮಸ್ಯೆಗಳಿಗೆ ಸ್ಪಂದಿಸಿಲ್ಲ. ರಾಜ್ಯದಲ್ಲಿ ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಸಲ್ಲಿಸಿದ್ದ 2.95 ಲಕ್ಷ ಅರ್ಜಿಗಳಲ್ಲಿ 15,798 ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗಿದೆ. ರಾಜ್ಯದಲ್ಲಿ ಒಟ್ಟಾರೆಯಾಗಿ ಶೇ 5.35ರಷ್ಟು ಮಂದಿ ಮಾತ್ರ ಹಕ್ಕುಪತ್ರ ಪಡೆದಿದ್ದು, ಶೇ 62.48ರಷ್ಟು ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗಿದೆ. ರಾಯಚೂರು, ವಿಜಯಪುರ, ಚಿಕ್ಕಬಳ್ಳಾಪುರ, ಬೀದರ, ಕೋಲಾರ ಜಿಲ್ಲೆಗಳಲ್ಲಿನ ಯಾವ ಅರ್ಜಿಯೂ ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಸ್ವೀಕೃತವಾಗಿಲ್ಲ ಎಂದು ದೂರಿದ್ದಾರೆ.

ಚಿಟ್ಟೆ ಉದ್ಯಾನ ವಿಸ್ತರಣೆ ಕಾರ್ಯಯೋಜನೆ ನನೆಗುದಿಗೆ

ಕಿದ್ವಾಯಿ: ನಿರ್ಮಾಣವಾಗದ ತಪೋವನ

• ವರುಣ ಹೆಗಡೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾಗಬೇಕಿದ್ದ ತಪೋವನ ಹಾಗೂ ಚಿಟ್ಟೆ ಉದ್ಯಾನ ವಿಸ್ತರಣೆ ಕಾಮಗಾರಿ ನನೆಗುದಿಗೆ ಬಿದ್ದಿದೆ.

ಕ್ಯಾನ್ಸರ್ ರೋಗಿಗಳಿಗೆ ಆಸ್ಪತ್ರೆಯ ಆವರಣದಲ್ಲಿ ಆಹ್ಲಾದಕರ ವಾತಾವರಣ ನಿರ್ಮಿಸುವ ಸದುದ್ದೇಶ ಈ ಯೋಜನೆಯ ಹಿಂದಿತ್ತು. ಸಂಸ್ಥೆಯು ಇಂಡಸ್ ಹರ್ಬ್ಸ್ ಸಹಯೋಗದಲ್ಲಿ ಶಾಂತಿಧಾಮದ ಬಳಿ, ಒಂದು ಎಕರೆ ಪ್ರದೇಶದಲ್ಲಿ ತಪೋವನ ನಿರ್ಮಿಸಲು ಕಳೆದ ವರ್ಷ ಕಾರ್ಯಯೋಜನೆ ರೂಪಿಸಿತ್ತು. ವರ್ಷ ಕಳೆದರೂ ಇದು ಕಾರ್ಯರೂಪಕ್ಕೆ ಬಂದಿಲ್ಲ. ಈಗ ಇಂಡಸ್ ಹರ್ಬ್ಸ್ ಸಂಸ್ಥೆಯು ಹಿಂದೆ ಸರಿದಿದ್ದರಿಂದ ನಿರ್ಮಾಣ ಕಾಮಗಾರಿ ನಡೆದಿಲ್ಲ.

23 ಎಕರೆ ಪ್ರದೇಶದಲ್ಲಿರುವ ಕಿದ್ವಾಯಿ ಆಸ್ಪತ್ರೆಗೆ ರಾಜ್ಯದ ವಿವಿಧೆಡೆಯಿಂದ ಪ್ರತಿನಿತ್ಯ ಸರಾಸರಿ 1,200 ಹೊರರೋಗಿಗಳು ಚಿಕಿತ್ಸೆಗೆ ಬರುತ್ತಾರೆ. ಅದೇ ರೀತಿ, 1,300 ಮಂದಿ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಂಸ್ಥೆ ಆವರಣದಲ್ಲಿರುವ ಶಾಂತಿಧಾಮದ ಬಳಿಯ ಐದು ಎಕರೆ ಪ್ರದೇಶದಲ್ಲಿ ಉದ್ಯಾನ ನಿರ್ಮಿಸಲಾಗಿದೆ. ಅದಕ್ಕೆ ಹೊಂದಿಕೊಂಡಿರುವ ಚಿಟ್ಟೆ ಉದ್ಯಾನವನ್ನು ವಿಸ್ತರಿಸಿ, ಚಿಟ್ಟೆಗಳನ್ನು ಆಕರ್ಷಿಸುವ ಗಿಡಗಳನ್ನು ಈ ಪ್ರದೇಶದಲ್ಲಿ ಬೆಳೆಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೆ, ಗಿಡಗಳ ನೆಡುವಿಕೆ ಸಾಕಾರಗೊಂಡಿಲ್ಲ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಆವರಣದಲ್ಲಿ ಔಷಧ ಸಸ್ಯಗಳನ್ನು ಬೆಳೆಸಿರುವುದು

‘ಸಂಸ್ಥೆಯಲ್ಲಿ ನಿರ್ಮಿಸಿರುವ ಉದ್ಯಾನ ಸೂಕ್ತ ನಿರ್ವಹಣೆ ಇಲ್ಲದೆಯೇ ಸೊರಗಿದೆ. ರೋಗಿಗಳು ಹಾಗೂ ಅವರ ಸಂಬಂಧಿಗಳು ಉದ್ಯಾನದಲ್ಲಿ ಹೆಜ್ಜೆ ಹಾಕಲು ಅನುಕೂಲವಾಗುವಂತೆ ಪಾದಚಾರಿ ಪಥವನ್ನು ಈವರೆಗೂ ನಿರ್ಮಿಸಿಲ್ಲ’ ಎಂದು ಸಂಸ್ಥೆಯ ವೈದ್ಯಕೀಯ ಸಿಬ್ಬಂದಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಅವಧಿ ಮುಕ್ತಾಯ: ‘ನನ್ನ ಅವಧಿಯಲ್ಲಿ ತಪೋವನ ನಿರ್ಮಾಣ ಹಾಗೂ ಚಿಟ್ಟೆ ಉದ್ಯಾನ ವಿಸ್ತರಣೆ ಸಂಬಂಧ ಇಂಡಸ್ ಹರ್ಬ್ಸ್ ಸಂಸ್ಥೆ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಕಾರಂಜಿ, ಪಾದಚಾರಿ ಮಾರ್ಗ ನಿರ್ಮಾಣ ಮಾಡುವ ಯೋಜನೆಯನ್ನೂ ಹಾಕಿಕೊಳ್ಳಲಾಗಿತ್ತು. ಈ ಕಾರ್ಯಕ್ಕೆ ನೆರವು ನೀಡುವುದಾಗಿ ದಾನಿಗಳು ಭರವಸೆ ನೀಡಿದ್ದರು. ಇದನ್ನು ಕಾರ್ಯಗತ ಮಾಡಬೇಕು ಎನ್ನುವ ವೇಳೆ ಅಧಿಕಾರವಧಿ ಪೂರ್ಣಗೊಂಡಿತು’ ಎಂದು ಸಂಸ್ಥೆಯ ನಿಕಟಪೂರ್ವ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದರು.

‘ಸಂಸ್ಥೆಯ ಆವರಣದ ಎಲ್ಲೆಡೆ ಹೂವು ಹಾಗೂ ಹಣ್ಣಿನ ಗಿಡಗಳನ್ನು ನೆಡಲಾಗಿದೆ. ಇದರಿಂದ ವಾತಾವರಣದಲ್ಲಿನ ತಾಪಮಾನ ಕೂಡ ಇಳಿಕೆಯಾಗಿ, ಶುದ್ಧಗಾಳಿ ದೊರೆಯುತ್ತಿದೆ. ಅಲ್ಲಿನ ಗಿಡ–ಮರಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು’ ಎಂದು ಹೇಳಿದರು.

‘ಉತ್ತಮ ವಾತಾವರಣ ನಿರ್ಮಾಣ’

‘ಕ್ಯಾನ್ಸರ್ ರೋಗಿಗಳು ಮಾನಸಿಕವಾಗಿ ಕುಗ್ಗಿ, ಆತ್ಮಸ್ಥೈರ್ಯ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಹೀಗಾಗಿ, ಆಸ್ಪತ್ರೆಯಲ್ಲಿ ಉತ್ತಮ ವಾತಾವರಣ ನಿರ್ಮಿಸಲು ಉದ್ಯಾನ ನಿರ್ಮಿಸಲಾಗಿದೆ. ಲಕ್ಷ್ಮಣಫಲ, ರಾಮಫಲ, ಸೀತಾಫಲ, ಬಕುಳ, ಪುನ್ನಾಗ, ರುದ್ರಾಕ್ಷಿ ಸೇರಿ ವಿವಿಧ ತಳಿಯ ಗಿಡಗಳು ಹಾಗೂ ಔಷಧ ಸಸ್ಯಗಳನ್ನು ಬೆಳೆಸಲಾಗಿದೆ. ಅದೇ ರೀತಿ, ಕ್ಯಾನ್ಸರ್ ಪೀಡಿತ ಮಕ್ಕಳು ನೋವು ಮರೆತು, ಎಲ್ಲರೊಂದಿಗೆ ಆಟವಾಡಬೇಕು ಎಂಬ ಉದ್ದೇಶದಿಂದ ಚಿಟ್ಟೆ ಉದ್ಯಾನವನ್ನು ಶಾಂತಿಧಾಮದ ಬಳಿಯೇ ನಿರ್ಮಿಸಲಾಗಿದೆ. ಅದನ್ನು ವಿಸ್ತರಿಸಬೇಕು’ ಎಂದು ಡಾ.ಸಿ. ರಾಮಚಂದ್ರ ಹೇಳಿದರು.

ಚಿಟ್ಟೆ ಉದ್ಯಾನವನ್ನು ವಿಸ್ತರಣೆ ಮಾಡಲಾಗುವುದು. ಸದ್ಯ ವಾರ್ಡ್‌ಗಳ ರಿಪೇರಿ ಕಾರ್ಯ ನಡೆಯುತ್ತಿದೆ. ಅದು ಪೂರ್ಣಗೊಂಡ ಬಳಿಕ ತಪೋವನ ನಿರ್ಮಾಣಕ್ಕೂ ಕ್ರಮಕೈಗೊಳ್ಳಲಾಗುವುದು.
ಡಾ.ವಿ.ಲೋಕೇಶ್
ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಸುದ್ದಿ 2 ನಿಮಿಷ

ವಿಟಿಯು: ಪೂರಕ ಪರೀಕ್ಷೆ?

ಬೆಂಗಳೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಸೆಮಿಸ್ಟರ್ ಹಾಗೂ ಮುಖ್ಯ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪೂರಕ ಪರೀಕ್ಷೆಗಳನ್ನು ನಡೆಸಲು ಯೋಜನೆ ರೂಪಿಸುತ್ತಿದೆ.

ಸ್ವಾಯತ್ತ ಕಾಲೇಜುಗಳು, ಖಾಸಗಿ ವಿ.ವಿಗಳಲ್ಲಿ ಈ ವ್ಯವಸ್ಥೆ ಈಗಾಗಲೇ ಜಾರಿಯಲ್ಲಿದೆ. ವಿಟಿಯುನಲ್ಲೂ ಜಾರಿಗೆ ತಂದರೆ ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಫಲಿತಾಂಶಗಳನ್ನು ಪ್ರಕಟಿಸಿದ ಒಂದು ತಿಂಗಳ ಒಳಗೆ ಪರೀಕ್ಷೆಗೆ ಹಾಜರಾಗಲು ಅವಕಾಶ ಸಿಗಲಿದೆ. ಪರೀಕ್ಷೆಯನ್ನು ತೆಗೆದುಕೊಳ್ಳಲು ಆಸಕ್ತಿ ಹೊಂದಿರುವವರಿಗೆ ತ್ವರಿತ ತರಗತಿಗಳನ್ನೂ ನಡೆಸಲಾಗುತ್ತದೆ.

ಸೆಮಿಸ್ಟರ್ ಫಲಿತಾಂಶಗಳ ಪ್ರಕಟಣೆಯ ನಂತರ ವಿದ್ಯಾರ್ಥಿಗಳು ಅನುತ್ತೀರ್ಣ ಅಂಕಪಟ್ಟಿ ಬದಲು, ಪೂರಕ ಪರೀಕ್ಷೆಯ ಫಲಿತಾಂಶದ ನಂತರವೇ ಅಂತಿಮ ಅಂಕಪಟ್ಟಿ ಪಡೆಯಬಹುದು.

ತರಗತಿಗಳಿಗೆ ಹಾಜರಾದವರು, ಆಂತರಿಕ ಮೌಲ್ಯಮಾಪನದಲ್ಲಿ ಶೇ 90 ಅಂಕ ಪಡೆದವರು, ಆರೋಗ್ಯ ಸಮಸ್ಯೆ ಸೇರಿದಂತೆ ವಿವಿಧ ಕಾರಣಗಳಿಗೆ ಪರೀಕ್ಷೆ ಬರೆಯಲು ಸಾಧ್ಯವಾಗದವರಿಗೆ ಸ್ವಾಯತ್ತ ಕಾಲೇಜುಗಳಲ್ಲಿ ಈ ಅವಕಾಶ ಒದಗಿಸಲಾಗುತ್ತಿದೆ. ಈ ಕುರಿತು ನಿರ್ಧಾರಗಳನ್ನು ತೆಗೆದುಕೊಳ್ಳಲು ಸಮಿತಿಯನ್ನೂ ರಚಿಸಿಕೊಂಡಿವೆ.

‘ಪೂರಕ ಪರೀಕ್ಷೆಗಳನ್ನು ಜಾರಿಗೊಳಿಸುವ ಕುರಿತು ಚರ್ಚೆ ನಡೆದಿದೆ. ವಿದ್ಯಾರ್ಥಿಗಳ ವಲಯದಿಂದಲೂ ಒತ್ತಾಯವಿದೆ. ವಿದ್ಯಾವಿಷಯಕ ಪರಿಷತ್, ಸಿಂಡಿಕೇಟ್‌ನಲ್ಲಿ ಮಂಡಿಸಿ, ಅಂತಿಮ ನಿರ್ಧಾರ ಪ್ರಕಟಿಸುತ್ತೇವೆ’ ಎಂದು ವಿಟಿಯು ಕಲಪತಿ ವಿದ್ಯಾಶಂಕರ್ ಹೇಳಿದರು.

‘ವರ್ಮಾ ಹೆಸರಿನಲ್ಲಿ ಕಲಾ ಗ್ಯಾಲರಿ ನಿರ್ಮಾಣವಾಗಲಿ’

ಬೆಂಗಳೂರು: ‘ಚಿತ್ರಕಲಾವಿದ ಬಿ.ಕೆ.ಎಸ್. ವರ್ಮಾ ಅವರ ಹೆಸರಿನಲ್ಲಿ ಕಲಾ ಗ್ಯಾಲರಿ ಅಥವಾ ಕಲಾಮಂದಿರ ನಿರ್ಮಾಣ ಮಾಡುವ ಅಗತ್ಯವಿದೆ. ಅವರ ಹೆಸರಿನಲ್ಲಿ ಪ್ರಶಸ್ತಿ ನೀಡುವ ಕೆಲಸವೂ ಅಗತ್ಯ’ ಎಂದು ಕಲಾವಿದ ಚಿ.ಸು. ಕೃಷ್ಣಸೆಟ್ಟಿ ಹೇಳಿದರು.

ಕಲಾಮಂದಿರ ಕಲಾಶಾಲೆ ಆಯೋಜಿಸಿದ್ದ ‘ಬಿ.ಕೆ.ಎಸ್.ವರ್ಮಾ ಒಂದು ನೆನಪು’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ವರ್ಮಾ ಎಂದರೆ ವಿಶಿಷ್ಟ ವ್ಯಕ್ತಿತ್ವ. ಯಾರ ಕೃಪಾಶೀರ್ವಾದವೂ ಇಲ್ಲದೆ ಬೆಳೆದ ಕಲಾವಿದ. ಅವರು ಅಗಲಿದ ನಂತರವೂ ಕಲೆಯ ಮೂಲಕ ತಮ್ಮನ್ನು ನೆನಪಿಸಿಕೊಳ್ಳುವಂತಹ ಕೆಲಸ ಮಾಡಿದ್ದಾರೆ’ ಎಂದರು.

‘ವರ್ಮಾ ಅವರ ಭುವನೇಶ್ವರಿ ಚಿತ್ರ ಈಗ ಎಲ್ಲ ಕನ್ನಡ ಕಾರ್ಯಕ್ರಮಗಳಲ್ಲೂ ಕಾಣಿಸುತ್ತದೆ. ಅದನ್ನು ಸರ್ಕಾರ ಅಧಿಕೃತಗೊಳಿಸಿದ್ದಿದ್ದರೆ ಅವರಿಗೆ ಸಿಗಬೇಕಾದ ಗೌರವ ಸಿಗುತ್ತಿತ್ತು. ಅವರು ನಿಧನರಾದಾಗ ಸರ್ಕಾರಿ ಗೌರವಗಳು ಸಲ್ಲಬೇಕಿತ್ತು. ಅವುಗಳನ್ನು ಕೊಡಿಸುವ ವಿಷಯದಲ್ಲಿ ನಾವೆಲ್ಲರೂ ಸೋತಿದ್ದೇವೆ’ ಎಂದು ಬೇಸರ ವ್ಯಕ್ತಪಡಿಸಿದರು. ಕಲಾವಿದ ಚಂದ್ರನಾಥ ಆಚಾರ್ಯ ಮಾತನಾಡಿ, ‘ಬಿ.ಕೆ.ಎಸ್.ವರ್ಮಾ ಅವರು ಕಲಾ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಮರೆಯುವಂತಿಲ್ಲ. ಅವರ ಹಾದಿಯಲ್ಲಿ ಮುನ್ನಡೆಯುವ ಕೆಲಸವನ್ನು ಯುವ ಕಲಾವಿದರು ಮಾಡಲಿ’ ಎಂದು ಆಶಿಸಿದರು. ‘ಬಿ.ಕೆ.ಎಸ್.ವರ್ಮಾ ಅವರ ಕಲಾಕೃತಿಗಳನ್ನು ಸಂಗ್ರಹಿಸಿಡುವ ಕೆಲಸ ಆಗಬೇಕಿದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಯೋಚಿಸಬೇಕಿದೆ’ ಎಂದರು.

ಕೃಷಿ ಕೂಲಿಕಾರರಿಗೆ ಕಲ್ಯಾಣ ಮಂಡಳಿ ಸ್ಥಾಪಿಸಿ

ಬಜೆಟ್‌ನಲ್ಲಿ ಸಮಗ್ರ ಕಾನೂನು ರಚಿಸಲು ಕರ್ನಾಟಕ ಪ್ರಾಂತ ಕೂಲಿಕಾರರ ಸಂಘ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಬಜೆಟ್‌ನಲ್ಲಿ ಕೃಷಿ ಕೂಲಿಕಾರರಿಗೆ ಪ್ರತ್ಯೇಕ ಕಲ್ಯಾಣ ಮಂಡಳಿ ಸ್ಥಾಪಿಸಬೇಕು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ಪ್ರಾಂತ ಕೂಲಿಕಾರರ ಸಂಘದ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

‘ಕೇರಳ, ತಮಿಳುನಾಡು ರಾಜ್ಯಗಳ ಮಾದರಿಯಲ್ಲಿ ಕೃಷಿ ಕೂಲಿಕಾರರು ಮತ್ತು ಗ್ರಾಮೀಣ ಕೆಲಸಗಾರರಿಗೆ ಕನಿಷ್ಠ ವೇತನ, ತುಟ್ಟಿ ಭತ್ಯೆ, ಭವಿಷ್ಯನಿಧಿ, ಇಎಸ್‌ಐ, ನಿವೃತ್ತಿ ವೇತನ ನೀಡುವ ಸೌಲಭ್ಯಗಳನ್ನು ಖಾತರಿಪಡಿಸುವ ಸಮಗ್ರ ಕಾನೂನು ರೂಪಿಸಿ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು’ ಎಂದು ಸಂಘದ ಅಧ್ಯಕ್ಷ ಎಂ. ಪುಟ್ಟಮಾದು ಆಗ್ರಹಿಸಿದರು.

‘ನರೇಗಾ ಯೋಜನೆಗೆ ವರ್ಷದಿಂದ ವರ್ಷಕ್ಕೆ ಕೇಂದ್ರ ಸರ್ಕಾರ ನೀಡುವ ಅನುದಾನವನ್ನು ಕಡಿತ ಮಾಡುತ್ತಿದ್ದು, 2023–24 ಬಜೆಟ್‌ನಲ್ಲಿ ₹89,400 ಕೋಟಿ ನೀಡಬೇಕಾಗಿತ್ತು, ಆದರೆ, ₹60,000 ಕೋಟಿ ಮಾತ್ರ ನೀಡಲಾಗಿದೆ. ಶೇ 33ರಷ್ಟು ಅನುದಾನ ಕಡಿತಗೊಳಿಸಲಾಗಿದೆ’ ಎಂದು ಆರೋಪಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಸದಸ್ಯರು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

‘ಈ ಯೋಜನೆಯನ್ನು ಗ್ರಾಮಗಳಿಗೆ ಸೀಮಿತಗೊಳಿಸದೇ, ಪಟ್ಟಣ ಮತ್ತು ನಗರ ಪ್ರದೇಶಗಳಿಗೆ ವಿಸ್ತರಿಸಬೇಕು. ನರೇಗಾ ಯೋಜನೆಯಲ್ಲಿ 200 ದಿನಗಳ ಕೆಲಸ ಮತ್ತು ₹600 ಕೂಲಿ ನಿಗದಿಗೊಳಿಸಬೇಕು’ ಎಂದು ಒತ್ತಾಯಿಸಿದರು.

‘ಎಲ್ಲಾ ವಸತಿರಹಿತ ಕೂಲಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಉಚಿತ ನಿವೇಶನ, ಮನೆ ಕಟ್ಟಿಸಿಕೊಳ್ಳಲು ₹10 ಲಕ್ಷ ನೀಡಬೇಕು. ವಿದ್ಯುತ್ ಖಾಸಗೀಕರಣವನ್ನು ಕೈಬಿಟ್ಟು, ಕೂಲಿಕಾರರ ಕುಟುಂಬಗಳಿಗೆ ಉಚಿತ ವಿದ್ಯುತ್ ಒದಗಿಸಬೇಕು. ಕೇರಳ ರಾಜ್ಯದ ಮಾದರಿಯಲ್ಲಿ ಬ್ಯಾಂಕ್ ಮೂಲಕ ಸಬ್ಸಿಡಿ ಸಾಲ, ಋಣಮುಕ್ತ ಕಾಯ್ದೆ, ಸಮಗ್ರ ಪಡಿತರ ಪದ್ಧತಿ, 60 ವರ್ಷದ ಕೂಲಿಕಾರರಿಗೆ ಮಾಸಿಕ ₹5 ಸಾವಿರ ನಿವೃತ್ತಿ ವೇತನ ನೀಡಬೇಕು’ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ತಿಳಿಸಿದರು.

ಈ ಎಲ್ಲಾ ಬೇಡಿಕೆಗಳ ಈಡೇರಿಕೆಗಾಗಿ ಫೆ. 6ರಿಂದ ಮಂಡ್ಯದ ಶಿವಪುರದಿಂದ ಬೆಂಗಳೂರಿನ ವಿಧಾನಸೌಧದವರೆಗೂ ಪಾದಯಾತ್ರೆ ಮೂಲಕ ಬಂದ ಸಂಘದ ನೂರಾರು ಸದಸ್ಯರು ಪ್ರತಿಭಟನೆ ನಡೆಸಿದರು.

ಸಂಘದ ಉಪಾಧ್ಯಕ್ಷರಾದ ಜಿ.ಎನ್. ನಾಗರಾಜ್, ನಿತ್ಯಾನಂದಸ್ವಾಮಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ. ವೆಂಕಟ ಇದ್ದರು.

ಕಾರ್ಮಿಕ ಇಲಾಖೆಯ ಆಯುಕ್ತ ಅಕ್ರಮ್ ಪಾಷ, ಕಂದಾಯ ಇಲಾಖೆ ಕಾರ್ಯದರ್ಶಿ ಮತ್ತು ನರೇಗಾ ಯೋಜನೆಯ ನಿರ್ದೇಶಕರು ಮನವಿ ಸ್ವೀಕರಿಸಿದರು.

ಶಿಂಷಾ ಜಲಪಾತ: ಸರ್ಕಾರಿ ಜಮೀನು ಕಬಳಿಕೆ ಆರೋಪ

ಬೆಂಗಳೂರು: ‘ಮಂಡ್ಯ ಜಿಲ್ಲೆಯ ಬೆಳಕವಾಡಿಯ ಶಿಂಷಾ ಜಲಪಾತದ ಸುತ್ತಮುತ್ತಲಿನ ನಾಲ್ಕು ಸಾವಿರ ಎಕರೆಯಷ್ಟು ಸರ್ಕಾರಿ ಜಮೀನು ಒತ್ತುವರಿಯಾಗಿದೆ’ ಎಂದು ಆರೋಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಲೋಕಾಯುಕ್ತಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತು ಪತ್ರಕರ್ತ ಕೆ.ಎಸ್. ಶಿವಶಂಕರ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಜಿ.ನರೇಂದರ್ ಹಾಗೂ ಟಿ. ವೆಂಕಟೇಶ್ ನಾಯಕ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.ಅರ್ಜಿದಾರರ ಪರ ವಕೀಲ ಎಸ್.ರಾಜಶೇಖರ್ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಲೋಕಾಯುಕ್ತ, ಲೋಕಾಯುಕ್ತ ರಿಜಿಸ್ಟ್ರಾರ್, ರಾಜ್ಯ ಕಂದಾಯ ಇಲಾಖೆ, ಮಂಡ್ಯ ಜಿಲ್ಲಾಧಿಕಾರಿ ಮತ್ತು ಮಳವಳ್ಳಿ ತಹಶೀಲ್ದಾರ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ಜಿ–20 ಮೊದಲ ಸಭೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿ 20 ದೇಶಗಳ ಪರಿಸರ ಮತ್ತು ಹವಾಮಾನ ಬದಲಾವಣೆ ಕುರಿತ ಮೊದಲ ಸಭೆ ಬೆಂಗಳೂರಿನಲ್ಲಿ ಗುರುವಾರದಿಂದ (ಫೆ.9) 11 ರವರೆಗೆ ನಡೆಯಲಿದೆ. ಈ ಕುರಿತು ಕೇಂದ್ರ ಪರಿಸರ, ಅರಣ್ಯ, ಹವಾಮಾನ ಬದಲಾವಣೆ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ರಿಚಾ ಶರ್ಮಾ ಬುಧವಾರ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.

ಭೂಮಿಯ ಫಲವತ್ತತೆ ನಾಶ, ಜೀವ ವೈವಿಧ್ಯದ ನಷ್ಟ, ಸಾಗರ ಮಾಲಿನ್ಯ, ಕಾಂಡ್ಲಾ ಕಾಡುಗಳು ಮತ್ತು ಹವಳದ ದಿಬ್ಬಗಳ ರಕ್ಷಿಸುವುದು. ಸಂಪನ್ಮೂಲಗಳ ಮಿತಿ ಮೀರಿದ ಬಳಕೆ ತಡೆಯುವ ವಿಷಯಗಳ ಚರ್ಚೆ 3 ದಿನಗಳ ಕಾಲ ನಡೆಯಲಿದೆ ಎಂದರು.

ಜಯನಗರ ವಾಣಿಜ್ಯ ಸಂಕೀರ್ಣ: 250 ತಾತ್ಕಾಲಿಕ ಮಳಿಗೆ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ವಲಯದ ಜಯನಗರ ವಾಣಿಜ್ಯ ಸಂಕೀರ್ಣದ ಬಳಿ ಪಾದಚಾರಿ ಮಾರ್ಗ, ಪಾರ್ಕಿಂಗ್ ಪ್ರದೇಶ, ಮಾರುಕಟ್ಟೆ ಕಾರಿಡಾರ್ ಮೇಲೆ ಮತ್ತು ಅಕ್ಕಪಕ್ಕದಲ್ಲಿದ್ದ ಸುಮಾರು 250 ತಾತ್ಕಾಲಿಕ ಮಳಿಗೆಗಳನ್ನು ಬಿಬಿಎಂಪಿ ಸಿಬ್ಬಂದಿ ಬುಧವಾರ ತೆರವುಗೊಳಿಸಿದರು.

ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರು, ಬಿಬಿಎಂಪಿ ಮುಖ್ಯ ಆಯುಕ್ತ, ದಕ್ಷಿಣ ವಲಯ ಆಯುಕ್ತರು ಜ.27ರಂದು ತಪಾಸಣೆ ನಡೆಸಿದ್ದರು. ಅಲ್ಲಿ ಕೈಗೊಂಡ ತೀರ್ಮಾನದಂತೆ ದಕ್ಷಿಣ ವಲಯ ಜಂಟಿ ಆಯುಕ್ತರ ನೇತೃತ್ವದಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗಿದೆ ಎಂದು ಮುಖ್ಯ ಎಂಜಿನಿಯರ್ ತಿಳಿಸಿದರು. ಜಯನಗರ ವಾಣಿಜ್ಯ ಸಂಕೀರ್ಣದ ಸೆಟ್ ಬ್ಯಾಕ್ ಪ್ರದೇಶಗಳು ಮತ್ತು ಕಾರಿಡಾರ್‌ಗಳಲ್ಲಿ ಹಾಗೂ ಸುತ್ತಮುತ್ತ ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡು ವ್ಯಾಪಾರ-ವಹಿವಾಟು ನಡೆಸಲಾಗುತ್ತಿತ್ತು. ಇದರಿಂದ ಸಾರ್ವಜನಿಕರಿಗೆ ಅನನುಕೂಲ ಉಂಟಾಗುತ್ತಿತ್ತು. ಪೊಲೀಸರ ನೆರವಿನೊಂದಿಗೆ ತೆರವು ಮಾಡಲಾಗಿದ್ದು, ಮುಂದೆ ಒತ್ತುವರಿ ಮಾಡಿಕೊಳ್ಳದಂತೆ ವ್ಯಾಪಾರಿಗಳಿಗೆ ಎಚ್ಚರಿಕೆ ನೀಡಲಾಗಿದೆ. ಮತ್ತೆ ಒತ್ತುವರಿಯಾಗದಂತೆ ತಡೆಯಲು ಮಾರ್ಷಲ್‌ಗಳನ್ನು ನಿಯೋಜಿಸಲಾಗಿದೆ ಎಂದು ಹೇಳಿದರು.

ಕಾನೂನುಬಾಹಿರ: ‘ಇಲ್ಲಿ ನಮಗೆ ವ್ಯಾಪಾರ ಮಾಡಲು ಬಿಬಿಎಂಪಿಯಿಂದಲೇ ವೆಂಡಿಂಗ್ ಮತ್ತು ಗುರುತಿನ ಚೀಟಿ ನೀಡಲಾಗಿದೆ. ಇದೀಗ ಏಕಾಏಕಿ ತೆರವು ಮಾಡಲಾಗಿದೆ. ಈ ಬಗ್ಗೆ ನಾವು ಪ್ರತಿಭಟನೆ ಮಾಡಿದ್ದೇವೆ. ಜಂಟಿ ಆಯುಕ್ತರು ನಮ್ಮೊಂದಿಗೆ ಚರ್ಚೆ ನಡೆಸಿ, ಒಂದು ವಾರದಲ್ಲಿ ವ್ಯಾಪಾರ ನಡೆಸುವ ಪ್ರದೇಶವನ್ನು ಗುರುತಿಸಿ, ಅನುಮತಿ ನೀಡಲಾಗುತ್ತದೆ ಎಂದಿದ್ದಾರೆ. ಒಂದು ವಾರದವರೆಗೆ ನಾವೆಲ್ಲಿ ಹೋಗುವುದು? ಗುರುವಾರ ನಾವೆಲ್ಲ ಸಭೆ ಸೇರಿ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲಿದ್ದೇವೆ’ ಎಂದು ಬೆಂಗಳೂರು ಬೀದಿವ್ಯಾಪಾರಿಗಳ ಸಂಘದ ಅಧ್ಯಕ್ಷ ಬಾಬು ಹೇಳಿದರು.

ದಕ್ಷಿಣ ವಲಯದ ಜಯನಗರ ವಾಣಿಜ್ಯ ಸಂಕೀರ್ಣದ ಬಳಿ ಪಾದಚಾರಿ ಮಾರ್ಗ, ಪಾರ್ಕಿಂಗ್ ಪ್ರದೇಶ, ಮಾರುಕಟ್ಟೆ ಕಾರಿಡಾರ್ ಮೇಲೆ ಒತ್ತುವರಿ ಮಾಡಿಕೊಂಡಿದ್ದ 250 ತಾತ್ಕಾಲಿಕ ಮಳಿಗೆಗಳನ್ನು ಬಿಬಿಎಂಪಿ ತೆರವು ಮಾಡಿತು

12 ಲೇಖಕಿಯರಿಗೆ ‘ರತ್ನಮ್ಮ ಹೆಗ್ಗಡೆ’ ಪ್ರಶಸ್ತಿ

ಧಾರವಾಡ: ಕರ್ನಾಟಕ ವಿದ್ಯಾ ವರ್ಧಕ ಸಂಘವು ಮಹಿಳಾ ಸಾಹಿತ್ಯಕ್ಕೆ ನೀಡುವ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಮಹಿಳಾ ಗ್ರಂಥ ಬಹುಮಾನವು ನಾಲ್ಕು ವರ್ಷಗಳ ಅವಧಿಗೆ 12 ಲೇಖಕಿಯರಿಗೆ ಲಭಿಸಿದೆ. 2018ರಿಂದ 2021ರವರೆಗೆ ಒಟ್ಟು 115 ಕೃತಿ ಗಳು ಆಯ್ಕೆಯಾಗಿ ಬಂದಿದ್ದವು. ನಿರ್ಣಾಯಕರು ಪ್ರತಿ ವರ್ಷದಲ್ಲಿ ಮೂರು ಕೃತಿಗಳಂತೆ ಆಯ್ಕೆ ಮಾಡಿ ಒಟ್ಟು 12 ಕೃತಿಗಳಿಗೆ ಬಹುಮಾನ ನೀಡಿದ್ದಾರೆ.

2018ನೇ ಸಾಲಿನಲ್ಲಿ ಬೆಂಗಳೂರಿನ ಉಮಾ ಮುಕುಂದ ಅವರ ‘ಕಡೆ ನಾಲ್ಕು ಸಾಲು’ ಕವನ ಸಂಕಲನ, ಚಿಕ್ಕಮಗಳೂರಿನ ಕೊಪ್ಪದ ದೀಪಾ ಹಿರೇಗುತ್ತಿ ಅವರ ‘ಫಿನಿಕ್ಸ್... ಸೋಲಿಸಬಹುದು ಸೋಲನ್ನ’ ಅಂಕಣ ಬರಹಗಳ ಸಂಗ್ರಹ, ಚನ್ನಮ್ಮನ ಕಿತ್ತೂರಿನ ಭುವನಾ ಹಿರೇಮಠ ಅವರ ‘ಟ್ರಯಲ್ ರೂಮಿನ ಅಪ್ಸರೆಯರು’ ಕವನ ಸಂಕಲನ ಆಯ್ಕೆ ಆಗಿವೆ.

2019ನೇ ಸಾಲಿನಲ್ಲಿ ಬೆಂಗಳೂರಿನ ಭಾರತಿ ಹೆಗಡೆ ಅವರ ‘ಮಣ್ಣಿನ ಗೆಳತಿ: ಕೃಷಿ ಮಹಿಳೆಯರ ಅನುಭವ ಕಥನ’, ಭದ್ರಾವತಿಯ ದೀಪ್ತಿ ಭದ್ರಾವತಿ ಅವರ ‘ಗೀರು ಕಥಾ ಸಂಕಲನ’ ಹಾಗೂ ಧಾರವಾಡದ ಶಾಂತಲಾ ಯೋಗೀಶ ಯಡ್ರಾವಿ ಅವರ ‘ವಿಶ್ವಜಿತ’ ಕಾದರಂಬರಿ ಆಯ್ಕೆಯಾಗಿವೆ.

2020ನೇ ಸಾಲಿಗೆ ಹುಬ್ಬಳ್ಳಿಯ ರೂಪಾ ರವೀಂದ್ರ ಜೋಶಿ ಅವರ ‘ಶ್ರಂಖಲಾ’ ಕಾದಂಬರಿ, ಮಂಗಳೂರಿನ ಜಯಶ್ರೀ ಬಿ. ಕದ್ರಿ ಅವರ ‘ಬೆಳಕು ಬಳ್ಳಿ ಜೀವನ ಪ್ರೀತಿ’ ಬರಹಗಳು, ಕಾರವಾರದ ಶ್ರೀದೇವಿ ಕೆರೆಮನೆ ಅವರ ‘ಅಂಗೈಯೊಳಗಿನ ಬೆಳಕು’ ಅಂಕಣ ಬರಹಗಳು.

2021ನೇ ಸಾಲಿನಲ್ಲಿ ಹುಬ್ಬಳ್ಳಿಯ ಕಾವ್ಯಾ ಕಡಮೆ ಅವರ ‘ಮಾಕೋನ ಏಕಾಂತ’ ಕಥೆಗಳು, ಬೆಂಗಳೂರಿನ ಪೂರ್ಣಿಮಾ ಮಾಳಗಿಮನಿ ಅವರ ‘ಇಜಯಾ’ ಕಾದಂಬರಿ, ಮೈಸೂರಿನ ಡಾ. ಸುಜಾತಾ ಅಕ್ಕಿ ಅವರ ‘ಆಕಾಶದ ಕೀಲಿ’ ನಾಟಕಕ್ಕೆ ಬಹುಮಾನ ಲಭಿಸಿದೆ. ಮಾ. 4 ಹಾಗೂ 5 ರಂದು ನಡೆಯುವ ಮಹಿಳಾ ಲೇಖಕಿಯರ ಸಮಾವೇಶದಲ್ಲಿ ಬಹುಮಾನ ನೀಡಲಾಗುವುದು. ಪ್ರತಿ ಕೃತಿಗೆ ₹10ಸಾವಿರ ನಗದು ಬಹುಮಾನ, ಪ್ರಮಾಣಪತ್ರ ನೀಡಲಾಗುವುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಂಡರ್‌ಲಾ: ₹118 ಕೋಟಿ ಆದಾಯ

ರಾಮನಗರ: ವಂಡರ್‌ಲಾ ಕಂಪನಿ ಪ್ರಸಕ್ತ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ (ಅಕ್ಟೋಬರ್–ಡಿಸೆಂಬರ್) ₹118 ಕೋಟಿ ಆದಾಯ ಗಳಿಸಿದ್ದು, ಕಂಪನಿಯ ಆದಾಯ ಶೇ 62ರಷ್ಟು ವೃದ್ಧಿಯಾಗಿದೆ.

ಈ ಅವಧಿಯಲ್ಲಿ ವಂಡರ್‌ಲಾ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ಒಟ್ಟು 9 ಲಕ್ಷ ಜನರು ಭೇಟಿ ನೀಡಿದ್ದಾರೆ. ಬೆಂಗಳೂರು ಪಾರ್ಕ್‌ಗೆ 3.21 ಲಕ್ಷ , ಕೊಚ್ಚಿ ಪಾರ್ಕ್‌ಗೆ 3.16 ಲಕ್ಷ ಹಾಗೂ ಹೈದರಾಬಾದ್ ಪಾರ್ಕ್‌ಗೆ 2.82 ಲಕ್ಷ ಜನರು ಭೇಟಿ ನೀಡಿದ್ದಾರೆ.

ಕಳೆದ ಹಣಕಾಸು ವರ್ಷದ ಇದೇ ಅವಧಿಯಲ್ಲಿ 7.2 ಲಕ್ಷ ಜನರು ವಂಡರ್‌ಲಾಗೆ ಭೇಟಿ ನೀಡಿದ್ದರು. ₹72.7 ಕೋಟಿ ಆದಾಯ ಸಂಗ್ರಹ ಆಗಿತ್ತು. ವಂಡರ್‌ಲಾ ರೆಸಾರ್ಟ್ ಆದಾಯವೂ ಶೇ 72ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಅರುಣ್ ಚಿಟ್ಟಿಲಪ್ಪಿಳ್ಳಿ ತಿಳಿಸಿದ್ದಾರೆ.

‘ಪ್ರಶಸ್ತಿ ನಗದು ಪುಣ್ಯಭೂಮಿ ಅಭಿವೃದ್ಧಿಗೆ’

ಬೆಂಗಳೂರು: ‘ರಾಷ್ಟ್ರಕವಿ ಪ್ರೊ. ಜಿ.ಎಸ್ ಶಿವರುದ್ರಪ್ಪ ರಾಷ್ಟ್ರೀಯ ಪುರಸ್ಕಾರದೊಂದಿಗೆ ಬಂದಿರುವ ₹25 ಸಾವಿರ ನಗದನ್ನು ‘ಪುಣ್ಯಭೂಮಿ ಅಭಿವೃದ್ಧಿ’ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲು ನೀಡುತ್ತಿದ್ದೇನೆ’ ಎಂದು ಸಾಹಿತಿ ಪುಸ್ತಕಮನೆ ಹರಿಹರಪ್ರಿಯ ಹೇಳಿದರು.

ರಾಷ್ಟ್ರಕವಿ ಪ್ರೊ. ಜಿ.ಎಸ್. ಶಿವರುದ್ರಪ್ಪ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಪ್ರೊ. ಯು.ಆರ್. ಅನಂತಮೂರ್ತಿ ಪುಣ್ಯಸ್ಥಳದ ಅಭಿವೃದ್ಧಿ ಜಂಟಿ ಕ್ರಿಯಾ ಸಮಿತಿ ವತಿಯಿಂದ ‘ಜಿ.ಎಸ್. ಶಿವರುದ್ರಪ್ಪ ರಾಷ್ಟ್ರೀಯ ಪುರಸ್ಕಾರ’ ಸ್ವೀಕರಿಸಿ ಅವರು ಮಾತನಾಡಿದರು.

‘ಜಿಎಸ್‌ಎಸ್ ಹೆಸರಿನಲ್ಲಿ ನನಗೆ ಪ್ರಥಮ ರಾಷ್ಟ್ರೀಯ ಪ್ರಶಸ್ತಿ ನೀಡಿದ್ದೀರಿ. ಇಂತಹ ಕೆಲಸಗಳನ್ನು ಸರ್ಕಾರ ಮಾಡಬೇಕಿತ್ತು. ಜಂಟಿ ಕ್ರಿಯಾ ಸಮಿತಿ ನನ್ನನ್ನು ಗುರುತಿಸಿದೆ. ಈ ಪುರಸ್ಕಾರದೊಂದಿಗೆ ಬಂದಿರುವ ನಗದನ್ನು ಜಂಟಿ ಕ್ರಿಯಾ ಸಮಿತಿಗೆ ನೀಡುತ್ತಿದ್ದೇನೆ. ಅವರು ಪುಣ್ಯಭೂಮಿ ಅಭಿವೃದ್ಧಿ ಹಾಗೂ ಸಾಹಿತ್ಯ ಚಟುವಟಿಕೆಗಳಿಗೆ ಬಳಸಿಕೊಳ್ಳಲಿ’ ಎಂದು ಹೇಳಿದರು.

ಚಿತ್ರಾವಳಿ

ಸುಬ್ರಹ್ಮಣ್ಯನಗರದ ಸಂಗೊಳ್ಳಿರಾಯಣ್ಣ ಪಾರ್ಕ್‌ನಲ್ಲಿ ‘ನಮ್ಮ ಕ್ಲಿನಿಕ್’ ಅನ್ನು ಹಿರಿಯ ನಾಗರಿಕ ಸತ್ಯನಾರಾಯಣ ಬುಧವಾರ ಉದ್ಘಾಟಿಸಿದರು. ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಪಾಲಿಕೆ ಮಾಜಿ ಸದಸ್ಯ ಮಂಜುನಾಥ, ಬಿಬಿಎಂಪಿ ಮುಖ್ಯ ಆರೋಗ್ಯಧಿಕಾರಿ ಡಾ.ಮನೋರಂಜನ ಹೆಗಡೆ, ಮಲ್ಲೇಶ್ವರದ ವೈದ್ಯಾಧಿಕಾರಿ ಡಾ.ಸುಚೇತಾ, ಬಿಜೆಪಿ ಉತ್ತರ ಜಿಲ್ಲಾ ಉಪಾಧ್ಯಕ್ಷ ಡಾ.ವಾಸು, ಮಲ್ಲೇಶ್ವರ ಮಂಡಲದ ಬಿಜೆಪಿ ಅಧ್ಯಕ್ಷೆ ಕಾವೇರಿ ಕೇದಾರನಾಥ, ಸುಬ್ರಹ್ಮಣ್ಯ ನಗರ ವಾರ್ಡ್ ಅಧ್ಯಕ್ಷ ಯೋಗೇಶ ಇದ್ದರು

ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದ ಎನ್‌ಸಿಸಿ ಕೆಡೆಟ್‌ಗಳಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ನಗರದಲ್ಲಿ ಬುಧವಾರ ಅಭಿನಂದನೆ ಸಲ್ಲಿಸಿದರು. ನ್ಯಾಷನಲ್ ಕೆಡೆಟ್ ಕೋರ್ ಕರ್ನಾಟಕ ಮತ್ತು ಗೋವಾ ಉಪಮಹಾ ನಿರ್ದೇಶಕ ಏರ್ ಕಮಾಂಡರ್ ಬಿ.ಎಸ್. ಕನ್ವರ್ ಇದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರಿ ಹಿರಿಯ ಹಾಗೂ ಪ್ರಾಥಮಿಕ ಪದವೀಧರೇತರ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರ ಸಂಘ ನಗರದಲ್ಲಿ ಬುಧವಾರ ಆಯೋಜಿಸಿದ್ದ ಶೈಕ್ಷಣಿಕ ಕಾರ್ಯಾಗಾರ ಹಾಗೂ ಸಂಘದ ಬೆಳ್ಳಿ ಹಬ್ಬದ ಮಹೋತ್ಸವದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಮಾತನಾಡಿದರು.

ಕಲಾವಿದ ‘ಮುಖ್ಯಮಂತ್ರಿ’ ಚಂದ್ರು ಬೇಸರ

‘ಸತ್ತುಹೋದ ಸಾಂಸ್ಕೃತಿಕ ಕ್ಷೇತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇತ್ತೀಚಿನ ದಿನಗಳಲ್ಲಿ ನಾಟಕಗಳನ್ನು ಮಾಡುವವರ ಸಂಖ್ಯೆ ಕಡಿಮೆಯಾಗಿದೆ. ಮಾಡಿದರೂ ನೋಡುಗರು ಬರುತ್ತಿಲ್ಲ. ಸಾಂಸ್ಕೃತಿಕ ಕ್ಷೇತ್ರ ಸತ್ತುಹೋಗಿದೆ’ ಎಂದು ಕಲಾವಿದ ‘ಮುಖ್ಯಮಂತ್ರಿ’ ಚಂದ್ರು ಬೇಸರ ವ್ಯಕ್ತಪಡಿಸಿದರು.

ಭಾರತ ಯಾತ್ರಾ ಕೇಂದ್ರ ಹಾಗೂ ರಂಗಸೌರಭ ಜಂಟಿಯಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡ ಸೌರಭ 2023 ಸಮಾರಂಭದಲ್ಲಿ ಗಣೇಶ್ ಪಿ.ಬಿ. ಹಾಗೂ ಶಶಿಕಲಾ ಎನ್. ಅವರಿಗೆ ‘ಸಂಸ ಪ್ರಶಸ್ತಿ’ ಪ್ರದಾನ ಮಾಡಿ, ಮಾತನಾಡಿದರು.

‘ಈ ಹಿಂದೆ ರಂಗಭೂಮಿಯಲ್ಲಿ ಅವಕಾಶ ಪಡೆಯುವುದು ಕಷ್ಟವಾಗಿತ್ತು. 1980ರಲ್ಲಿ ಸಂಸ ರಂಗಮಂದಿರದಲ್ಲಿ ‘ಮುಖ್ಯಮಂತ್ರಿ’ ನಾಟಕವನ್ನು ಪ್ರಥಮ ಬಾರಿಗೆ ಪ್ರದರ್ಶಿಸಿದೆ. ಈಗ ಆ ನಾಟಕ 800 ಪ್ರದರ್ಶನಗಳು ಆಗಿವೆ. ಕೈ–ಕಾಲುಗಳು ಗಟ್ಟಿ ಇರುವವರೆಗೂ ನಾಟಕ ಪ್ರದರ್ಶನ ಮಾಡುತ್ತೇನೆ. ಸಿನಿಮಾ ರಂಗದಲ್ಲಿ ಹೆಸರು ಮಾಡಿದರೂ ರಂಗಭೂಮಿಯನ್ನು ಬಿಟ್ಟಿಲ್ಲ. ಆರ್ಥಿಕ ಭದ್ರತೆಯಿಂದ ಕೆಲವರು ಮೂಲ ಕಲೆಯನ್ನು ಮರೆಯುತ್ತಾರೆ’ ಎಂದರು.

‘ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ನಾವು ಅತಂತ್ರರಾಗಿಯೇ ಇದ್ದೇವೆ. ಇದಕ್ಕೆ ಅನುಭವದ ಕೊರತೆ ಮೂಲ ಕಾರಣ’ ಎಂದು ತಿಳಿಸಿದರು.

ಭಾರತ ಯಾತ್ರಾ ಕೇಂದ್ರದ ಪ್ರಧಾನ ಕಾರ್ಯದರ್ಶಿ ಕೆ.ವಿ. ನಾಗರಾಜ ಮೂರ್ತಿ, ‘ಕನ್ನಡ ರಂಗಭೂಮಿಯಲ್ಲಿ ವಿಶಿಷ್ಟ ನಾಟಕಕಾರರೆನಿಸಿರುವ ಸ್ವಾಮಿ ವೆಂಕಟಾದ್ರಿ ಅಯ್ಯರ್ ಅವರೇ ಸಂಸ. ಕರ್ನಾಟಕದ ಮೊಟ್ಟ ಮೊದಲ ಬಯಲು ರಂಗಮಂದಿರವನ್ನು ಅವರ ಹೆಸರಿನಲ್ಲಿ ನಿರ್ಮಿಸಲಾಗಿದೆ’ ಎಂದರು.

ಪ್ರಶಸ್ತಿ ಪುರಸ್ಕೃತ ಗಣೇಶ ಪಿ.ಬಿ., ‘ಕನ್ನಡ ರಂಗಭೂಮಿಗೆ ಸದಭಿರುಚಿಯ ಪ್ರೇಕ್ಷಕರನ್ನು ಹುಟ್ಟು ಹಾಕಿದರೂ ಸಾರ್ಥಕ ಅಂದುಕೊಂಡಿರುವೆ. ಎಲ್ಲ ಕಾಲೇಜುಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ ಇರುವುದಿಲ್ಲ. ನಾನು ಪ್ರಾಂಶುಪಾಲನಾಗಿ ಕಾರ್ಯನಿರ್ವಹಿಸುವ ಕಾಲೇಜುಗಳಲ್ಲಿ ರಂಗ ಚಟುವಟಿಕೆಗಳಿಗೆ ಅವಕಾಶ ಇರದಿದ್ದಲ್ಲಿ ಅಲ್ಲಿ ಸೇವೆಯನ್ನು ಮುಂದುವರಿಸುವುದಿಲ್ಲ’ ಎಂದು ತಿಳಿಸಿದರು.

ಸಮಾರಂಭದಲ್ಲಿ ಶಶಿಕಲಾ ಎನ್. ಹಾಗೂ ಗಣೇಶ್ ಪಿ.ಬಿ. ಅವರಿಗೆ ‘ಸಂಸ ಪ್ರಶಸ್ತಿ’ ಪ್ರದಾನ ಮಾಡಲಾಯಿತು. (ಎಡದಿಂದ) ಜಗದೀಶ್ ಜಾಲ, ವಲ್ಲಭ ಸೂರಿ, ಕಲಾವಿದೆ ಗಿರಿಜಾ ಲೋಕೇಶ್, ಎ. ಪದ್ಮನಾಭ, ಕೆ.ವಿ. ನಾಗರಾಜಮೂರ್ತಿ, ಚಲನಚಿತ್ರ ಕಲಾವಿದ ಪ್ರಮೋದ್ ಕೆ. ಶೆಟ್ಟಿ, ಮಯಾಬ್ರಹ್ಮಚಾರ್, ಕನ್ನಳ್ಳಿ ಮಹದೇವಯ್ಯ ಹಾಗೂ ‘ಮುಖ್ಯಮಂತ್ರಿ’ ಚಂದ್ರು ಇದ್ದಾರೆ –ಪ್ರಜಾವಾಣಿ ಚಿತ್ರ

ನೇರ ವೇತನ ಪಾವತಿಗೆ ಆಗ್ರಹಿಸಿ ಬಿಬಿಎಂಪಿ ಪೌರ ಕಾರ್ಮಿಕರ ಟ್ರೇಡ್ ಯೂನಿಯನ್‌ಗಳ ಜಂಟಿ ಕ್ರಿಯಾ ಸಮಿತಿ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು.

ವೇತನ ನೇರಪಾವತಿಗೆ ಆಗ್ರಹ

ಬೆಂಗಳೂರು: ನಗರದಲ್ಲಿ ತ್ಯಾಜ್ಯ ಸಂಗ್ರಹಕಾರರು, ಆಟೊ, ಟಿಪ್ಪರ್ ಚಾಲಕರಿಗೂ ನೇರವಾಗಿ ವೇತನ ಪಾವತಿಸಬೇಕು ಎಂದು ಆಗ್ರಹಿಸಿ ಬಿಬಿಎಂಪಿ ಪೌರ ಕಾರ್ಮಿಕರ ಟ್ರೇಡ್ ಯೂನಿಯನ್‌ಗಳ ಜಂಟಿ ಕ್ರಿಯಾ ಸಮಿತಿ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು.

ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ನಡೆದ ಪ್ರತಿಭಟನೆಯಲ್ಲಿ ಐ.ಪಿ.ಡಿ. ಸಾಲಪ್ಪ ವರದಿ ಸಂಪೂರ್ಣ ಅನುಷ್ಠಾನಕ್ಕೂ ಒತ್ತಾಯಿಸಿದರು.

‘ನಗರಾಭಿವೃದ್ಧಿ ಇಲಾಖೆಯಿಂದ ನೇರ ಪಾವತಿಗೆ ಕ್ರಮ ಕೈಗೊಳ್ಳಲು ಬಿಬಿಎಂಪಿಯಿಂದ ಪ್ರಸ್ತಾವ ಕಳುಹಿಸಿ ಕೊಡಲು ಸೂಚಿಸಿದ್ದರೂ, ಪಾಲಿಕೆ ಅಧಿಕಾರಿಗಳು ಅದನ್ನು ಕಳುಹಿಸಿಲ್ಲ’ ಎಂದು ದೂರಿದರು.

‘ಬಿಬಿಎಂಪಿಯಲ್ಲಿ ಕಾಯಂ ಕಾರ್ಮಿಕರಲ್ಲದೆ, 10,561 ಕಸ ಸಂಗ್ರಹಕಾರರು ಮತ್ತು ಆಟೊ, ಟಿಪ್ಪರ್ ಚಾಲಕರಿಗೆ ನ್ಯಾಯ ಒದಗಿಸಬೇಕು. ಅವರನ್ನೂ ಕಾಯಂಗೊಳಿಸಬೇಕು. ಗುತ್ತಿಗೆದಾರರ ಲಾಬಿಗೆ ಪಾಲಿಕೆ ಅಧಿಕಾರಿಗಳು ಮಣಿದಿದ್ದು, ತಳಮಟ್ಟದ ಕೆಲಸಗಾರರಿಗೆ ನ್ಯಾಯ ದೊರೆಯಬೇಕು. ಬೇಡಿಕೆಗಳನ್ನು ಈಡೇರಿಸದಿದ್ದರೆ ಇನ್ನೊಂದು ವಾರದಲ್ಲಿ ಹೋರಾಟ ಮಾಡಲಾಗುತ್ತದೆ’ ಎಂದು ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ ಬಾಬು ಹೇಳಿದರು.

ಜಂಟಿ ಕ್ರಿಯಾ ಸಮಿತಿ ಗೌರವಾಧ್ಯಕ್ಷ ಸುಬ್ಬರಾಯುಡು, ಸಂಚಾಲಕರಾದ ಗಂಗಾಧರ್ ಸೋಮಘಟ್ಟ, ಭೀಮಜ್ಯೋತಿ ಶ್ರೀನಿವಾಸ್, ಶಂಕರಪ್ಪ, ರಾಜಶೇಖರ್ ಇದ್ದರು.

ಬಿಬಿಎಂಪಿ ತ್ಯಾಜ್ಯ: ಆರಂಭವಾಗದ ಉಪಕರಣಗಳ ಕಾರ್ಯಾಚರಣೆ; ಶೀಘ್ರ ಮುಗಿಯಲಿದೆ ಗ್ಯಾರಂಟಿ ಅವಧಿ

ತುಕ್ಕು ಹಿಡಿಯುತ್ತಿವೆ 'ಎಂಟಿಎಸ್' ಯಂತ್ರಗಳು

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ ಆಟೊದಿಂದ ಲಾರಿಗೆ ಕಸ ತುಂಬುವ ಅವ್ಯವಸ್ಥೆಯನ್ನು ನಿರ್ಮೂಲನೆಗೊಳಿಸಿ, ಟ್ರಕ್ ಕಾಂಪ್ಯಾಕ್ಟರ್ ಓಡಾಟವನ್ನು ಕಡಿಮೆಗೊಳಿಸಬೇಕಾದ 'ಎಂಟಿಎಸ್' ಸ್ಥಾಪನೆಯಾಗಿದೆ. ಆದರೆ, ಉದ್ಘಾಟನೆಯಾಗಿಲ್ಲ. ಅಲ್ಲಿನ ಯಂತ್ರೋಪಕರಣಗಳು ತುಕ್ಕು ಹಿಡಿಯುತ್ತಿದ್ದು, ಗ್ಯಾರಂಟಿ ಅವಧಿಯೂ ಮೀರುತ್ತಿದೆ.

ಎಂಟಿಎಸ್‌ಗಳಲ್ಲಿ ಸುಮಾರು ಒಂದು ಕೋಟಿ ವೆಚ್ಚದ ಯಂತ್ರೋಪಕರಣ ಅಳವಡಿಸಲಾಗಿದೆ. ಅವುಗಳು ಕಾರ್ಯಾರಂಭ ಮಾಡಿಲ್ಲ. ಅಳವಡಿಸಿ 10 ತಿಂಗಳು ಕಳೆಯುತ್ತಿದ್ದು, ಒಂದು ವರ್ಷವಾದೊಡನೆ ಅವುಗಳಿಗೆ ಇರುವ ಗ್ಯಾರಂಟಿಯೂ ಮುಗಿದುಹೋಗುತ್ತದೆ. ಎಲ್ಲ ಸಿದ್ಧವಿದ್ದರೂ ಹಸಿತ್ಯಾಜ್ಯ ಎಂಟಿಎಸ್‌ಗೆ ಬರುತ್ತಿಲ್ಲ.

ವಾರ್ಡ್‌ಗಳಲ್ಲಿ ಮನೆಗಳಿಂದ ಸಂಗ್ರಹಿಸಿದ ಹಸಿ ಕಸವನ್ನು 'ಮಿನಿ ಟ್ರಾನ್ಸ್‌ಫರ್ ಸ್ಟೇಷನ್'ನಲ್ಲಿ (ಎಂಟಿಎಸ್) ಸಂಗ್ರಹಿಸಲಾಗುತ್ತದೆ. ಅಲ್ಲಿ, ಅದನ್ನು ಕಾಂಪ್ಯಾಕ್ಟ್ ಮಾಡಿ, ದ್ರವ ತ್ಯಾಜ್ಯವನ್ನು ತೆಗೆಯಲಾಗುತ್ತದೆ. ಕಾಂಪ್ಯಾಕ್ಟ್ ಮಾಡುವುದರಿಂದ ಇಲ್ಲಿಂದ ಸಾಗಣೆ ಮಾಡುವಾಗ ಕಾಂಪ್ಯಾಕ್ಟರ್‌ಗಳ ಸಂಚಾರ ಶೇ 40ರಷ್ಟು ಕಡಿಮೆಯಾಗುತ್ತದೆ. ಅಲ್ಲದೆ, ವರ್ಗಾವಣೆ ಸಂದರ್ಭದಲ್ಲಿ ರಸ್ತೆ, ಕೆರೆ ಏರಿ ಸೇರಿದಂತೆ ತೆರೆದ ಪ್ರದೇಶದ ಬಳಕೆ ಆಗುವುದಿಲ್ಲ.

ಬಿಬಿಎಂಪಿ ವ್ಯಾಪ್ತಿಯಲ್ಲಿ 44 ಎಂಟಿಎಸ್‌ಗಳನ್ನು ಸ್ಥಾಪನೆ ಮಾಡಲಾಗುತ್ತಿದೆ. ಇದರಲ್ಲಿ 9 ಕಾರ್ಯಾರಂಭವಾಗಿವೆ. ಆದರೆ 10 ಎಂಟಿಎಸ್‌ಗಳು ಸಿದ್ಧಗೊಂಡು, ತಿಂಗಳು ಕಳೆದರೂ ಕಾರ್ಯಾರಂಭ ಮಾಡಿಲ್ಲ. ಪ್ರತಿಯೊಂದು ಎಂಟಿಎಸ್‌ಗೆ ₹1.31 ಕೋಟಿ ವೆಚ್ಚವಾಗಿದೆ. ಈ ಯಂತ್ರಗಳು ತುಕ್ಕು ಹಿಡಿಯುವ ಮಟ್ಟಕ್ಕೆ ಬಂದಿದ್ದರೂ, ಸ್ಥಳೀಯ ವಿರೋಧದಿಂದ ಅವುಗಳು ಕಾರ್ಯಾರಂಭವಾಗಿಲ್ಲ. ಶಾಂತಲಾನಗರ, ಕೋರಮಂಗಲ, ಗಾಂಧಿನಗರದಲ್ಲಿ ಎಂಟಿಎಸ್‌ಗಳು ಉದ್ಘಾಟನೆಗೊಂಡು ಕೆಲವು ತಿಂಗಳಾದರೂ ಅವು ಕಾರ್ಯಾರಂಭ ಮಾಡಿಲ್ಲ.

ಜನಪ್ರತಿನಿಧಿಗಳಿಂದ ವಿಳಂಬ...: 'ಎಂಟಿಎಸ್‌ಗಳು ಸ್ಥಾಪನೆಯಾಗಿದ್ದರೂ ಅವುಗಳ ಕಾರ್ಯಾಚರಣೆಗೆ ಜನಪ್ರತಿನಿಧಿಗಳೇ ವಿರೋಧವಾಗಿದ್ದಾರೆ. ಅವರ ಅನುಯಾಯಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಹೆಚ್ಚಿನ ಕಾಂಪ್ಯಾಕ್ಟರ್ ಓಡಾಟವೇ ನಡೆಯಲಿ, ಗುತ್ತಿಗೆದಾರರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಎಂಟಿಎಸ್ ಕಾರ್ಯಾಚರಣೆಗೆ ಅವಕಾಶ ನೀಡುತ್ತಿಲ್ಲ. ಸ್ಥಳೀಯ ಜನರ ವಿರೋಧವಿದೆ ಎಂದು ಅದನ್ನು ಸ್ಥಗಿತಗೊಳಿಸಲಾಗಿದೆ' ಎಂದು ಕೋರಮಂಗಲದ ನಿವಾಸಿ ರಮೇಶಪ್ಪ ಅವರು ಹೇಳಿದರು.

ಪ್ರಜಾವಾಣಿ ವಿಶೇಷ

ಕಾರ್ಯಾರಂಭಕ್ಕೆ ಕಾಯುತ್ತಿರುವ ಎಂಟಿಎಸ್

ಕೂಡಲೇ ಕ್ರಮ...

ಕೇಂದ್ರ ಸರ್ಕಾರದ ಸೂಚನೆಯಂತೆ ಮಿನಿ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಇವುಗಳಿಂದ ಕಸ ವರ್ಗಾವಣೆಗೆ ಸಾಕಷ್ಟು ಉಪಯೋಗವಾಗುತ್ತದೆ. ಸುಮಾರು 9 ಕಡೆ ಎಂಟಿಎಸ್‌ಗಳ ಕಾರ್ಯಾಚರಣೆಯಿಂದ ತ್ಯಾಜ್ಯ ನಿರ್ವಹಣೆ ವ್ಯವಸ್ಥಿತವಾಗಿದೆ. ಸ್ಥಳೀಯ ಕಾರಣಗಳಿಂದ ಕೆಲವು ಎಂಟಿಎಸ್‌ಗಳು ಆರಂಭವಾಗಿಲ್ಲ. ಆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತ ಹರೀಶ್‌ಕುಮಾರ್ ತಿಳಿಸಿದರು.

ಕಾರ್ಯಾರಂಭಕ್ಕೆ ಕಾಯುತ್ತಿರುವ ಎಂಟಿಎಸ್‌ಗಳು

ವಾರ್ಡ್ 56: ಎ. ನಾರಾಯಣಪುರ, ವಾರ್ಡ್ 11– ಸಿಂಗಾಪುರ, ವಾರ್ಡ್ 196– ಅಂಜನಾಪುರ, ವಾರ್ಡ್ 194– ಗೊಟ್ಟಿಗೆರೆ, ವಾರ್ಡ್ 192– ಬೇಗೂರು, ವಾರ್ಡ್ 44– ನಂದಿನಿ ಲೇಔಟ್	10 ತಿಂಗಳ ಹಿಂದೆ ಯಂತ್ರ, ಉಪಕರಣಗಳ ಸ್ಥಾಪನೆ
ವಾರ್ಡ್ 90: ಹಲಸೂರು	10 ತಿಂಗಳ ಹಿಂದೆ ಯಂತ್ರ ಉಪಕರಣಗಳ ಸ್ಥಾಪನೆ, ಮರ ಕಡಿಯುವ ಕಾಮಗಾರಿಯಿಂದ ವಿಳಂಬ
ವಾರ್ಡ್ 111: ಶಾಂತಲಾನಗರ, ವಾರ್ಡ್ 151– ಕೋರಮಂಗಲ	10 ತಿಂಗಳ ಹಿಂದೆ ಯಂತ್ರ, ಉಪಕರಣಗಳ ಸ್ಥಾಪನೆ, 4 ತಿಂಗಳ ಹಿಂದೆ ಶಾಸಕರಿಂದ ಉದ್ಘಾಟನೆ
ವಾರ್ಡ್ 94: ಗಾಂಧಿನಗರ	8 ತಿಂಗಳ ಹಿಂದೆ ಯಂತ್ರ, ಉಪಕರಣಗಳ ಸ್ಥಾಪನೆ, 2 ತಿಂಗಳ ಹಿಂದೆ ಶಾಸಕರಿಂದ ಉದ್ಘಾಟನೆ

ಸ್ವಚ್ಛ ಸರ್ವೇಕ್ಷಣ್ ಅಂಕದ ಮೇಲೆ ಪರಿಣಾಮ!

'ಕಸದಿಂದ ಹಣ'– 'ಸ್ವಚ್ಛ ಸರ್ವೇಕ್ಷಣ್ 2023'ಯ ಪ್ರಮುಖ ಧ್ಯೇಯ. ಕಸವನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ, ಸಂಸ್ಕರಿಸಿ ಅದರಿಂದ ಬರುವ ಹಣವನ್ನು ನಗರಕ್ಕೇ ಬಳಕೆ ಮಾಡಿಕೊಳ್ಳುವುದು ಇದರ ಉದ್ದೇಶ. ತ್ಯಾಜ್ಯ ಸಂಗ್ರಹ, ಸಾಗಣೆಯಿಂದ ಸಂಸ್ಕರಣೆವರೆಗೆ ಈ ಬಾರಿ 4,525 ಅಂಕಗಳಿವೆ. ಹೀಗಾಗಿ, ಸ್ವಚ್ಛತೆಯೊಂದಿಗೆ ಕಸ ಸಂಗ್ರಹಿಸಿ, ದ್ರವತ್ಯಾಜ್ಯ ಇಲ್ಲದಂತೆ ಮಾಡಿ, ಕಾಂಪ್ಯಾಕ್ಟರ್ ಸಂಚಾರ ಕಡಿಮೆ ಮಾಡುವ 'ಮಿನಿ ಟ್ರಾನ್ಸ್‌ಫರ್' ಕೇಂದ್ರಗಳು ಅತಿ ಮುಖ್ಯ. ಇವುಗಳು ಇದ್ದೂ ಕಾರ್ಯಾಚರಣೆ ಮಾಡದಂತಾದರೆ ಸ್ವಚ್ಛ ಸರ್ವೇಕ್ಷಣ್ ಅಂಕಗಳ ಮೇಲೆ ಪರಿಣಾಮ ಬೀರಲಿದೆ ಎಂದು ಪರಿಸರ ಕಾರ್ಯಕರ್ತ ರಾಮ್‌ಪ್ರಸಾದ್ ಹೇಳಿದರು.

ಆರು ದಿನದಲ್ಲಿ ₹ 51.85 ಕೋಟಿ ದಂಡ ಸಂಗ್ರಹ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಶೇ 50ರಷ್ಟು ರಿಯಾಯಿತಿ ಘೋಷಿಸಿದ್ದು, ಬೆಂಗಳೂರಿನಲ್ಲಿ ಒಟ್ಟು ಆರು ದಿನಗಳಲ್ಲಿ 18.26 ಲಕ್ಷ ಪ್ರಕರಣಗಳಲ್ಲಿ ಒಟ್ಟು ₹ 51.85 ಕೋಟಿ ದಂಡ ಸಂಗ್ರಹವಾಗಿದೆ.

ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿದ್ದ ಪ್ರಸ್ತಾವ ಒಪ್ಪಿದ್ದ ಸರ್ಕಾರವು, ಸಂಚಾರ ನಿಯಮ ಉಲ್ಲಂಘನೆಯ ಇ–ಚಲನ್ ಪ್ರಕರಣಗಳ ದಂಡ ಪಾವತಿ ಮೇಲೆ ರಿಯಾಯಿತಿ ನೀಡಿ ಆದೇಶ ಹೊರಡಿಸಿತ್ತು. ಫೆ. 3ರಿಂದ ದಂಡ ಸಂಗ್ರಹ ಪ್ರಕ್ರಿಯೆ ಆರಂಭವಾಗಿದೆ. ಫೆ.8ರ ವೇಳೆಗೆ ಒಟ್ಟು ₹ 51,85,40,531 ದಂಡ ಸಂಗ್ರಹವಾಗಿದೆ.

ಬುಧವಾರ (ಫೆ.8) ಪಿಡಿಎ ಮೂಲಕ 1.59 ಲಕ್ಷ ಪ್ರಕರಣಗಳಲ್ಲಿ ₹ 4.36 ಕೋಟಿ, ಪೇಟಿಎಂ ಮೂಲಕ 1.20 ಲಕ್ಷ ಪ್ರಕರಣಗಳಲ್ಲಿ ₹ 3.59 ಕೋಟಿ, ಸಂಚಾರ ನಿರ್ವಹಣಾ ಕೇಂದ್ರ (ಟಿಎಂಸಿ) ಮೂಲಕ 365 ಪ್ರಕರಣಗಳಲ್ಲಿ ₹ 85,450, ಬೆಂಗಳೂರು ಒನ್ ಮೂಲಕ 42,710 ಪ್ರಕರಣಗಳಲ್ಲಿ ₹ 1.9 ಕೋಟಿ ದಂಡ ಸಂಗ್ರಹವಾಗಿದೆ. ಬುಧವಾರ ಒಟ್ಟು 3,23,629 ಪ್ರಕರಣಗಳಲ್ಲಿ ₹ 9 ಕೋಟಿಯಷ್ಟು ದಂಡ ಪಾವತಿಯಾಗಿದೆ.

ಸಾಲ ಮರುಪಾವತಿ ಗಲಾಟೆ: ಕೊಲೆ

ಬೆಂಗಳೂರು: ಬಾಣಸವಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬೈಕ್‌ನಲ್ಲಿ ತೆರಳುತ್ತಿದ್ದ ಫೈನಾನ್ಸಿಯರ್ ಚಿಕ್ಕಬಾಣಸವಾಡಿ ನಿವಾಸಿ ಶೇಖರ್ (29) ಎಂಬುವವರನ್ನು ದುಷ್ಕರ್ಮಿಗಳು ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾರೆ. ಮಂಗಳವಾರ ಮಧ್ಯರಾತ್ರಿ ಈ ಘಟನೆ ನಡೆದಿದೆ.

'ಆಟೊ ಹಾಗೂ ಕ್ಯಾಬ್ ಚಾಲಕ ವೃತ್ತಿಯ ಜತೆಗೆ ಶೇಖರ್ ಸಣ್ಣಪುಟ್ಟ ಫೈನಾನ್ಸ್ ವ್ಯವಹಾರ ಸಹ ನಡೆಸುತ್ತಿದ್ದ. ರಾತ್ರಿ ಬೈಕ್‌ನಲ್ಲಿ ತೆರಳುತ್ತಿದ್ದಾಗ ಮತ್ತೊಂದು ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ಶೇಖರ್‌ಗೆ ಥಳಿಸಿ, ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ರಾತ್ರಿ ಗಸ್ತಿನಲ್ಲಿದ್ದ ಹೊಯ್ಸಳ ಸಿಬ್ಬಂದಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಶೇಖರ್ ಅವರನ್ನು ಗಮನಿಸಿ, ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ. ಹಲ್ಲೆಯ ದೃಶ್ಯವು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ಪ್ರಕರಣ ಸಂಬಂಧ ಬಾಣಸವಾಡಿ ಪೊಲೀಸರು ಇಬ್ಬರನ್ನು ವಶಕ್ಕೆ ಪಡೆದುಕೊಂಡಿದ್ದು ವಿಚಾರಣೆ ನಡೆಸುತ್ತಿದ್ದಾರೆ.

ಬಂಧಿತ ಆರೋಪಿ ಜತೆಗೆ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿ

₹5 ಕೋಟಿ ಮೌಲ್ಯದ ತಿಮಿಂಗಿಲ ವಾಂತಿ ಜಪ್ತಿ

ಬೆಂಗಳೂರು: ಮಾರುಕಟ್ಟೆಯಲ್ಲಿ ಅಪಾರ ಬೆಲೆ ಹಾಗೂ ಬೇಡಿಕೆಯಿರುವ ತಿಮಿಂಗಿಲ ವಾಂತಿ (ಅಂಬರ್‌ಗ್ರೀಸ್) ಮಾರಾಟ ಮಾಡುತ್ತಿದ್ದ ತಮಿಳುನಾಡಿನ ದೆಂಕಣಿಕೋಟೆಯ ಮೆಹಬೂಬ ಬಾಷಾ (51) ಎಂಬ ಆರೋಪಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಬಂಧಿಸಿದ್ದಾರೆ.

ಅಪರಾಧ ನಿಯಂತ್ರಣ ಘಟಕ ಹಾಗೂ ಅರಣ್ಯ ಸಂಚಾರಿ ದಳದ ಸಿಬ್ಬಂದಿಯ ಜಂಟಿ ಕಾರ್ಯಾಚರಣೆಯಲ್ಲಿ ಆರೋಪಿ ಬಂಧಿಸಿ, 2.38 ಕೆ.ಜಿ. ತೂಕದ ತಿಮಿಂಗಿಲ ವಾಂತಿಯನ್ನು ಕರ್ನಾಟಕ–ತಮಿಳುನಾಡು ಗಡಿಭಾಗ ಆನೇಕಲ್‌ನಲ್ಲಿ ಬುಧವಾರ ಜಪ್ತಿ ಮಾಡಿಕೊಳ್ಳಲಾಗಿದೆ. ಇದರ ಅಂದಾಜು ಬೆಲೆ ₹ 5 ಕೋಟಿ ಇರಬಹುದು ಎಂದು ಮೂಲಗಳು ತಿಳಿಸಿವೆ.

'ತಿಮಿಂಗಿಲ ವಾಂತಿಯನ್ನು ಆನೇಕಲ್‌ಗೆ ಬರುವ ಮಧ್ಯವರ್ತಿಗೆ ತಲುಪಿಸಿ ಹಣ ಪಡೆದು ಬರುವಂತೆ ಆರೋಪಿ ಪುತ್ರ ಹೇಳಿ ಕಳುಹಿಸಿದ್ದ. ಅದರಂತೆ ಆನೇಕಲ್‌ಗೆ ಮೆಹಬೂಬ ಬಾಷಾ ಬಂದಿದ್ದರು' ಎಂದು ಮೂಲಗಳು ತಿಳಿಸಿವೆ.

ಕಾರ್ಯಾಚರಣೆಯಲ್ಲಿ ಡಿಸಿಎಫ್ ಭಾಸ್ಕರ್, ಡಿಆರ್‌ಎಫ್‌ಒಗಳಾದ ಎಚ್.ಆರ್.ಚಿದಾನಂದ್, ಟಿ.ಸಿದ್ದರಾಜು, ಅಮೃತ್ ಎ. ದೇಸಾಯಿ, ಜಿ.ಎಂ. ನಾಗರಾಜು ಹಾಗೂ ಸಿಬ್ಬಂದಿ ಅಶ್ವಿನ್ ಅವರು ಪಾಲ್ಗೊಂಡಿದ್ದರು.

ಸುಗಂಧ ದ್ರವ್ಯಕ್ಕೆ ಬಳಕೆ: ತಿಮಿಂಗಿಲ ವಾಂತಿಯನ್ನು 'ತೇಲಾಡುವ ಚಿನ್ನ' ಎಂದೇ ಕರೆಯಲಾಗುತ್ತಿದೆ. ಸುಗಂಧ ದ್ರವ್ಯ ಹಾಗೂ ಮಾದಕವಸ್ತು ತಯಾರಿಕೆಯಲ್ಲಿ ಇದನ್ನು ಬಳಸುತ್ತಾರೆ.

ಅಕ್ರಮ ವಾಸ: ಬಾಂಗ್ಲಾ ಪ್ರಜೆಗೆ ಜಾಮೀನು ನಿರಾಕರಣೆ

ಬೆಂಗಳೂರು: ಕಳೆದ 20 ವರ್ಷಗಳಿಂದ ಅಕ್ರಮವಾಗಿ ಭಾರತದಲ್ಲಿ ನೆಲೆಸಿರುವ ಆರೋಪದಡಿ ಬಂಧನದಲ್ಲಿರುವ ಬಾಂಗ್ಲಾ ದೇಶದ ಪ್ರಜೆ ಎನ್ನಲಾದ ಗುಜರಿ ಅಂಗಡಿ ಮಾಲೀಕರೊಬ್ಬರಿಗೆ ಜಾಮೀನು ಮಂಜೂರು ಮಾಡಲು ಹೈಕೋರ್ಟ್ ನಿರಾಕರಿಸಿದೆ.

ನಗರದಲ್ಲಿ ಗುಜರಿ ಅಂಗಡಿ ಹೊಂದಿದ್ದ ಸೈಯದುಲ್ ಅಖೋನ್ ಅಲಿಯಾಸ್ ಶಾಹಿದ್ ಅಹ್ಮದ್ (42) ಎಂಬುವವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ. ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

'ಅರ್ಜಿದಾರರ ವಿರುದ್ಧ ಗಂಭೀರ ಸ್ವರೂಪದ ಆರೋಪಗಳಿವೆ. ಇವು ದೇಶದ ಭದ್ರತೆಗೆ ಅಪಾಯ ಒಡ್ಡುವಂತಹ ಕೃತ್ಯಕ್ಕೆ ಸಂಬಂಧಿಸಿದ ಆರೋಪಗಳಾಗಿವೆ' ಎಂದು ಅರ್ಜಿ ವಜಾಕ್ಕೆ ಕಾರಣ ನೀಡಲಾಗಿದೆ.

'ಆರೋಪಿ ಉತ್ತರ ಪ್ರದೇಶದ ನಿವಾಸಿ ಎಂದು ಬಿಂಬಿಸಿ ಅದನ್ನು ಸಾಬೀತುಪಡಿಸುವ ಹಲವು ದಾಖಲೆಗಳನ್ನು ಆರೋಪಿಯ ಪರ ವಕೀಲರು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಆದರೆ, ಆರೋಪಿ ಬಾಂಗ್ಲಾದೇಶದ ಪ್ರಜೆಯಾಗಿದ್ದು, ಅಕ್ರಮವಾಗಿ ಭಾರತದೊಳಗೆ ನುಸುಳಿ, ಕಳೆದ 20 ವರ್ಷಗಳಿಂದ ಇಲ್ಲಿಯೇ ನೆಲೆಸಿದ್ದಾರೆ ಎನ್ನುವುದನ್ನು ತನಿಖಾಧಿಕಾರಿ ಸಲ್ಲಿಸಿರುವ ಆರೋಪಪಟ್ಟಿ ಬಹಿರಂಗಪಡಿಸಿದೆ. ಪ್ರಕರಣದ ಇನ್ನೂ ಹಲವು ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅರ್ಜಿದಾರ ಜಾಮೀನಿಗೆ ಅರ್ಹನಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ಭಾರತದಲ್ಲಿ ಅಕ್ರಮವಾಗಿ ನೆಲೆಸಿದ ಹಾಗೂ ನಕಲಿ ದಾಖಲೆಗಳನ್ನು ಸೃಷ್ಟಿಸಿದ ಆರೋಪದಲ್ಲಿ ಅರ್ಜಿದಾರರನ್ನು 2022ರ ಮೇ 23ರಂದು ಮಾದನಾಯಕನಹಳ್ಳಿ ಪೊಲೀಸರು ಬಂಧಿಸಿದ್ದರು.

ಆರೋಪಿಯ ವಿರುದ್ಧ ವಿದೇಶಿಯರ ಕಾಯ್ದೆ, ಮಾಹಿತಿ ತಂತ್ರಜ್ಞಾನ ಕಾಯ್ದೆ, ಪಾಸ್‌ಪೋರ್ಟ್ ಕಾಯ್ದೆ ಹಾಗೂ ಭಾರತೀಯ ದಂಡ ಸಂಹಿತೆಯ ವಿವಿಧ ಕಲಂಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ತನಿಖಾಧಿಕಾರಿಗಳು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿಯು ಜಾಮೀನು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಪ್ರಕರಣ ವಾಪಸ್ ಪಡೆಯಲು ಮನವಿ

ಬೆಂಗಳೂರು: ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ 10 ದಿನಗಳ ಕಾಲ ಅಂಗನವಾಡಿ ನೌಕರರ ಸಂಘಟನೆಯ ಮುಖಂಡರು ಶಾಂತಿಯುತ ಪ್ರತಿಭಟನೆ ನಡೆಸಿದ್ದು, ಅವರ ಮೇಲೆ ದಾಖಲಿಸಿರುವ ಪ್ರಕರಣ ಹಿಂದಕ್ಕೆ ಪಡೆಯಬೇಕು ಎಂದು ಕೋರಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮುಖಂಡರು ನಗರ ಪೊಲೀಸ್ ಕಮಿಷನರ್‌ಗೆ ಮನವಿ ಸಲ್ಲಿಸಿದ್ದಾರೆ.

ನೌಕರರ ಸಂಘವು ನ್ಯಾಯಯುತ ಬೇಡಿಕೆ ಈಡೇರಿಸುವಂತೆ ಹೋರಾಟ ನಡೆಸಿತ್ತು. ಸಾಂವಿಧಾನಿಕ ಹಕ್ಕಿನ ಭಾಗವಾಗಿ ಈ ಹೋರಾಟ ನಡೆದಿದ್ದರೂ ಪ್ರಕರಣ ದಾಖಲು ಮಾಡಲಾಗಿದೆ ಎಂದು ಸಂಘಟನೆ ದೂರಿದೆ.

ಸುಪ್ರೀಂ ಕೋರ್ಟ್‌ನ ಆದೇಶ ಜಾರಿ ಮಾಡದೇ ಕರ್ತವ್ಯಲೋಪ ಎಸಗಿದ್ದ ಸರ್ಕಾರವು ಪ್ರತಿಭಟನೆಯ ನಂತರವಷ್ಟೇ ಅದನ್ನು ಮಾನ್ಯ ಮಾಡಲು ಒಪ್ಪಿತ್ತು' ಎಂದು ಸಂಘಟನೆ ಪ್ರಧಾನ ಕಾರ್ಯದರ್ಶಿ ದೇವಿ ಹೇಳಿದ್ದಾರೆ. ಪ್ರತಿಭಟನೆಗೆ ಮಣಿದು ಸರ್ಕಾರ, ಬೇಡಿಕೆ ಈಡೇರಿಸುವ ಆದೇಶ ನೀಡಿದೆ. ನೌಕರರ ಸಂಘದ ಮುಖ್ಯ ಪದಾಧಿಕಾರಿಗಳ ಮೇಲೆ ಇತ್ತ ಪೊಲೀಸರು ಎಫ್.ಐ.ಆರ್ ಹಾಕಿದ್ದಾರೆ. ಅವರನ್ನು ಅಪರಾಧಿಗಳಂತೆ ಬಿಂಬಿಸುವ ಅಗತ್ಯವೇನಿತ್ತು ಎಂದಿದ್ದಾರೆ.

ರಸ್ತೆಯಲ್ಲಿ ಯುವತಿಯ ಮೇಲೆ ಲೈಂಗಿಕ ದೌರ್ಜನ್ಯ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದ ಕುಮಾರಸ್ವಾಮಿ ಲೇಔಟ್‌ನ ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಯುವತಿ ಮೇಲೆ ಮಂಗಳವಾರ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಕೇಳಿಬಂದಿದೆ. ಕುಮಾರಸ್ವಾಮಿ ಲೇಔಟ್‌ನ 4ನೇ ಕ್ರಾಸ್‌ನಲ್ಲಿ ಈ ಘಟನೆ ನಡೆದಿದೆ ಎನ್ನಲಾಗಿದೆ.

'ಆರೋಪಿಗಳು ಯುವತಿಯ ಕೈಹಿಡಿದು ಎಳೆದಿದ್ದಾರೆ. ಆಕೆಯ ಕೈಯನ್ನು ಕಚ್ಚಿ ವಿಕೃತಿ ಮೆರೆದಿದ್ದಾರೆ. ಅಲ್ಲಿಂದ ಆಕೆಯನ್ನು ಎಳೆದೊಯ್ಯಲು ಮುಂದಾಗಿದ್ದ ವೇಳೆ ಸ್ಥಳಕ್ಕೆ ಬಂದ ಬೈಕ್ ಸವಾರನೊಬ್ಬ ಯುವತಿ ರಕ್ಷಿಸಿದ್ದಾನೆ. ಘಟನೆಯಿಂದ ಆತಂಕಕ್ಕೆ ಒಳಗಾಗಿರುವ ಯುವತಿ ಪೊಲೀಸರಿಗೆ ದೂರು ನೀಡಿಲ್ಲ' ಎನ್ನಲಾಗಿದೆ.

'ಆ ರೀತಿಯ ಘಟನೆಯ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಈ ಮಾರ್ಗದಲ್ಲಿರುವ ಸಿ.ಸಿ. ಟಿ.ವಿ ಕ್ಯಾಮೆರಾ ಪರಿಶೀಲಿಸಲಾಗುತ್ತಿದೆ. ಯುವತಿ ಪತ್ತೆಯಾದರೆ ಹೇಳಿಕೆ ಪಡೆದು ನಾವೇ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳುತ್ತೇವೆ. ಆ ಯುವತಿ ಇನ್ನೂ ಪತ್ತೆಯಾಗಿಲ್ಲ. ಘಟನೆ ನಡೆದಿರುವ ಕುರಿತು ಸ್ಪಷ್ಟವಾಗಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಯುವತಿಗೆ ಸಂದೇಶ: ಯುವಕನಿಗೆ ಹಲ್ಲೆ

ಬೆಂಗಳೂರು: ಯುವತಿಗೆ ಮೊಬೈಲ್‌ನಲ್ಲಿ ಸಂದೇಶ ಕಳುಹಿಸಿದ್ದಕ್ಕೆ ಆಕೆಯ ಸಹೋದರ ಯುವಕನೊಬ್ಬನಿಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾನೆ.

ಗೋವಿಂದರಾಜನಗರದ ಪಿ.ಜಿಯಲ್ಲಿ ನೆಲೆಸಿರುವ ಸಿದ್ಧಾರ್ಥ್ ಹಲ್ಲೆಗೆ ಒಳಗಾಗಿರುವ ಟೆಕ್ಕಿ. ಚೇತನ್ ಮತ್ತು ಆತನ ಸಹಚರರು ಈ ಕೃತ್ಯ ಎಸಗಿದ್ದಾರೆ. ಘಟನೆ ಫೆ.5ರಂದು ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಸಿದ್ಧಾರ್ಥ ಪಿಜಿಯಲ್ಲಿ ನೆಲೆಸಿದ್ದರು. ಒಂದು ವರ್ಷದ ಹಿಂದೆ ಇನ್‌ಸ್ಟಾಗ್ರಾಂನಲ್ಲಿ ಯುವತಿಯ ಪರಿಚಯವಾಗಿತ್ತು. ಇಬ್ಬರೂ ಚಾಟಿಂಗ್ ಮಾಡುತ್ತಿದ್ದರು. ಈ ವಿಷಯ ಆಕೆಯ ಅಣ್ಣನಿಗೆ ಗೊತ್ತಾಗಿ ಆಕೆಯ ಮೊಬೈಲ್‌ನಿಂದ ಬೇರೆಯ ರೀತಿಯಲ್ಲಿ ಸಂದೇಶ ಕಳುಹಿಸಿದ್ದ. ಇದರಿಂದ ಅನುಮಾನಗೊಂಡ ಸಿದ್ಧಾರ್ಥ್ ಕರೆ ಮಾಡಿದಾಗ ಆಕೆಯ ಅಣ್ಣನೆಂದು ತಿಳಿದುಬಂದಿತ್ತು. ನಂತರ, ಇಬ್ಬರ ನಡುವೆ ವಾಗ್ವಾದ ನಡೆದಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

ನಿನ್ನೊಂದಿಗೆ ಮಾತನಾಡಬೇಕು' ಎಂದು ಪಿಜಿ ಬಳಿಗೆ ಬಂದಿದ್ದ ಆರೋಪಿಗಳು ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ. ಗೋವಿಂದರಾಜ ನಗರ ಠಾಣೆಗೆ ದೂರು ನೀಡಿದ್ದು ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಬೈಕ್ ಕಳವು: ಸೆರೆ

ಬೆಂಗಳೂರು: ಬ್ಯಾಡರಹಳ್ಳಿ, ಚಂದ್ರಾ ಲೇಔಟ್ ಪೊಲೀಸ್ ಠಾಣೆ ವ್ಯಾಪ್ತಿಯ ಬಡಾವಣೆ ಸೇರಿ ನಗರದ ಹಲವು ಸ್ಥಳಗಳಲ್ಲಿ ಬೈಕ್ ಕಳವು ಮಾಡಿದ್ದ ಮೂವರು ಆರೋಪಿಗಳನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ.

ಮಹಾಲಕ್ಷ್ಮಿ ಲೇಔಟ್‌ನ ಕುರುಬರಹಳ್ಳಿಯ ಹಿತೇಶ್‌ಕುಮಾರ್ (19), ಅದೇ ಲೇಔಟ್‌ನ ಯಶೋದಾ ಬ್ಲಾಕ್‌ನ ವಿನೋದ್ (21) ಹಾಗೂ ನಾಗದೇವಹಳ್ಳಿ ಜಗಜ್ಯೋತಿ ಲೇಔಟ್‌ನ ವಿಷ್ಣುವರ್ಧನ್ (20) ಎಂಬ ಆರೋಪಿಗಳನ್ನು ಬಂಧಿಸಲಾಗಿದೆ. 'ಬಂಧಿತರಿಂದ ₹ 1.50 ಲಕ್ಷ ಮೌಲ್ಯದ ಎರಡು ಬೈಕ್ ಹಾಗೂ 6 ಮೊಬೈಲ್ ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಸನ್ಮಾನ್ಯ ಮುಖ್ಯಮಂತ್ರಿ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ರವರಿಂದ

ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ
ಸುರಂಜನ್‌ದಾಸ್ ಜಂಕ್ಷನ್ ಬಳಿಯ
"ಕೆಳಸೇತುವೆ"ಯ ಲೋಕಾರ್ಪಣೆ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ
ಕುಂದಲಹಳ್ಳಿ ಜಂಕ್ಷನ್ ಬಳಿಯ
"ಕೆಳಸೇತುವೆ" ಪರಿವೀಕ್ಷಣೆ

ಕಾಮಗಾರಿಯ ಅಂದಾಜು ಮೊತ್ತ: 19.50 ಕೋಟಿ ರೂ.ಗಳು
ಕೆಳಸೇತುವೆಯ ಉದ್ದ: 281.47 ಮೀಟರ್ । ನಾಲ್ಕು ಲೇನ್‌ಗಳ ದ್ವಿಮುಖ ಸಂಚಾರ

ಕಾಮಗಾರಿಯ ಅಂದಾಜು ಮೊತ್ತ : 19 ಕೋಟಿ ರೂ.ಗಳು
ಕೆಳಸೇತುವೆಯ ಉದ್ದ : 267.26 ಮೀಟರ್ । ನಾಲ್ಕು ಲೇನ್‌ಗಳ ದ್ವಿಮುಖ ಸಂಚಾರ

ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ
ಮಾರತಹಳ್ಳಿ ಜಂಕ್ಷನ್ ಬಳಿಯ
"ಕೆಳಸೇತುವೆ" ಪರಿವೀಕ್ಷಣೆ

ಕಾಮಗಾರಿಯ ಅಂದಾಜು ಮೊತ್ತ: 6.00 ಕೋಟಿ ರೂ.ಗಳು
ಕೆಳಸೇತುವೆಯ ಉದ್ದ: 24 ಮೀಟರ್

ದಿನಾಂಕ: 09.02.2023 ಗುರುವಾರ, ಬೆಳಿಗ್ಗೆ 11.30 ಗಂಟೆಗೆ । ಸ್ಥಳ: ಸುರಂಜನ್‌ದಾಸ್ ಜಂಕ್ಷನ್, ಹೆಚ್.ಎ.ಎಲ್. ವಿಮಾನ ನಿಲ್ದಾಣ ವಾರ್ಡ್, ಕೆ.ಆರ್.ಪುರಂ, ಬೆಂಗಳೂರು

ಗೌರವ ಉಪಸ್ಥಿತಿ
ಶ್ರೀಮತಿ ನಿರ್ಮಲಾ ಸೀತಾರಾಮನ್ – ಮಾನ್ಯ ಹಣಕಾಸು ಹಾಗೂ ಕಾರ್ಪೋರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಎಂ. ರಾಜೀವ್ ಚಂದ್ರಶೇಖರ್ – ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ

ಅಧ್ಯಕ್ಷತೆ
ಶ್ರೀ ಬಿ.ಎ. ಬಸವರಾಜ – ಮಾನ್ಯ ನಗರಾಭಿವೃದ್ಧಿ ಸಚಿವರು ಹಾಗೂ ಶಾಸಕರು, ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರ

ಘನ ಉಪಸ್ಥಿತಿ
ಶ್ರೀ ಡಿ.ವಿ. ಸದಾನಂದ ಗೌಡ – ಮಾನ್ಯ ಸಂಸದರು, ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ,

ಮುಖ್ಯ ಅತಿಥಿಗಳು
ಶ್ರೀ ಆರ್. ಅಶೋಕ – ಮಾನ್ಯ ಕಂದಾಯ ಸಚಿವರು
ಶ್ರೀ ವಿ. ಸೋಮಣ್ಣ – ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು
ಡಾ॥ ಸಿ.ಎನ್. ಅಶ್ವತ್ಥ ನಾರಾಯಣ – ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು
ಶ್ರೀ ಎಸ್.ಟಿ. ಸೋಮಶೇಖರ್ – ಮಾನ್ಯ ಸಹಕಾರ ಸಚಿವರು
ಶ್ರೀ ಕೆ. ಗೋಪಾಲಯ್ಯ – ಮಾನ್ಯ ಅಬಕಾರಿ ಸಚಿವರು
ಶ್ರೀ ಎನ್. ನಾಗರಾಜು (ಎಂ.ಟಿ.ಬಿ) – ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಸಚಿವರು
ಶ್ರೀ ಎನ್. ಮುನಿರತ್ನ – ಮಾನ್ಯ ತೋಟಗಾರಿಕೆ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಶ್ರೀ ಎಂ. ಸತೀಶ್ ರೆಡ್ಡಿ – ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು, ವಿಧಾನಸಭೆ ಹಾಗೂ ಶಾಸಕರು, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ
ಶ್ರೀ ಬಿ.ಕೆ. ಹರಿಪ್ರಸಾದ್ – ಮಾನ್ಯ ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ ಹಾಗೂ ಶಾಸಕರು (ವಿಧಾನ ಪರಿಷತ್)
ಡಾ॥ ವೈ.ಎ. ನಾರಾಯಣ ಸ್ವಾಮಿ – ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು, ವಿಧಾನ ಪರಿಷತ್ ಹಾಗೂ ಶಾಸಕರು (ವಿಧಾನಪರಿಷತ್)
ಶ್ರೀ ಎಸ್.ಆರ್. ವಿಶ್ವನಾಥ್ – ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ
ಶ್ರೀ ಎಂ. ಕೃಷ್ಣಪ್ಪ – ಮಾನ್ಯ ಅಧ್ಯಕ್ಷರು, ಒಕ್ಕಲಿಗರ ಅಭಿವೃದ್ಧಿ ನಿಗಮ ಹಾಗೂ ಶಾಸಕರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ಶ್ರೀ ಪಿ.ಸಿ. ಮೋಹನ್ – ಮಾನ್ಯ ಸಂಸದರು, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ,
ಶ್ರೀ ಜೈರಾಮ್ ರಮೇಶ್ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜಗ್ಗೇಶ್ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಲೇಹರ್ ಸಿಂಗ್ ಸಿರೋಯಾ – ಮಾನ್ಯ ಸಂಸದರು (ರಾಜ್ಯಸಭೆ)
ಡಾ॥ ಎಲ್. ಹನುಮಂತಯ್ಯ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜಿ.ಸಿ. ಚಂದ್ರಶೇಖರ್ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ನಾರಾಯಣ ಕೊರಗಪ್ಪ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಅರವಿಂದ ಲಿಂಬಾವಳಿ – ಮಾನ್ಯ ಶಾಸಕರು, ಮಹದೇವಪುರ ವಿಧಾನಸಭಾ ಕ್ಷೇತ್ರ
ಶ್ರೀ ಪುಟ್ಟಣ್ಣ – ಮಾನ್ಯ ಶಾಸಕರು (ವಿಧಾನ ಪರಿಷತ್) ಶಿಕ್ಷಕರ ಕ್ಷೇತ್ರ (ಬೆಂಗಳೂರು ನಗರ)
ಶ್ರೀ ಟಿ.ಎ. ಶರವಣ – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಅ. ದೇವೇಗೌಡ – ಮಾನ್ಯ ಶಾಸಕರು (ವಿಧಾನ ಪರಿಷತ್) ಪದವೀಧರರ ಕ್ಷೇತ್ರ (ಬೆಂಗಳೂರು ನಗರ)
ಶ್ರೀ ಮುನಿರಾಜು ಗೌಡ .ಪಿ.ಎಂ (ತುಳಸಿ) – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಹೆಚ್.ಎಸ್. ಗೋಪಿನಾಥ ರೆಡ್ಡಿ – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಎಂ. ನಾಗರಾಜು – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಎಸ್. ಕೇಶವ ಪ್ರಸಾದ್ – ಮಾನ್ಯ ಶಾಸಕರು (ವಿಧಾನ ಪರಿಷತ್)

ನಗರದ ಎಲ್ಲಾ ಮಾನ್ಯ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಹಾಗೂ ಸರ್ವರಿಗೂ ಆದರದ ಸ್ವಾಗತ

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ರಾಕೇಶ್ ಸಿಂಗ್, ಭಾ.ಆ.ಸೇ – ಆಡಳಿತಗಾರರು, ಬಿಬಿಎಂಪಿ
ತುಷಾರ್ ಗಿರಿ ನಾಥ್, ಭಾ.ಆ.ಸೇ – ಮುಖ್ಯ ಆಯುಕ್ತರು, ಬಿಬಿಎಂಪಿ
ಡಾ॥ ಕೆ.ವಿ. ತ್ರಿಲೋಕ ಚಂದ್ರ, ಭಾ.ಆ.ಸೇ – ವಲಯ ಆಯುಕ್ತರು, ಮಹದೇವಪುರ ವಲಯ, ಬಿಬಿಎಂಪಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್. ಚೌಕ, ಬೆಂಗಳೂರು-560 002

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಆರ್ಟ್‌ಪಾರ್ಕ್ (ARTPARK)

ಐಎಎಸ್, ಕೆಎಸ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾಗುವ ಪ್ರಚಲಿತ ವಿದ್ಯಮಾನ 'ಕೃತಕಬುದ್ಧಿ ಮತ್ತೆ ಮತ್ತು ರೊಬೊಟಿಕ್ ತಂತ್ರಜ್ಞಾನ ಪಾರ್ಕ್' ಕುರಿತ ವಿವರ ಇಲ್ಲಿದೆ.

ಕೆ.ಪಿ.ಗುರುಶಂಕರ್

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಕೃತಕ ಬುದ್ಧಿಮತ್ತೆ (ಎಐ) ಮತ್ತು ರೊಬೊಟಿಕ್ಸ್ ತಂತ್ರಜ್ಞಾನ ಉದ್ಯಾನ (ARTPARK) ಸಂಸ್ಥೆ ಪ್ರಾರಂಭಿಸಿದೆ. ಆರೋಗ್ಯ, ಶಿಕ್ಷಣ, ಸಂಚಾರ, ಮೂಲಸೌಕರ್ಯಗಳು, ಕೃಷಿ, ಚಿಲ್ಲರೆ ವ್ಯಾಪಾರ, ಸೈಬರ್ ಅಪರಾಧದಂತಹ ವಲಯಗಳಲ್ಲಿ ಕೃತಕ ಬುದ್ಧಿಮತ್ತೆ ಮತ್ತು ರೋಬೋಟಿಕ್ ತಂತ್ರಜ್ಞಾನದ ಬಳಕೆಗೆ ಸಂಬಂಧಿಸಿದಂತೆ ನೂತನ ಸಂಶೋಧನಾ ಕಾರ್ಯಗಳನ್ನು ಉತ್ತೇಜಿಸಲು ಈ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ(ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್) ಆವರಣದಲ್ಲಿ ಈ ಆರ್ಟ್‌ಪಾರ್ಕ್ (ARTPARK- Artificial Intelligence and Robotics Technology Park) ಸ್ಥಾಪಿಸಲಾಗಿದ್ದು, ಇದು ಸಾರ್ವಜನಿಕ-ಖಾಸಗಿ ಪಾಲುದಾರಿಕೆ (ಪಿಪಿಪಿ ಮಾಡೆಲ್) ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತದೆ.

ಪ್ರಚಲಿತ

- ಪ್ರಾಥಮಿಕ ಹಂತದ ಹೂಡಿಕೆಯಾಗಿ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ ತಂತ್ರಜ್ಞಾನ ವಲಯದ ಸಂಶೋಧನಾ ಚಟುವಟಿಕೆಗಳಿಗೆ ₹170 ಕೋಟಿ ಹಣ ಮೀಸಲಿಟ್ಟಿದೆ.
- ಪ್ರಸ್ತುತ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ 'ನ್ಯಾಷನಲ್ ಮಿಷನ್ ಆನ್ ಇಂಟರ್ ಡಿಸಿಪ್ಲಿನರಿ ಸೈಬರ್ ಫಿಸಿಕಲ್ ಸಿಸ್ಟಮ್ಸ್'(National Mission on Interdisciplinary Cyber Physical Systems- NM-ICPS) ಎನ್ನುವ ಯೋಜನೆಯನ್ನು ಹಮ್ಮಿಕೊಂಡಿದೆ. ಇದರ ಅಡಿಯಲ್ಲಿ ಕೈಗಾರಿಕಾ ವಲಯದ ಪರಿಣತರು, ಶಿಕ್ಷಣ ವಲಯದ ಪರಿಣತರು ಮತ್ತು ಸರ್ಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪರಿಣತರು ಸಮನ್ವಯತೆಯಿಂದ ಕಾರ್ಯನಿರ್ವಹಿಸಲು ಯೋಜನೆ ರೂಪಿಸಲಾಗಿದೆ.

ಐಐಎಸ್‌ಸಿ–ಆರ್ಟ್‌ಪಾರ್ಕ್

- ಸಂಸ್ಥೆಯ ಸ್ಥಾಪನೆಯಾಗಿದ್ದು 2020ರಲ್ಲಿ.
- ಸಂಸ್ಥೆಯ ಮುಖ್ಯ ಕಚೇರಿ ಬೆಂಗಳೂರಿನಲ್ಲಿ ಐಐಎಸ್‌ಸಿಯಲ್ಲಿದೆ.
- ಮುಖ್ಯ ಕಾರ್ಯನಿರ್ವಾಹಕರು– ಉಮಾಕಾಂತ್ ಸೋನಿ.

- ಈ ಆರ್ಟ್‌ಪಾರ್ಕ್‌ನಲ್ಲಿ ಕೃತಕ ಬುದ್ಧಿಮತ್ತೆ ಮತ್ತು ರೋಬೋಟಿಕ್ ಸೌಲಭ್ಯ ಅಭಿವೃದ್ಧಿಪಡಿಸುವುದಲ್ಲದೆ, ಎಐ–ರೊಬೊಟಿಕ್ ತಂತ್ರಜ್ಞಾನ ವಲಯಗಳಲ್ಲಿ ವಿದ್ಯಾರ್ಥಿಗಳಿಗೆ ಮತ್ತು ವೃತ್ತಿಪರರಿಗೆ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮತ್ತು ನೂತನ ಕೌಶಲಗಳ ತರಬೇತಿಯನ್ನೂ ಕಲ್ಪಿಸುತ್ತದೆ.
- ಈಗಾಗಲೇ ಈ ಸಂಸ್ಥೆಯು 'ಭಾಷಾ ಸೇತು' ಎನ್ನುವ ಕೃತಕ ತಂತ್ರಜ್ಞಾನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದೆ. ಈ ವ್ಯವಸ್ಥೆಯಲ್ಲಿ ಭಾರತದ ಯಾವುದೇ ಭಾಷೆಯನ್ನು ಲಿಪಿಯ ಸ್ವರೂಪಕ್ಕೆ ಪರಿವರ್ತಿಸಬಹುದಾಗಿದೆ. ಭಾಷಾ ಸೇತು ಸೇವೆಯ ಪ್ರಮುಖ ಉದ್ದೇಶವೇನೆಂದರೆ ಭಾಷೆಯ ಅಡೆತಡೆಯಿಲ್ಲದೆ ಭಾರತದ ಎಲ್ಲಾ ಪ್ರಜೆಗಳು ಸಮನಾಂತರವಾಗಿ ಆರ್ಥಿಕ ಪ್ರಗತಿಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ವೇದಿಕೆ ಕಲ್ಪಿಸಲಾಗಿದೆ.
- ಪ್ರಸ್ತುತ ವರ್ಷ ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ ತಂತ್ರಜ್ಞಾನ ಉದ್ಯಾನ, 'ಸಂಪರ್ಕವಿಲ್ಲದವರಿಗೆ ಸಂಪರ್ಕ ಕಲ್ಪಿಸುವುದು' (Connecting the Unconnected) ಎನ್ನುವ ಧ್ಯೇಯ ವಾಕ್ಯದ ಅಡಿಯಲ್ಲಿ ಸೃಜನಶೀಲ ಸಮಾವೇಶ ಆಯೋಜಿಸಿತ್ತು. ಈ ಸಮಾವೇಶದಲ್ಲಿ ಸೃಜನಶೀಲ ಪ್ರಯೋಗಾಲಯವನ್ನು ಉದ್ಘಾಟಿಸಲಾಯಿತು.

EXAM DH ಪ್ರಜಾವಾಣಿ MASTERMIND™

ಮತ್ತಷ್ಟು ಮಾಹಿತಿಗಾಗಿ

ಆರ್ಟ್‌ಪಾರ್ಕ್ (ARTPARK- Artificial Intelligence and Robotics Technology Park) ಕುರಿತ ವಿಸ್ತೃತ ಮಾಹಿತಿ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಅಗತ್ಯವಾದ ಇಂಥ ಪ್ರಚಲಿತ ವಿದ್ಯಮಾನಗಳು ಕುರಿತ ಮಾಹಿತಿ ಹಾಗೂ ವಿಡಿಯೊಗಳಿಗಾಗಿ 'ಪ್ರಜಾವಾಣಿ – ಡೆಕ್ಕನ್‌ಹೆರಾಲ್ಡ್' ಪತ್ರಿಕೆಯ 'ಮಾಸ್ಟರ್ ಮೈಂಡ್' ಇ–ಪತ್ರಿಕೆಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

www.exammastermind.com

ಸಿಎಪಿಎಫ್‌ನಲ್ಲಿ ಮೆಡಿಕಲ್ ಆಫೀಸರ್ಸ್ ಹುದ್ದೆಗಳು

ಮಂಜುನಾಥ್ ಭದ್ರಶೆಟ್ಟಿ

ಕೇಂದ್ರ ಗೃಹ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯಲ್ಲಿ (CAPF) ಅಂದರೆ ಸಿಆರ್‌ಪಿಎಫ್, ಬಿಎಸ್‌ಎಫ್, ಐಟಿಬಿಪಿ, ಎಸ್‌ಎಸ್‌ಬಿ, ಅಸ್ಸಾಂ ರೈಫಲ್ಸ್ ನಲ್ಲಿ 'ಗ್ರೂಪ್ ಎ' ವೃಂದದ ಮೆಡಿಕಲ್ ಆಫೀಸರ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಅಧಿಸೂಚನೆ ಹೊರಡಿಸಲಾಗಿದೆ.

ಒಟ್ಟು 297 ಮೆಡಿಕಲ್ ಆಫೀಸರ್ಸ್ ಹುದ್ದೆಗಳನ್ನು (ಪುರುಷ ಮತ್ತು ಮಹಿಳೆ) ಇಂಡೊ ಟಿಬೆಟಿಯನ್ ಬಾರ್ಡರ್ ಪೊಲೀಸ್ ಪೋರ್ಸ್ (ITBP) ಘಟಕದಿಂದ ನೇಮಕ ಮಾಡಿಕೊಳ್ಳಲಾಗುತ್ತಿದೆ. ಫೆಬ್ರವರಿ 15 ರಿಂದ ಆನ್‌ಲೈನ್ ಅರ್ಜಿ ಸಲ್ಲಿಕೆ ಪ್ರಾರಂಭವಾಗಲಿದ್ದು ಮಾರ್ಚ್ 16 ಕೊನೆಯ ದಿನವಾಗಿದೆ. www.recruitment.itbpolice.nic.in ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಕೆ ಶುಲ್ಕ ₹400. ಮಹಿಳೆ, ಎಸ್‌ಸಿ/ಎಸ್‌ಟಿ ಒಬಿಸಿ ಅಭ್ಯರ್ಥಿಗಳಿಗೆ ಶುಲ್ಕದಲ್ಲಿ ವಿನಾಯಿತಿ ಇದೆ.

ಹುದ್ದೆಗಳ ವರ್ಗೀಕರಣ, ವೇತನ

- ಸೂಪರ್ ಸ್ಪೆಷಲಿಸ್ಟ್ ಮೆಡಿಕಲ್ ಆಫೀಸರ್ಸ್ 5 ಹುದ್ದೆಗಳು, ಸೆಕೆಂಡ್ ಇನ್ ಕಮಾಂಡ್ ಶ್ರೇಣಿ, ವೇತನ ₹2.9 ಲಕ್ಷ.
- ಸ್ಪೆಷಲಿಸ್ಟ್ ಮೆಡಿಕಲ್ ಆಫೀಸರ್ಸ್ 185 ಹುದ್ದೆಗಳು, ಡೆಪ್ಯೂಟಿ ಕಮಾಂಡ್ ಶ್ರೇಣಿ, ವೇತನ ₹2.8 ಲಕ್ಷ.
- ಮೆಡಿಕಲ್ ಆಫೀಸರ್ಸ್ 107 ಹುದ್ದೆಗಳು, ಅಸಿಸ್ಟಂಟ್ ಕಮಾಂಡಂಟ್ ಶ್ರೇಣಿ, ವೇತನ ₹1.77 ಲಕ್ಷ.

ವಿದ್ಯಾರ್ಹತೆ

ಮಾನ್ಯತೆ ಪಡೆದ ವೈದ್ಯಕೀಯ ವಿಶ್ವವಿದ್ಯಾಲಯದಿಂದ ಎಂಬಿಬಿಎಸ್ ಪದವಿ ಅಥವಾ ತತ್ಸಮಾನ ಪದವಿ ಪಡೆದಿರಬೇಕು. ಯಾವುದೇ ಸ್ಟೇಟ್ ಮೆಡಿಕಲ್ ರಿಜಿಸ್ಟರ್‌ನಲ್ಲಿ ನೋಂದಣಿಯಾಗಿರಬೇಕು. ಕಡ್ಡಾಯವಾಗಿ ಇಂಟರ್ನ್‌ಷಿಪ್ ಮುಗಿಸಿರಬೇಕು. ಜೊತೆಗೆ, ಆಯಾ ವಿಭಾಗದ ಹುದ್ದೆಗಳಿಗೆ ಅನುಗುಣವಾಗಿ ತಜ್ಞತೆಗೆ ಸಂಬಂಧಿಸಿದ ಪದವಿ, ಕೋರ್ಸ್‌ಗಳನ್ನು ಪೂರ್ಣಗೊಳಿಸಿರಬೇಕು. ವಿದ್ಯಾರ್ಹತೆ ಕುರಿತ ಹೆಚ್ಚಿನ ವಿವರಕ್ಕೆ ಅಧಿಸೂಚನೆಯನ್ನು ನೋಡಬಹುದು.

ವಯೋಮಿತಿ

ಸೂಪರ್ ಸ್ಪೆಷಲಿಸ್ಟ್ ಮೆಡಿಕಲ್ ಆಫೀಸರ್ಸ್ ಹುದ್ದೆಗಳಿಗೆ 50 ವರ್ಷ ಮೀರಿರಬಾರದು, ಸ್ಪೆಷಲಿಸ್ಟ್ ಮೆಡಿಕಲ್ ಆಫೀಸರ್ಸ್ ಹುದ್ದೆಗೆ 40 ವರ್ಷ ಮತ್ತು ಮೆಡಿಕಲ್ ಆಫೀಸರ್ಸ್ ಹುದ್ದೆಗಳಿಗೆ 30 ವರ್ಷ ಮೀರಿರಬಾರದು.

ನೇಮಕಾತಿ ವಿಧಾನ

ಈ ನೇಮಕಾತಿ ವಿಧಾನವು ನಾಲ್ಕು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತದಲ್ಲಿ ದಾಖಲಾತಿ ಪರಿಶೀಲನೆ ನಡೆಯಲಿದೆ. ನಂತರ ಸಂದರ್ಶನವಿರಲಿದೆ. ಸಂದರ್ಶನ ಪಾಸಾದ ಅಭ್ಯರ್ಥಿಗಳಿಗೆ ದೈಹಿಕ ಸಹಿಷ್ಣುತೆ ಹಾಗೂ ದೇಹ ದಾರ್ಢ್ಯತೆ ಪರೀಕ್ಷೆ ಇರಲಿದೆ. ಬಳಿಕ ಮೆಡಿಕಲ್ ಟೆಸ್ಟ್ ಇರಲಿದೆ. ಅಭ್ಯರ್ಥಿಗಳು ದೈಹಿಕ ಹಾಗೂ ಮೆಡಿಕಲ್ ಪರೀಕ್ಷೆಗಳ ಅರ್ಹತಾ ಮಾನದಂಡಗಳಿಗೆ ಅಧಿಸೂಚನೆ ಪರಿಶೀಲಿಸಬೇಕು.

ಈ ನಾಲ್ಕು ಹಂತಗಳಲ್ಲಿ ಯಶಸ್ವಿಯಾಗುವ ಅಭ್ಯರ್ಥಿಗಳು 2 ವರ್ಷ ಪ್ರೊಬೆಷನರಿ ಅವಧಿ ಪೂರ್ಣಗೊಳಿಸಬೇಕು. ಅಲ್ಲದೇ ಸಿಎಪಿಎಫ್‌ನ ಯಾವುದೇ ವಿಭಾಗಗಳಲ್ಲಿ, ದೇಶದ ಯಾವುದೇ ವಿಭಾಗದಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ. ಅಲ್ಲದೇ ಸಂದರ್ಭಕ್ಕನುಗುಣವಾಗಿ ವಿದೇಶಗಳಲ್ಲೂ ಕಾರ್ಯನಿರ್ವಹಿಸಬೇಕಾಗುತ್ತದೆ.

ಇನ್ನೊಂದು ಅಂಶವೆಂದರೆ ಅಭ್ಯರ್ಥಿಗಳು ತಮಗೆ ಬೇಕಾದ ಪಡೆಯನ್ನು ಅಂದರೆ CRPF, BSF, ITBP, SSB ಮತ್ತು Assam Rifles ಆಯ್ಕೆ ಮಾಡಿಕೊಳ್ಳಲು ಅವಕಾಶ ಇದೆ. ಸೂಪರ್ ಸ್ಪೆಷಲಿಸ್ಟ್ ಮೆಡಿಕಲ್ ಆಫೀಸರ್ಸ್ ಹುದ್ದೆಗಳು ಐಟಿಬಿಪಿಯಲ್ಲಿ ಮಾತ್ರ ಇವೆ.

ಮಾದರಿ ಪ್ರಶ್ನೋತ್ತರ

ಐಎಎಸ್, ಕೆಎಎಸ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಹುದ್ದೆಗಳಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1) ಇನ್‌ಕೋವಾಕ್ (INCOVACC) ಏನಿದು?

ಎ) ಮೂಗಿನ ಮೂಲಕ ನೀಡುವ ವಿಶ್ವದ ಮೊದಲ ಕೋವಿಡ್ ಲಸಿಕೆ

ಬಿ) ಜಾನುವಾರುಗಳಲ್ಲಿನ ಕಾಲು ಬಾಯಿ ಮತ್ತು ಚರ್ಮಗಂಟು ರೋಗ ತಡೆಗೆ ಕಂಡು ಹಿಡಿಯಲಾದ ಹೊಸ ಲಸಿಕೆ

ಸಿ) ಕಣ್ಣು ಬೇನೆ ತಡೆಗೆ ಕಂಡು ಹಿಡಿಯಲಾದ ಹೊಸರೀತಿಯ ಲಸಿಕೆ

ಡಿ) ಮೇಲಿನ ಯಾವ ಕಾರಣಕ್ಕಾಗಿಯೂ ಅಲ್ಲ

ಉತ್ತರ: ಎ

2) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಏಷ್ಯಾದಲ್ಲಿ ಇದೇ ಮೊದಲಬಾರಿಗೆ ಹೈಡ್ರೋಜನ್ ಆಧರಿತ ಸೆಮಿ ಹೈಸ್ಪೀಡ್ ರೈಲನ್ನು ಚೀನಾ ದೇಶ ಅಳವಡಿಸಿಕೊಂಡಿದೆ. ಜಗತ್ತಿನಲ್ಲಿ ಮೊದಲು ಜರ್ಮನಿ ಈ ತರಹದ ರೈಲನ್ನು ಬಳಕೆಗೆ ತಂದಿತ್ತು.

2) ಚೀನಾ ದೇಶ ಬಳಸುವ ಹೈಡ್ರೋಜನ್ ಆಧರಿತ ಸೆಮಿ ಹೈಸ್ಪೀಡ್ ರೈಲು ಒಮ್ಮೆ ಹೈಡ್ರೋಜನ್ ಇಂಧನ ಕೋಶವನ್ನು ಚಾರ್ಜ್ ಮಾಡಿದರೆ ಗಂಟೆಗೆ 160 ಕಿ.ಮೀ ವೇಗದಲ್ಲಿ 600 ಕಿ.ಮೀ ದೂರ ಸಂಚರಿಸುವ ಸಾಮರ್ಥ್ಯ ಹೊಂದಿದೆ.

ಉತ್ತರ ಸಂಕೇತಗಳು

ಎ) ಹೇಳಿಕೆ 1 ಮಾತ್ರ ಸರಿಯಾಗಿದೆ

ಬಿ) ಹೇಳಿಕೆ 2 ಮಾತ್ರ ಸರಿಯಾಗಿದೆ.

ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ

ಡಿ)1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

3) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಭಾಗಶಃ ಬಿಳಿ ಬಣ್ಣದ ಸೀಳು ನಾಯಿ(Partial albino dhole wild dogs) ಇದೇ ಮೊದಲಬಾರಿಗೆ ನಮ್ಮ ರಾಜ್ಯದ ಕಾವೇರಿ ವನ್ಯಧಾಮದಲ್ಲಿ ಪತ್ತೆಯಾಗಿದೆ. ಭಾರತ, ನೇಪಾಳ, ಬಾಂಗ್ಲಾದೇಶ, ಭೂತಾನ್, ಕಾಂಬೋಡಿಯಾ, ಚೀನಾ, ಇಂಡೋನೇಷಿಯಾ, ಮೊದಲಾದ 11 ದೇಶಗಳಲ್ಲಿ ಸೀಳು ನಾಯಿಗಳು ಕಾಣಬರುತ್ತದೆ.

2) ಅಂತರರಾಷ್ಟ್ರೀಯ ನಿಸರ್ಗ ಸಂರಕ್ಷಣಾ ಸಂಸ್ಥೆ(ಐಯುಸಿಎನ್) ಪ್ರಕಾರ ಅಫ್ಘಾನಿಸ್ತಾನ, ಕೊರಿಯಾ, ಮಂಗೋಲಿಯಾ ದೇಶಗಳಲ್ಲಿ ಸೀಳುನಾಯಿಗಳು ಸಂಪೂರ್ಣ ನಾಶವಾಗಿವೆ. ಭಾರತದಲ್ಲಿ ಸೀಳು ನಾಯಿಗಳು ವನ್ಯ ಜೀವಿ ಸಂರಕ್ಷಣಾ ಕಾಯ್ದೆ-1972ರ ಅಧಿನಿಯಮ-2ರಲ್ಲಿ ಸಂರಕ್ಷಿತಗೊಂಡಿವೆ.

ಉತ್ತರ ಸಂಕೇತಗಳು

ಎ) ಹೇಳಿಕೆ 2 ಮಾತ್ರ ಸರಿಯಾಗಿದೆ

ಬಿ) ಹೇಳಿಕೆ 1 ಮಾತ್ರ ಸರಿಯಾಗಿದೆ.

ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ

ಡಿ) ಹೇಳಿಕೆ 1 ಮತ್ತು 2 ಎರಡೂ ಸರಿಯಾಗಿವೆ

ಉತ್ತರ: ಡಿ

4) ಜನವರಿ 23 ಅನ್ನು'ಪರಾಕ್ರಮ ದಿವಸ್' ಎಂದು ಆಚರಿಸಲಾಗುತ್ತದೆ. ಹಾಗಾದರೆ ಆ ದಿನ ಯಾರ ಜನ್ಮದಿನ?

ಎ) ಜವಾಹರ್ ಲಾಲ್ ನೆಹರೂ

ಬಿ) ರಾಜಗುರು

ಸಿ) ಲಚಿನ್ ಬರ್ಬೂಕನ್

ಡಿ) ನೇತಾಜಿ ಸುಭಾಷ್ ಚಂದ್ರ ಬೋಸ್

ಉತ್ತರ: ಡಿ

5) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1)ದೆಹಲಿಯಲ್ಲಿ ಜ.26ರಂದು ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ 'ನಾರಿಶಕ್ತಿ ಸ್ಥಬ್ದಚಿತ್ರ' ಪ್ರದರ್ಶಿಸಲಾಯಿತು. ನಿಸ್ವಾರ್ಥವಾಗಿ ಸೇವೆ ಸಲ್ಲಿಸಿ ಪದ್ಮ ಪ್ರಶಸ್ತಿಗೆ ಪಾತ್ರರಾದ ಮಹಿಳೆಯರ ಸ್ಥಬ್ದಚಿತ್ರವನ್ನು ಪ್ರದರ್ಶಿತವಾಗಿತ್ತು

2) ಈ ಸಲದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದಿಂದ ಪ್ರದರ್ಶಿತ ಸ್ಥಬ್ದ ಚಿತ್ರದಲ್ಲಿ ಸೂಲಗಿತ್ತಿ ನರಸಮ್ಮ, ತುಳಸಿ ಬೊಮ್ಮಗೌಡ, ಸಾಲುಮರದ ತಿಮ್ಮಕ್ಕ ಅವರ ಚಿತ್ರಗಳಿದ್ದವು.

ಉತ್ತರ ಸಂಕೇತಗಳು

ಎ) ಹೇಳಿಕೆ 1 ಮತ್ತು 2ಸರಿಯಾಗಿದೆ

ಬಿ) ಹೇಳಿಕೆ 1 ಮಾತ್ರ ಸರಿಯಾಗಿದೆ.

ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ

ಡಿ) ಹೇಳಿಕೆ 2 ಮಾತ್ರ ಸರಿಯಾಗಿವೆ

ಉತ್ತರ: ಎ

6) ಈ ಸಲ ನಡೆದ ಗಣರಾಜ್ಯೋತ್ಸವದಲ್ಲಿ ಯಾರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು?

ಎ) ಶೇಖ್ ಹಸಿನಾ (ಬಾಂಗ್ಲಾದೇಶ್)

ಬಿ) ಪುಷ್ಪ ಕಮಲ್ ಧಹಲ್ -ಪ್ರಚಂಡ (ನೇಪಾಳ್)

ಸಿ) ಅಬ್ದೆಲ್ ಫತ್ತಾಹ್ ಎಲ್-ಸಿಸಿ (Abdel Fattah el-Sisi) (ಈಜಿಪ್ಟ್)

ಡಿ) ಡೋನಾಲ್ಡ್ ಟ್ರಂಪ್

ಉತ್ತರ: ಸಿ

7) 'ಪರಾಕ್ರಮ್ ದಿವಸ್' ಸಂದರ್ಭದಲ್ಲಿ ಭಾರತದಲ್ಲಿರುವ ಇನ್ನೂ ಹೆಸರಿಡದ ಸುಮಾರು ....ದ್ವೀಪಗಳಿಗೆ ಪರಮವೀರ ಚಕ್ರ ಪ್ರಶಸ್ತಿ ವಿಜೇತರ ಹೆಸರನ್ನು ಇಡಲಾಗಿದೆ

ಎ) 18 ಬಿ) 21

ಸಿ) 25 ಡಿ) 30

ಉತ್ತರ: ಬಿ

8) ಡೈನೊಸಾರಸ್‌ಗಳಲ್ಲಿ ಅತ್ಯಂತ ದೊಡ್ಡದಾದ ಟಿಟನೊಸಾರಸ್‌ಗಳ 256 ಮೊಟ್ಟೆಗಳ ಪಳೆಯುಳಿಕೆಗಳು ಎಲ್ಲಿ ದೊರೆತಿವೆ?

ಎ) ತಮಿಳುನಾಡಿನ ರಾಮೇಶ್ವರ

ಬಿ) ಕೇರಳದ ಇಡುಕ್ಕಿ

ಸಿ) ಮಧ್ಯಪ್ರದೇಶದ ಧಾರ ಜಿಲ್ಲೆಯ ನರ್ಮದಾ ಕಣಿವೆಯಲ್ಲಿ

ಡಿ) ಮಹಾರಾಷ್ಟ್ರ ದ ಪುಣೆ

ಉತ್ತರ: ಸಿ

9) ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1) ನಾರಾಯಣಪುರ ಎಡದಂಡೆ ಕಾಲುವೆಯು ಸ್ಕಾಡಾ ತಂತ್ರಜ್ಞಾನ ಬಳಸಿದ ದೇಶದ ಮೊದಲ ಸ್ವಯಂಚಾಲಿತ ನೀರಾವರಿ ವಿತರಣೆ ಹೊಂದಿರುವ ಕಾಲುವೆಯಾಗಿದೆ.

2) ನಾರಾಯಣಪುರ ಎಡದಂಡೆ ಕಾಲುವೆ ನಾರಾಯಣಪುರ ಅಣೆಕಟ್ಟಿನಿಂದ ಪ್ರಾರಂಭವಾಗಿ ಮತ್ತು 14.5 ಲಕ್ಷ ಹೆಕ್ಟೆರ್ ಕಮಾಂಡ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು 20 ಸಾವಿರ ಕ್ಯೂಸೆಕ್ಸ್ ನೀರು ಸಾಗಿಸುವ ಸಾಮರ್ಥ್ಯವನ್ನು ಕಾಲುವೆ ಹೊಂದಿದೆ.

3) ನಾರಾಯಣಪುರ ಎಡದಂಡೆ ಕಾಲುವೆ ವ್ಯವಸ್ಥೆಯಲ್ಲಿ 365 ಸ್ವಯಂಚಾಲಿತ ಇಂಟಿಗ್ರೇಟೆಡ್ ಗೇಟುಗಳಿಗೆ ಸ್ಕಾಡಾ ತಂತ್ರಜ್ಞಾನ (SCADA (Supervisory Control and Data Acquisition)) ಅಳವಡಿಸಲಾಗುತ್ತದೆ.

ಉತ್ತರ ಸಂಕೇತಗಳು

ಎ) ಹೇಳಿಕೆ 1 ಮತ್ತು 3 ಮಾತ್ರ ಸರಿಯಿದೆ

ಬಿ) ಹೇಳಿಕೆ 1 ಮತ್ತು 2 ಮಾತ್ರ ಸರಿಯಿದೆ

ಸಿ) ಹೇಳಿಕೆ 2, ಮತ್ತು 3 ಮಾತ್ರ ಸರಿಯಿದೆ

ಡಿ) 1 ರಿಂದ 4ರ ತನಕ ಎಲ್ಲವೂ ಸರಿಯಿದೆ

ಉತ್ತರ: ಎ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಎಸ್ಸೆಸ್ಸೆಲ್ಸಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

34). ಭಾರತದಲ್ಲಿ ಅಸ್ಪಶ್ಯತಾ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉತ್ತರ:- ಸಂವಿಧಾನದ 17ನೆಯ ವಿಧಿಯ ಅಸ್ಪಶ್ಯತಾ ಆಚರಣೆಯನ್ನು ತೊಡೆದು ಹಾಕಿದೆ. 1955ರಲ್ಲಿ ಅಸ್ಪಶ್ಯತಾ ಅಪರಾಧಗಳ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಈ ಕಾಯ್ದೆಯಲ್ಲಿ ಕಂಡುಬಂದ ಕೆಲವು ದೋಷಗಳನ್ನು ಸರಿಪಡಿಸಿ 1976ರಲ್ಲಿ ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಎಂದು ಅದನ್ನು ಮಾರ್ಪಾಡುಗೊಳಿಸಲಾಗಿದೆ. ಈ ಕಾಯ್ದೆಯ ಪ್ರಕಾರ ಅಸ್ಪಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಅಲ್ಲದೇ ಸಂವಿಧಾನಾತ್ಮಕವಾಗಿ ಸಾರ್ವತ್ರಿಕ ಮತದಾನದ ಹಾಗೂ ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ನಾಗರಿಕರಿಗೂ ನೀಡಲಾಗಿದೆ. ವಿಶೇಷವಾಗಿ ಪರಿಶಿಷ್ಟರನ್ನೊಳಗೊಂಡಂತೆ ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕ, ರಾಜಕೀಯ, ಆರ್ಥಿಕ ಹಾಗೂ ಉದ್ಯೋಗಾವಕಾಶಗಳಲ್ಲಿ ಮೀಸಲಾತಿಗಳನ್ನು ಕಲ್ಪಿಸಲಾಗಿದೆ. 1989ರ ಶಾಸನವು ಅಸ್ಪಶ್ಯತೆಯ ನಿರ್ಮೂಲನೆಗೆ ಕುರಿತಾದ ವಿಶೇಷ ಜವಾಬ್ದಾರಿಗಳನ್ನು ರಾಜ್ಯ ಸರ್ಕಾರಗಳಿಗೆ ವಹಿಸಿದೆ.

35) ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು?

ಉತ್ತರ : ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳು

1. ಸಂಘಟಿತ ಕೆಲಸಗಾರರು ಕಾನೂನು ಹಾಗೂ ಕಾಯ್ದೆಯನ್ನು ವ್ಯಾಪಿಸಿ ಬದ್ಧವಾದಂತಹ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಾರೆ. ಆದರೆ ಸಂಘಟಿತ ಕೆಲಸಗಾರರು ಕಾರ್ಯನಿರ್ವಹಿಸುವ ಸಂಸ್ಥೆಗಳಿಗೆ ಯಾವುದೇ ರೀತಿಯ ಕಾನೂನು ಕಾಯ್ದೆಗಳು ಇರುವುದಿಲ್ಲ.

2. ಸಂಘಟಿತ ಕಾರ್ಮಿಕರಿಗೆ ನಿಶ್ಚಿತವಾದ ನಿಯಮಗಳು ಇರುತ್ತವೆ. ಆದರೆ ಅಸಂಘಟಿತ ಕಾರ್ಮಿಕರಿಗೆ ಈ ನಿಯಮಗಳು ಅನ್ವಯಿಸುವುದಿಲ್ಲ.

3. ಸಂಘಟಿತ ಕಾರ್ಮಿಕರಿಗೆ ನಿಯಮಿತ ವೇತನ, ಪ್ರಾವಿಡೆಂಟ್ ಫಂಡ್, ಆರೋಗ್ಯ ಸೌಲಭ್ಯ (ಇ.ಎಸ್.ಐ) ಇತ್ಯಾದಿಗಳು ಅನ್ವಯಿಸುತ್ತವೆ, ಆದರೆ, ಅಸಂಘಟಿತ ಕಾರ್ಮಿಕರಿಗೆ ಇವುಗಳು ಅನ್ವಯಿಸುವುದಿಲ್ಲ.

4. ಸಂಘಟಿತ ಕಾರ್ಮಿಕರಿಗೆ ವೇತನಸಹಿತ ಹಾಗೂ ರಜಾ ಸೌಲಭ್ಯ ಇರುತ್ತದೆ. ಈ ಸೌಲಭ್ಯವೂ ಅಸಂಘಟಿತರಿಗೆ ಇರುವುದಿಲ್ಲ.

5. ಸಂಘಟಿತ ಕಾರ್ಮಿಕರಿಗೆ ಜೀವನದ ಭದ್ರತೆ ಇರುತ್ತದೆ. ಆದರೆ, ಅಸಂಘಟಿತ ಕಾರ್ಮಿಕರಿಗೆ ಆ ಭದ್ರತೆ ಇಲ್ಲ. ಕೆಲಸ ಮಾಡಿದ ದಿನ ಮಾತ್ರ ಕೂಲಿ ಸಿಗುತ್ತದೆ.

36) ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವೇನು?

ಉತ್ತರ : ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಹೆಚ್ಚು. ಗ್ರಾಮಾಂತರ ಪ್ರದೇಶಗಳ ಸಮಸ್ಯೆಗಳು ಗ್ರಾಮೀಣ ಭಾಗದ ಪ್ರತಿನಿಧಿಗಳಿಗೆ ತಿಳಿದಿರುವುದರಿಂದ ಆ ಸಮಸ್ಯೆಗಳ ನಿವಾರಣೆಗೆ ಯೋಜನೆಗಳನ್ನು ರೂಪಿಸುತ್ತಾರೆ.

ಗ್ರಾಮೀಣ ಭಾಗದ ನಿರುದ್ಯೋಗ, ಅರೆನಿರುದ್ಯೋಗ, ಅನಕ್ಷರತೆ, ರಸ್ತೆಗಳ ಸಮಸ್ಯೆ, ನೈರ್ಮಲ್ಯ ಮುಂತಾದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪಂಚಾಯತ್ ರಾಜ್ ವ್ಯವಸ್ಥೆಯು ಕಾರ್ಯನಿರ್ವಹಿಸುತ್ತದೆ. ಕೆರೆಗಳ ದುರಸ್ತಿ, ನೀರಾವರಿ ಯೋಜನೆಗಳು, ರಸ್ತೆಗಳ ನಿರ್ಮಾಣ ದುರಸ್ತಿ, ಬಡವರ ವಸತಿ ಸೌಕರ್ಯ ಮುಂತಾದವು ಬಹುಪ್ರಮುಖವಾದ ಸಮಸ್ಯೆಗಳಾದುದರಿಂದ ಗ್ರಾಮೀಣ ವ್ಯವಸ್ಥೆಯಲ್ಲಿ ಇದಕ್ಕೆ ವಿಶೇಷ ಸೌಲಭ್ಯ ಒದಗಿಸಲು ಪಂಚಾಯತ್ ರಾಜ್ ಸಂಸ್ಥೆಗಳು ಸಹಾಯ ಮಾಡುತ್ತವೆ. ಹೀಗೆ ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ತಮ್ಮದೇ ಆದ ಪಾತ್ರ ವಹಿಸುತ್ತವೆ

37) ಬ್ಯಾಂಕ್ ಖಾತೆಯು ಅನುಕೂಲಕರವಾದದ್ದು ಹೇಗೆ?

ಉತ್ತರ : 1. ಬ್ಯಾಂಕ್ ಖಾತೆಯು ಗ್ರಾಹಕರಿಗೆ ಹಣಕಾಸಿನ ವ್ಯವಹಾರ ಮಾಡಲು ಅನುಕೂಲ ಮಾಡಿಕೊಡುತ್ತದೆ.

2. ಹಣದ ಭದ್ರತೆ ಮತ್ತು ಹಣ ಪಾವತಿಗೆ ಸಹಾಯ ಮಾಡುತ್ತದೆ.

3. ಬ್ಯಾಂಕ್ ಖಾತೆಯ ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.

4. ಗ್ರಾಹಕರು ಸಾಲ ಪಡೆಯಲು ಅವಕಾಶ ಮಾಡಿಕೊಡುತ್ತದೆ.

5. ಚೆಕ್, ಡಿಮ್ಯಾಂಡ್ ಡ್ರಾಫ್ಟ್ ಮುಂತಾದವುಗಳ ಮೂಲಕ ಗ್ರಾಹಕರು ಹಣವನ್ನು ಸಂದಾಯ ಮಾಡಲು ಅವಕಾಶ ಮಾಡಿಕೊಡುತ್ತದೆ.

38). ದೇಶೀಯ ಸಂಸ್ಥಾನಗಳನ್ನು ದೇಶದಲ್ಲಿ ವಿಲೀನ ಮಾಡುವಲ್ಲಿ ಸರ್ದಾರ್ ಪಟೇಲರ ಪಾತ್ರವನ್ನು ವಿವರಿಸಿ.

ಉತ್ತರ: ಭಾರತಕ್ಕೆ ಬ್ರಿಟಿಷರು ಸ್ವಾತಂತ್ರ್ಯ ಘೋಷಣೆ ಮಾಡಿದಾಗ ಭಾರತದಲ್ಲಿ ಸುಮಾರು 562 ದೇಶೀಯ ಸಂಸ್ಥಾನಗಳು ಇದ್ದವು. ಈ ದೇಶೀಯ ಸಂಸ್ಥಾನಗಳು ಹಿಂದೂಸ್ಥಾನ ಅಥವಾ ಪಾಕಿಸ್ಥಾನ ಎಂದು ವಿಭಜಿತವಾಗಿದ್ದ ಎರಡು ಸ್ವತಂತ್ರ ರಾಷ್ಟ್ರಗಳಲ್ಲಿ ಯಾವುದಕ್ಕಾದರೂ ಸೇರಬಹುದಿತ್ತು. ಭಾರತದ ಹಲವಾರು ರಾಜರಿಗೆ ತಮ್ಮ ಅಧಿಕಾರ ಅಂತಸ್ತುಗಳನ್ನು ಬದಿಗೊತ್ತಿ ಭಾರತ ಒಕ್ಕೂಟದಲ್ಲಿ ಸೇರಲು ಮನಸ್ಸಿರಲಿಲ್ಲ. ಅಂತಹ ಸಮಯದಲ್ಲಿ ನಮ್ಮ ಅಂದಿನ ಭಾರತದ ಗೃಹಮಂತ್ರಿಗಳಾಗಿದ್ದ ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರು ದೇಶದ ರಾಜರ ಮನವೊಲಿಸಿ ಭಾರತದ ಒಕ್ಕೂಟದಲ್ಲಿ ಸೇರುವಂತೆ ಮಾಡಿದರು. ಇದಕ್ಕೆ ಒಪ್ಪದ ಜಮ್ಮು-ಕಾಶ್ಮೀರ, ಜುನಾಘಡ ಮತ್ತು ಹೈದರಾಬಾದ್ ಸಂಸ್ಥಾನದ ನಿಜಾಮರ ಮೇಲೆ ಸೈನಿಕ ದಾಳಿ ನಡೆಸಿ ಅವುಗಳನ್ನು ಭಾರತ ಒಕ್ಕೂಟದಲ್ಲಿ ವಿಲೀನಗೊಳಿಸಿಕೊಂಡು ಅಖಂಡ ಭಾರತವನ್ನು ರಚಿಸಲಾಯಿತು. ತಮ್ಮ ರಾಜ್ಯಗಳನ್ನು ನೀಡಿದ ರಾಜರಿಗೆ ರಾಜಧನ ನೀಡಲಾಯಿತು. ಹೀಗೆ ಸರ್ದಾರ ವಲ್ಲಭ ಭಾಯಿ ಪಟೇಲರು ಸಾಮ, ಭೇದ ಹಾಗೂ ದಂಡ ಮಾರ್ಗಗಳ ಮೂಲಕ ಏಕೀಕರಣಗೊಳಿಸಿದರು

39) 1857ರ ದಂಗೆಯಲ್ಲಿ ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶಗಳಾವವು?

ಉತ್ತರ : ಭಾರತೀಯ ಸೈನಿಕರನ್ನು ಸಾಗರ ದಾಟಿದ ಸೇವೆಗೆ ಒತ್ತಾಯಿಸಿದ್ದು ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶವಾಗಿದೆ. ಇದಲ್ಲದೇ ಸೈನಿಕರಿಗೆ 'ರಾಯಲ್ ಎನ್‌ಫೀಲ್ಡ್' ಎಂಬ ನವೀನ ಬಂದೂಕುಗಳನ್ನು ನೀಡುತ್ತಿದ್ದರು. ಬಂದೂಕುಗಳಿಗೆ ಉಪಯೋಗಿಸುತ್ತಿದ್ದ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹಬ್ಬಿತ್ತು. ಹಿಂದೂಗಳಿಗೆ ಹಸು ಪವಿತ್ರವಾದರೆ, ಮುಸ್ಲಿಮರಿಗೆ ಹಂದಿಯು ನಿಷಿದ್ಧವಾಗಿತ್ತು. ಇದರಿಂದಾಗಿ ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದಂತಾಗಿತ್ತು ಇವೆಲ್ಲದರ ಒಟ್ಟು ಮೊತ್ತವೇ 1857ರ ಕ್ರಾಂತಿ!

ಎಸ್ಸೆಸ್ಸೆಲ್ಸಿಯ ಸಮಾಜ ವಿಜ್ಞಾನದ ಆಂಗ್ಲಭಾಷೆ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮಾದರಿ ಪ್ರಶ್ನೋತ್ತರಗಳು

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ರಸಾಯನವಿಜ್ಞಾನ

ಪಿಯುಸಿ

4) ಕಾರ್ಬಾಕ್ಸಿಲ್ ಗುಂಪಿನ ನಾಮಕರಣದ ಬಗ್ಗೆ ಬರೆಯಿರಿ.

ಉತ್ತರ: ಕಾರ್ಬಾಕ್ಸಿಲಿಕ್ ಆಮ್ಲಗಳು ನಿಸರ್ಗದಿಂದ ಪ್ರತ್ಯೇಕಿಸಲ್ಪಟ್ಟ ಪ್ರಾಚೀನ ಸಾವಯವ ಸಂಯುಕ್ತಗಳಾಗಿರುವುದರಿಂದ, ಅವುಗಳಲ್ಲಿ ಹೆಚ್ಚಿನವು ಸಾಮಾನ್ಯ ಹೆಸರುಗಳಿಂದ ಹೇಳಲಾಗುತ್ತದೆ. ಸಾಮಾನ್ಯ ಹೆಸರುಗಳನ್ನು ಅವುಗಳ ನೈಸರ್ಗಿಕ ಆಕರಗಳ ಲ್ಯಾಟಿನ್ ಅಥವಾ ಗ್ರೀಕ್ ಹೆಸರುಗಳಿಂದ ಪಡೆಯಲಾಗಿದ್ದು, ಇವು -ಇಕ್ ಆಮ್ಲ ಎಂಬ ಅಂತ್ಯಪ್ರತ್ಯಯದೊಂದಿಗೆ ಕೊನೆಗೊಳ್ಳುತ್ತವೆ. ಉದಾಹರಣೆಗೆ, ಮೊದಲಿಗೆ ಕೆಂಪು ಇರುವೆಗಳಿಂದ ಪಡೆಯಲಾಗಿದ್ದ ಫಾರ್ಮಿಕ್ ಆಮ್ಲ ($HCOOH$) (ಲ್ಯಾಟಿನ್: ಫಾರ್ಮಿಕ ಎಂದರೆ ಇರುವೆ), ವಿನೆಗರ್‌ನಿಂದ ಅಸಿಟಿಕ್ ಆಮ್ಲ ($CH_3 COOH$) (ಲ್ಯಾಟಿನ್: ಅಸಿಟಮ್, ಎಂದರೆ ವಿನೆಗರ್), ಹಳಸಿದ ಬೆಣ್ಣೆಯಿಂದ ಬ್ಯುಟರಿಕ್ ಆಮ್ಲ ($CH_3 CH_2 CH_2 COOH$)) (ಲ್ಯಾಟಿನ್: ಬ್ಯುಟಿರಮ್, ಎಂದರೆ ಬೆಣ್ಣೆ). IUPAC ಪದ್ಧತಿಯಲ್ಲಿ ಆಲಿಫ್ಯಾಟಿಕ್ ಆಮ್ಲಗಳನ್ನು ಅವುಗಳ ಮೂಲ ಆಲ್ಕೇನಿನ ಆಂಗ್ಲ ಹೆಸರಿನ ಕೊನೆಯಕ್ಷರ –e ಯನ್ನು -ಒಯಿಕ್ ಆಮ್ಲ ಎಂಬ ಪದದಿಂದ ಬದಲಿಸಿ ಹೆಸರಿಸಲಾಗುತ್ತದೆ. ಕಾರ್ಬನ್ ಸರಪಳಿಗೆ ಸಂಖ್ಯೆ ನೀಡುವಾಗ ಕಾರ್ಬಾಕ್ಸಿಲ್ ಕಾರ್ಬನ್‌ಗೆ ಸಂಖ್ಯೆ ಒಂದರಿಂದ ಪ್ರಾರಂಭಿಸಬೇಕು ನೀಡಬೇಕು. ಒಂದಕ್ಕಿಂತ ಹೆಚ್ಚಿನ ಕಾರ್ಬಾಕ್ಸಿಲ್ ಗುಂಪುಗಳಿರುವ ಸಂಯುಕ್ತಗಳನ್ನು ಹೆಸರಿಸುವಾಗ, ಕಾರ್ಬಾಕ್ಸಿಲ್ ಗುಂಪನ್ನು ಹೊರತುಪಡಿಸಿ ಆಲ್ಕೈಲ್ ಸರಪಳಿಗೆ ಸಂಖ್ಯೆಯನ್ನು ನೀಡಬೇಕು ಮತ್ತು ಒಟ್ಟು ಕಾರ್ಬಾಕ್ಸಿಲ್ ಗುಂಪುಗಳ ಸಂಖ್ಯೆಯನ್ನು ಡೈಕಾರ್ಬಾಕ್ಸಿಲಿಕ್ ಆಮ್ಲ, ಟ್ರೈ ಕಾರ್ಬಾಕ್ಸಿಲಿಕ್ ಆಮ್ಲ ಮುಂತಾದ ಗುಣೀಕೃತ ಪೂರ್ವಪ್ರತ್ಯಯವನ್ನು ಸೇರಿಸಿ ಮೂಲ ಆಲ್ಕೈಲ್ ಸರಪಳಿಯ ಹೆಸರಿನೊಂದಿಗೆ ಸೂಚಿಸಲಾಗುವುದು. –COOH ಗುಂಪುಗಳ ಸ್ಥಾನಗಳನ್ನು ಗುಣೀಕೃತ ಪೂರ್ವಪ್ರತ್ಯಯಕ್ಕೆ ಮೊದಲು ಅರೇಬೀಕ್ ಸಂಖ್ಯೆಗಳಿಂದ ಸೂಚಿಸಲಾಗುವುದು. ಕೆಲವು ಕಾರ್ಬಾಕ್ಸಿಲಿಕ್ ಆಮ್ಲಗಳನ್ನು ಅವುಗಳ ಸಾಮಾನ್ಯ ಮತ್ತು IUPAC ಹೆಸರುಗಳೊಂದಿಗೆ ಕೋಷ್ಟಕ ಪಟ್ಟಿ ಕೆಳಗಿದೆ..

ರಚನೆ	ಸಾಮಾನ್ಯ ಹೆಸರು	IUPAC ಹೆಸರು
$HCOOH$	ಫಾರ್ಮಿಕ್ ಆಮ್ಲ	ಮೀಥೆನೋಯಿಕ್ ಆಮ್ಲ
CH_3COOH	ಅಸಿಟಿಕ್ ಆಮ್ಲ	ಇಥೆನೋಯಿಕ್ ಆಮ್ಲ
CH_3CH_2COOH	ಪ್ರೊಪಿಯೋನಿಕ್ ಆಮ್ಲ	ಪ್ರೊಪೆನೋಯಿಕ್ ಆಮ್ಲ
$CH_3CH_2CH_2COOH$	ಬ್ಯುಟರಿಕ್ ಆಮ್ಲ	ಬ್ಯುಟೆನೋಯಿಕ್ ಆಮ್ಲ
$(CH_3)_2CHCOOH$	ಐಸೋಬ್ಯುಟರಿಕ್ ಆಮ್ಲ	2–ಮೀಥೈಲ್‌ಪ್ರೊಪೆನೋಯಿಕ್ ಆಮ್ಲ
$HOOC\text{-}COOH$	ಆಕ್ಸಾಲಿಕ್ ಆಮ್ಲ	ಈಥೇನ್‌ಡೈಓಯಿಕ್ ಆಮ್ಲ
$HOOC\text{-}CH_2\text{-}COOH$	ಮೆಲೋನಿಕ್ ಆಮ್ಲ	ಪ್ರೊಪೇನ್‌ಡೈಓಯಿಕ್ ಆಮ್ಲ
$HOOC\text{-}(CH_2)_2\text{-}COOH$	ಸಕ್ಸಿನಿಕ್ ಆಮ್ಲ	ಬ್ಯುಟೇನ್‌ಡೈಓಯಿಕ್ ಆಮ್ಲ
$HOOC\text{-}(CH_2)_3\text{-}COOH$	ಗ್ಲುಟಾರಿಕ್ ಆಮ್ಲ	ಪೆಂಟೇನ್‌ಡೈಓಯಿಕ್ ಆಮ್ಲ
$HOOC\text{-}(CH_2)_4\text{-}COOH$	ಅಡಿಪಿಕ್ ಆಮ್ಲ	ಹೆಕ್ಸೇನ್‌ಡೈಓಯಿಕ್ ಆಮ್ಲ
$HOOC\text{-}CH_2\text{-}CH(COOH)\text{-}CH_2\text{-}COOH$	ಟ್ರೈಕಾರ್ಬಾಲ್ಲಿಕ್ ಆಮ್ಲ ಅಥವಾ ಕಾರ್ಬಾಲಿಲ್ಲಿಕ್ ಆಮ್ಲ	ಪ್ರೊಪೇನ್–1,2,3–ಟ್ರೈಕಾರ್ಬಾಕ್ಸಿಲಿಕ್ ಆಮ್ಲ
	ಬೆಂಜೋಯಿಕ್ ಆಮ್ಲ	ಬೆಂಜೀನ್‌ಕಾರ್ಬಾಕ್ಸಿಲಿಕ್ ಆಮ್ಲ ಅಥವಾ ಬೆಂಜೋಯಿಕ್ ಆಮ್ಲ
	ಫೀನೈಲ್ ಅಸಿಟಿಕ್ ಆಮ್ಲ	2–ಫೀನೈಲ್‌ಇಥೆನೋಯಿಕ್ ಆಮ್ಲ
	ಥಾಲಿಕ್ ಆಮ್ಲ	ಬೆಂಜೀನ್–1,2–ಡೈಕಾರ್ಬಾಕ್ಸಿಲಿಕ್ ಆಮ್ಲ

5) ನೋವುಶಮನಕಗಳನ್ನು ಎಷ್ಟು ವರ್ಗಗಳಾಗಿ ವರ್ಗೀಕರಣ ಮಾಡಲಾಗಿದೆ? ಅವು ಯಾವುವು? ವಿವರಿಸಿ

ಉತ್ತರ: ನೋವುಶಮನಕಗಳು ಪ್ರಜ್ಞಾಹೀನತೆ, ಮಾನಸಿಕ ಗೊಂದಲ, ಅಸಮನ್ವಯತೆ, ಪಾರ್ಶ್ವವಾಯು ಅಥವಾ ನರಮಂಡಲದ ಕೆಲವು ಇತರ ಕ್ಷೋಭೆಯನ್ನು ಮಾಡದೆ, ನೋವನ್ನು ಕಡಿಮೆ ಅಥವಾ ನಿವಾರಣೆಮಾಡುತ್ತವೆ.

ಇವುಗಳನ್ನು ಕೆಳಗಿನಂತೆ ವರ್ಗೀಕರಿಸಲಾಗಿದೆ.

(1) ಮಾದಕವಲ್ಲದ (ಚಟವನ್ನುಂಟುಮಾಡದ) ನೋವುಶಮನಕ (2) ಮಾದಕ ಔಷಧಗಳು.

(1) ಮಾದಕವಲ್ಲದ (ಚಟವನ್ನುಂಟುಮಾಡದ) ನೋವುಶಮನಕಗಳು [non-narcotic(nonaddictive) analgesics]:

ಆಸ್ಪಿರಿನ್ ಹಾಗೂ ಪ್ಯಾರಸಿಟಮಾಲ್ ಮಾದಕವಲ್ಲದ ನೋವುಶಮನಕ ವರ್ಗಕ್ಕೆ ಸೇರಿವೆ. ಆಸ್ಪಿರಿನ್ ಅತ್ಯಂತ ಪರಿಚಿತ ಉದಾಹರಣೆ. ಅಂಗಾಂಶದಲ್ಲಿ ಉರಿಯೂತವನ್ನು ಉತ್ತೇಜಿಸುವ ಮತ್ತು ನೋವನ್ನುಂಟುಮಾಡುವ, ಪ್ರೋಸ್ಟಗ್ಲಾಂಡಿನ್ ಎಂದು ಕರೆಯಲಾಗುವ ರಾಸಾಯನಿಕಗಳ ಸಂಶ್ಲೇಷಣೆಯನ್ನು ಆಸ್ಪಿರಿನ್ ಪ್ರತಿಬಂಧಿಸುತ್ತದೆ. ಈ ಔಷಧಗಳು, ಸಂಧಿವಾತದಂತಹ ಕಾರಣಗಳಿಂದಾಗುವ ಅಸ್ಥಿಯ ನೋವನ್ನು ನಿವಾರಿಸಲು ಪರಿಣಾಮಕಾರಿಯಾಗಿವೆ. ಉದಾಹರಣೆಗೆ, ಜ್ವರ ಕಡಿಮೆಮಾಡುವ (ಜ್ವರನಿವಾರಕ) ಮತ್ತು ಪ್ಲೇಟ್ಲೆಟ್ ಹೆಪ್ಪುಗಟ್ಟುವಿಕೆ ತಡೆಯುವಂತಹ ಅನೇಕ ಇನ್ನಿತರ ಪರಿಣಾಮಗಳನ್ನು ಈ ಔಷಧಗಳು ಹೊಂದಿವೆ. ಇದರ ರಕ್ತಹೆಪ್ಪುಗಟ್ಟುವಿಕೆಯ ಪ್ರತಿರೋಧಕ ಕ್ರಿಯೆಯಿಂದಾಗಿ, ಆಸ್ಪಿರಿನ್ ಹೃದಯಾಘಾತ ತಡೆಯುವಿಕೆಗಾಗಿ ಬಳಸಲಾಗುತ್ತದೆ.

(2) ಮಾದಕ ನೋವುಶಮನಕಗಳು(narcotic analgesics):

ಮಾರ್ಫಿನ್ ಮತ್ತು ಅದರ ಅನೇಕ ಸಮಾನರೂಪಿಗಳು ಔಷಧೀಯ ಪ್ರಮಾಣದಲ್ಲಿ ನೀಡಿದಾಗ, ನೋವನ್ನು ಕಡಿಮೆ ಮಾಡುತ್ತವೆ ಮತ್ತು ನಿದ್ರೆಯನ್ನುಂಟುಮಾಡುತ್ತವೆ. ವಿಷಕಾರಿ ಪ್ರಮಾಣದಲ್ಲಿ, ಇವು ಭಾವಶೂನ್ಯತೆ, ಕೋಮ, ಸೆಳೆತ ಮತ್ತು ಅಂತಿಮವಾಗಿ ಸಾವನ್ನುಂಟುಮಾಡುತ್ತವೆ. ಮಾರ್ಫಿನ್ ಮಾದಕಗಳನ್ನು ಗಸಗಸೆ ಬೀಜದಿಂದ (opium poppy) ಪಡೆಯಲಾಗುವುದರಿಂದ ಇವುಗಳನ್ನು ಅಫೀಮುಗಳೆಂದು ಎಂದು ಕೆಲವೊಮ್ಮೆ ಉಲ್ಲೇಖಿಸಲಾಗುತ್ತದೆ. ಈ ನೋವುಶಾಮಕಗಳನ್ನು ಪ್ರಧಾನವಾಗಿ ಶಸ್ತ್ರಚಿಕಿತ್ಸಾ ನಂತರದ ನೋವು, ಹೃದಯ- ಸಂಬಂಧಿತ ನೋವು ಮತ್ತು ಅಂತಿಮಘಟ್ಟದ ಕ್ಯಾನ್ಸರ್ ನೋವು ಮತ್ತು ಪ್ರಸವದ ನೋವುಗಳನ್ನು ಶಮನಗಳಿಸಲು ಬಳಸಲಾಗುತ್ತದೆ.

ದ್ವಿತೀಯ ಪಿಯುಸಿ ರಸಾಯನ ವಿಜ್ಞಾನದ ಆಂಗ್ಲಭಾಷೆ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಅಂತರರಾಷ್ಟ್ರೀಯ ಚಲನಚಿತ್ರೋತ್ಸವ • 300 ಸಿನಿಮಾಗಳ ಪ್ರದರ್ಶನ

ಸಿನಿಮಾ ನಿರ್ಮಾಣ ತಂತ್ರಜ್ಞಾನ ಚರ್ಚೆಗೂ ವೇದಿಕೆ: ಆರ್.ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 14ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಚಲನಚಿತ್ರಗಳ ತಯಾರಿಕೆಯ ಆಧುನಿಕ ತಂತ್ರಜ್ಞಾನಗಳ ವಿನಿಮಯಕ್ಕಾಗಿ ವೇದಿಕೆ ಕಲ್ಪಿಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಆಧುನಿಕ ತಂತ್ರಜ್ಞಾನಗಳನ್ನು ಬಳಸಿ ಚಲನಚಿತ್ರ ನಿರ್ಮಿಸಿದ ಹೆಸರಾಂತ ನಿರ್ದೇಶಕರು ಮತ್ತು ತಂತ್ರಜ್ಞರನ್ನು ಆಹ್ವಾನಿಸಲಾಗುವುದು. ಚಿತ್ರೋತ್ಸವ ಮಾರ್ಚ್ 23ರಿಂದ 30 ರವರೆಗೆ ನಡೆಯಲಿದೆ ಎಂದು ಹೇಳಿದರು.

‘ಚಲನಚಿತ್ರಗಳ ವಿವಿಧ ವಿಭಾಗಗಳಲ್ಲಿ ಸ್ಪರ್ಧೆಯ ಪ್ರಶಸ್ತಿಗಳ ಬಹುಮಾನದ ಮೊತ್ತವನ್ನು ಹೆಚ್ಚಿಸಲು ತೀರ್ಮಾನಿಸಲಾಗಿದೆ. 2–3 ದಿನಗಳಲ್ಲಿ ಪ್ರಶಸ್ತಿಯ ಮೊತ್ತವನ್ನು ನಿಗದಿ ಮಾಡಲಾಗುವುದು. ಈಗ ₹1 ಲಕ್ಷದಿಂದ ₹3 ಲಕ್ಷದವರೆಗೆ ಬಹುಮಾನಗಳ ಮೊತ್ತವಿದೆ. ಅದನ್ನು ₹5 ಲಕ್ಷದಿಂದ ₹10 ಲಕ್ಷಗಳಿಗೆ ಹೆಚ್ಚಿಸುವ ಉದ್ದೇಶವಿದೆ. ಮುಖ್ಯಮಂತ್ರಿಯವರ ಜತೆ ಚರ್ಚಿಸಿ ಒಳ್ಳೆಯ ಮೊತ್ತವನ್ನೇ ನಿಗದಿ ಮಾಡುತ್ತೇವೆ’ ಎಂದು ಅಶೋಕ ವಿವರಿಸಿದರು.

‘ಜ್ಯೂರಿಗಳ ಆಯ್ಕೆಗೆ ಸಮಿತಿಯನ್ನು ರಚಿಸಲಾಗುವುದು. ಒಳ್ಳೆಯ ರೀತಿಯಲ್ಲಿ ಆಯ್ಕೆ ಮಾಡಬೇಕು, ವಿವಾದಕ್ಕೆ ಕಾರಣವಾಗಬಾರದು ಎಂದು ಸೂಚಿಸಿದ್ದೇನೆ. ಚಿತ್ರೋತ್ಸವದಲ್ಲಿ ಕನ್ನಡ ಚಲನಚಿತ್ರಗಳಿಗೂ ಆದ್ಯತೆ ನೀಡಬೇಕು. ಈ ಬಾರಿಯ ಚಿತ್ರೋತ್ಸವಕ್ಕೆ ₹4.49 ಕೋಟಿ ನೀಡಲಾಗುವುದು’ ಎಂದರು.

ಮುಖ್ಯಾಂಶಗಳು

- ಮಾ.23 ರ ಸಂಜೆ 6 ಕ್ಕೆ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಮುಖ್ಯಮಂತ್ರಿ ಬೊಮ್ಮಾಯಿ ಅವರಿಂದ ಚಿತ್ರೋತ್ಸವದ ಉದ್ಘಾಟನೆ
- ಮಾ.30 ರಂದು ರಾಜ್ಯಪಾಲರಿಂದ ಸಮಾರೋಪ ಭಾಷಣ ಮತ್ತು ಪ್ರಶಸ್ತಿ ವಿತರಣೆ. ಒರಾಯನ್ ಮಾಲ್‌ನ 11 ಪರದೆಗಳಲ್ಲಿ ಚಿತ್ರಗಳ ಪ್ರದರ್ಶನ
- 50 ಕ್ಕೂ ಹೆಚ್ಚು ದೇಶಗಳ ಚಿತ್ರಗಳ ಪ್ರದರ್ಶನ

ಸ್ಪರ್ಧಾ ವಿಭಾಗ

- ಏಷ್ಯನ್ ಚಲನಚಿತ್ರ ವಿಭಾಗ
- ಭಾರತೀಯ ಚಲನಚಿತ್ರಗಳ ವಿಭಾಗ
- ಕನ್ನಡ ಚಲನಚಿತ್ರಗಳ ಸ್ಪರ್ಧಾ ವಿಭಾಗ
- ಸಮಕಾಲೀನ ವಿಶ್ವ ಸಿನಿಮಾ ವಿಭಾಗ
- ಪುನರಾವಲೋಕನ ವಿಭಾಗ
- ವಿಶ್ವ ಸಿನಿಮಾ ಪುನರಾವಲೋಕನ
- ಭಾರತೀಯ ಸಿನಿಮಾ ಪುನರಾವಲೋಕನ
- ಕನ್ನಡ ಸಿನಿಮಾ ಪುನರಾವಲೋಕನ

ಗಡಿ ವಿವಾದ: ವಿಚಾರಣೆಯಿಂದ ನ್ಯಾಯಮೂರ್ತಿ ನಾಗರತ್ನ ಹಿಂದಕ್ಕೆ

ನವದೆಹಲಿ: ಬೆಳಗಾವಿಯನ್ನು ಕರ್ನಾಟಕಕ್ಕೆ ಸೇರಿಸಿದ್ದನ್ನು ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಹೂಡಿರುವ ಮೂಲದಾವೆಯ ವಿಚಾರಣೆಯಿಂದ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಬುಧವಾರ ಹಿಂದೆ ಸರಿದಿದ್ದಾರೆ.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್, ಹೃಷಿಕೇಶ ರಾಯ್ ಹಾಗೂ ನಾಗರತ್ನ ಅವರಿದ್ದ ಪೀಠವು ವಿಚಾರಣೆಯನ್ನು ಬುಧವಾರ ನಡೆಸಬೇಕಿತ್ತು. ಕರ್ನಾಟಕ ಮೂಲದವರಾದ ನಾಗರತ್ನ ಅವರು ವಿಚಾರಣೆಯಿಂದ ಹಿಂದಕ್ಕೆ ಸರಿಯುವುದಾಗಿ ಪ್ರಕಟಿಸಿದರು. ಗಡಿ ವಿವಾದದ ವಿಚಾರಣೆಗೆ ಮುಖ್ಯ ನ್ಯಾಯಮೂರ್ತಿ ಅವರು ಹೊಸ ಪೀಠ ಸ್ಥಾಪಿಸಲಿದ್ದಾರೆ.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಜಾತಿ ವ್ಯವಸ್ಥೆ ಪಿಡುಗಿಗಾಗಿ ಮೋಹನ್ ಭಾಗವತ್ ಅವರು ‘ಪಂಡಿತ’ರನ್ನು ದೂಷಿಸಿದ್ದಾರೆ. ಇದು, ಆರ್‌ಎಸ್‌ಎಸ್ ತನ್ನ ವ್ಯಾಪ್ತಿ ವಿಸ್ತರಿಸಿಕೊಳ್ಳಲು ನೆರವಾಗಲಿದೆ ಎಂದು ನೀವು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಸುಧಾ, ಮಯೂರ ಓದಿರಿ

ನ್ಯಾಯಾಂಗ ನಿಂದನೆ: ವಕೀಲ ಪೊಲೀಸ್ ವಶಕ್ಕೆ

ಬೆಂಗಳೂರು: ನ್ಯಾಯಮೂರ್ತಿಗಳು ಮತ್ತು ನ್ಯಾಯಾಂಗದ ವಿರುದ್ಧ ಅವಹೇಳನಕಾರಿ ವರ್ತನೆ ತೋರಿದ ಆರೋಪ ಮೇಲೆ ವಕೀಲ ಕೆ.ಎಸ್. ಅನಿಲ್ ಅವರನ್ನು ಇದೇ 10ರವರೆಗೆ ಪೊಲೀಸ್ ವಶದಲ್ಲಿ ಇರಿಸಿಕೊಳ್ಳುವಂತೆ ಹೈಕೋರ್ಟ್ ಆದೇಶಿಸಿದೆ.

ಹೈಕೋರ್ಟ್ 2019ರಲ್ಲಿ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಇದೇ 2ರಂದು ಈ ಆದೇಶ ಹೊರಡಿಸಿದೆ.

‘ಆರೋಪಿ ನ್ಯಾಯಾಂಗ ನಿಂದನೆ ಎಸಗಿರುವುದು ಸಾಬೀತಾಗಿರುವ ಹಿನ್ನೆಲೆಯಲ್ಲಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸದೆ ಬೇರೆ ದಾರಿ ಕಾಣುತ್ತಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

‘ವಕೀಲಿಕೆ ನಡೆಸುತ್ತಿರುವ ಆರೋಪಿ ನಿರಂತರವಾಗಿ ನ್ಯಾಯಾಂಗದ ಘನತೆಗೆ ಕುಂದು ತರುತ್ತಿದ್ದು ವೃಥಾ ಆರೋಪಗಳನ್ನು ಮಾಡುತ್ತಿದ್ದಾರೆ. ಇದರಿಂದ ಸಾರ್ವಜನಿಕರ ದೃಷ್ಟಿಯಲ್ಲಿ ನ್ಯಾಯಾಂಗದ ಬಗೆಗಿನ ವರ್ಚಸ್ಸಿಗೆ ಧಕ್ಕೆ ಆಗುತ್ತದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಇದೇ 10ರಂದು ಆರೋಪಿಯನ್ನು ಕೋರ್ಟ್‌ಗೆ ಹಾಜರುಪಡಿಸುವಂತೆ ನಿರ್ದೇಶಿಸಲಾಗಿದೆ.

ಪುನೀತ್ ಸ್ಮಾರಕ ನಿರ್ಮಾಣ: ಬೊಮ್ಮಾಯಿ ಭರವಸೆ



ಬೆಂಗಳೂರು: ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಸಮಾಧಿಯನ್ನು ಸ್ಮಾರಕ ಮಾಡಲಾಗುವುದು. ಅಂಬರೀಶ್ ಸ್ಮಾರಕ ಕಾರ್ಯ ಪೂರ್ಣಗೊಂಡಿದ್ದು, ಮಾರ್ಚ್‌ನಲ್ಲಿ ಉದ್ಘಾಟಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ, ರಿಂಗ್ ರಸ್ತೆಗೆ ಡಾ. ಪುನೀತ್ ರಾಜಕುಮಾರ ರಸ್ತೆ ಎಂದು ನಾಮಕರಣ ಮಾಡಿ ಬಳಿಕ ಅವರು ಮಾತನಾಡಿದರು.

‘ಅಂಬರೀಶ್ ನನ್ನ ಆತ್ಮೀಯ ಸ್ನೇಹಿತರಾಗಿದ್ದರು. ಅವರ ಹೆಸರನ್ನು ರೇಸ್‌ಕೋರ್ಸ್ ರಸ್ತೆಗೆ ಇಡಲು ತೀರ್ಮಾನಿಸಿದ್ದೇನೆ. ಅವರ ಜತೆ ವಾರದಲ್ಲಿ ಏಳೂ ದಿನ ಜೊತೆಗಿರುತ್ತಿದೆ. ಅವರ ಸ್ಮಾರಕ ಮಾಡುವ ಸೌಭಾಗ್ಯ ನನ್ನದು. ರಾಜ್‌ಕುಮಾರ್, ಅಂಬರೀಶ್, ವಿಷ್ಣುವರ್ಧನ್, ಶಂಕರ್‌ನಾಗ್, ಅಪ್ಪು ಇವರೆಲ್ಲ ನಮ್ಮನ್ನು ರಂಜಿಸಲು ಬಂದಿದ್ದರು ಎನಿಸುತ್ತದೆ. ನಮ್ಮೆಲ್ಲರಿಗೂ ಪ್ರೀತಿ ಬಿಟ್ಟು ಹೋಗಿದ್ದಾರೆ’ ಎಂದರು.

‘ಕಂದಾಯ ಸಚಿವ ಆರ್. ಅಶೋಕ ಅವರು ಏನು ಅಂದುಕೊಳ್ಳುತ್ತಾರೋ ಅದನ್ನು ಮಾಡುತ್ತಾರೆ. ಪ್ರತಿಯೊಂದು ವಾರ್ಡ್ ಅಭಿವೃದ್ಧಿ ಮಾಡಿದ್ದಾರೆ. ಉದ್ಯಾನವನ, ಶಾಲೆ, ಆಸ್ಪತ್ರೆಗಳನ್ನು ಮಾಡಿದ್ದಾರೆ. ಎರಡು ಉದ್ಯಾನಗಳು ಕಸದ ತೊಟ್ಟಿಯಾಗಿದ್ದವು. ಅವುಗಳನ್ನೂ ಅಭಿವೃದ್ಧಿಪಡಿಸಿದ್ದಾರೆ. ರಿಂಗ್ ರಸ್ತೆಗೆ ಅಪ್ಪು ಹೆಸರು ಇಟ್ಟು, ಅವರ ಹೆಸರನ್ನು ಚಿರಸ್ಥಾಯಿಯಾಗಿಸಿದ್ದಾರೆ’ ಎಂದರು.

ಕಾರ್ಯಕ್ರಮದಲ್ಲಿ ಸಚಿವ ಆರ್. ಅಶೋಕ, ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಸತೀಶ್ ರೆಡ್ಡಿ, ರವಿ ಸುಬ್ರಹ್ಮಣ್ಯ, ಉದಯ ಗರುಡಾಚಾರ್, ಎಂ.ಕೃಷ್ಣಪ್ಪ, ನಟ ರಾಘವೇಂದ್ರ ರಾಜ್‌ಕುಮಾರ್, ಅಭಿಷೇಕ್ ಅಂಬರೀಶ್ ಇದ್ದರು.

ನೋಂದಣಿ: ನಕಲಿ ತಡೆಗೆ ತಮಿಳುನಾಡು ಮಾದರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆಗಳನ್ನು ಬಳಸಿಕೊಂಡು ಸ್ಥಿರಾಸ್ತಿಗಳ ನೋಂದಣಿ ಮಾಡಿಸಿ ಪರರ ಆಸ್ತಿಗಳನ್ನು ಕಬಳಿಸುವವರನ್ನು ನಿಯಂತ್ರಿಸುವುದಕ್ಕಾಗಿ ತಮಿಳುನಾಡು ಮಾದರಿಯಲ್ಲಿ ನೋಂದಣಿ ಕಾಯ್ದೆಗೆ ತಿದ್ದುಪಡಿ ತರುವಂತೆ ನೋಂದಣಿ ಮತ್ತು ಮುದ್ರಾಂಕ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದಾರೆ.

ಒಬ್ಬರ ಆಸ್ತಿಯನ್ನು ಬೇರೊಬ್ಬರು ನಕಲಿ ದಾಖಲೆಗಳನ್ನು ಬಳಸಿಕೊಂಡು ನೋಂದಣಿ ಮಾಡಿಸಿಕೊಂಡರೆ ಅಥವಾ ಸರ್ಕಾರಿ ಆಸ್ತಿಗಳನ್ನು ಪರಭಾರೆ ಮಾಡಿದರೆ ನೋಂದಣಿ ರದ್ದುಪಡಿಸಲು ನ್ಯಾಯಾಲಯದ ಮೊರೆಹೋಗಬೇಕಿದೆ. ತಮಿಳುನಾಡು ಸರ್ಕಾರವು ನೋಂದಣಿ ಕಾಯ್ದೆಗೆ ತಿದ್ದುಪಡಿ ತಂದು, ಅಂತಹ ನೋಂದಣಿಗಳನ್ನು ರದ್ದುಪಡಿಸುವ ಅಧಿಕಾರವನ್ನು ಜಿಲ್ಲಾ ನೋಂದಣಾಧಿಕಾರಿಗಳಿಗೆ ನೀಡಿದೆ. ಅದೇ ಮಾದರಿ ಅನುಸರಿಸಲು ರಾಜ್ಯದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯೂ ಮುಂದಾಗಿದೆ.

ಕಂದಾಯ ಸಚಿವ ಆರ್. ಅಶೋಕ ಅವರಿಗೆ ಪ್ರಸ್ತಾವ ಸಲ್ಲಿಸಿರುವ ನೋಂದಣಿ ಮತ್ತು ಮುದ್ರಾಂಕ ಆಯುಕ್ತೆ ಬಿ.ಆರ್. ಮಮತಾ, ‘ನಕಲಿ ದಾಖಲೆಗಳ ಆಧಾರದಲ್ಲಿ ನಡೆಯುವ ನೋಂದಣಿಗಳನ್ನು ರದ್ದುಗೊಳಿಸುವ ಅಧಿಕಾರವನ್ನು ಜಿಲ್ಲಾ ನೋಂದಣಿ ಅಧಿಕಾರಿಗಳಿಗೆ ನೀಡಬೇಕು. ಈ ರೀತಿಯ ಪ್ರಕರಣಗಳಲ್ಲಿ ಶಾಮೀಲಾದ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವುದಕ್ಕೂ ಅವಕಾಶ ಕಲ್ಪಿಸಲು ನೋಂದಣಿ ಕಾಯ್ದೆಗೆ ತಿದ್ದುಪಡಿ ತರಬೇಕು’ ಎಂದು ಕೋರಿದ್ದಾರೆ.

ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳು ಪ್ರಸ್ತಾವವನ್ನು ಪರಿಶೀಲಿಸಿದ್ದು, ಕಾಯ್ದೆ ತಿದ್ದುಪಡಿ ಕುರಿತು ಕಾನೂನು ಇಲಾಖೆಯ ಅಭಿಪ್ರಾಯ ಕೋರಿದ್ದಾರೆ.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಮಮತಾ, ‘ತಮಿಳುನಾಡಿನಲ್ಲಿ ನೋಂದಣಿ ಕಾಯ್ದೆ ತಿದ್ದುಪಡಿ ಬಳಿಕ ನಕಲಿ ದಾಖಲೆಗಳನ್ನು ಬಳಸಿಕೊಂಡು ಆಸ್ತಿ ಲಪಟಾಯಿಸುವ ಪ್ರಕರಣಗಳು ಕಡಿಮೆಯಾಗಿವೆ. ಅದೇ ಮಾದರಿಯಲ್ಲಿ ಕಾಯ್ದೆಗೆ ತಿದ್ದುಪಡಿ ತಂದರೆ ರಾಜ್ಯದಲ್ಲೂ ಅಕ್ರಮಗಳಿಗೆ ಕಡಿವಾಣ ಹಾಕಬಹುದು. ಅದಕ್ಕೆ ಪೂರಕವಾಗಿ ನೋಂದಣಿ ಕಾಯ್ದೆಗೆ ತಿದ್ದುಪಡಿ ತರುವಂತೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದರು.

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರ – ನೋಂದಾಯಿತ ಸ್ವಾಯತ್ತ ಸಂಸ್ಥೆ ಹಾಗೂ ಎನ್.ಎ.ಬಿ.ಹೆಚ್. ನಿಂದ ಮಾನ್ಯತೆ ಹೊಂದಿದ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069.
SRI JAYADEVA INSTITUTE OF CARDIOVASCULAR SCIENCES & RESEARCH
(Govt. of Karnataka Regd. Autonomous & NABH Accredited Institute)
Bannerghatta Road, Bangalore – 560 069. Ph.: 080 22977278 Fax No.: 080 22977278
E-mail: director@jayadevacardiology.com Website: www.jayadevacardiology.com
Ref. No. SJICR/EST(3)/477/2022-23 Date: 08.02.2023
CORRIGENDUM
In the Notification No. SJICR/EST(3)/477/2022-23, Dated: 01-02-2023, the word Stipendary Staff Nurse be read as Staff Nurse on contract basis.
Sd/-, DIRECTOR

ವಾಣಿಜ್ಯ ತೆರಿಗೆ ಇಲಾಖೆ
ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ರವರ ಕಛೇರಿ
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–5, ಕೊಠಡಿ ಸಂಖ್ಯೆ: 501, “ಬಿ” ಬ್ಲಾಕ್, 5ನೇ ಮಹಡಿ, ವಾಣಿಜ್ಯ ತೆರಿಗೆ ಕಾರ್ಯಾಲಯ–2, ಕೋರಮಂಗಲ, ಬೆಂಗಳೂರು–560047.
ದೂರವಾಣಿ ಸಂಖ್ಯೆ: 080–25706157 ಫ್ಯಾಕ್ಸ್: 080–25706175.
ಸಂ. ವಾತೆಜಂಆ(ಆ)/ವಿಸ&ಸೇತೆಕ–5/ವಾಹನ/ಸಿಆರ್–16/2022–23 ದಿನಾಂಕ: 07–02–2023
ಟೆಂಡರ್ ಅಧಿಸೂಚನೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–5, ಕೋರಮಂಗಲ, ಬೆಂಗಳೂರು ಈ ಕಛೇರಿಯ ಉಪಯೋಗಕ್ಕಾಗಿ ಒಟ್ಟು 11 (ಹನ್ನೊಂದು) ವಾಹನಗಳನ್ನು, ಮಾಲೀಕರೇ ಚಾಲಕರಾಗಿರುವ ಅಧಿಕೃತ ಹವಾ ನಿಯಂತ್ರಿತವಿಲ್ಲದ ವಾಹನವನ್ನು ಮಾಸಿಕ ಬಾಡಿಗೆ ರೂ.35,000/– ಆಧಾರದ ಮೇಲೆ 2018 ಮತ್ತು ನಂತರದ ಮಾದರಿಯ ವಾಹನಗಳನ್ನು ಪಡೆಯಲು ನಿಶ್ಚಯಿಸಲಾಗಿದೆ. ಸಂಬಂಧಿಸಿದ ವಿವರವಾದ ಷರತ್ತುಗಳನ್ನು ದಿನಾಂಕ 07–02–2023 ರಂದು ಇಲಾಖೆಯ ಸೂಚನಾ ಫಲಕಕ್ಕೆ ಅಂಟಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22–02–2023ರ ಸಾಯಂಕಾಲ 5.00 ಗಂಟೆ. ಅರ್ಜಿಯನ್ನು ವಾಹನದ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಛೇರಿ ಸಮಯದೊಳಗೆ ವಾಹನ ಶಾಖೆ ಅಥವಾ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇ.ಕ), ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕಛೇರಿ (ಆಡಳಿತ), ವಿ.ಸ&ಸೇ.ತೆ.ಕ–5, ಬೆಂಗಳೂರು, ಇವರಲ್ಲಿ ಸಂಪರ್ಕಿಸಬಹುದು.
ಸಹಿ/– ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿ.ಸ.ಸೇ.ತೆಕ–5, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/4574/ಅಕಾರ್/22–23

ಕರ್ನಾಟಕ ರೆಡ್ಡಿಜನ ಸಂಘ
ಕೋರಮಂಗಲ, ಬೆಂಗಳೂರು–560034.
ಪ್ರಕಟಣೆ
LXXIV ACC & SJ (CCH-75) Mayo Hall Unit, Bangalore
ನ್ಯಾಯಾಲಯದ ಪ್ರಕರಣ ಸಂಖ್ಯೆ ಓ.ಎಸ್. 25168/ 2023 ದಿನಾಂಕ : 6–2–2023ರ ಆದೇಶದಂತೆ ಕರ್ನಾಟಕ ರೆಡ್ಡಿಜನ ಸಂಘದ ಇದುವರೆಗೂ ಸ್ಮಾರ್ಟ್‌ಕಾರ್ಡ್ ಪಡೆಯದ ಎಲ್ಲಾ ಆಜೀವ ಸದಸ್ಯರುಗಳು ದಿನಾಂಕ : 01–03–2023ರ ಒಳಗೆ ಸ್ಮಾರ್ಟ್‌ಕಾರ್ಡ್ ಪಡೆಯಲು ಸಂಘಕ್ಕೆ ಅರ್ಜಿ ಸಲ್ಲಿಸತಕ್ಕದ್ದು.
ಪ್ರಧಾನ ಕಾರ್ಯದರ್ಶಿ

INNOVATE KARNATAKA K-tech
ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
Tender No: KITS/EP/BTS/1/2021-EVPR-KITS
ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿಯು (ಕಿಟ್ಸ್), ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ, ವಿದ್ಯುನ್ಮಾನ & ಜೈವಿಕ ತಂತ್ರಜ್ಞಾನ ಇಲಾಖೆಯ ಪರವಾಗಿ “ಫ್ಲ್ಯಾಗ್‌ಶಿಪ್ ವಿದ್ಯಮಾನಗಳನ್ನು ಆಯೋಜಿಸಲು ವಿದ್ಯಮಾನಗಳ ನಿರ್ವಹಣಾ ಏಜೆನ್ಸಿ (Event curation and management Agency) ಆಯ್ಕೆಯನ್ನು” ಉದ್ದೇಶಿಸಿದೆ. ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ, ವಿದ್ಯುನ್ಮಾನ & ಜೈವಿಕ ತಂತ್ರಜ್ಞಾನಗಳ ಹಾಗೂ ಇತರೆ ಜ್ಞಾನಭರಿತ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಹಾಗೂ ಪ್ರಾಬಲ್ಯತೆಗಳನ್ನು ಪ್ರದರ್ಶಿಸಲು ಫ್ಲ್ಯಾಗ್‌ಶಿಪ್ ವಿದ್ಯಮಾನಗಳ ಆಯೋಜನೆಗಾಗಿ ಕಿಟ್ಸ್ ಒಂದು ಪ್ರತಿಷ್ಠಿತ ಸಂಸ್ಥೆಯನ್ನು ಪಾರದರ್ಶಕತೆ ಪ್ರಕ್ರಿಯೆಯ ಮೂಲಕ ನಿಯೋಜಿಸಲು ಇಚ್ಛಿಸಿದೆ.
ಹಿನ್ನೆಲೆ, ಅರ್ಹತಾ ಅಗತ್ಯತೆಗಳು, ಆಯ್ಕೆ ಪ್ರಕ್ರಿಯೆ ಹಾಗೂ ಇತರೆ ನಿಯಮ ಹಾಗೂ ನಿಬಂಧನೆಗಳನ್ನು ಒಳಗೊಂಡ ಟೆಂಡರ್ ದಾಖಲಾತಿಯನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಇಲಾಖೆಯ ವೆಬ್‌ಸೈಟ್ (https://eproc.karnataka.gov.in) ನಲ್ಲಿ ಪಡೆದುಕೊಳ್ಳಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 13.03.2023 ರಂದು ಸಂಜೆ 5.00 ಗಂಟೆಯವರೆಗೆ.
ಸ್ವೀಕರಿಸಿದ ಯಾವುದೇ/ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಹಕ್ಕನ್ನು ಕಿಟ್ಸ್ ಕಾಯ್ದಿರಿಸಿಕೊಂಡಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು ಕಿಟ್ಸ್
ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಬಿಎಂಟಿಸಿ ಕೇಂದ್ರ ಕಛೇರಿಗಳ ಕಟ್ಟಡ, ಟಿಟಿಎಂಸಿ ‘ಬಿ’ ಬ್ಲಾಕ್, 4ನೇ ಮಹಡಿ, ಶಾಂತಿನಗರ, ಕೆ. ಹೆಚ್. ರಸ್ತೆ, ಬೆಂಗಳೂರು–560027.
ದೂರವಾಣಿ: 080–22231006/8. ಇ–ಮೇಲ್: mdkbits@gmail.com
ವಾ.ಸಾ.ಸಂ.ಇ/ವಾಪ್ರ/4469/ಅಕಾರ್/22–23

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ
ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ.
(ಟೆಲಿ–ಮೆಡಿಸಿನ್ ಕಾರ್ಯಕ್ರಮ)
Ph: 08194-235464 E-mail: dhochitrdurga@gmail.com
ಸಂ.: ಡಿಎಲ್‌ಓ/ಇ–ಹಾಸ್ಪಿಟಲ್/ /2022–23 ದಿನಾಂಕ: 03.02.2022
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ–2ನೇ ಕರೆ
ಚಿತ್ರದುರ್ಗ ಜಿಲ್ಲೆಯ ಆರೋಗ್ಯ ಮತ್ತು ಕು.ಕ.ಕಛೇರಿಯ ಟೆಲಿ–ಮೆಡಿಸಿನ್ ಕಾರ್ಯಕ್ರಮ ವಿಭಾಗದಲ್ಲಿ ಫಲಾನುಭವಿಗಳನ್ನು ಟೆಲಿ–ಕನ್ಸಲ್‌ಟೇಶನ್ ಮೂಲಕ ಸಂಪರ್ಕ ಮಾಡಲು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸರಬರಾಜು ಮಾಡಲು ಅಗತ್ಯವಾಗಿ ಬೇಕಾಗಿರುವ 86– ಗಣಕಯಂತ್ರ, ಮುದ್ರಣಯಂತ್ರ ಮತ್ತು ಇತರೆ ಅವಶ್ಯಕ ಉಪಕರಣಗಳ ಒಟ್ಟು 86 ಸೆಟ್ ಖರೀದಿಗೆ, ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಹೊರಡಿಸುತ್ತಿರುವ ಬಗ್ಗೆ ಅಧಿನಿಯಮ (ಕೆಟಿಪಿಪಿ) 1999 ನಿಯಮಗಳು 2000 ರ ಪ್ರಕಾರ –ಪ್ರೊಕ್ಯೂರ್‌ಮೆಂಟ್ ಟೆಂಡರ್ ಮೂಲಕ ಪಡೆಯುವ ಬಗ್ಗೆ, ಹೆಚ್ಚಿನ ಮಾಹಿತಿಗಾಗಿ ಅಧೀಕೃತ ಜಾಲತಾಣ (Website: www.eproc.karnataka.gov.in) ದಲ್ಲಿ ಪಡೆಯಬಹುದು.
ಸಹಿ/– ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ
RO No. 961:DIPR/CTA/KSMCA/2022-23

ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in
ಸಂಖ್ಯೆ: ಕಾಇಂ/ಪಂ.ರಾ.ಇ.ವಿ/ವಿಜ/ಇಪ್ರಾ/ಟೆಂಡರ್/2022–23/3166 ದಿನಾಂಕ:07.02.2023
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟಿ ಪದ್ಧತಿ)
ಕಾರ್ಯನಿರ್ವಾಹಕ ಇಂಜನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2022–23ನೇ ಸಾಲಿನ 5054 ವಿಶೇಷ ಅನುದಾನ ಲೆಕ್ಕ ಶೀರ್ಷಿಕೆ ಯೋಜನೆಯಡಿಯಲ್ಲಿ (1) ಬಸವನಬಾಗೇವಾಡಿ ತಾಲೂಕಿನ ಜಾಲಿಹಾಳ ದಿಂದ ಮನಗೂಳಿ ವರೆಗೆ ರಸ್ತೆ ಸುಧಾರಣೆ (ಕಿ.ಮೀ. 0.00 ದಿಂದ 5.00 ವರೆಗೆ) ರೂ. 230.00 ಲಕ್ಷಗಳು (KW–4) ಕಾಮಗಾರಿಗಳನ್ನು ಇ–ಟೆಂಡರ್‌ನ್ನು ದ್ವಿ ಲಕೋಟಿ ಪದ್ಧತಿಯಲ್ಲಿ ಅಹ್ವಾನಿಸಿದ್ದು. ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.eproc.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/852/ಕೆಎಸ್‌ಎಂಸಿಎ/2022–23

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ.
ಸಂಖ್ಯೆ : ಗ್ರಾ.ಕು.ನೀ.ಮತ್ತುನೈ.ವಿ./ಬಾಗಲಕೋಟೆ/ ಪಿಬಿ–3/ಟೆಂಡರ್/2022–23/2708 ದಿನಾಂಕ : 07–02–2023
ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.
Mudhol Taluka : 1) Indent No - 53882 (Metagudda) APT-210.23 Lakhs, CALL-2, 2) Indent No - 53916 (Gulagal Jambagi) APT-129.15 Lakhs, CALL-2.
1) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ. 2) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 14–02–2023 ಸಾಯಂಕಾಲ 5.30 ಗಂಟೆಯ ವರೆಗೆ. 3) ಹೆಚ್ಚಿನ ವಿವರಗಳಿಗಾಗಿ ಅಂತರ್ಜಾಲದಲ್ಲಿ ನೋಡಬಹುದಾಗಿದೆ. ವಿಳಾಸ www.eproc.karnataka.gov.in.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾ.ಕು.ನೀ.&ನೈ. ವಿಭಾಗ, ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟ/854/ಮಣಿಪಾಲ್/2022–23

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929
ಸಂಖ್ಯೆ: ರಾಗಾವಿ/ಪ್ರೊಕ್/ಚಿನ್ನದ ಪದಕಗಳು/95/2022–23 ದಿನಾಂಕ: 07.02.2023
ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)
ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಇವರು ಆರ್‌ಜಿಯುಹೆಚ್‌ಎಸ್‌ಗೆ ಚಿನ್ನದ ಪದಕಗಳನ್ನು ಸರಬರಾಜು ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಷರತ್ತುಗಳ ಉಲ್ಲೇಖದಲ್ಲಿ ನೀಡಲಾಗಿದೆ.

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	07/02/2023
ಪೂರ್ವ ಬಿಡ್ ಸಭೆಯ ದಿನಾಂಕ	14/02/2023 ಬೆಳಿಗ್ಗೆ 12:00 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	22/02/2023 ಸಂಜೆ 5:00 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	23/02/2023 ಸಂಜೆ 5:15 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು https://eproc.karnataka.gov.in ನಿಂದ ಪಡೆದುಕೊಳ್ಳಬಹುದು.
ಸಹಿ/– ಕುಲಸಚಿವರು
ವಾ.ಸಾ.ಸಂ.ಇ/4553/2022–23

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.
Notification No. KBH/CE/Edu.Dept/GFGC/AEF/254 to 269 / 2022-23 Dated: 31.01.2023
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮಂಟ್ ಮೂಲಕ)
ಕರ್ನಾಟಕ ಗೃಹ ಮಂಡಳಿಯು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗಾಗಿ ರಾಜ್ಯದ ವಿವಿಡೆಡೆ ನಿರ್ಮಿಸಲು ಉದ್ದೇಶಿಸಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ಕಾಮಗಾರಿಗಳಿಗೆ (ಪ್ಯಾಕೇಜ್–1 ರಿಂದ 16) ವಾಸ್ತು ಶಿಲ್ಪಿ ಸಂಸ್ಥೆಗಳ ನೇಮಕಾತಿಗಾಗಿ e-Procurement ಮೂಲಕ ಈ ಕೆಳಕಂಡ ಅಧಿಸೂಚನೆಯಲ್ಲಿ ಟೆಂಡರ್ ಕರೆಯಲಾಗಿದೆ. ಇನ್ನಿತರ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಕೆಳಕಂಡ ವಿಳಾಸದಲ್ಲಿ ಮತ್ತು ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದಾಗಿದೆ.
ವಿವರಗಳು ಕೆಳಕಂಡಂತಿವೆ
ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 15–02–2023 ಸಂಜೆ 4.00 ಗಂಟೆಗೆ
ಕಾಮಗಾರಿಗಳ ಬಗ್ಗೆ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಅಂತರ್ ಜಾಲವನ್ನು ಸಂಪರ್ಕಿಸುವುದು
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕೆ.ಜಿ. ರಸ್ತೆ, ಬೆಂಗಳೂರು–560009. ದೂರವಾಣಿ: 080–22273511, 080–22100077
ಇ–ಮೇಲ್ ವಿಳಾಸ: cheifengineerkhb@gmail.com
Web Site: www.karnatakahousing.com, https://eproc.karnataka.gov.in
ಸಹಿ/– ಕಾರ್ಯಪಾಲಕ ಅಭಿಯಂತರರು ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
DIPR/CP/VCPL/4555/2022-23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:KW-3&4:ಟೆಂ:2022–23:4565 ದಿನಾಂಕ:06–02–2023.
ಅಲ್ಪಾಕಾಲಾವಧಿ ಟೆಂಡರ್ ಹಾಗೂ ಅವಧಿ ವಿಸ್ತರಣೆ ಪ್ರಕಟಣೆ
2022–23ನೇ ಸಾಲಿನ ಲೆಕ್ಕ ಶೀರ್ಷಿಕೆ: ಲೆಕ್ಕ ಶೀರ್ಷಿಕೆ: 4059–80–051–0–29–422 ಎಸ್‌ಸಿಪಿ ಯೋಜನೆ, 8443–ಠೇವಣಿ ವಂತಿಕೆ ಮತ್ತು 4059–ನ್ಯಾಯಾಲಯ ಕಟ್ಟಡ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW-3&4ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in. ಮುಖಾಂತರ ಭಾಗವಹಿಸಬಹುದು. ಕಾಮಗಾರಿ ವರ್ಕ ಇಂಡೆಂಟ್ ಸಂಖ್ಯೆ: 164517, 163918 & 163478 (ಒಟ್ಟು 03 ಕಾಮಗಾರಿಗಳಿಗೆ) ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: 21–02–2023 ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22–02–2023 ಸಮಯ 16.30 ಗಂಟೆ, ಅರ್ಥಿಕ ಬಿಡ್ ತೆರೆಯುವ ದಿನಾಂಕ: 24–02–2023 ಸಮಯ 11.00 ಗಂಟೆ, ಮತ್ತು ಅಂದಾಜು ಮೊತ್ತ ಗರಿಷ್ಠ ರೂ. 1500.00 ಲಕ್ಷಗಳು, ಕನಿಷ್ಠ ರೂ. 100.00 ಲಕ್ಷಗಳು ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ., ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರಿಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಡಿಕೊಳ್ಳುವುದು / ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋ.ಇ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/633/ಕೆಎಸ್‌ಎಂಸಿಎ/2022–23

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಛೇರಿ, ಕನನೀಸ ಮತ್ತು ಒಚ ಮಂಡಳಿ, ಜಲಭವನ, ನಂ.ಪಿ–4, 10ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿಪುರಂ, ಮೈಸೂರು–570 009.
Ph no: 0821- 2545894, Email: kwbcemys2014@gmail.com
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾಮಗಾರಿಯ ವಿವರ: ಕೇಂದ್ರ ಪುರಸ್ಕೃತ ಅಮೃತ್–2.0 ಯೋಜನೆಯಡಿ ಮೈಸೂರು ನಗರದ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ನೀರು ಸರಬರಾಜು ಯೋಜನೆ ಹಾಗೂ 5 ವರ್ಷಗಳ ಕಾರ್ಯಚರಣೆ ಮತ್ತು ನಿರ್ವಹಣೆ ಕಾಮಗಾರಿಯ ರೂ.27.01 ಕೋಟಿಗಳಿಗೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಇಂಡೆಂಟ್ ಸಂಖ್ಯೆ: KUWSDB/2022-23/WS/WORK_INDENT 3317 ರಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://eproc.karnataka.gov.in ಸಂಪರ್ಕಿಸುವುದು.
ಸಹಿ/– ಮುಖ್ಯ ಅಭಿಯಂತರರು ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ಮೈಸೂರು
DIPR/DDMYS/KSMCA/986/2022-23

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ಕೃಷ್ಣರಾಜ ಸಾಗರ ಆಧುನೀಕರಣ ಮತ್ತು ಮಧ್ಯಮ ನೀರಾವರಿ ಯೋಜನಾ ವಿಭಾಗ, ಮಳವಳ್ಳಿ. ಜಿಲ್ಲೆ: ಮಂಡ್ಯ ಪಿನ್‌ಕೋಡ್–571430
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 04/2022–23 ದಿನಾಂಕ:03.02.2023
ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 04/2022–23 ದಿನಾಂಕ 03.02.2023 ರಲ್ಲಿ ಒಟ್ಟು 2 ಕಾಮಗಾರಿ (ಅಂದಾಜಿನ ಕನಿಷ್ಠ ಮೊತ್ತ 350.00 ಗರಿಷ್ಠ ಮೊತ್ತ 375.00 ಲಕ್ಷ) ಗಳಿಗೆ ಕೆ.ಡಬ್ಲ್ಯೂ–4 ರನ್ವಯ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ದಿನಾಂಕವನ್ನು ಹಾಗೂ ಇತರೆ ವಿವರಗಳನ್ನು ಇ–ಪೋರ್ಟಲ್ www.eproc.karnataka.gov.in ನಲ್ಲಿ ಪಡೆಯಬಹುದು.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ಕೆಆರ್‌ಎಸ್‌ಎಂ ಅಂಡ್ ಎಂಐಪಿ ವಿಭಾಗ, ಮಳವಳ್ಳಿ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/652/2022–23

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
“ಜ್ಞಾನ ಸಂಗಮ”, ಬೆಳಗಾವಿ–590018, ಕರ್ನಾಟಕ, ಭಾರತ
ಕ್ರಮ ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./2022–23/ಐ.ಎಫ್.ಟಿ.ನಂ. 39/6687 ದಿನಾಂಕ:07–02–2023
ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮೂಲಕ)
ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ಸನ್ 2023–24 ನೇ ಸಾಲಿನ ಅವಧಿಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ “ಜ್ಞಾನ ಸಂಗಮ”, ಬೆಳಗಾವಿ ಮತ್ತು ಬೆಂಗಳೂರು, ಮೈಸೂರು, ಕಲಬುರಗಿ ಪ್ರಾದೇಶಿಕ ಕಚೇರಿಗಳಿಗೆ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸುವ ಕೆಲಸಕ್ಕಾಗಿ ಅರ್ಹ ನೋಂದಾಯಿತ ಟೂರ್ಸ್ ಮತ್ತು ಟ್ರಾವೆಲ್ಸ್‌ದಾರರಿಂದ ಟೆಂಡರನ್ನು ಇ–ಪ್ರೊಕ್ಯೂರಮೆಂಟ್ ಮೂಲಕ ಆಹ್ವಾನಿಸಲಾಗಿರುತ್ತದೆ. ಕೆಲಸದ ಹೆಸರುಗಳು:– 1)ಕೇಂದ್ರ ಕಚೇರಿ, ಬೆಳಗಾವಿಗೆ ಒಂದು ವರ್ಷದ ಗುತ್ತಿಗೆ ಮೊತ್ತ ರೂ.20,00,000/–, 2)ಬೆಂಗಳೂರು ಪ್ರಾದೇಶಿಕ ಕಚೇರಿಗೆ ಒಂದು ವರ್ಷದ ಗುತ್ತಿಗೆ ಮೊತ್ತ ರೂ.20,00,000/–, 3)ಮೈಸೂರು ಪ್ರಾದೇಶಿಕ ಕಚೇರಿಗೆ ಒಂದು ವರ್ಷದ ಗುತ್ತಿಗೆ ಮೊತ್ತ ರೂ.20,00,000/– ಮತ್ತು 4)ಕಲಬುರಗಿ ಪ್ರಾದೇಶಿಕ ಕಚೇರಿಗೆ ಒಂದು ವರ್ಷದ ಗುತ್ತಿಗೆ ಮೊತ್ತ ರೂ.20,00,000/–.ಸದರಿ ಟೆಂಡರ್‌ನ ಇತರ ವಿವರಗಳಿಗೆ http://eproc.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ:10.02.2023 ರಿಂದ ಮಾಹಿತಿಯನ್ನು ಪಡೆಯಬಹುದು.
ಸಹಿ/–ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,ಬೆಳಗಾವಿ
DIPR/BGM/RO-NO-1695/KSMCA/2022-23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ವಿಭಾಗ, ಗದಗ
ಕಾ.ಇ: ಗ್ರಾ.ಕು.ನೀ&ನೈ.ವಿ/ಗದಗ/ಕಿ.ಇಂ/ಟೆಂಡರ್/2022–23/1370 ದಿನಾಂಕ: 08.02.2023
ಟೆಂಡರ ಪ್ರಕಟಣೆ
ಪಂಚಾಯತ ರಾಜ್ ಇಂಜಿನೀಯರಿಂಗ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಕುಡಿಯುವ ನೀರು ಸರಬರಾಜು ಯೋಜನೆ ಅಡಿಯಲ್ಲಿ ಗದಗ ಜಿಲ್ಲೆಯ ಈ ಕೆಳಗಿನ ಕಾಮಗಾರಿಯ ಟೆಂಡರನ್ನು “ಇ ಪ್ರೊಕ್ಯುರಮೆಂಟ್” ಮುಖಾಂತರ ಕರೆಯಲಾಗಿದೆ.

ಕ್ರ. ಸಂ	ಇಂಡೆಂಟ್ ಸಂಖ್ಯೆ / ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ	ಮುಂಗಡ ಠೇವಣಿ ಮೊತ್ತ
1	RWSSD/2022-23/WS/ WORK_INDENT55416	150.53 ಲಕ್ಷಗಳು	2.26 ಲಕ್ಷಗಳು

ಈ ಕಾಮಗಾರಿಗಳ ವಿವರಗಳಿಗಾಗಿ ಹಾಗೂ ಡೌನಲೋಡ ಮಾಡಿಕೊಳ್ಳಲು ಗುತ್ತಿಗೆದಾರರು ಕರ್ನಾಟಕ ಸರಕಾರದ “ಇ ಪ್ರೋಕ್ಯೂರಮೆಂಟ್ “ವೆಬ್ಸೈಟ್ https://eproc.karnataka.gov.in ನಲ್ಲಿ ನೋಡಿಕೊಳ್ಳಬಹುದು. ಟೆಂಡರ ಸಲ್ಲಿಸಲು ಪ್ರಾರಂಭವಾಗುವ ದಿನಾಂಕ: 09.02.2023, ಪ್ರಶ್ನೋತ್ತರದ ಕೊನೆಯ ದಿನಾಂಕ : 10.02.2023 Pre-bid meeting ದಿನಾಂಕ: 13.02.2023 ಟೆಂಡರ ಸ್ವೀಕರೀಸುವ ಕೊನೆಯ ದಿನಾಂಕ: 16.02.2023 ತಾಂತ್ರಿಕ ಬಿಡ್ ಟೆಂಡರ ತೆರೆಯುವ ದಿನಾಂಕ: 20.02.2023 ಆರ್ಥಿಕ ಟೆಂಡರ ಬಿಡ್ ತೆರೆಯುವ ದಿನಾಂಕ: 22.02.2023
ಸಹಿ/– ಕಾರ್ಯನಿರ್ವಾಹಕ ಇಂಜೀನಿಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/633/2022–23

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,
ಜಲಭವನ, 5ನೇ ಮಹಡಿ, 1ನೇ ಘಟ್ಟ, 1ನೇ ಹಂತ, ಬಿಟಿಎಂ ಬಡಾವಣೆ, ಬನ್ನೇರುಘಟ್ಟರಸ್ತೆ, ಬೆಂಗಳೂರು–560 029. e-mail: cekwbbng@gmail.com
ISO 9001:2015 NVT-QC CERTIFICATE NO. 2790095
No.KWB/CE(B)/AMRUT2.0/2053/2022-23 Dtd: 06/02/2023
ಅಲ್ಪಾವಧಿ ಟೆಂಡರ್ ಪ್ರಕಟಣೆ: 2ನೇ ಕರೆ
(ಎಲೆಕ್ಟ್ರಾನಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆಳಗೆ ವಿವರಿಸಲಾದ ಕೆಲಸಕ್ಕೆ ಅರ್ಹ ಏಜೆನ್ಸಿ / ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು (ದ್ವಿ ಲಕೋಟೆ ಪದ್ಧತಿ) ಆಹ್ವಾನಿಸಲಾಗಿದೆ :
1) ಕಾಮಗಾರಿಯ ಹೆಸರು ಮತ್ತು ವಿವರ: ಅಮೃತ್–2 ಯೋಜನೆಯಡಿಯಲ್ಲಿ ಜಿಗಣಿ ಪಟ್ಟಣಕ್ಕೆ ಬಿ.ಡಬ್ಲ್ಯು.ಎಸ್.ಎಸ್.ಬಿ. ಮೂಲದಿಂದ ನೀರು ಪೂರೈಕೆ ಸುಧಾರಣೆ ಕಾಮಗಾರಿಗಳು 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ (ಇಡಗಂಟು ಗುತ್ತಿಗೆ (Lumpsum) ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ ಮಾದರಿಯಲ್ಲಿ (DBOT) ಯಾವುದೇ ವೇರಿಯೇಷನ್‌ಗೆ ಅನುವು ಇರುವುದಿಲ್ಲ).
Work Indent No: KUWSDB/2022-23/WS/WORK_INDENT 3251/CALL-2. ಟೆಂಡರ್ ಗಿಟ್ಟ ಅಂದಾಜು ಮೊತ್ತ (GST ಹೊರತುಪಡಿಸಿ): ರೂ.7.63 ಕೋಟಿಗಳು (CAPEX:6.97+OPEX:0.66), ಇಎಂಡಿ (GST ಸೇರಿದಂತೆ): ರೂ.13.50/- ಲಕ್ಷಗಳು. ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ ಮಳೆಗಾಲ ಸೇರಿ: 12 ತಿಂಗಳು.
2) ಕಾಮಗಾರಿಯ ಹೆಸರು ಮತ್ತು ವಿವರ: ಅಮೃತ್–2 ಯೋಜನೆಯಡಿಯಲ್ಲಿ ಹೊಸನಗರ ಪಟ್ಟಣಕ್ಕೆ ನೀರು ಪೂರೈಕೆ ಸುಧಾರಣೆ ಕಾಮಗಾರಿಗಳು 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ (ಇಡಗಂಟು ಗುತ್ತಿಗೆ (Lumpsum) ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ ಮಾದರಿಯಲ್ಲಿ (DBOT) ಯಾವುದೇ ವೇರಿಯೇಷನ್‌ಗೆ ಅನುವು ಇರುವುದಿಲ್ಲ).
KUWSDB/2022-23/WS/WORK_INDENT3252/CALL-2. ಟೆಂಡರ್ ಗಿಟ್ಟ ಅಂದಾಜು ಮೊತ್ತ (GST ಹೊರತುಪಡಿಸಿ): ರೂ.6.09 ಕೋಟಿಗಳು (CAPEX:5.68+OPEX: Rs.0.41). ಇಎಂಡಿ (GST ಸೇರಿದಂತೆ): ರೂ.10.80/- ಲಕ್ಷಗಳು.
ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ ಮಳೆಗಾಲ ಸೇರಿ: 12 ತಿಂಗಳು.
ಟೆಂಡರ್‌ನ ಕಾರ್ಯಸೂಚಿ: 1) ಡಾಕ್ಯುಮೆಂಟ್ ಡೌನ್‌ಲೋಡ್ ಪ್ರಾರಂಭವಾಗುವ ದಿನಾಂಕ ಮತ್ತು ಸಮಯ : 09.02.2023ರ ಬೆಳಗ್ಗೆ 11.30 ಗಂಟೆಯ ನಂತರ. 2) ಪೂರ್ವ ಬಿಡ್ ಸಭೆಯ ದಿನಾಂಕ: 15.02.2023ರ ಬೆಳಗ್ಗೆ 11.30 ಗಂಟೆಗೆ. 3) ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು / ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 24.02.2023ರ ಸಂಜೆ 5.30 ಗಂಟೆಯರವರೆಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 27–02–2023ರ 11.00 ಗಂಟೆಯ ನಂತರ.
ಹೆಚ್ಚಿನ ವಿವರಗಳನ್ನು ಮುಖ್ಯ ಅಭಿಯಂತರರು, ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಬೆಂಗಳೂರು ರವರ ಕಚೇರಿಯನ್ನು ಸಂಪರ್ಕಿಸಿ ಅಥವಾ ವೆಬ್‌ಸೈಟ್: https://eproc.karnataka.gov.in ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080-22371090/22373788, email support: hphelpdesk.blr@intarvo.com ಯಿಂದ ಪಡೆಯಬಹುದಾಗಿರುತ್ತದೆ.
ಸಹಿ/– ಮುಖ್ಯ ಅಭಿಯಂತರರು (ಬಿ), ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು.
DIPR/CP/AAPL/RO4547/22-23

ಎಐಟಿಯುಸಿ ನೇತೃತ್ವದಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಬೃಹತ್ ಪ್ರತಿಭಟನೆ

₹31,500 ಕನಿಷ್ಠ ವೇತನ ನಿಗದಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಅಸಂಘಟಿತ ವಲಯದ ಕಾರ್ಮಿಕರು ಬುಧವಾರ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಅಸಂಘಟಿತ ಹಾಗೂ ಸಂಘಟಿತ ವಲಯದ ಕಾರ್ಮಿಕರನ್ನು ಕನಿಷ್ಠ ವೇತನ ಕಾಯ್ದೆ ವ್ಯಾಪ್ತಿಗೆ ತಂದು ₹31,500 ವೇತನ ನಿಗದಿಗೊಳಿಸಬೇಕು ಎಂದು ಆಗ್ರಹಿಸಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ (ಎಐಟಿಯುಸಿ) ಸಾವಿರಾರು ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

'ಅಂಗನವಾಡಿ ಕಾರ್ಯಕರ್ತೆಯರು, ಬಿಸಿಯೂಟ, ಅಕ್ಷರ ದಾಸೋಹ, ಆಶಾ ಕಾರ್ಯಕರ್ತೆಯರನ್ನು ಕನಿಷ್ಠ ವೇತನ ಕಾಯ್ದೆ ವ್ಯಾಪ್ತಿಗೆ ತಂದು ಪಿಎಸ್‌ಐ, ಪಿಎಫ್, ಗ್ರಾಚ್ಯುಟಿ ಮತ್ತು ಪಿಂಚಣಿ ಸೌಲಭ್ಯ ಒದಗಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ಉಳಿಸಿ, ಕಾರ್ಮಿಕರನ್ನು ರಕ್ಷಿಸಬೇಕು. ಸಾರಿಗೆ ನಿಗಮಗಳಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಜೊತೆ ಚರ್ಚಿಸಿ 2020ರ ಜ. 1ರಂದು ಮಾಡಿಕೊಂಡ ನಾಲ್ಕು ವರ್ಷಗಳ ವೇತನ ಒಪ್ಪಂದ ಮತ್ತು ನಾಲ್ಕು ಸಾರಿಗೆ ನಿಗಮಗಳನ್ನು ವಿಲೀನಗೊಳಿಸಬೇಕು.

'ಬೀಡಿ ಕಾರ್ಮಿಕರ ಕಲ್ಯಾಣ ಮಂಡಳಿಯ ಪುನರಾರಂಭಿಸಿ, ಸೌಲಭ್ಯಗಳನ್ನು ವಿಸ್ತರಿಸಬೇಕು. ಗುತ್ತಿಗೆ ಆಧಾರಿತ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಪಾವತಿಸಬೇಕು. ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಗಳಾದ ಕೆಎಸ್‌ಐಸಿ, ಎಂಎಸ್‌ಐಎಲ್, ಕೆಎಸ್ ಆ್ಯಂಡ್ ಡಿಎಲ್, ಹಟ್ಟಿ ಚಿನ್ನದ ಗಣಿ, ಕರ್ನಾಟಕ ಗ್ರಾಮಾಂತರ ಮೂಲಸೌಕರ್ಯ ಅಭಿವೃದ್ಧಿ ನಿಗಮಗಳಲ್ಲಿ ಉದ್ದೇಶಿತ ಶೇ 31ರಷ್ಟು ಬಂಡವಾಳ ಹಿಂತೆಗೆತವನ್ನು ಕೈಬಿಡಬೇಕು. ಸರ್ಕಾರದ ಒಡೆತನದಲ್ಲಿ ಕೋಲಾರದ ಚಿನ್ನದ ಗಣಿಯಲ್ಲಿ ಗಣಿಗಾರಿಕೆಯನ್ನು ಪುನರಾರಂಭಿಸಬೇಕು. ಚಿನ್ನದ ಗಣಿ ಕಾರ್ಮಿಕರಿಗೆ ನೀಡಲು ಬಾಕಿ ಇರುವ ₹52 ಕೋಟಿ ಕೂಡಲೇ ಪಾವತಿಸಬೇಕು.

ಬ್ಯಾಂಕ್, ಸಾಮಾನ್ಯ ಮತ್ತು ಜೀವವಿಮೆ ಕ್ಷೇತ್ರಗಳಲ್ಲಿ ಖಾಸಗೀಕರಣವನ್ನು ಕೈಬಿಡಬೇಕು. ರೈತ ವಿರೋಧಿ ಕೃಷಿ ಕಾನೂನನ್ನು ಕೂಡಲೇ ಹಿಂಪಡೆಯಬೇಕು. ವಿದ್ಯುತ್ ಖಾಸಗೀಕರಣ ಕಾಯ್ದೆಯ ತಿದ್ದುಪಡಿ ವಿಚಾರ ಕೈಬಿಡಬೇಕು. ಅವೈಜ್ಞಾನಿಕ ನೂತನ ಶಿಕ್ಷಣ ನೀತಿಯನ್ನು ಕೈಬಿಟ್ಟು, ದುಡಿಯುವ ಕೈಗಳಿಗೆ ಉದ್ಯೋಗ ಕಲ್ಪಿಸಬೇಕು' ಎಂದು ಆಗ್ರಹಿಸಿದರು.

'1.7 ಕೋಟಿ ಕಾರ್ಮಿಕರು ಅರ್ಹರು'

'ರಾಜ್ಯದಲ್ಲಿ 1.7 ಕೋಟಿ ಕಾರ್ಮಿಕರು ಕನಿಷ್ಠ ವೇತನ ಹೆಚ್ಚಳಕ್ಕೆ ಅರ್ಹರಾಗಿದ್ದು, ವಿಧಾನಸಭೆಯಲ್ಲಿ ಈ ವಿಷಯದ ಬಗ್ಗೆ ಯಾವುದೇ ಚರ್ಚೆಯಾಗುತ್ತಿಲ್ಲ' ಎಂದು ಎಐಟಿಯುಸಿ ರಾಜ್ಯ ಘಟಕದ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್ ಆಕ್ರೋಶ ವ್ಯಕ್ತಪಡಿಸಿದರು.

'ಈಗಿನ ರಾಜಕೀಯ ನಾಯಕರು ಕಾರ್ಮಿಕ ವರ್ಗಕ್ಕೆ ದ್ರೋಹ ಬಗೆಯುತ್ತಿದ್ದಾರೆ. ಕ್ಷುಲ್ಲಕ ಕೆಸರೆರಚಾಟ ಮತ್ತು ಕೋಮು ರಾಜಕಾರಣ ಮಾಡುವ ಬದಲು ಜನಪರವಾದ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಬೇಕು' ಎಂದು ಆಗ್ರಹಿಸಿದರು.

'ಕಾರ್ಮಿಕ ವರ್ಗ ಇಂದು ಆರ್ಥಿಕ ಅನಿಶ್ಚಿತ ಸ್ಥಿತಿಯಲ್ಲಿದೆ. ಕಳೆದ ಐದು ವರ್ಷಗಳಲ್ಲಿ ಕನಿಷ್ಠ ವೇತನದಲ್ಲಿ ಶೇ 10ರಷ್ಟು ಮಾತ್ರ ಹೆಚ್ಚಳವಾಗಿದ್ದು, ಇದು ಕಾನೂನುಬಾಹಿರ ಹಾಗೂ ಕಾರ್ಮಿಕ ವರ್ಗಕ್ಕೆ ಮಾಡಿರುವ ಅನ್ಯಾಯ' ಎಂದು ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜಯಭಾಸ್ಕರ್ ಹೇಳಿದರು.

ಸುದ್ದಿ 2 ನಿಮಿಷ

'ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಬಿಎಸ್‌ವೈ ಹೆಸರು: ಕೇಂದ್ರಕ್ಕೆ ಪ್ರಸ್ತಾವ'

ಶಿವಮೊಗ್ಗ: 'ಶಿವಮೊಗ್ಗದ ವಿಮಾನನಿಲ್ದಾಣವನ್ನು ಪ್ರಧಾನಿ ನರೇಂದ್ರ ಮೋದಿ ಫೆ.27ರಂದು ಲೋಕಾರ್ಪಣೆ ಮಾಡಲಿದ್ದಾರೆ. ಈ ನಿಲ್ದಾಣಕ್ಕೆ ಬಿ.ಎಸ್. ಯಡಿಯೂರಪ್ಪ ಅವರ ಹೆಸರಿಡಲು ನಿರ್ಧರಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

'ವಿಮಾನ ನಿಲ್ದಾಣಕ್ಕೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಯಡಿಯೂರಪ್ಪ ಅವರ ಹೆಸರಿಸಲು ಸಂಪುಟ ಸಭೆಯಲ್ಲಿ ನಿರ್ಣಯಿಸಿದ್ದು, ಕೇಂದ್ರಕ್ಕೆ ಪ್ರಸ್ತಾವ ಕಳುಹಿಸಲಾಗುವುದು' ಎಂದು ಬುಧವಾರ ತಿಳಿಸಿದರು.

ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ ಅವರು, 'ನನ್ನ ಹೆಸರಿಡುವುದು ಬೇಡ ಎಂದು ಯಡಿಯೂರಪ್ಪ ಹೇಳಿದ್ದಾರೆ. ಅವರ ಅಭಿಮಾನಿಗಳ ಒತ್ತಾಯದಂತೆ ತೀರ್ಮಾನಕ್ಕೆ ಬಂದಿದ್ದೇವೆ' ಎಂದರು.

ಸಂಜಯ್ ರಾವುತ್‌ಗೆ ಜಾಮೀನು

ಬೆಳಗಾವಿ: ಮಹಾರಾಷ್ಟ್ರದ ರಾಜ್ಯಸಭೆ ಸದಸ್ಯ ಹಾಗೂ ಶಿವಸೇನೆ ರಾಜ್ಯ ವಕ್ತಾರ ಸಂಜಯ್ ರಾವುತ್ ಸೇರಿದಂತೆ ಇಬ್ಬರಿಗೆ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಬುಧವಾರ ಷರತ್ತುಬದ್ಧ ಜಾಮೀನು ನೀಡಿದೆ.

2018ರ ಮಾರ್ಚ್ 30ರಂದು ಇಲ್ಲಿನ ಭಾಗ್ಯನಗರದಲ್ಲಿ ವೆಬ್‌ಸೈಟ್‌ವೊಂದರ ವಾರ್ಷಿಕೋತ್ಸವ ಅಂಗವಾಗಿ ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಸಂಜಯ ರಾವುತ್ ಕನ್ನಡಿಗರ ವಿರುದ್ಧ ಪ್ರಚೋದನಕಾರಿ ಭಾಷಣ ಮಾಡಿದ್ದರು.

ರಾವುತ್, ಬೆಳಗಾವಿಯ ಪತ್ರಕರ್ತರಾದ ಕಿರಣ್ ಠಾಕೂರ, ಪ್ರಕಾಶ ಬಿಳಗೋಜಿ, ರಾಮನಾಥ ಮಂಗಲ ಕಾರ್ಯಾಲಯದ ಮಾಲೀಕ ಸುರೇಂದ್ರ ನಾಯಿಕ ವಿರುದ್ಧ ಟಿಳಕವಾಡಿ ಠಾಣೆ ಪೊಲೀಸರು 'ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ' ದೂರು ದಾಖಲಿಸಿದ್ದರು. ಡಿ.1ರಂದು ವಿಚಾರಣೆಗೆ ಹಾಜರಾಗುವಂತೆ ನಾಲ್ವರಿಗೂ ನ್ಯಾಯಾಲಯ ಸಮನ್ಸ್ ಜಾರಿಗೊಳಿಸಿತ್ತು. ಆದರೆ, ವೈಯಕ್ತಿಕ ಕಾರಣದಿಂದ ಅವರು ಹಾಜರಾಗದ್ದರಿಂದ ವಿಚಾರಣೆ ಮುಂದೂಡಿ ಆದೇಶ ಹೊರಡಿಸಿತ್ತು.

ಸಂಜಯ್ ರಾವುತ್, ಪತ್ರಕರ್ತ ಪ್ರಕಾಶ ಬಿಳಗೋಜಿ ಅವರಿಗೆ ಬುಧವಾರ ಷರತ್ತುಬದ್ಧ ಜಾಮೀನು ಮಂಜೂರುಗೊಳಿಸಲಾಗಿದೆ.

ಚುಟುಕು ಸುದ್ದಿ

'ಅರ್ಹತೆ ಇದ್ದರೆ ಬ್ರಾಹ್ಮಣರು ಏಕೆ ಸಿ.ಎಂ ಆಗಬಾರದು'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಅರ್ಹತೆ ಇದ್ದರೆ ಬ್ರಾಹ್ಮಣರು ಏಕೆ ಮುಖ್ಯಮಂತ್ರಿಯಾಗಬಾರದು. ರಾಮಕೃಷ್ಣ ಹೆಗಡೆ, ಗುಂಡೂರಾವ್ ಆಗಿರಲಿಲ್ಲವೇ' ಎಂದು ಶಾಸಕ ವೀರಣ್ಣ ಚರಂತಿಮಠ ಪ್ರಶ್ನಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಯಾರೂ ಜಾತಿ, ಉಪಜಾತಿಗಳ ಬಗ್ಗೆ ಮಾತನಾಡಬಾರದು. ಇದು ಸೂಕ್ಷ್ಮ ವಿಷಯ. ಸ್ವಧರ್ಮ ನಿಷ್ಠೆ, ಪರಧರ್ಮ ಸಹಿಷ್ಣತೆಯನ್ನು ರಾಜಕೀಯದಲ್ಲಿದ್ದವರು ಕಲಿಯಬೇಕು' ಎಂದರು.

224 ಕ್ಷೇತ್ರಗಳಲ್ಲಿ ಆರ್‌ಪಿಐ(ಬಿ) ಸ್ಪರ್ಧೆಗೆ ಸಿದ್ಧತೆ

ವಿಜಯಪುರ: 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಬಿ) ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ 224 ಕ್ಷೇತ್ರಗಳಲ್ಲೂ ಸ್ಪರ್ಧಿಸಲಿದೆ' ಎಂದು ಆರ್‌ಪಿಐ(ಬಿ) ಅಧ್ಯಕ್ಷ ಡಾ.ಎನ್ ಮೂರ್ತಿ ತಿಳಿಸಿದರು.

ಬುಧವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಈಗಾಗಲೇ ಸಿದ್ಧತೆ ನಡೆಸಿದೆ. ಶೀಘ್ರದಲ್ಲೇ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಲಾಗುವುದು ಎಂದು ಹೇಳಿದರು.

ಮತಗಳ ಮೇಲೆ ಕಣ್ಣಿಟ್ಟು ಬ್ರಾಹ್ಮಣರ ಅವಹೇಳನ • ಸಚಿವ ಆರ್.ಅಶೋಕ ಟೀಕೆ

ಬ್ರಿಟಿಷರಂತೆ ಒಡೆದಾಳುವ ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಿಟಿಷರು ಹಿಂದೂ–ಮುಸ್ಲಿಮರನ್ನು ಒಡೆದು ಆಳಿದಂತೆ, ಎಚ್.ಡಿ.ಕುಮಾರಸ್ವಾಮಿ ಜಾತಿಗಳನ್ನು ಒಡೆಯುವ ಮೂಲಕ ರಾಜಕೀಯ ಮಾಡುತ್ತಿದ್ದಾರೆ ಎಂದು ಕಂದಾಯ ಸಚಿವ ಆರ್.ಅಶೋಕ ಅವರು ಹರಿಹಾಯ್ದರು.

ಸುದ್ದಿಗಾರರ ಪ್ರಶ್ನೆಗಳಿಗೆ ಬುಧವಾರ ಉತ್ತರಿಸಿದ ಅವರು, ಚುನಾವಣೆ ಹೊತ್ತಿಗೆ ಮತಗಳ ಮೇಲೆ ಕಣ್ಣಿಟ್ಟು ಬ್ರಾಹ್ಮಣರನ್ನು ಒಡೆಯುವ ಮತ್ತು ಅವಹೇಳನ ಮಾಡುವ ಕೆಲಸಕ್ಕೆ ಮುಂದಾಗಿದ್ದಾರೆ ಎಂದರು.

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ರೀತಿಯಲ್ಲಿ ಯಾವ ಮುಖ್ಯಮಂತ್ರಿಯೂ ಜಾತಿಯ ಬಗ್ಗೆ ನಿಂದನೆ ಮಾಡಿರಲಿಲ್ಲ. ಎಸ್.ಎಂ.ಕೃಷ್ಣ ಸೇರಿ ಎಲ್ಲ ಮುಖ್ಯಮಂತ್ರಿಗಳು ಘನತೆಯಿಂದಲೇ ನಡೆದುಕೊಂಡಿದ್ದಾರೆ. ಆದರೆ, ಕುಮಾರಸ್ವಾಮಿ ಮಾಜಿ ಮುಖ್ಯಮಂತ್ರಿಗಳ ವರ್ಚಸ್ಸಿಗೆ ಧಕ್ಕೆ ತಂದಿದ್ದಾರೆ ಎಂದರು.

'ನಮ್ಮ ಪಕ್ಷದಲ್ಲಿ ಪ್ರತಿಭೆಯ ಆಧಾರದಲ್ಲಿಯೇ ಪ್ರಧಾನಮಂತ್ರಿ, ಮುಖ್ಯಮಂತ್ರಿ ಮತ್ತು ಮಂತ್ರಿಗಳ ಸ್ಥಾನ ನೀಡಲಾಗುತ್ತದೆ. ಆದರೆ, ಕುಟುಂಬ ಆಧಾರಿತ ಪಕ್ಷವಾದ ಜೆಡಿಎಸ್‌ನಲ್ಲಿ ಕುಟುಂಬದ ಸದಸ್ಯತ್ವವೇ ಮುಖ್ಯ. ಮುಖ್ಯಮಂತ್ರಿ ಸ್ಥಾನ ನಿರ್ಧಾರವಾಗುವುದೂ ಅವರ ಮನೆಯಲ್ಲೇ. ಬಿಜೆಪಿಯಲ್ಲಿ ಚುನಾವಣೆ ಬಳಿಕ ಮುಖ್ಯಮಂತ್ರಿ ಸ್ಥಾನವನ್ನು ಶಾಸಕಾಂಗ ಪಕ್ಷದಲ್ಲಿ ತೀರ್ಮಾನಿಸಲಾಗುತ್ತದೆ. ಈಗ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದು, ಅವರ ನೇತೃತ್ವದಲ್ಲೇ ಚುನಾವಣೆ ಎದುರಿಸುತ್ತೇವೆ' ಎಂದರು.

'ರಾಮನಗರ ವಿಧಾನಸಭಾ ಕ್ಷೇತ್ರದಲ್ಲಿ ಈ ಬಾರಿ ಪ್ರಬಲ ಅಭ್ಯರ್ಥಿಯನ್ನೇ ಕಣಕ್ಕೆ ಇಳಿಸಲಾಗುವುದು. ಅಲ್ಲದೇ, ಪಕ್ಷ ದುರ್ಬಲವಾಗಿರುವ ವಿಧಾನಸಭಾ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತೇವೆ' ಎಂದು ಅವರು ತಿಳಿಸಿದರು.

ಬಿಜೆಪಿ ಚುನಾವಣಾ ಪ್ರಚಾರ: ವಿವಿಧ ಸಮಿತಿಗಳ ರಚನೆ

ಪ್ರಜಾ ಮತ
ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಬೆಂಗಳೂರು: ವಿಧಾನಸಭೆ ಚುನಾವಣೆ ಉದ್ದೇಶಿತ ನಾಲ್ಕು ಯಾತ್ರೆಗಳು, ಪ್ರಣಾಳಿಕೆ ತಯಾರಿಕೆ ಸಲಹಾ ಅಭಿಯಾನ, ವಿವಿಧ ಮೋರ್ಚಾಗಳ ಜಿಲ್ಲಾ ಸಮಾವೇಶ, ಫಲಾನುಭವಿಗಳ ಸಮ್ಮೇಳನ, ವಿಡಿಯೊ–ವ್ಯಾನ್ ಪ್ರಚಾರಕ್ಕಾಗಿ ಬಿಜೆಪಿ ಪ್ರತ್ಯೇಕ ಸಮಿತಿಗಳನ್ನು ರಚಿಸಲಾಗಿದ್ದು, ಬಿ.ವೈ. ವಿಜಯೇಂದ್ರ, ಡಾ.ಕೆ.ಸುಧಾಕರ್ ಇದರಲ್ಲಿ ಸ್ಥಾನ ಪಡೆದಿದ್ದಾರೆ.

ಸಚಿವರು, ಶಾಸಕರು, ವಿಧಾನಪರಿಷತ್ ಸದಸ್ಯರು, ರಾಜ್ಯ ಪದಾಧಿಕಾರಿಗಳು, ಪ್ರಮುಖರು, ಸಹಪ್ರಮುಖರನ್ನು ಸಂಚಾಲಕರನ್ನಾಗಿ ನೇಮಿಸಲಾಗಿದೆ ಎಂದು ಪಕ್ಷದ ರಾಜ್ಯ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನ ತಿಳಿಸಿದ್ದಾರೆ.

ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಅವರನ್ನು ಯಾತ್ರೆಯ ಪ್ರಮುಖರನ್ನಾಗಿ, ರಾಜ್ಯ ಪ್ರಧಾನಕಾರ್ಯದರ್ಶಿ ಎನ್. ರವಿಕುಮಾರ್ ಮತ್ತು ಮಹಿಳಾ ಮೋರ್ಚಾ ಅಧ್ಯಕ್ಷೆ ಗೀತಾ ವಿವೇಕಾನಂದ ಅವರನ್ನು ಸಹ ಪ್ರಮುಖರನ್ನಾಗಿ ನೇಮಿಸಲಾಗಿದೆ.

ವಿವಿಧ ಮೋರ್ಚಾಗಳ ಜಿಲ್ಲಾ ಸಮಾವೇಶಗಳಿಗೆ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಸಂಚಾಲಕರನ್ನಾಗಿ ನೇಮಿಸಲಾಗಿದೆ. ಜಗದೀಶ ಹಿರೇಮನಿ ಮತ್ತು ಯಶಪಾಲ್ ಸುವರ್ಣ ಅವರನ್ನು ಸಹ–ಸಂಚಾಲಕರನ್ನಾಗಿ ನೇಮಿಸಲಾಗಿದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಕಾರ್ಯಕ್ರಮಗಳ ಫಲಾನುಭವಿಗಳ ಸಮ್ಮೇಳನಕ್ಕೆ ಸಂಚಾಲಕರನ್ನಾಗಿ ಹಾಲಪ್ಪ ಬಸಪ್ಪ ಆಚಾರ್ ಅವರನ್ನು, ಸಚಿವ ಎಸ್.ಟಿ. ಸೋಮಶೇಖರ್ ಮತ್ತು ಶಾಸಕ ಪಿ.ರಾಜೀವ್ ಅವರನ್ನು ಸಹ– ಸಂಚಾಲಕರನ್ನಾಗಿ ನೇಮಿಸಲಾಗಿದೆ.

ಪ್ರಣಾಳಿಕೆ ತಯಾರಿ ಸಲಹಾ ಅಭಿಯಾನಕ್ಕೆ ಸಚಿವ ಡಾ.ಕೆ.ಸುಧಾಕರ್ ಸಂಚಾಲಕರಾಗಿದ್ದು, ಸಚಿವ ಬಿ.ಸಿ.ನಾಗೇಶ್, ಬಿಜೆಪಿ ಉಪಾಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಎಸ್.ಸುರೇಶ್ ಕುಮಾರ್, ಅಭಯ ಪಾಟೀಲ, ರಾಜಕುಮಾರ್ ಪಾಟೀಲ ತೇಲ್ಕೂರು, ಎನ್.ಮಹೇಶ್, ಪಿ.ರಾಜೀವ್ ಅವರನ್ನು ಸಹ ಸಂಚಾಲಕರನ್ನಾಗಿ ನೇಮಿಸಲಾಗಿದೆ.

ಅನುಕಂಪದ ಮಾತುಗಳಿಂದ ಬೆಂಕಿ ಹಚ್ಚುವ ಯತ್ನ: ವಿಜಯೇಂದ್ರ

'ಬಿ.ಎಸ್.ಯಡಿಯೂರಪ್ಪ ಅವರ ಬಗ್ಗೆ ಅನುಕಂಪದ ಮಾತುಗಳನ್ನಾಡುವ ಮೂಲಕ ನಮ್ಮ ಪಕ್ಷದಲ್ಲಿ ಬೆಂಕಿ ಹಚ್ಚಲು ಕೆಲವರು ಪ್ರಯತ್ನ ಮಾಡುತ್ತಿದ್ದಾರೆ. ಅವುಗಳಿಗೆ ಆಸ್ಪದ ನೀಡುವ ಪ್ರಶ್ನೆಯೇ ಇಲ್ಲ' ಎಂದು ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಪಕ್ಷದ ಕಚೇರಿಯಲ್ಲಿ ಮಾತನಾಡಿದ ಅವರು, 'ಪಕ್ಷದಲ್ಲಿ ಯಾವುದೇ ಗೊಂದಲಗಳಿಲ್ಲ. ಕನಿಷ್ಠ 140 ರಿಂದ 150 ಶಾಸಕರನ್ನು ಗೆಲ್ಲಿಸುವುದೇ ನಮ್ಮೆಲ್ಲ ಗುರಿಯಾಗಿದೆ' ಎಂದು ಹೇಳಿದರು. 'ಸಿದ್ದರಾಮಯ್ಯ ಅಧಿಕಾರದಲ್ಲಿ ಇದ್ದಾಗ ವೀರಶೈವ ಸಮಾಜದ ಕುರಿತು ಯಾರ್‍ಯಾರು ಯಾವ ರೀತಿ ನಡೆದುಕೊಂಡಿದ್ದಾರೆ ಎಂಬುದು ಗೊತ್ತಿದೆ. ಆದ್ದರಿಂದ ಸಿದ್ದರಾಮಯ್ಯ ಅವರ ಹೇಳಿಕೆಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ' ಎಂದರು.

ಕುಮಾರಸ್ವಾಮಿಯವರು ದಿವಾಳಿಯಾಗಿದ್ದಾರೆ. ಜನರ ಮನಸ್ಸನ್ನು ತಮ್ಮ ಕಡೆ ಸೆಳೆಯಲು ಅವರ ಬಳಿ ಅಸ್ತ್ರಗಳಿಲ್ಲ. ಅದಕ್ಕಾಗಿ ಹೀಗೆ ಮಾತನಾಡುತ್ತಿದ್ದಾರೆ. ಅವುಗಳಿಗೆ ರಾಜ್ಯದ ಜನರು ಅವಕಾಶ ಮಾಡಿಕೊಡುವುದಿಲ್ಲ ಎಂದು ಹೇಳಿದರು.

ವಾಲ್ಮೀಕಿ ಜಾತ್ರೆಗೆ ಚಾಲನೆ

ದಾವಣಗೆರೆ: ಜಿಲ್ಲೆಯ ಹರಿಹರ ತಾಲ್ಲೂಕಿನ ರಾಜನಹಳ್ಳಿಯಲ್ಲಿ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ 5ನೇ ವರ್ಷದ ವಾಲ್ಮೀಕಿ ಜಾತ್ರೆ, ಪೀಠಾಧಿಪತಿ ಪ್ರಸನ್ನಾನಂದ ಸ್ವಾಮೀಜಿ ನೇತೃತ್ವದಲ್ಲಿ ಬುಧವಾರ ಸಂಭ್ರಮದೊಂದಿಗೆ ಆರಂಭವಾಯಿತು.

ಗ್ರಾಮದಿಂದ ಶ್ರೀಮಠದವರೆಗೆ ಮಹರ್ಷಿ ವಾಲ್ಮೀಕಿ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು.

ಮಹಿಳಾ ಗೋಷ್ಠಿಯಲ್ಲಿ ಮಹಿಳೆಯರ ಸಮಸ್ಯೆಗಳ ಕುರಿತು ಚರ್ಚೆ ನಡೆಯಿತು. ಜಾತ್ರೆ ಅಂಗವಾಗಿ ಆಯೋಜಿಸಿರುವ ಉದ್ಯೋಗ ಮೇಳದಲ್ಲಿ ವಿವಿಧ ಕಂಪನಿಗಳು ಭಾಗವಹಿಸಿವೆ. ಗುರುವಾರವೂ ಉದ್ಯೋಗ ಮೇಳ ಮುಂದುವರಿಯಲಿದೆ.

ಕರ್ನಾಟಕ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಜೆ.ಎಂ.ವೀರಸಂಗಯ್ಯ ಅವರು ರೈತಗೋಷ್ಠಿಯಲ್ಲಿ ರೈತರ ಸಂಕಷ್ಟದ ಕಾರಣಗಳನ್ನು ವಿವರಿಸಿದರು. ಪ್ರತಿ ಬೆಳೆಗೆ ತಗಲುವ ವೆಚ್ಚ ಮತ್ತು ಮಾರುಕಟ್ಟೆಯಲ್ಲಿ ಸಿಗುವ ದರದ ಬಗ್ಗೆ ಸರ್ಕಾರ ಅಧ್ಯಯನ ನಡೆಸಿ, ಸೂಕ್ತ ಯೋಜನೆ ರೂಪಿಸಿದ್ದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲ ಎಂದರು.

ನೂತನ ರಥ

ನೂತನ ರಥದ ಸುತ್ತಲೂ ರಾಮಾಯಣವನ್ನು ಚಿತ್ರಿಸಲಾಗಿದೆ. ಇದು, ಗುರುವಾರ ಲೋಕಾರ್ಪಣೆಗೊಳ್ಳಲಿದ್ದು, ಮುಖ್ಯಮಂತ್ರಿ ಸೇರಿ ಹಲವ ಪ್ರಮುಖರು ಪಾಲ್ಗೊಳ್ಳಲಿದ್ದಾರೆ. ನೂತನ ರಥವನ್ನು ವೀಕ್ಷಿಸಲು ಬುಧವಾರವೇ ಭಕ್ತಾದಿಗಳು ನೆರೆದಿದ್ದರು.

ಗೋಕರ್ಣ: ಎಚ್‌ಡಿಕೆ ಸ್ಪಷ್ಟನೆಗೆ ಆಗ್ರಹಿಸಿದ ಅರ್ಚಕ

ಪ್ರಜಾವಾಣಿ ವಾರ್ತೆ

ಗೋಕರ್ಣ (ಉತ್ತರ ಕನ್ನಡ): 'ಬ್ರಾಹ್ಮಣರ ಕುರಿತ ಹೇಳಿಕೆಗೆ ಸ್ಪಷ್ಟನೆ ನೀಡಬೇಕು' ಎಂದು ಅರ್ಚಕ ನರಸಿಂಹ ದೀಕ್ಷಿತ್ ಅವರು ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರನ್ನು ತಡೆದ ಘಟನೆ ಗೋಕರ್ಣದಲ್ಲಿ ಬುಧವಾರ ನಡೆಯಿತು.

ಗಣಪತಿ ದೇವಸ್ಥಾನಕ್ಕೆ ಭೇಟಿ ನೀಡಲು ಕುಮಾರಸ್ವಾಮಿ ತೆರಳುವ ವೇಳೆ ಎದುರಾದ ಅರ್ಚಕ, 'ಈಚೆಗೆ ಬ್ರಾಹ್ಮಣರ ಕುರಿತು ನೀಡಿರುವ ಹೇಳಿಕೆ ನೋವುಂಟು ಮಾಡಿದೆ. ಗೋಕರ್ಣದಲ್ಲೇ ಸ್ಪಷ್ಟನೆ ನೀಡಬೇಕು' ಎಂದು ಪಟ್ಟು ಹಿಡಿದರು.

ಸಮಜಾಯಿಷಿ ನೀಡಿದ ಅವರು, 'ಮಹಾರಾಷ್ಟ್ರದ ಪೇಶ್ವೆಗಳ ಕುರಿತಾಗಿ ಹೇಳಿದ್ದೇನೆಯೆ ಹೊರತು ಬ್ರಾಹ್ಮಣರನ್ನು ನಿಂದಿಸಿಲ್ಲ. ಬ್ರಾಹ್ಮಣರ ಜತೆ ಆಡಿ ಬೆಳೆದಿದ್ದೇನೆ. ನಮ್ಮ ಕುಟುಂಬ ಸಂಸ್ಕಾರವಂತರಾಗಿರಲು ಬ್ರಾಹ್ಮಣರ ಒಡನಾಟವೂ ಕಾರಣ' ಎಂದರು.

ಬ್ರಾಹ್ಮಣರ ಅಭಿವೃದ್ಧಿಗೆ ಹೆಚ್ಚು ಅನುದಾನ ನೀಡಿದ್ದೇ ನಾನು: 'ಪಂಚರತ್ನ' ರಥ ಯಾತ್ರೆಗೆ ಮೊದಲು ಮಾತನಾಡಿದ ಕುಮಾರಸ್ವಾಮಿ, 'ಬ್ರಾಹ್ಮಣ ಮಹಾಸಭಾಕ್ಕೆ ಕಚೇರಿ ನಿರ್ಮಾಣಕ್ಕೆ ಜಾಗ ಒದಗಿಸಿದ್ದೆ. ಸಿ.ಎಂ ಆಗಿದ್ದಾಗ ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ₹25 ಕೋಟಿ ಅನುದಾನ ನೀಡಿದ್ದೇನೆ. ಬಿಜೆಪಿಯವರು ಎಷ್ಟು ಅನುದಾನ ನೀಡಿದ್ದಾರೆ? ಎಂಬುದನ್ನು ಬಹಿರಂಗಪಡಿಸಲಿ' ಎಂದು ಸವಾಲೆಸೆದರು.

ಮಡಿವಾಳೇಶ್ವರ ರಥೋತ್ಸವ

ಧಾರವಾಡ ತಾಲ್ಲೂಕಿನ ಗರಗದಲ್ಲಿ ಬುಧವಾರ ನಡೆದ ಮಡಿವಾಳೇಶ್ವರ ಜಾತ್ರಾ ಮಹೋತ್ಸವದಲ್ಲಿ ಆಲಂಕೃತ ತೇರನ್ನು ಎಳೆದು ಭಕ್ತರು ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ: ಬಿ.ಎಂ.ಕೇದಾರನಾಥ

ನಿರ್ಲಕ್ಷ್ಯ: ಪ್ರಸೂತಿ ತಜ್ಞೆಗೆ ₹11 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಧಾರವಾಡ: ವಾಸ್ತವಾಂಶ ಮರೆಮಾಚಿ ಅಂಗವಿಕಲ ಮಗುವಿನ ಜನನಕ್ಕೆ ಕಾರಣವಾದ ಇಲ್ಲಿನ ಪ್ರಶಾಂತ ನರ್ಸಿಂಗ್ ಹೋಮ್‌ನ ವೈದ್ಯೆ ಡಾ. ಸೌಭಾಗ್ಯ ಕುಲಕರ್ಣಿ ಅವರಿಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ₹11.10 ಲಕ್ಷ ದಂಡ ವಿಧಿಸಿದೆ.

ಡಾ. ಸೌಭಾಗ್ಯ ಕುಲಕರ್ಣಿ

ಇಲ್ಲಿನ ಶ್ರೀನಗರ ಬಡಾವಣೆಯ ಭಾವಿಕಟ್ಟಿ ಪ್ಲಾಟ್ ನಿವಾಸಿ ಪರಶುರಾಮ ಘಾಟಗೆ ಮತ್ತು ಪ್ರೀತಿ ದಂಪತಿ ತಪಾಸಣೆ, ಸ್ಕ್ಯಾನಿಂಗ್‌ಗೆ ನರ್ಸಿಂಗ್ ಹೋಮ್‌ಗೆ ಭೇಟಿ ನೀಡಿದ್ದರು. 2018ರ ಜುಲೈ 12ರಿಂದ 2019ರ ಜನವರಿ 8ರವರೆಗೆ ಐದು ಬಾರಿ ಸ್ಕ್ಯಾನಿಂಗ್ ಮಾಡಲಾಗಿತ್ತು.

ಪ್ರತಿಸಲವೂ ಡಾ. ಸೌಭಾಗ್ಯ 'ಭ್ರೂಣದ ಬೆಳವಣಿಗೆ ಚೆನ್ನಾಗಿದೆ, ಆರೋಗ್ಯವಾಗಿದೆ' ಎಂದು ತಿಳಿಸುತ್ತಿದ್ದರು. 9ನೇ ತಿಂಗಳಿನಲ್ಲಿ ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆಯಾದಾಗ ಅಂಗವಿಕಲ ಹೆಣ್ಣು ಮಗು ಜನಿಸಿತು' ಎಂದು ದೂರಿನಲ್ಲಿ ಹೇಳಲಾಗಿದೆ.

ಸುಪ್ರೀಂ ಕೋರ್ಟ್‌ನ ತೀರ್ಪುಗಳ ಪ್ರಕಾರ ಹಾಗೂ ಅಲ್ಟ್ರಾಸೌಂಡ್ ಸ್ಕ್ಯಾನ್ ನಿಯಮಾವಳಿ ಪ್ರಕಾರ ಗರ್ಭಧಾರಣೆಯ 18ರಿಂದ 20ವಾರಗಳ ಸ್ಕ್ಯಾನಿಂಗ್‌ನಲ್ಲಿ ಮಗುವಿನ ಆರೋಗ್ಯ, ಅಂಗಾಂಗಗಳ ಬೆಳವಣಿಗೆ ಕುರಿತು ತಪಾಸಣೆ ನಡೆಸಿದ ವೈದ್ಯರಿಗೆ ತಿಳಿಯಲಿದೆ. ಆದರೆ ಐದು ಬಾರಿ ಸ್ಕ್ಯಾನಿಂಗ್ ನಡೆಸಿದ ನಂತರ ವಾಸ್ತವಾಂಶ ಗೊತ್ತಿದ್ದರೂ, ಪ್ರಸೂತಿ ತಜ್ಞೆ ಹೇಳದೆ ಸೇವಾ ನ್ಯೂನತೆ ಎಸಗಿದ್ದಾರೆ. ಈ ಕುರಿತು ವೈದ್ಯರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರುದಾರರು ಆಯೋಗವನ್ನು ಕೋರಿದ್ದರು.

ಅರ್ಜಿ ವಿಚಾರಣೆಯನ್ನು ಆಯೋಗದ ಅಧ್ಯಕ್ಷ ಈಶಪ್ಪ ಕೆ.ಭೂತೆ, ಸದಸ್ಯರಾದ ವಿಶಾಲಾಕ್ಷಿ ಬೋಳಶೆಟ್ಟಿ ಹಾಗೂ ಪ್ರಭು ಹಿರೇಮಠ ನಡೆಸಿದರು.

'ಎಂ.ಟಿ.ಪಿ.ಕಾಯ್ದೆ ಪ್ರಕಾರ 20 ವಾರಗಳ ಗರ್ಭದಲ್ಲಿ ಶಿಶುವಿನ ಅಂಗವೈಕಲ್ಯ ತಿಳಿದ ನಂತರ ವೈದ್ಯೆ ನಿಜಾಂಶವನ್ನು ದಂಪತಿಗೆ ತಿಳಿಸಬೇಕಿತ್ತು. ತಿಳಿಸದಿರುವುದು ಕರ್ತವ್ಯ ನಿರ್ಲಕ್ಷ್ಯ ಎಂಬುದು ಮೇಲ್ನೋಟಕ್ಕೆ ಸಾಬೀತಾಗಿದೆ' ಎಂದು ಆಯೋಗ ಹೇಳಿತು.

'ಜನಿಸಿರುವ ಅಂಗವಿಕಲ ಹೆಣ್ಣು ಶಿಶುವಿನ ಈವರೆಗಿನ ಚಿಕಿತ್ಸೆ ಹಾಗೂ ಭವಿಷ್ಯದ ಜೀವನ ನಿರ್ವಹಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಹಾರ ಮತ್ತು ದಂಡ ಸಹಿತ ₹11.10 ಲಕ್ಷವನ್ನು ತೀರ್ಪು ನೀಡಿದ ಒಂದು ತಿಂಗಳಲ್ಲಿ ದೂರುದಾರರಿಗೆ ನೀಡಬೇಕು. ತಪ್ಪಿದಲ್ಲಿ ಆ ಮೊತ್ತದ ಮೇಲೆ ಶೇ 8ರಂತೆ ಬಡ್ಡಿ ಸೇರಿಸಿ ನೀಡಬೇಕು. ಒಟ್ಟು ಮೊತ್ತದಲ್ಲಿ ₹8 ಲಕ್ಷವನ್ನು ಮಗುವಿನ ಹೆಸರಿನಲ್ಲಿ ಆಕೆ ವಯಸ್ಕಳಾಗುವವರೆಗೆ ದೂರುದಾರರು ಇಟ್ಟಿಸಿದ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಕಾಯಂ ಠೇವಣಿಯಾಗಿಡಬೇಕು. ಪರಿಹಾರದ ಸಂಪೂರ್ಣ ಹಣವನ್ನು ಅಂಗವಿಕಲ ಹೆಣ್ಣು ಮಗುವಿನ ಭವಿಷ್ಯಕ್ಕಾಗಿ ಖರ್ಚು ಮಾಡಬೇಕು' ಎಂದು ಆಯೋಗ ಸೂಚಿಸಿದೆ.

ಸೆಪ್ಟಿಕ್ ಟ್ಯಾಂಕ್‌ಗೆ ಬಿದ್ದು ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ಪಟ್ಟಣದ ಶಿಕ್ಷಕರ ಕಾಲೊನಿಯ ಅಂಗನವಾಡಿ ಕೇಂದ್ರದ ಬಳಿಯಿರುವ ಸೆಪ್ಟಿಕ್ ಟ್ಯಾಂಕ್‌ನಲ್ಲಿ ಬಿದ್ದು ಬಾಲಕಿ ಸ್ಫೂರ್ತಿ (3) ಬುಧವಾರ ಮೃತಪಟ್ಟಿದ್ದಾಳೆ.

ಸ್ಫೂರ್ತಿ

'ಶಿಕ್ಷಕರ ಕಾಲೊನಿ ನಿವಾಸಿಗಳು, ಕೂಲಿಕಾರ್ಮಿಕ ಜೀವನ್ ಮತ್ತು ಶಿಲ್ಪಾ ದಂಪತಿ ತಮ್ಮ ಮೂವರು ಪುತ್ರಿಯರಾದ ಸಲೋಮಿ (4), ಸ್ಫೂರ್ತಿ (3) ಮತ್ತು ಸೃಷ್ಟಿ (ಒಂದೂವರೆ ವರ್ಷ)ಗೆ ಅಂಗನವಾಡಿ ಕೇಂದ್ರಕ್ಕೆ ಕಳುಹಿಸುತ್ತಿದ್ದರು. ಮನೆಗೆ ಕರೆ ತರಲು ಶಿಲ್ಪಾ ಹೋದಾಗ, ಸ್ಫೂರ್ತಿ ಕಾಣಿಸಲಿಲ್ಲ. ಆಕೆಯ ಶವ ಸೆಪ್ಟಿಕ್ ಟ್ಯಾಂಕ್‌ನಲ್ಲಿ ಸಿಕ್ಕಿತು' ಎಂದು ಪೊಲೀಸರು ತಿಳಿಸಿದ್ದಾರೆ.

'ಅಂಗನವಾಡಿ ಕಟ್ಟಡ ನಿರ್ಮಿಸಲು ಮಾಡಿದ್ದ ಸೆಪ್ಟಿಕ್ ಟ್ಯಾಂಕ್ ಮುಚ್ಚಿರಲಿಲ್ಲ. ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯ ನಿರ್ಲಕ್ಷ್ಯ ಕಂಡುಬಂದಿದೆ. ಇನ್ನಷ್ಟು ಮಾಹಿತಿ ಪಡೆದು, ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪ್ರಭಾಕರ ತಿಳಿಸಿದ್ದಾರೆ.

ಬಾಲಕಿಯ ಸಾವಿಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಸಂಘ ಸಂಸ್ಥೆಗಳ ಮುಖಂಡರು ಪ್ರತಿಭಟನೆ ನಡೆಸಿದರು. ಔರಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂಗನವಾಡಿಯಲ್ಲಿ ಕುಕ್ಕರ್ ಸ್ಫೋಟ: ಇಬ್ಬರು ಮಕ್ಕಳು ಆಸ್ಪತ್ರೆಗೆ

ಸಾವಳಗಿ (ಬಾಗಲಕೋಟೆ ಜಿಲ್ಲೆ): ಗ್ರಾಮದ ಬ್ಯಾಡಗಿ ವಸ್ತಿ ಅಂಗನವಾಡಿ ಕೇಂದ್ರದಲ್ಲಿ ಬುಧವಾರ ಕುಕ್ಕರ್ ಸ್ಫೋಟಗೊಂಡು ಇಬ್ಬರು ಮಕ್ಕಳಿಗೆ ಗಂಭೀರ ಗಾಯವಾಗಿದ್ದು ಅವರನ್ನು ಜಮಖಂಡಿ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಮರ್ಥ ಹಣಮಂತ ಅಟ್ಯಾಳ (4) ಹಾಗೂ ಅದ್ವಿಕ್ ಹಣಮಂತ ಅಟ್ಯಾಳ (3) ಗಾಯಗೊಂಡ ಮಕ್ಕಳು. ಈ ಘಟನೆಯಲ್ಲಿ ಒಂದು ಮಗುವಿನ ಕಿವಿಗೆ ಹಾಗೂ ಇನ್ನೊಂದು ಮಗುವಿನ ತಲೆಗೆ ಹೆಚ್ಚು ಗಾಯಗಳಾಗಿವೆ.

'ಅಂಗನವಾಡಿ ಕೇಂದ್ರದಲ್ಲಿದ್ದವರ ನಿರ್ಲಕ್ಷ್ಯದಿಂದ ಕುಕ್ಕರ್ ಸ್ಫೋಟಗೊಂಡಿದೆ. ಇಷ್ಟೆಲ್ಲ ಆಗಿದ್ದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ತಪ್ಪಿತಸ್ಥರ ಮೇಲೆ ಕೂಡಲೇ ಕ್ರಮ ಕೈಗೊಳ್ಳಬೇಕು' ಪೋಷಕ ಹಣಮಂತ ಅಟ್ಯಾಳ ಒತ್ತಾಯಿಸಿದರು.

'ಮಕ್ಕಳಿಗೆ ಸಣ್ಣಪುಟ್ಟ ಗಾಯವಾಗಿದೆ ಅಷ್ಟೆ. ಅಂಗನವಾಡಿ ಸಹಾಯಕಿ ಕೂಡ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮಕ್ಕಳಿಗೆ ಕುಕ್ಕರ್ ಬಡಿದಿಲ್ಲ; ಮಕ್ಕಳು ಗಾಬರಿಗೊಂಡು ಗೋಡೆಗೆ ಡಿಕ್ಕಿ ಹೊಡೆದು ಗಾಯಗಳಾಗಿರಬಹುದು' ಎಂದು ಜಮಖಂಡಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ಅನುರಾಧಾ ಹಾದಿಮನಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಡಿಕೆಶಿ ಪುತ್ರಿಗೆ ಸಿಬಿಐ ನೋಟಿಸ್

ಶಿವಮೊಗ್ಗ: 'ಅಕ್ರಮ ಆಸ್ತಿ ಹೊಂದಿರುವ ಮತ್ತು ಹಣ ಅಕ್ರಮ ವರ್ಗಾವಣೆ ಪ್ರಕರಣದ ಸಂಬಂಧ ಸಿಬಿಐ ಅಧಿಕಾರಿಗಳು ಈಗ ನನ್ನ ಕುಟುಂಬದವರನ್ನು ಟಾರ್ಗೆಟ್ ಮಾಡುತ್ತಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಭದ್ರಾವತಿಯಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಂಗಳವಾರ ಸಿಬಿಐ ಅಧಿಕಾರಿಗಳು ನನ್ನ ಪುತ್ರಿಗೆ ನೋಟಿಸ್ ನೀಡಿದ್ದಾರೆ' ಎಂದು ಹೇಳಿದರು. 'ಆಕೆ ಓದುತ್ತಿದ್ದಾಗ ಕಾಲೇಜಿಗೆ ಎಷ್ಟು ಫೀಸ್ ಕಟ್ಟಲಾಗಿತ್ತು, ಎಷ್ಟು ವಿಷಯಗಳಲ್ಲಿ ಪಾಸ್ ಮಾಡಿದ್ದಾರೆ ಎಂದೆಲ್ಲಾ ಪ್ರಶ್ನಿಸಿದ್ದಾರೆ. ಎಷ್ಟು ಕೀಳುಮಟ್ಟದಲ್ಲಿ ನಮ್ಮನ್ನು ನಡೆಸಿಕೊಳ್ಳಲಾಗುತ್ತಿದೆ ಎಂಬುದನ್ನು ನೀವೇ (ಮಾಧ್ಯಮ) ಊಹಿಸಿ' ಎಂದು ತಿಳಿಸಿದರು.

ಚುನಾವಣೆ ಹತ್ತಿರವಾದಂತೆ ಅನೇಕ ಬೆಳವಣಿಗೆಗಳು ನಡೆಯುತ್ತಿವೆ. ಇತ್ತೀಚೆಗಷ್ಟೇ ನಾನು ಇ.ಡಿ ವಿಚಾರಣೆಗೆ ಹಾಜರಾಗಿದ್ದೇನೆ. ಮತ್ತೆ ಫೆ. 27ಕ್ಕೆ ಬರಲು ತಿಳಿಸಿದ್ದಾರೆ ಎಂದರು.

'ಈ ಸ್ಥಿತಿಯಲ್ಲಿ 'ಪ್ರಜಾಧ್ವನಿ' ಕಾರ್ಯಕ್ರಮದಲ್ಲಿ ಭಾಗವಹಿಸುವುದೋ, ತನಿಖೆ ಎದುರಿಸುವುದೋ ತಿಳಿಯುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಪ್ರಜಾವಾಣಿ'ಯ ವರದಿ ಉಲ್ಲೇಖಿಸಿ ಎಚ್‌ಡಿಕೆ ಟೀಕೆ

'ಡಬಲ್ ಎಂಜಿನ್ ಸರ್ಕಾರದ ಮಹಾಮೋಸ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತೆರಿಗೆ ಸಂಗ್ರಹದಲ್ಲಿ ಕರ್ನಾಟಕವನ್ನು ತನ್ನ ಎಟಿಎಂ ಯಂತ್ರವನ್ನಾಗಿ ಮಾಡಿಕೊಂಡಿರುವ ಬಿಜೆಪಿಯ ಡಬಲ್ ಎಂಜಿನ್ ಸರ್ಕಾರ, ಅನುದಾನ ಹಂಚಿಕೆಯಲ್ಲಿ ರಾಜ್ಯಕ್ಕೆ ಮಹಾಮೋಸ ಮಾಡಿರುವುದು ಬಯಲಾಗಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

'ಪ್ರಜಾವಾಣಿ'ಯ ಬುಧವಾರದ ಸಂಚಿಕೆಯ ಮುಖಪುಟದಲ್ಲಿ 'ವಿಶೇಷ ಅನುದಾನ: ರಾಜ್ಯಕ್ಕೆ ಸೊನ್ನೆ' ಶೀರ್ಷಿಕೆಯಡಿ ಪ್ರಕಟವಾಗಿದ್ದ ವಿಶೇಷ ವರದಿಯ ತುಣುಕಿನೊಂದಿಗೆ ಸರಣಿ ಟ್ವೀಟ್ ಮಾಡಿರುವ ಅವರು, 'ಚುನಾವಣೆ ವರ್ಷದಲ್ಲಿ ತಿಂಗಳಿಗೆ ನಾಲ್ಕು ಬಾರಿ ರಾಜ್ಯಕ್ಕೆ ಬರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಕನ್ನಡಿಗರನ್ನು ಎಷ್ಟು ಕೀಳಾಗಿ ನಡೆಸಿಕೊಳ್ಳುತ್ತಿದೆ ಎಂಬುದಕ್ಕೆ ಇದು ಸಾಕ್ಷಿ' ಎಂದಿದ್ದಾರೆ.

'ತೆರಿಗೆ ಕಟ್ಟಲು ದಕ್ಷಿಣ ಭಾರತ, ಅನುದಾನ ಹಂಚಿಕೆಗೆ ಉತ್ತರ ಭಾರತ ಎಂಬುದು ಇವರ ರಾಜನೀತಿ. ಐದು ವರ್ಷಗಳ ಅವಧಿಯಲ್ಲಿ ಉತ್ತರ ಮತ್ತು ದಕ್ಷಿಣದ ರಾಜ್ಯಗಳಿಗೆ ನೀಡಿದ ಅನುದಾನದ ಅಂಕಿ–ಅಂಶಗಳನ್ನು ಲೋಕಸಭೆಯಲ್ಲಿ ಮಂಡಿಸಿದ ಸಚಿವರಿಗೆ ಕೊಂಚವೂ ಲಜ್ಜೆ ಎನಿಸಲಿಲ್ಲವೆ? ಕನ್ನಡಿಗರು ಬಿಜೆಪಿಯವರಿಗೆ ತಬ್ಬಲಿ ಮಕ್ಕಳೇ ಆಗಿದ್ದಾರೆ' ಎಂದು ವಾಗ್ದಾಳಿ ನಡೆಸಿದ್ದಾರೆ.

'ವಿಶೇಷ ಅನುದಾನ ಹಂಚಿಕೆಯಲ್ಲಿ ರಾಜ್ಯಕ್ಕೆ ಸೊನ್ನೆ ಸುತ್ತಿರುವುದು ಹೇಯ. 25 ಸಂಸದರನ್ನು ಕೊಟ್ಟ ಕರ್ನಾಟಕಕ್ಕೆ ಇಂಥ ದುರ್ಗತಿಯೆ? ಮೋದಿಯವರೇ ತಿಂಗಳಿಗೆ ಹತ್ತು ಸಲ ಬೇಕಿದ್ದರೂ ರಾಜ್ಯಕ್ಕೆ ಬನ್ನಿ. ಅನುದಾನ ಹಂಚಿಕೆಯಲ್ಲಿ ಕನ್ನಡಿಗರಿಗೆ ಮಾಡಿರುವ ಅನ್ಯಾಯಕ್ಕೆ ಕಾರಣ ಹೇಳಿ' ಎಂದು ಆಗ್ರಹಿಸಿದ್ದಾರೆ.

'ಉತ್ತರ'ದ ಉದ್ಧಾರಕ್ಕೆ ನಮ್ಮ ತೆರಿಗೆ ಹಣವೇ?–ದಿನೇಶ್

ಬೆಂಗಳೂರು: 'ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಒಂದೇ ಒಂದು ರೂಪಾಯಿ ವಿಶೇಷ ಅನುದಾನ ಕೊಟ್ಟಿಲ್ಲ. ಇದೇ ವೇಳೆ ಉತ್ತರದ ರಾಜ್ಯಗಳಿಗೆ ಅನುದಾನದ ಹೊಳೆಯನ್ನೇ ಹರಿಸಿದೆ. ಕೇಂದ್ರಕ್ಕೆ ರಾಜ್ಯದಿಂದ ತೆರಿಗೆ ದುಡ್ಡು ಬೇಕು, ಜನರ ಓಟು ಬೇಕು. ಆದರೆ, ಅನುದಾನ ಕೊಡಲು ಆಗುವುದಿಲ್ಲವೇ. ಉತ್ತರದ ರಾಜ್ಯಗಳ ಉದ್ಧಾರ ಮಾಡಲು ನಮ್ಮ ರಾಜ್ಯದ ತೆರಿಗೆ ಹಣವೇ' ಎಂದು ಕಾಂಗ್ರೆಸ್ ಶಾಸಕ ದಿನೇಶ್ ಗುಂಡೂರಾವ್ ಪ್ರಶ್ನಿಸಿದ್ದಾರೆ.

'ಪ್ರಜಾವಾಣಿ' ವರದಿ ಸಹಿತ ಟ್ವೀಟ್ ಮಾಡಿರುವ ಅವರು, 'ವಿಶೇಷ ಅನುದಾನದಲ್ಲಿ ಉತ್ತರದ ರಾಜ್ಯಗಳಿಗೆ ಭರಪೂರ ಅನುದಾನ. ಕರ್ನಾಟಕಕ್ಕೆ ಶೂನ್ಯ ಅನುದಾನ. ಯಾಕೀ ಈ ತಾರತಮ್ಯ' ಎಂದಿದ್ದಾರೆ.

'25 ಜನ ಬಿಜೆಪಿ ಸಂಸದರು, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ರಾಜ್ಯಸಭೆಗೆ ಆಯ್ಕೆ ಮಾಡಿದ್ದು ಕರ್ನಾಟಕ. ಕೇಂದ್ರ, ರಾಜ್ಯದಲ್ಲೂ ಬಿಜೆಪಿ ಸರ್ಕಾರ. ಬಿಜೆಪಿಗೆ ಇಷ್ಟೆಲ್ಲಾ ಕೊಡುಗೆ ಕೊಟ್ಟ ರಾಜ್ಯಕ್ಕೆ ಒಂದೇ ಒಂದು ರೂಪಾಯಿ ವಿಶೇಷ ಅನುದಾನವಿಲ್ಲ. ಕೇಂದ್ರದ ದೃಷ್ಟಿಯಲ್ಲಿ ರಾಜ್ಯಕ್ಕೆ ಏನು ಸ್ಥಾನ? 'ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಿಧನ ವಾರ್ತೆ

ಬಿ.ಎನ್. ಚನ್ನಪ್ಪಾಚಾರ್ಯ

ಮೈಸೂರು: ಸ್ವರ್ಣಶಿಲ್ಪಿ ಬಿ.ಎನ್. ಚನ್ನಪ್ಪಾಚಾರ್ಯ (87) ಬುಧವಾರ ವಯೋಸಹಜ ಅನಾರೋಗ್ಯದಿಂದ ಇಲ್ಲಿನ ಗಾಯತ್ರಿಪುರಂ ಬಡಾವಣೆಯ ನಿವಾಸದಲ್ಲಿ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಹಾಗೂ ಪುತ್ರ ಇದ್ದಾರೆ. ಅಂತ್ಯಕ್ರಿಯೆ ಸಂಜೆ ನಡೆಯಿತು ಎಂದು ಕುಟುಂಬವು ತಿಳಿಸಿದೆ. ಅವರು ಹುಣಸೂರು ತಾಲ್ಲೂಕು ಬಿಳಿಕೆರೆಯವರು. 2006ರಲ್ಲಿ ಅಮರಶಿಲ್ಪಿ ಜಕಣಾಚಾರಿ ಪ್ರಶಸ್ತಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾಗಿದ್ದರು.

ಚಾಮುಂಡಿಬೆಟ್ಟದ ಗರ್ಭಗುಡಿ ಬಾಗಿಲು, ದೇವಿಮೂರ್ತಿಯ ಸ್ವರ್ಣ ಕವಚಗಳು, ಧರ್ಮಸ್ಥಳ ಮಂಜುನಾಥ ದೇಗುಲದ ಬೆಳ್ಳಿ ರಥ, ಕುಕ್ಕೆ ಸುಬ್ರಹ್ಮಣ್ಯ ದೇವಾಲಯ ಮೂರ್ತಿಯ ಬಂಗಾರದ ಕವಚ, ಕೊಲ್ಲೂರು ಮೂಕಾಂಬಿಕೆ ದೇಗುಲದ ಬಂಗಾರದ ಕಳಶ ರೂಪಿಸುವಲ್ಲಿ ಅವರ ಶ್ರಮವಿದೆ.

ಅದಾನಿ ವಂಚನೆ ಆರೋಪದ ಪ್ರಕರಣ: ಜೆಪಿಸಿ ತನಿಖೆಗೆ ವಿಪಕ್ಷ ಪಟ್ಟು • ರಾಜ್ಯಸಭೆಯಲ್ಲಿ ಗದ್ದಲ

ಖರ್ಗೆ–ಧನಕರ್ ಮಾತಿನ ಸಮರ

ನವದೆಹಲಿ (ಪಿಟಿಐ): ಅದಾನಿ ಸಮೂಹದ ವಿರುದ್ಧದ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ತನಿಖೆಗೆ ಒಪ್ಪಿಸಬೇಕು ಎಂದು ವಿರೋಧ ಪಕ್ಷಗಳು ಬಿಗಿಪಟ್ಟು ಹಿಡಿದಿದ್ದರಿಂದ ರಾಜ್ಯಸಭೆಯಲ್ಲಿ ಬುಧವಾರ ಗದ್ದಲದ ವಾತಾವರಣ ಸೃಷ್ಟಿಯಾಯಿತು.

ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆ ವೇಳೆ ಮಾತನಾಡಿದ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, 'ಉದ್ಯಮಿಯೊಬ್ಬರ ಸಂಪತ್ತು ಹೆಚ್ಚಲು ಅವರು ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಹೊಂದಿರುವ ಗೆಳೆತನ ಕಾರಣವೇ' ಎಂದು ಪ್ರಶ್ನಿಸಿದರು.

ಇದು ಬಿಜೆಪಿ ಸದಸ್ಯರನ್ನು ಕೆರಳಿಸಿತು. ಸದನದ ನಾಯಕ ಪಿಯೂಷ್ ಗೋಯಲ್ ಹಾಗೂ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಖರ್ಗೆ ಅವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದರು. ಆದರೆ ಮೋದಿಯವರು ಮೌನವಾಗಿ ಕುಳಿತಿದ್ದರು.

ವಿದೇಶಿ ಸಂಸ್ಥೆಯೊಂದರ ವರದಿಯ ಆಧಾರದಲ್ಲಿ ದೇಶ ವಿರೋಧಿ ಹೇಳಿಕೆಗಳನ್ನು ನೀಡಲು ಸದನವನ್ನು ವೇದಿಕೆಯಾಗಿ ಬಳಸಿಕೊಳ್ಳಬಾರದು ಎಂದು ಸಭಾಪತಿ ಜಗದೀಪ್ ಧನಕರ್ ಅವರು ಸೂಚಿಸಿದರು. ಇದರಿಂದ ಕೆರಳಿದ ವಿರೋಧ ಪಕ್ಷಗಳ ಸದಸ್ಯರು ಬಿಜೆಪಿಯವರ ದೇಶಪ್ರೇಮವನ್ನು ಪ್ರಶ್ನಿಸಿದರು.

'ನಾ ಖಾವುಂಗಾ. ನಾ ಖಾನೆದೂಂಗಾ' ಎಂದು ಮೋದಿ ಅವರು 2014ರಲ್ಲಿ ಹೇಳಿದ್ದರು. ಇದು ಪೊಳ್ಳು ಭರವಸೆಯೇ. ಮೋದಿ ಅವರ ಆಪ್ತ ಸ್ನೇಹಿತನ ಸಂಪತ್ತು 13 ಪಟ್ಟು ಹೆಚ್ಚಿದೆ. 2019ರಲ್ಲಿ ₹1 ಲಕ್ಷ ಕೋಟಿಯಷ್ಟಿದ್ದ ಸಂಪತ್ತು ₹12 ಲಕ್ಷ ಕೋಟಿಗೆ ಏರಿದ್ದು ಹೇಗೆ? ಎರಡು ವರ್ಷದಲ್ಲಿ ಅದ್ಭುತ ಪವಾಡ ನಡೆಯಿತು. ಇದು ಗೆಳೆತನದ ಫಲವೇ' ಎಂದು ಅದಾನಿ ಹೆಸರು ಪ್ರಸ್ತಾಪಿಸದೆ ಖರ್ಗೆ ಕುಟುಕಿದರು.

ಆಗ ಮಧ್ಯಪ್ರವೇಶಿಸಿದ ಸಭಾಧ್ಯಕ್ಷರು, 'ಭಾಷಣದ ವೇಳೆ ಆಧಾರ ರಹಿತವಾಗಿ ಆರೋಪ ಮಾಡಬಾರದು' ಎಂದು ತಾಕೀತು ಮಾಡಿದರು. ಮೋದಿ ಅವರ ಮೇಲಿನ ಆರೋಪ ಸಾಬೀತುಪಡಿಸಲು ಅಗತ್ಯವಿರುವ ದಾಖಲೆಗಳನ್ನು ಸದನಕ್ಕೆ ಸಲ್ಲಿಸಿ ಎಂದೂ ಸೂಚಿಸಿದರು.

'ಸದನದಲ್ಲಿ ಏನೇ ಮಾತನಾಡಿದರೂ ಅದು ದೇಶದ ಹಿತಾಸಕ್ತಿಗೆ ಸಂಬಂಧಿಸಿದ್ದಾಗಿರಬೇಕು. ಅವು ವಿಶ್ವಾಸಾರ್ಹತೆಯಿಂದ ಕೂಡಿರಬೇಕು' ಎಂದೂ ಹೇಳಿದರು.

'ನಾನು ಸತ್ಯ ಹೇಳಲು ಹೊರಟರೆ ಅದು ದೇಶ ವಿರೋಧಿ ಹೇಳಿಕೆಯಾಗುತ್ತದೆ. ನಾನು ದೇಶ ವಿರೋಧಿಯಲ್ಲ. ನಿಮಗಿಂತಲೂ ದೊಡ್ಡ ದೇಶಭಕ್ತ. ಜೊತೆಗೆ ಭೂಮಿಪುತ್ರ, ನನ್ನ ಭಾವನೆಗಳನ್ನು ಹತ್ತಿಕ್ಕಲು ಪ್ರಯತ್ನಿಸಬೇಡಿ. ದೇಶವನ್ನು ಲೂಟಿ ಹೊಡೆಯುತ್ತಿರುವ ನೀವು ನನ್ನನ್ನು ದೇಶ ವಿರೋಧಿ ಎಂದು ಕರೆಯುತ್ತಿದ್ದೀರಾ' ಎಂದು ಖರ್ಗೆ ಆಕ್ರೋಶ ವ್ಯಕ್ತಪಡಿಸಿದರು.

'ಕೋಮು ಗಲಭೆಗಳಿಂದಾಗಿ ಭಾರತದ ವರ್ಚಸ್ಸಿಗೆ ಕುಂದುಂಟಾಗುತ್ತಿದೆ. ಯಾವ ಮುಖ ಇಟ್ಟುಕೊಂಡು ನಾನು ವಿದೇಶಗಳಿಗೆ ಹೋಗಲಿ. ರಾಜಧರ್ಮವು ಪಾಲನೆಯಾಗುತ್ತಿಲ್ಲ ಎಂದು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಅಹಮದಾಬಾದ್‌ನಲ್ಲಿ ಹೇಳಿದ್ದರು' ಎಂದು ಖರ್ಗೆ ಸ್ಮರಿಸಿದರು. ಆಗ ಸದನದಲ್ಲಿ ಕೋಲಾಹಲ ಸೃಷ್ಟಿಯಾಯಿತು.

ವಾಜಪೇಯಿಯವರ ಹೇಳಿಕೆ ಪ್ರಕಟಿಸಿದ್ದ ದಿನಪತ್ರಿಕೆಯೊಂದನ್ನು ಖರ್ಗೆ ಅವರು ಸದನದಲ್ಲಿ ಪ್ರದರ್ಶಿಸಿದರು. ಆದರೆ ಸಭಾಧ್ಯಕ್ಷರು ಅದನ್ನು ಒಪ್ಪಲಿಲ್ಲ. 'ದಿನಪತ್ರಿಕೆಗಳಲ್ಲಿ ಪ್ರಕಟವಾದ ವರದಿಯು ದಾಖಲೆಗೆ ಪರ್ಯಾಯವಲ್ಲ. ನೀವು ಏನು ಹೇಳುತ್ತಿದ್ದರೋ ಅದನ್ನು ದೃಢೀಕರಿಸಬೇಕು' ಎಂದು ಖರ್ಗೆ ಅವರಿಗೆ ಮತ್ತೊಮ್ಮೆ ಸೂಚಿಸಿದರು.



ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯಸಭೆಯಲ್ಲಿ ಬುಧವಾರ ಮಾತನಾಡಿದರು – ಪಿಟಿಐ ಚಿತ್ರ

> ರಾಹುಲ್ ಅವರು ಆಧಾರ ರಹಿತ, ಅಸಂಸದೀಯ ಹೇಳಿಕೆಗಳನ್ನು ನೀಡಿದ್ದಾರೆ. ಅವುಗಳನ್ನು ಕಡತದಿಂದ ತೆಗೆದುಹಾಕಬೇಕು. ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು
> **ಪ್ರಲ್ಹಾದ ಜೋಶಿ**, ಸಂಸದೀಯ ವ್ಯವಹಾರಗಳ ಸಚಿವ

> ಅದಾನಿ ಅಥವಾ ಅಂಬಾನಿ ಮೇಲೆ ವೈಯಕ್ತಿಕ ದ್ವೇಷವಿಲ್ಲ. ಅದಾನಿ ಸಮೂಹದ ಹಗರಣವನ್ನು ಬಿಜೆಪಿ ಸಮರ್ಥಿಸಿಕೊಳ್ಳುತ್ತಿದೆ. ಇದನ್ನು ನಾವು ಹಿಂದೆಂದೂ ಕಂಡಿರಲಿಲ್ಲ
> **ಅಧೀರ್ ರಂಜನ್ ಚೌಧರಿ**, ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ

> ಆಪಲ್, ಆಪಲ್ ಎಂದಿದ್ದು ನಿಜ. ಮಹಿಳೆಯಾಗಿ ಹೀಗೆ ಹೇಳಲು ಸಾಧ್ಯವೇ ಎಂದು ಬಿಜೆಪಿ ಅವರು ಕೇಳುತ್ತಿದ್ದಾರೆ. ಪ್ರತ್ಯುತ್ತರ ನೀಡಲು ಪುರುಷ ಆಗಿರಬೇಕೇ?
> **ಮಹುವಾ ಮೊಯಿತ್ರಾ**, ಟಿಎಂಸಿ ಸಂಸದೆ

ಸಂಸತ್ ಅಧಿವೇಶನ

'ರಾಹುಲ್ ವಿರುದ್ಧ ಕ್ರಮ ಕೈಗೊಳ್ಳಿ'

ನವದೆಹಲಿ (ಪಿಟಿಐ): 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸದನದಲ್ಲಿ ಮಾತನಾಡುವಾಗ ಪ್ರಧಾನಿ ಮೋದಿ ಅವರ ವಿರುದ್ಧ ಆಧಾರರಹಿತ ಹಾಗೂ ಮಾನಹಾನಿಕರ ಹೇಳಿಕೆ ನೀಡಿದ್ದಾರೆ. ಆ ಮೂಲಕ ಸದನದ ನಿಯಮ ಉಲ್ಲಂಘಿಸಿದ್ದಾರೆ. ಹೀಗಾಗಿ ಅವರ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದಾರೆ.

'ರಾಹುಲ್ ಅವರ ಹೇಳಿಕೆಗಳು ದಾರಿ ತಪ್ಪಿಸುವಂತಿವೆ. ಅವು ಅಸಂಸದೀಯವಾಗಿವೆ' ಎಂದೂ ಅವರು ದೂರಿದ್ದಾರೆ.

ದೇಶಕ್ಕೆ ಹೊರೆಯಾದ ದಶಕ

ಒಂದನೇ ಪುಟದಿಂದ...

'ಕೋವಿಡ್ ಪಿಡುಗು ಹಾಗೂ ಸಂಘರ್ಷಗಳಿಂದಾಗಿ ವಿಶ್ವದ ಕೆಲವೆಡೆ ಅಸ್ಥಿರತೆ ಸೃಷ್ಟಿಯಾಗಿದೆ. ಇಂತಹ ಸಂದಿಗ್ಧ ನಡುವೆಯೂ ಇಡೀ ಜಗತ್ತು ಭಾರತದತ್ತ ಭರವಸೆಯ ಕಣ್ಣಿನಿಂದ ನೋಡುತ್ತಿದೆ. ಹತಾಶೆಗೆ ಒಳಗಾಗಿರುವ ಕೆಲವರಿಗೆ ರಾಷ್ಟ್ರದ ಬೆಳವಣಿಗೆಯನ್ನು ಸಹಿಸಲು ಆಗುತ್ತಿಲ್ಲ. 140 ಕೋಟಿ ಜನರ ಸಾಧನೆಯನ್ನು ಅವರಿಂದ ನೋಡಲಾಗುತ್ತಿಲ್ಲ' ಎಂದು ವಿರೋಧ ಪಕ್ಷಗಳ ವಿರುದ್ಧ ಹರಿಹಾಯ್ದಿದ್ದಾರೆ.

'ಸಂಕಷ್ಟದ ಸಮಯದಲ್ಲಿ ಮೋದಿ ತಮ್ಮ ನೆರವಿಗೆ ನಿಂತಿದ್ದಾರೆ ಎಂಬುದು ಈ ದೇಶದ ನಾಗರಿಕರಿಗೆ ಗೊತ್ತು. ಅಂತಹ ಜನ ನೀವು ನನ್ನ ವಿರುದ್ಧ ಮಾಡುತ್ತಿರುವ ಟೀಕೆ ಹಾಗೂ ನಿಂದನೆಯನ್ನು ಹೇಗೆ ಒಪ್ಪುತ್ತಾರೆ' ಎಂದು ಪ್ರಶ್ನಿಸಿದ್ದಾರೆ.

'ದಿನಪತ್ರಿಕೆಗಳಲ್ಲಿನ ಹೆಡ್‌ಲೈನ್‌ಗಳು ಅಥವಾ ಟಿ.ವಿಗಳಲ್ಲಿ ಬಿತ್ತರವಾಗುವ ದೃಶ್ಯಗಳನ್ನು ನೋಡಿ ಜನರು ಮೋದಿ ಮೇಲೆ ನಂಬಿಕೆ ಇಟ್ಟಿಲ್ಲ. ಬದಲಾಗಿ ಸಮರ್ಪಣಾ ಭಾವವನ್ನು ಕಂಡು ನನ್ನ ಮೇಲೆ ಭರವಸೆ ಇಟ್ಟಿದ್ದಾರೆ. ಚುನಾವಣೆಯಲ್ಲಿ ಸೋತಾಗ ಇವಿಎಂ ಅನ್ನು ದೂಷಿಸುತ್ತೀರಿ. ಚುನಾವಣಾ ಆಯೋಗವನ್ನು ಟೀಕಿಸುತ್ತೀರಿ. ಸುಪ್ರೀಂ ಕೋರ್ಟ್ ನಿಮ್ಮ ಪರವಾಗಿ ತೀರ್ಪು ನೀಡದಿದ್ದಾಗ ಅದರ ವಿರುದ್ಧ ಹರಿಹಾಯುತ್ತೀರಿ. ಭ್ರಷ್ಟಾಚಾರದ ಕುರಿತು ತನಿಖೆ ಕೈಗೊಂಡರೆ ತನಿಖಾ ಸಂಸ್ಥೆಗಳನ್ನೇ ದೂರುತ್ತೀರಿ. ಸೇನೆ ವಿರುದ್ಧವೂ ಆರೋಪಗಳನ್ನು ಮಾಡುತ್ತೀರಿ' ಎಂದಿದ್ದಾರೆ.

'ಕೋಟ್ಯಂತರ ಜನರ ನಂಬಿಕೆಯೇ ನನಗೆ ಶ್ರೀರಕ್ಷೆ. ವಿರೋಧ ಪಕ್ಷಗಳ ನಿಂದನೆಯು ಈ ರಕ್ಷಾ ಕವಚವನ್ನು ಭೇದಿಸದು. ವಿರೋಧ ಪಕ್ಷದವರು ರಚನಾತ್ಮಕ ಟೀಕೆಯ ಬದಲು ನಮ್ಮ ವಿರುದ್ಧ ಆಧಾರ ರಹಿತ ಆರೋಪ ಮಾಡುತ್ತಲೇ ಒಂಬತ್ತು ವರ್ಷಗಳನ್ನು ಕಳೆದಿದ್ದಾರೆ' ಎಂದೂ ಹೇಳಿದ್ದಾರೆ.

ಈ ವೇಳೆ ಪ್ರಧಾನಿ ಅವರ ಭಾಷಣಕ್ಕೆ

'ಮೋದಿಯಿಂದ ಅದಾನಿ ರಕ್ಷಣೆ'

ಒಂದನೇ ಪುಟದಿಂದ...

'ಮೋದಿ ಅವರು ಅದಾನಿಯನ್ನು ರಕ್ಷಿಸುತ್ತಿರುವುದು ಸ್ಪಷ್ಟ. ಅದು ನನಗೂ ಅರ್ಥವಾಗುತ್ತದೆ. ಅದಕ್ಕೆ ಕಾರಣಗಳೂ ಇವೆ' ಎಂದಿದ್ದಾರೆ.

ವಿರೋಧ ವ್ಯಕ್ತಪಡಿಸಿದ ಬಿಆರ್‌ಎಸ್, ಎಡ ಪಕ್ಷ ಹಾಗೂ ಕಾಂಗ್ರೆಸ್‌ನ ಕೆಲ ಸದಸ್ಯರು ಘೋಷಣೆ ಕೂಗುತ್ತಾ ಸದನದಿಂದ ಹೊರನಡೆದರು.

'ಎಲ್‌ಐಸಿ, ಎಸ್‌ಬಿಐ ಹಣ ಅದಾನಿ ಸಮೂಹದಲ್ಲಿ ಹೂಡಿಕೆಯಾಗಿದೆ. ಆ ಹಣ ಸುರಕ್ಷಿತವಾಗಿದೆ ಎಂಬ ಭರವಸೆ ಪ್ರಧಾನಿಯಿಂದ ಸಿಗಬಹುದು ಎಂದು ಹೂಡಿಕೆದಾರರು ನಿರೀಕ್ಷಿಸಿದ್ದರು. ಆದರೆ ಅವರು ಈ ವಿಚಾರವನ್ನೂ ಪ್ರಸ್ತಾಪಿಸಿಲ್ಲ' ಎಂದು ಟಿಎಂಸಿ ಸಂಸದ ಸುದೀಪ್ ಬಂಡೋಪಾಧ್ಯಾಯ ದೂರಿದ್ದಾರೆ.

ಪಾಕ್ ಡ್ರೋನ್ ಹೊಡೆದು ಉರುಳಿಸಿದ ಬಿಎಸ್‌ಎಫ್

ನವದೆಹಲಿ (ಪಿಟಿಐ): ಪಂಜಾಬ್‌ನ ಅಂತರರಾಷ್ಟ್ರೀಯ ಗಡಿ ಮೂಲಕ ಭಾರತವನ್ನು ಪ್ರವೇಶಿಸಿದ ಪಾಕಿಸ್ತಾನದ ಡ್ರೋನ್‌ವೊಂದನ್ನು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಹೊಡೆದುರುಳಿಸಿದೆ.

'ಪಂಜಾಬ್‌ನ ಅಮೃತಸರ ವಲಯದ 'ಬಾಬಾಪಿರ್' ಪೋಸ್ಟ್ ಬಳಿ ಫೆ.7ರ ಮಧ್ಯರಾತ್ರಿ ಈ ಘಟನೆ ನಡೆದಿದೆ. ಡ್ರೋನ್‌ನ ಅವಶೇಷಗಳು ಪಾಕಿಸ್ತಾನದ ಗಡಿಯೊಳಗೆ ಬಿದ್ದಿತು' ಎಂದು ಸೇನಾ ವಕ್ತಾರರೊಬ್ಬರು ಬುಧವಾರ ತಿಳಿಸಿದರು.

ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
ಮೊದಲನೆ ಮಹಡಿ, ಎಸ್.ಎಸ್.ಎಲ್.ಆರ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001. ದೂರವಾಣಿ ಸಂಖ್ಯೆ: 080–22113255

No: BMC/12015/276/2022 E 824869 Date: 08.02.2023

ಇ–ಟೆಂಡರ್ ಅಧಿಸೂಚನೆ

ರಾಜ್ಯದ ತಾಲ್ಲೂಕು ಭೂಮಿ ಕೇಂದ್ರಗಳ ಡೆಸ್ಕ್ ಟಾಪ್‌ಗಳನ್ನು ಅಪ್‌ಗ್ರೇಡ್ ಮಾಡಲು ಅಗತ್ಯವಿರುವ RAM & SSD ಗಳನ್ನು ಸರಬರಾಜು ಮಾಡಲು ಇ–ಟೆಂಡರ್ ಆಹ್ವಾನಿಸಲಾಗಿದೆ. **ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: 16.02.2023 ರಂದು ಸಂಜೆ 5.30 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು http://eproc.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/– ಸಹಾಯಕ ಆಯುಕ್ತರು,
ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ
ವಾಸಾಸಂಇ/ವಾಪ್ರ/4522/2022–23

'ಸುಪ್ರೀಂ'ಗೆ ಮಾಹಿತಿ ನೀಡಿದ ಕೇಂದ್ರ ಸರ್ಕಾರ

ಬಾಡಿಗೆ ತಾಯ್ತನ ಕಾಯ್ದೆ, ಎಆರ್‌ಟಿ ಕಾಯ್ದೆಯಡಿ 'ರಾಷ್ಟ್ರೀಯ ಸಂತಾನೋತ್ಪತ್ತಿ ನೆರವು ತಂತ್ರಜ್ಞಾನ ಹಾಗೂ ಬಾಡಿಗೆ ತಾಯ್ತನ ಮಂಡಳಿ' ರಚಿಸಿ ಅಧಿಸೂಚನೆ

'ಬಾಡಿಗೆ ತಾಯ್ತನ: ಆನುವಂಶಿಕವಾಗಿ ಸಂಬಂಧ ಹೊಂದಿರಬೇಕಿಲ್ಲ '

ನವದೆಹಲಿ: ಬಾಡಿಗೆ ತಾಯ್ತನ ವಿಧಾನದ ಮೂಲಕ ಜನಿಸಿದ ಮಗುವಿನೊಂದಿಗೆ ಬಾಡಿಗೆ ತಾಯಿಯು ಆನುವಂಶಿಕವಾಗಿ ಸಂಬಂಧ ಹೊಂದಿರಬೇಕಿಲ್ಲ ಎಂದು ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ಸ್ಪಷ್ಟನೆ ನೀಡಿದೆ.

'ಯಾವ ಮಹಿಳೆಯೂ ತನ್ನದೇ ಅಂಡಾಣುಗಳನ್ನು ಒದಗಿಸುವ ಮೂಲಕ ಬಾಡಿಗೆ ತಾಯಿ ಆಗಲು ಬಾಡಿಗೆ ತಾಯ್ತನ ಕಾನೂನು ಅವಕಾಶ ನೀಡುವುದಿಲ್ಲ' ಎಂದೂ ಕೇಂದ್ರ ಸರ್ಕಾರ ಹೇಳಿದೆ.

ಆದರೆ, ಬಾಡಿಗೆ ತಾಯ್ತನ ವಿಧಾನದ ಮೂಲಕ ಜನಿಸಲಿರುವ ಮಗುವು, ತಾಯಿ ಆಗಲು ಬಯಸುವ ಮಹಿಳೆ (ವಿಧವೆ ಅಥವಾ ವಿಚ್ಛೇದಿತೆ) ಅಥವಾ ಮಗುವನ್ನು ಹೊಂದಲು ಬಯಸುವ ದಂಪತಿಯೊಂದಿಗೆ ಆನುವಂಶಿಕವಾಗಿ ಸಂಬಂಧ ಹೊಂದಿರಲೇಬೇಕು ಎಂದು ಕೇಂದ್ರ ಸರ್ಕಾರವು ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಹೇಳಿದೆ.

ನ್ಯಾಯಮೂರ್ತಿ ಅಜಯ್ ರಸ್ತೋಗಿ ನೇತೃತ್ವದ ನ್ಯಾಯಪೀಠ, ಈ ವಿಷಯಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಸಿತು.

ಬಾಡಿಗೆ ತಾಯ್ತನ (ನಿಯಂತ್ರಣ) ಕಾಯ್ದೆ, 2021 ಹಾಗೂ ಸಂತಾನೋತ್ಪತ್ತಿ ನೆರವು ತಂತ್ರಜ್ಞಾನ (ನಿಯಂತ್ರಣ) ಕಾಯ್ದೆ (ಎಆರ್‌ಟಿ ಕಾಯ್ದೆ) 2021ರ ಕೆಲ ನಿಯಮಗಳು ಮಹಿಳೆಯ ಖಾಸಗಿತನ ಹಾಗೂ ಆಕೆಯ ಸಂತಾನೋತ್ಪತ್ತಿ ಹಕ್ಕುಗಳಿಗೆ ವಿರುದ್ಧವಾಗಿವೆ ಎಂದು ದೂರಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನೂ ನ್ಯಾಯಪೀಠ ನಡೆಸಿತು.

45 ಅಭ್ಯರ್ಥಿಗಳು ಕೋಟ್ಯಧಿಪತಿಗಳು

ಪ್ರಜಾ ಮತ ಜನತಂತ್ರದ ಹಬ್ಬ
ತ್ರಿಪುರಾ ವಿಧಾನಸಭಾ ಚುನಾವಣೆ - 2023

ಫೆ. 16ರಂದು ನಡೆಯಲಿರುವ ತ್ರಿಪುರಾ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಒಟ್ಟು 259 ಅಭ್ಯರ್ಥಿಗಳಲ್ಲಿ 45 ಅಭ್ಯರ್ಥಿಗಳು ಕೋಟ್ಯಧಿಪತಿಗಳು, 41 ಅಭ್ಯರ್ಥಿಗಳು ಅಪರಾಧ ಪ್ರಕರಣ ಎದುರಿಸುತ್ತಿದ್ದಾರೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ಬಿಡುಗಡೆ ಮಾಡಿದೆ.

- ಉಪಮುಖ್ಯಮಂತ್ರಿ, ಬಿಜೆಪಿಯ ಜಿಷ್ಣು ದೇವ್ ವರ್ಮಾ ಅವರು ಅತ್ಯಂತ ಶ್ರೀಮಂತ ಅಭ್ಯರ್ಥಿಯಾಗಿದ್ದಾರೆ. ಅವರು ಚರ ಹಾಗೂ ಸ್ಥಿರ ಆಸ್ತಿಯ ಮೌಲ್ಯ ₹15.58 ಕೋಟಿಯಷ್ಟಿದೆ
- ಮುಖ್ಯಮಂತ್ರಿ ಮಾಣಿಕ್ ಸಹಾ ಅವರು ಎರಡನೇ ಶ್ರೀಮಂತ ಅಭ್ಯರ್ಥಿಯಾಗಿದ್ದಾರೆ. ಇವರ ಒಟ್ಟು ಆಸ್ತಿಯ ಮೌಲ್ಯ ₹13.90 ಕೋಟಿ
- ಟಿಪ್ರ ಮೊಥಾದ ಅಭಿಜಿತ್ ಸರ್ಕಾರ್ ಅವರು ಮೂರನೇ ಶ್ರೀಮಂತ ಅಭ್ಯರ್ಥಿಯಾಗಿದ್ದು, ಇವರ ಒಟ್ಟು ಆಸ್ತಿ ಮೌಲ್ಯವು ₹12.57 ಕೋಟಿ
- ಬಿಜೆಪಿ ಕಣಕ್ಕಿಳಿಸಿರುವ ಒಟ್ಟು 55 ಅಭ್ಯರ್ಥಿಗಳ ಆಸ್ತಿಯ ಸರಾಸರಿ ಮೌಲ್ಯ ₹1.86 ಕೋಟಿ
- ಕಾಂಗ್ರೆಸ್ ಅಭ್ಯರ್ಥಿ ಚಾಯನ್ ಭಟ್ಟಾಚಾರ್ಯ ಅವರಿಗೆ ₹3.07 ಕೋಟಿಯಷ್ಟು ಸಾಲವಿದೆ. ಅತಿ ಹೆಚ್ಚು ಸಾಲ ಇರುವ ಅಭ್ಯರ್ಥಿಗಳ ಪೈಕಿ ಚಾಯನ್ ಮೊದಲಿಗರು

ವಿವಿಧ ಪಕ್ಷಗಳಲ್ಲಿರುವ ಕೋಟ್ಯಧಿಪತಿಗಳು

ಬಿಜೆಪಿ	ಟಿಪ್ರಮೋಥಾ	ಸಿಪಿಎಂ	ಕಾಂಗ್ರೆಸ್	ಟಿಎಂಸಿ	ಪಕ್ಷೇತರ ಅಭ್ಯರ್ಥಿಗಳು
17	9	7	6	4	2

ಅಪರಾಧ ಹಿನ್ನೆಲೆ ಇರುವ ಅಭ್ಯರ್ಥಿಗಳು

	ಒಟ್ಟು ಅಭ್ಯರ್ಥಿಗಳು	ಅಪರಾಧ ಹಿನ್ನೆಲೆ
2023ರ ಚುನಾವಣೆ	259	41
2018ರ ಚುನಾವಣೆ	297	22

ಪಕ್ಷವಾರು ಅಪರಾಧ ಹಿನ್ನೆಲೆ ಇರುವ ಅಭ್ಯರ್ಥಿಗಳು



ಆಧಾರ: ಪಿಟಿಐ

ಕರ್ನಾಟಕ ಸರ್ಕಾರ
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ
"ಅಭಿವೃದ್ಧಿ ಭವನ" ಐವಾನ–ಎ–ಶಾಹಿ, ಕಲಬುರಗಿ–585102, ದೂರವಾಣಿ : (08472)–256767, 239556 255564, ಫ್ಯಾಕ್ಸ್ : (08472) 227527, E-mail : hkadbgulb@gmail.com, Website : hkrdb.kar.nic.in

ಸಂಖ್ಯೆ: KKRDB/TECH/246/2022-23/Call-2 ದಿನಾಂಕ:08–02–2023.

ಅಲ್ಪಾವಧಿ ಟೆಂಡರ ಪ್ರಕಟಣೆ

1) ಕಾಮಗಾರಿಯ ಹೆಸರು: "Providing Consultancy services for Preparation of Conservation Plan, Provision of Amenities and Estimates (Including Design & Drawing) for Development works of Kalaburagi Fort. Call-2, 2) ಲೆಕ್ಕ ಶೀರ್ಷಿಕೆ: KKRDB ನಿಧಿ, 3) ಗುತ್ತಿಗೆದಾರರ ಅರ್ಹತೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ದಸ್ತಾವೇಜಿನಲ್ಲಿ, 4) ಟೆಂಡರ್ ದಸ್ತಾವೇಜನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ: **08.02.2023 ಬೆಳಿಗ್ಗೆ 11.00ಕ್ಕೆ,** 5) ಪ್ರೀ ಬಿಡ್ ಸಭೆ ದಿನಾಂಕ (online) : **13–02–2023 ಬೆಳಿಗ್ಗೆ 11.30ಕ್ಕೆ,** 6) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **16–02–2023 ಮಧ್ಯಾಹ್ನ 4.00ರ ವರೆಗೆ,** 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **17–02–2023 ಮಧ್ಯಾಹ್ನ 4.30ಕ್ಕೆ,** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : **21–02–2023 ಬೆಳಿಗ್ಗೆ 11.00ಕ್ಕೆ,** 9) ಟೆಂಡರ್ ಅರ್ಜಿ ಬೆಲೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇದ್ದಂತೆ, 10) ಇ.ಎಂ.ಡಿ.ಮೊತ್ತ : ರೂ. 2,00,000/–, 11) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ: https://eproc.karnataka.gov.in ಅಥವಾ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಐವಾನ್–ಇ–ಶಾಹಿ, ಕಲಬರಗಿ ರಲ್ಲಿ ಸಂಪರ್ಕಿಸಬಹುದು 12) ಅಂತರ್‌ಜಾಲ ತಾಣದ ವಿಳಾಸ: https://eproc.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಬದಲಾವಣೆ ಹಾಗು ಮಾರ್ಪಾಡುಗಳಿಗಾಗಿ https://eproc.karnataka.gov.in ಕ್ಕೆ ಸಂಪರ್ಕಿಸಬಹುದು

ಸಹಿ/– ಉಪ ಕಾರ್ಯದರ್ಶಿಗಳು
ಕ.ಕ.ಪ್ರ.ಅ.ಮಂಡಳಿ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1268/ಎಂ.ಸಿ.&ಎ/2022–23

ಕರ್ನಾಟಕ ಗೃಹ ಮಂಡಳಿ
Karnataka Housing Board Building Communities
ಗೃಹ ಆಯುಕ್ತರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ.ಪಾ.ಅ/ಹಂಚಿಕೆ–5/ಲಾಟರಿ/2022–23 ದಿನಾಂಕ: 06–02–2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಅಹೋಬಲಪಾಳ್ಯ ನರಸಿಂಹನಪಾಳ್ಯ ಮತ್ತು ಮಾಚೋನಾಯಕನಹಳ್ಳಿ ಗ್ರಾಮಗಳಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳೊಂದಿಗೆ ವಿವಿಧ ವರ್ಗದ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಈಗಾಗಲೇ **ದಿನಾಂಕ: 25–01–2023 ರಂದು** ಇ–ಲಾಟರಿ ಮೂಲಕ ಹಂಚಿಕೆ ಮಾಡಲಾಗಿದೆ. ಆದರೆ ಎಲ್.ಐ.ಜಿ/ ಎಂ.ಐ.ಜಿ/ಹೆಚ್.ಐ.ಜಿ. ವರ್ಗದಲ್ಲಿ ಕೆಲವು ನಿವೇಶನಗಳು ಬಾಕಿ ಉಳಿದಿದ್ದು, ಸದರಿ ನಿವೇಶನಗಳ ಹಂಚಿಕೆಗಾಗಿ ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತಿ ಇರುವ ಸಾರ್ವಜನಿಕರು ಆರಂಭಿಕ ಠೇವಣಿಯನ್ನು e-payment ಮೂಲಕ ಪಾವತಿಸಿ ಆನ್‌ಲೈನ್ ಅರ್ಜಿ (Online Application) ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 23–02–2023.**

ನೊಂದಣಿ ಶುಲ್ಕ/ಆರಂಭಿಕ ಠೇವಣಿ ವಿವರ ಕೆಳಕಂಡಂತಿರುತ್ತದೆ.

ಸ್ಥಳ ಮತ್ತು ಜಿಲ್ಲೆ	ವರ್ಗ	ಹಂಚಿಕೆಗೆ ಲಭ್ಯವಿರುವ ನಿವೇಶನಗಳು	ನೋಂದಣಿ ಶುಲ್ಕ (ರೂ.ಗಳಲ್ಲಿ)	ಆರಂಭಿಕ ಠೇವಣಿ ಹಣ (ರೂ.ಗಳಲ್ಲಿ)	ಮಂಡಳಿ ದರ (ಪ್ರತಿ ಚದರಡಿಗೆ)
ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಅಹೋಬಲಪಾಳ್ಯ ನರಸಿಂಹನಪಾಳ್ಯ ಮತ್ತು ಮಾಚೋನಾಯಕನಹಳ್ಳಿ	LIG	151	500/-	1,00,000/-	ರೂ. 1,200/-
	MIG	278	1000/-	1,50,000/-	
	HIG-I	90	1,500/-	2,00,000/-	
	HIG-II	05	1,500/-	2,50,000/-	

ಅರ್ಜಿ ನೋಂದಣಿ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಲು ಹಾಗೂ ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ:– ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಯೋಜನಾ ಕಛೇರಿ, ಕಾವೇರಿ ಭವನ, 5ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ಮೊಬೈಲ್ ನಂ. 9686373991 ಅಥವಾ ಕಾರ್ಯಪಾಲಕ ಅಭಿಯಂತರರು(ಹಂಚಿಕೆ) ಹಾಗೂ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, 4ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080–22273511 ವಿಸ್ತರಣೆ: 307/335 ರಲ್ಲಿ ಸಂಪರ್ಕಿಸುವುದು.

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/RO4569/AAPL/2022-23

ಸಂಕ್ಷಿಪ್ತ ಸುದ್ದಿ

ದೆಹಲಿ ಅಬಕಾರಿ ನೀತಿ: ಉದ್ಯಮಿ, ಲೆಕ್ಕಪರಿಶೋಧಕ ಬಂಧನ

ನವದೆಹಲಿ (ಪಿಟಿಐ): ದೆಹಲಿಯ ಅಬಕಾರಿ ನೀತಿಗೆ ಸಂಬಂಧಿಸಿ ಹೈದರಾಬಾದ್ ಮೂಲದ ಲೆಕ್ಕಪರಿಶೋಧಕ ಬುಚ್ಚಿಬಾಬು ಗೊರಂಟ್ಲಾ ಅವರನ್ನು ಸಿಬಿಐ ಅಧಿಕಾರಿಗಳು ಬಂಧಿಸಿದ್ದಾರೆ.

'ವಿಚಾರಣೆಗೆ ದೆಹಲಿಗೆ ಕರೆಸಲಾಗಿತ್ತು. ತನಿಖೆಗೆ ಸಹಕರಿಸಲಿಲ್ಲ, ಸೂಕ್ತವಾಗಿ ಪ್ರತಿಕ್ರಿಯಿಸಲಿಲ್ಲ. ಹೀಗಾಗಿ, ಮಂಗಳವಾರ ಸಂಜೆ ಬಂಧಿಸಲಾಯಿತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇವರು ಬಿಆರ್‌ಎಸ್ ಶಾಸಕಿ, ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರ ಪುತ್ರಿ ಕವಿತಾ ಅವರ ಲೆಕ್ಕಪರಿಶೋಧಕರಾಗಿದ್ದರು ಎನ್ನಲಾಗಿದೆ. ಸಿಬಿಐ ಅಧಿಕಾರಿಗಳು ಕಳೆದ ಡಿಸೆಂಬರ್‌ನಲ್ಲಿ ಕವಿತಾ ಅವರನ್ನು ವಿಚಾರಣೆಗೆ ಒಳಪಡಿಸಿದ್ದರು.

ಪಂಜಾಬ್ ಉದ್ಯಮಿ ಬಂಧನ: ಇನ್ನೊಂದೆಡೆ ಇದೇ ಪ್ರಕರಣದ ಸಂಬಂಧ ಪಂಜಾಬ್ ಮೂಲದ ಉದ್ಯಮಿ ಗೌತಮ್ ಮಲ್ಹೋತ್ರಾ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ.

ಪಂಜಾಬ್‌ನ ಓಯೆಸಿಸ್ ಸಮೂಹದ ಜೊತೆಗೆ ಸಂಪರ್ಕವುಳ್ಳ ಮಲ್ಹೋತ್ರಾ ಅವರನ್ನು ಹಣ ಅಕ್ರಮ ವರ್ಗಾವಣೆ ಪ್ರಕರಣದ ಸಂಬಂಧ ಬಂಧಿಸಲಾಗಿದೆ. ದೆಹಲಿ ನ್ಯಾಯಾಲಯವು ಮಲ್ಹೋತ್ರಾ ಅವರನ್ನು ಏಳು ದಿನಗಳವರೆಗೆ ಇ.ಡಿ ವಶಕ್ಕೆ ನೀಡಿ ಆದೇಶಿಸಿದೆ.

ವನ್ಯಜೀವಿ ಆವಾಸಸ್ಥಾನ ಕಾಮಗಾರಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಹುಲಿ ಸಂರಕ್ಷಿತ ಪ್ರದೇಶ, ರಾಷ್ಟ್ರೀಯ ಉದ್ಯಾನ ಮತ್ತು ವನ್ಯಜೀವಿ ಅಭಯಾರಣ್ಯಗಳಲ್ಲಿ ಯಾವುದೇ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳದಂತೆ ಸುಪ್ರೀಂಕೋರ್ಟ್ ಬುಧವಾರ ಅಧಿಕಾರಿಗಳಿಗೆ ಸೂಚಿಸಿದೆ.

ಉತ್ತರಾಖಂಡದ ಕಾರ್ಬೆಟ್ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅಕ್ರಮವಾಗಿ ಕಾಮಗಾರಿ ನಡೆಸಲಾಗುತ್ತಿದೆ, ಹುಲಿ ಸಫಾರಿ ಆರಂಭಿಸಲಾಗುತ್ತಿದೆ ಎಂಬ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ, ಮುಂದಿನ ಆದೇಶದವರೆಗೆ ಎಲ್ಲಾ ರೀತಿಯ ನಿರ್ಮಾಣ ಕಾಮಗಾರಿಗಳಿಗೆ ನಿರ್ಬಂಧ ವಿಧಿಸಿ ಆದೇಶ ಹೊರಡಿಸಿದೆ.

ಇದೇ ವೇಳೆ, ಹುಲಿ ಸಂರಕ್ಷಿತ ಪ್ರದೇಶ ಮತ್ತು ರಾಷ್ಟ್ರೀಯ ಉದ್ಯಾನದ ಒಳಗೆ ಮೃಗಾಲಯ ಮತ್ತು ಸಫಾರಿ ಆರಂಭಿಸುವ ಬಗ್ಗೆಯೂ ಕೋರ್ಟ್ ಮೆಚ್ಚುಗೆ ವ್ಯಕ್ತಪಡಿಸಿಲ್ಲ.

ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ವಿಕ್ರಮ್‌ನಾಥ್ ಅವರನ್ನು ಒಳಗೊಂಡ ದ್ವಿಸದಸ್ಯ ನ್ಯಾಯಪೀಠವು, ರಾಷ್ಟ್ರೀಯ ಉದ್ಯಾನಗಳಲ್ಲಿ ಮೃಗಾಲಯ ಮತ್ತು ಸಫಾರಿ ಆರಂಭಿಸುವ ಅಗತ್ಯ ಏನಿದೆ ಎಂಬ ಬಗ್ಗೆ ವಿವರಣೆ ನೀಡುವಂತೆ 'ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ'ವನ್ನು (ಎನ್‌ಟಿಸಿಎ) ಕೇಳಿದೆ.

'ಫೆ.14ರಂದು 'ಗೋವು ಅಪ್ಪಿಕೊ ದಿನ' ಆಚರಿಸಿ'

ನವದೆಹಲಿ: ಫೆ.14ರಂದು ಪ್ರೇಮಿಗಳ ದಿನದ ಬದಲು ಎಲ್ಲೆಡೆ 'ಸಕಾರಾತ್ಮಕ ಶಕ್ತಿ' ತುಂಬಲು, ವೈಯಕ್ತಿಕ ಹಾಗೂ 'ಸಾಮೂಹಿಕ ಸಂತಸ' ಉತ್ತೇಜಿಸಲು 'ಗೋವು ಅಪ್ಪಿಕೊ ದಿನ' ಆಚರಿಸುವಂತೆ ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿಯು ನಾಗರಿಕರಿಗೆ ಮನವಿ ಮಾಡಿದೆ.

'ಪ್ರೇಮಿಗಳ ದಿನವನ್ನು ಪ್ರತಿ ವರ್ಷ ಫೆಬ್ರುವರಿ 14 ರಂದು ಆಚರಿಸಲಾಗುತ್ತದೆ. ಗೋಮಾತೆಯನ್ನು ಪ್ರೀತಿಸುವ ಎಲ್ಲರೂ ಫೆ.14 ಅನ್ನು ಗೋವು ಅಪ್ಪಿಕೊ ದಿನವಾಗಿ ಆಚರಿಸಬೇಕು. ಇದರಿಂದ ಗೋಮಾತೆಯ ಮಹತ್ವ ಅರಿತು, ಬದುಕಿನಲ್ಲಿ ಸಕಾರಾತ್ಮಕ ಶಕ್ತಿ ತುಂಬಿಕೊಂಡು, ಜೀವನ ಆನಂದಮಯವಾಗಿಸಿಕೊಳ್ಳಬಹುದು' ಎಂದು ಪಶುಸಂಗೋಪನೆ ಮತ್ತು ಡೇರಿ ಇಲಾಖೆ ಅಧೀನದ ಮಂಡಳಿಯು ನೀಡಿರುವ ತಿಳಿವಳಿಕೆ ಪತ್ರದಲ್ಲಿ ಹೇಳಿದೆ. ಸೂಕ್ತ ಪ್ರಾಧಿಕಾರದ ಅನುಮೋದನೆಯೊಂದಿಗೆ ಈ ನೋಟಿಸ್ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋದ ಪರಿಣಾಮ, ವೇದ ಕಾಲದ ಇಂತಹ ಸಂಪ್ರದಾಯಗಳು ಬಹುತೇಕ ಅಳಿವಿನ ಅಂಚಿನಲ್ಲಿವೆ. ಪಾಶ್ಚಿಮಾತ್ಯ ನಾಗರಿಕತೆಯ ಬೆರಗು ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಬಹುತೇಕ ಮರೆತಂತೆ ಮಾಡಿಬಿಟ್ಟಿದೆ. ಗೋ ಮಾತೆಯನ್ನು ಅಪ್ಪಿಕೊಳ್ಳುವುದು ಭಾವನಾತ್ಮಕ ಸಿರಿವಂತಿಕೆ ತರುತ್ತದೆ. ವೈಯಕ್ತಿಕ ಮತ್ತು ಸಾಮೂಹಿಕವಾಗಿಯೂ ಸಂತೋಷ ಇಮ್ಮಡಿಗೊಳಿಸುತ್ತದೆ' ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

2024ರ ಲೋಕಸಭಾ ಚುನಾವಣೆ ಮೇಲೆ ಕಣ್ಣಿಟ್ಟಿರುವ ಉತ್ತರ ಪ್ರದೇಶದ ಬಿಜೆಪಿ ಸರ್ಕಾರ

ನಗರಗಳ ಮರುನಾಮಕರಣದತ್ತ ಯೋಗಿ ಚಿತ್ತ

• ಸಂಜಯ್ ಪಾಂಡೆ

ಲಖನೌ: ಮುಂಬರುವ (2024) ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ಪಣತೊಟ್ಟಿರುವ ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ್ ನೇತೃತ್ವದ ಬಿಜೆಪಿ ಸರ್ಕಾರ, ರಾಜ್ಯದಲ್ಲಿ ಮುಸ್ಲಿಂ ಹೆಸರುಗಳಿರುವ ನಗರಗಳನ್ನು ಮರು ನಾಮಕರಣ ಮಾಡುವತ್ತ ಮತ್ತೊಮ್ಮೆ ಚಿತ್ತ ಹರಿಸಿದೆ.

ಲೋಕಸಭೆಗೆ 80 ಸದಸ್ಯರನ್ನು ಕಳುಹಿಸುವ ಉತ್ತರ ಪ್ರದೇಶದಲ್ಲಿ ಸಿಂಹಪಾಲು ಗೆಲ್ಲುವ ಉದ್ದೇಶವನ್ನು ಯೋಗಿ ಸರ್ಕಾರ ಹೊಂದಿದೆ.

ಲಖನೌ ನಗರಕ್ಕೆ ರಾಮನ ತಮ್ಮ ಲಕ್ಷ್ಮಣನ ಹೆಸರಿಡುವ ಕುರಿತು ಕೇಳಲಾದ ಪ್ರಶ್ನೆಗೆ ಬುಧವಾರ ಪ್ರತಿಕ್ರಿಯಿಸಿದ ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಬ್ರಿಜೇಶ್ ಪಾಠಕ್, ಲಖನೌ ನಗರವನ್ನು ಹಿಂದಿನಿಂದಲೂ 'ಲಕ್ಷಣ ನಗರಿ' ಎಂದೇ ಕರೆಯಲಾಗುತ್ತಿತ್ತು ಎನ್ನುವ ಮೂಲಕ ಹೆಸರು ಬದಲಾಯಿಸುವ ಸುಳಿವು ನೀಡಿದ್ದಾರೆ.

'ಇದು ಎಲ್ಲರಿಗೂ ಗೊತ್ತಿರುವ ಸತ್ಯ (ಲಖನೌ ಮೊದಲು ಲಕ್ಷಣ ನಗರಿ ಆಗಿತ್ತು).... ಲಖನೌ ನಗರದ ಹೆಸರನ್ನು ಮರು ನಾಮಕರಣ ಮಾಡುವಂತೆ ಬೇಡಿಕೆಗಳು ಬಂದಿವೆ... ಈ ವಿಷಯವನ್ನು ನಾವು ಪರಿಸ್ಥಿತಿಗೆ ಅನುಗುಣವಾಗಿ ತೆಗೆದುಕೊಳ್ಳುತ್ತೇವೆ' ಎಂದು ಅವರು ಭದೋಹಿಯಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದಾರೆ.

ಪ್ರತಾಪಗಡದ ಬಿಜೆಪಿ ಸಂಸದ ಸಂಗಮ್ ಲಾಲ್ ಗುಪ್ತಾ ಅವರು ಲಖನೌ ನಗರವನ್ನು 'ಲಕ್ಷ್ಮಣ್‌ಪುರ' ಅಥವಾ 'ಲಖನ್‌ಪುರ' ಎಂದು ಮರು ನಾಮಕರಣ ಮಾಡುವಂತೆ ಒತ್ತಾಯಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು ಬೇಡಿಕೆಯಿಟ್ಟಿದ್ದಾರೆ. ಈ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ ಪಾಠಕ್ ಉತ್ತರಿಸಿದ್ದಾರೆ.

ಎಸ್‌ಬಿಎಸ್‌ಪಿಯಿಂದ ಪತ್ರ: ಉತ್ತರ ಪ್ರದೇಶದಲ್ಲಿ ಮುಂಬರುವ ಚುನಾವಣೆಗಳಲ್ಲಿ ಕೇಸರಿ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವ ಸುಳಿವು ನೀಡಿರುವ ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ (ಎಸ್‌ಬಿಎಸ್‌ಪಿ) ಅಧ್ಯಕ್ಷ ಓಂ ಪ್ರಕಾಶ್ ರಾಜ್‌ಭರ್ ಅವರು, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ಬುಧವಾರ ಪತ್ರ ಬರೆದು ಗಾಜಿಪುರ ಜಿಲ್ಲೆಗೆ ಮಹರ್ಷಿ ವಿಶ್ವಾಮಿತ್ರ ಅವರ ಹೆಸರನ್ನಿಡುವಂತೆ ಆಗ್ರಹಿಸಿದ್ದಾರೆ.

ಆದಿತ್ಯನಾಥ್ ಅವರು ಮೊದಲ ಬಾರಿಗೆ ಮುಖ್ಯಮಂತ್ರಿ ಆಗಿದ್ದಾಗ ಫೈಜಾಬಾದ್ ಜಿಲ್ಲೆಯ ಹೆಸರನ್ನು ಅಯೋಧ್ಯಾ ಎಂದು, ಅಲಹಾಬಾದ್ ಅನ್ನು ಪ್ರಯಾಗರಾಜ್ ಎಂದು ಮರು ನಾಮಕರಣ ಮಾಡಿದ್ದರು. ಮುಘಲ್‌ಸರಾಯ್ ಮತ್ತು ಜಾನ್ಸಿ ರೈಲು ನಿಲ್ದಾಣದ ಹೆಸರನ್ನು ಅವರು ಕ್ರಮವಾಗಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ನಗರ ಮತ್ತು ವೀರಾಂಗನ ಲಕ್ಷ್ಮಿಬಾಯಿ ಎಂದು ಬದಲಿಸಿದ್ದರು.

ಯೋಗಿ ಅವರ ತವರು ನಗರವಾದ ಗೋರಖ್‌ಪುರದಲ್ಲಿ ಮುಸ್ಲಿಂ ಹೆಸರುಗಳನ್ನು ಹೊಂದಿದ್ದ 12 ಮುನ್ಸಿಪಲ್ ವಾರ್ಡ್‌ಗಳ ಹೆಸರುಗಳನ್ನು ಹಿಂದೂ ನಾಯಕರು, ಸಂತರು ಮತ್ತು ಕವಿಗಳ ಹೆಸರಿಟ್ಟು ಮರು ನಾಮಕರಣ ಮಾಡಲಾಗಿತ್ತು.

ಸುಲ್ತಾನ್‌ಪುರ, ಮಿರ್ಜಾಪುರ, ಅಲಿಗಢ, ಫಿರೋಜಾಬಾದ್, ಮೈನ್‌ಪುರಿ ಹೆಸರುಗಳನ್ನು ಬದಲಿಸುವಂತೆ ಹಿಂದುತ್ವ ಪರ ಸಂಘಟನೆಗಳು ಸರ್ಕಾರವನ್ನು ಒತ್ತಾಯಿಸುತ್ತಿವೆ. ಯೋಗಿ ಸರ್ಕಾರದ ಮೊದಲ ಅವಧಿಯಲ್ಲೂ ಈ ಕುರಿತ ಬೇಡಿಕೆಯ ಮನವಿಗಳು ಸಲ್ಲಿಕೆಯಾಗಿದ್ದವು.

'ತನ್ನ ವೈಫಲ್ಯಗಳನ್ನು ಮರೆಮಾಚಲು ನಗರಗಳ ಹೆಸರುಗಳನ್ನು ಬದಲಿಸುವ ಪ್ರಸ್ತಾವಗಳ ಮೂಲಕ ಸರ್ಕಾರ ಚುನಾವಣಾ ಗಿಮಿಕ್ ಮಾಡುತ್ತಿದೆ' ಎಂದು ವಿರೋಧ ಪಕ್ಷಗಳು ದೂರಿವೆ.

ಬಿಜೆಪಿ ಬಯಸಿರುವುದೇನು?

ಸುಲ್ತಾನ್‌ಪುರವನ್ನು 'ಕುಶ್ ಭವನಪುರ', ಅಲಿಗಢವನ್ನು 'ಹರಿಗಢ', ಮೈನ್‌ಪುರಿಯನ್ನು 'ಮಯನ್ ನಗರ', ಫಿರೋಜಾಬಾದ್ ಅನ್ನು 'ಚಂದ್ರ ನಗರ' ಹಾಗೂ ಮಿರ್ಜಾಪುರವನ್ನು 'ವಿಂಧ್ಯಾಧಾಮ' ಎಂದು ಮರು ನಾಮಕರಣ ಮಾಡಬೇಕು ಎಂದು ಪಕ್ಷ ಬಯಸಿದೆ ಎಂದು ಬಿಜೆಪಿ ನಾಯಕರೊಬ್ಬರು ಹೇಳಿದ್ದಾರೆ.

ಇದೇ ಅಲ್ಲದೆ, ಆಗ್ರಾ ನಗರವನ್ನು 'ಅಗ್ರವಾನ್' ಎಂದೂ, ಮುಜಾಫರ್‌ನಗರವನ್ನು 'ಲಕ್ಷ್ಮಿ ನಗರ' ಎಂದೂ ಮರು ನಾಮಕರಣ ಮಾಡಬೇಕು ಎಂಬ ಬೇಡಿಕೆಯೂ ಹಿಂದುತ್ವ ಪರ ಸಂಘಟನೆಗಳದ್ದಾಗಿದೆ.

ಕಳೆದ ವರ್ಷ ನಡೆದ ಅಜಂಗಢದ ಲೋಕಸಭಾ ಉಪ ಚುನಾವಣೆ ಸಂದರ್ಭದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಸಾರ್ವಜನಿಕ ಸಭೆಗಳಲ್ಲಿ ಜಿಲ್ಲೆಯ ಹೆಸರನ್ನು 'ಆರ್ಯನ್‌ಗಢ' ಎಂದು ಬದಲಿಸುವ ಸುಳಿವು ನೀಡಿದ್ದರು.

ಕರ್ನಾಟಕ ಗೃಹ ಮಂಡಳಿ
Karnataka Housing Board Building Communities
ಗೃಹ ಆಯುಕ್ತರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ.ಪಾ.ಅ/ಹಂಚಿಕೆ–5/ಲಾಟರಿ/2022–23 ದಿನಾಂಕ: 07–02–2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಚಾಮರಾಜನಗರ ಜಿಲ್ಲೆ. ಹನೂರು ತಾಲ್ಲೂಕು, ಅನಾಪುರ & ಕಣ್ಣೂರು ಹಾಗೂ ಬೆಂಗಳೂರು ದಕ್ಷಿಣ ತಾಲ್ಲೂಕು, ಚುಂಚುನಕುಪ್ಪೆ, ಬ್ಯಾಲಾಳು ದೋಣೇನಹಳ್ಳಿ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ ಈ ಹಿಂದೆ ಪತ್ರಿಕಾ ಪ್ರಕಟಣೆ ನೀಡಿ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಸದರಿ ಪ್ರಕಟಣೆಗೆ ಅನುಗುಣವಾಗಿ ನಿಗಧಿತ ಆರಂಭಿಕ ಠೇವಣಿ ಮೊತ್ತದೊಂದಿಗೆ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಯಮಾವಳಿ 1983ರ ನಿಯಮ 9ರ ಅನ್ವಯ ಪ್ರವರ್ಗವಾರು ಮೀಸಲಾತಿಯಡಿಯಲ್ಲಿ ಲಾಟರಿ ಮುಖಾಂತರ ಹಂಚಿಕೆ ಮಾಡಲು ತಾತ್ಕಾಲಿಕ & ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿಯನ್ನು ಪ್ರಕಟಿಸಿ ಇ–ಲಾಟರಿ ಮೂಲಕ ಹಂಚಿಕೆ ಮಾಡಲು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿದೆ.

ಲಾಟರಿ ಮಾಡುವ ಸ್ಥಳ:– ಮಂಡಳಿ ಸಭಾಂಗಣ, 4ನೇ ಮಹಡಿ, ಕಗೃಮಂ, ಕಾವೇರಿ ಭವನ, ಬೆಂಗಳೂರು

ಕ್ರ. ಸಂ.	ಬಡಾವಣೆ	ಅರ್ಹ & ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅರ್ಹ & ಅನರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಲಾಟರಿ ದಿನಾಂಕ ಮತ್ತು ಸಮಯ	ಮಂಡಳಿ ಪ್ರಸ್ತುತ ದರ (ಪ್ರತಿ ಚದರಡಿಗೆ)
1.	ಚಾಮರಾಜನಗರ ಜಿಲ್ಲೆ. ಹನೂರು ತಾಲ್ಲೂಕು, ಅನಾಪುರ & ಕಣ್ಣೂರು	-	-	10-02-2023	21-02-2023 ಬೆಳಿಗ್ಗೆ 11.00 ಗಂಟೆಗೆ	ರೂ. 700/-
2.	ಬೆಂಗಳೂರು ದಕ್ಷಿಣ ತಾ॥ ಚುಂಚುನಕುಪ್ಪೆ, ಬ್ಯಾಲಾಳು ದೋಣೇನಹಳ್ಳಿ,	08-02-2023	17-02-2023	24-02-2023	06-03-2023 ಬೆಳಿಗ್ಗೆ 11.00 ಗಂಟೆಗೆ	ರೂ. 1,500/-

ವಿಶೇಷ ಸೂಚನೆ:– ಅರ್ಜಿದಾರರ ತಾತ್ಕಾಲಿಕ ಮತ್ತು ಅಂತಿಮ ಅರ್ಹ/ಅನರ್ಹ ಅರ್ಜಿಗಳ ವಿವರಗಳನ್ನು ಮಂಡಳಿಯ ವೆಬ್‌ಸೈಟ್, ಕೇಂದ್ರ ಕಛೇರಿಯ ಸೂಚನಾಫಲಕದಲ್ಲಿ ಹಾಗೂ ಆಯಾ ಜಿಲ್ಲಾ ಯೋಜನಾ ಕಛೇರಿಯಲ್ಲಿ ಮೇಲೆ ತಿಳಿಸಿರುವ ಆಯಾ ದಿನಾಂಕಗಳಂದು ಪ್ರಕಟಿಸಲಾಗುವುದು. ಅನರ್ಹ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿ/ದಾಖಲೆಯನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ಕಛೇರಿಗಳಲ್ಲಿ ಅಥವಾ ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು ಇಲ್ಲಿ ಸಲ್ಲಿಸಲು ಕೋರಲಾಗಿದೆ. ಇಲ್ಲವಾದಲ್ಲಿ ತಮ್ಮ ಅರ್ಜಿಗಳನ್ನು ಲಾಟರಿ ಅಂತಿಮ ಅರ್ಹ ಅರ್ಜಿದಾರರ ಪಟ್ಟಿಗೆ ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ ಇವರನ್ನು ಮೊಬೈಲ್ ನಂ. 9741904478, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಜಿಲ್ಲಾ ಯೋಜನಾ ಕಛೇರಿ, ಚಾಮರಾಜನಗರ ಇವರನ್ನು ಮೊಬೈಲ್ ನಂ. 8310045887, ಅಥವಾ ಕಾರ್ಯಪಾಲಕ ಅಭಿಯಂತರರು (ಹಂಚಿಕೆ) ಹಾಗೂ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, 4ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080–22273511 ವಿಸ್ತರಣೆ: 307/309 ರಲ್ಲಿ ಸಂಪರ್ಕಿಸಬಹುದು ಹಾಗೂ ವೆಬ್‌ಸೈಟ್ **www.khb.karnataka.gov.in** ಯಿಂದ ಮಾಹಿತಿ ಪಡೆಯಬಹುದು.

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/RO4570/AAPL/2022-23

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



❦ ಸುಭಾಷಿತ ❦

ದುಡಿಮೆಯು ಅತ್ಯಂತ ಹೆಚ್ಚು ಬೆಲೆಬಾಳುವ ಬಂಡವಾಳ.

-ಕಾರ್ಲ್ ಮಾರ್ಕ್ಸ್

ಲೋಕಾಯುಕ್ತ ಕಾಯ್ದೆ ತಿದ್ದುಪಡಿಗೆ ಸರ್ಕಾರ ಇಚ್ಛಾಶಕ್ತಿ ಪ್ರದರ್ಶಿಸಲಿ

ರಾಜ್ಯ ಸರ್ಕಾರದಲ್ಲಿನ ಭ್ರಷ್ಟಾಚಾರ, ದುರಾಡಳಿತ, ಕರ್ತವ್ಯಲೋಪ ಪ್ರಕರಣಗಳ ಕುರಿತು ತನಿಖೆ ನಡೆಸಿ, ತಪ್ಪಿತಸ್ಥರನ್ನು ಶಿಕ್ಷಿಸುವುದಕ್ಕಾಗಿ ಲೋಕಾಯುಕ್ತ ಸಂಸ್ಥೆ ಅಸ್ತಿತ್ವದಲ್ಲಿದೆ. ರಾಜ್ಯ ಸರ್ಕಾರದ ಯಾವುದೇ ಇಲಾಖೆ, ಸಂಸ್ಥೆ ಅಥವಾ ಸರ್ಕಾರದ ಅಧೀನ ಸಂಸ್ಥೆಗಳ ನೌಕರರಿಂದ ರಾಜ್ಯದ ಮುಖ್ಯಮಂತ್ರಿಯವರೆಗೆ ಎಲ್ಲರೂ ಲೋಕಾಯುಕ್ತದ ವಿಚಾರಣಾ ವ್ಯಾಪ್ತಿಗೆ ಒಳಪಡುತ್ತಾರೆ. ವಿವಿಧ ಆರೋಪಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಸಲ್ಲಿಸುವ ದೂರುಗಳನ್ನು ಆಧರಿಸಿ ವಿಚಾರಣೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಬಹುದು. ಲೋಕಾಯುಕ್ತಕ್ಕೆ ಈ ರೀತಿ ಸಾವಿರಾರು ದೂರುಗಳು ಸಲ್ಲಿಕೆಯಾಗುತ್ತವೆ. ಅವುಗಳ ಜತೆಯಲ್ಲೇ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಮಾಧ್ಯಮಗಳು ಹಾಗೂ ಇತರ ಮೂಲಗಳಿಂದ ಲಭ್ಯವಾಗುವ ಮಾಹಿತಿ ಆಧರಿಸಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತರು ಸ್ವಯಂಪ್ರೇರಿತ ಪ್ರಕರಣಗಳನ್ನೂ ದಾಖಲಿಸಿಕೊಳ್ಳುತ್ತಾರೆ. ಭ್ರಷ್ಟಾಚಾರ ಮತ್ತು ದುರ್ನಡತೆ ಆರೋಪ ಎದುರಿಸುವ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ವಿಚಾರಣೆ ನಡೆಸುವ ಹೊಣೆಯನ್ನು ಸರ್ಕಾರವೇ ಲೋಕಾಯುಕ್ತಕ್ಕೆ ಒಪ್ಪಿಸುತ್ತದೆ. ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಅಡಿಯಲ್ಲಿ ಈ ರೀತಿಯ ವಿಚಾರಣೆಗಳನ್ನು ನಡೆಸುವುದಕ್ಕಾಗಿ ಲೋಕಾಯುಕ್ತವು ಪ್ರತ್ಯೇಕವಾದ ವಿಚಾರಣಾ ವಿಭಾಗವನ್ನೇ ಹೊಂದಿದೆ.

ಈ ವಿಚಾರಣಾ ವಿಭಾಗವು ನ್ಯಾಯಾಲಯದಲ್ಲಿನ ವಿಚಾರಣಾ ಪ್ರಕ್ರಿಯೆಯನ್ನೇ ಬಹುತೇಕ ಅನುಸರಿಸುತ್ತದೆ. ನ್ಯಾಯಾಂಗ ಇಲಾಖೆಯ ಸೇವೆಯಲ್ಲಿರುವ ಹಾಲಿ ನ್ಯಾಯಾಧೀಶರು ಮತ್ತು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲೇ ವಿಚಾರಣೆಗಳನ್ನು ನಡೆಸಲಾಗುತ್ತದೆ. ಸಾಕ್ಷ್ಯಗಳ ಪರಿಶೀಲನೆ, ವಾದಮಂಡನೆ, ಆರೋಪಿತರಿಗೆ ತಮ್ಮನ್ನು ಸಮರ್ಥಿಸಿಕೊಳ್ಳುವ ಅವಕಾಶ ಸೇರಿದಂತೆ ಸುದೀರ್ಘವಾದ ಪ್ರಕ್ರಿಯೆಯ ಬಳಿಕವೇ ವಿಚಾರಣಾ ವರದಿಯನ್ನು ಅಂತಿಮಗೊಳಿಸುವ ಪದ್ಧತಿ ಇದೆ. ಲೋಕಾಯುಕ್ತ ಅಸ್ತಿತ್ವಕ್ಕೆ ಬಂದ ದಿನದಿಂದ ಈವರೆಗೆ ಸಾವಿರಾರು ವಿಚಾರಣಾ ವರದಿಗಳನ್ನು ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರು ಸಕ್ಷಮ ಪ್ರಾಧಿಕಾರಗಳಿಗೆ ಸಲ್ಲಿಸಿದ್ದಾರೆ. ಆದರೆ, ಲೋಕಾಯುಕ್ತದ ವಿಚಾರಣಾ ವರದಿಗಳ ಶಿಫಾರಸುಗಳಿಗೆ ಸರ್ಕಾರವು ಮನ್ನಣೆ ನೀಡುತ್ತಿಲ್ಲ. ಆರೋಪಿತರ ಜಾತಿ, ಹಣಬಲ, ರಾಜಕೀಯ ಪ್ರಭಾವ ಹೆಚ್ಚು ಕೆಲಸ ಮಾಡುವುದರಿಂದ ವಿಚಾರಣಾ ವರದಿಗಳು ಸಕ್ಷಮ ಪ್ರಾಧಿಕಾರಗಳ ಕಪಾಟಿನಲ್ಲಿ ದೂಳು ತಿನ್ನುತ್ತಾ ಬಿದ್ದಿರುತ್ತವೆ. ಹಲವು ಪ್ರಕರಣಗಳಲ್ಲಿ ಲೋಕಾಯುಕ್ತದ ವಿಚಾರಣಾ ವರದಿಗಳನ್ನು ತಿರಸ್ಕರಿಸಿ, ತಪ್ಪಿತಸ್ಥರನ್ನು ದಂಡನೆಯಿಂದ ಪಾರುಮಾಡುವ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಸರ್ಕಾರವೇ ವಿಚಾರಣೆಗೆ ಆದೇಶಿಸಿದ್ದ ಪ್ರಕರಣಗಳಲ್ಲೂ ಇದೇ ರೀತಿ ವರ್ತಿಸುವ ಪ್ರವೃತ್ತಿಯು ಲೋಕಾಯುಕ್ತ ಕಾಯ್ದೆಯಡಿ ನಡೆಯುವ ವಿಚಾರಣೆಗಳನ್ನೇ ಅಣಕಿಸುತ್ತಿದೆ.

ಲೋಕಾಯುಕ್ತದ ಬಲವರ್ಧನೆ ಎಂಬುದು ರಾಜಕೀಯ ಪಕ್ಷಗಳಿಗೆ ಕೇವಲ ಚುನಾವಣಾ ಪ್ರಣಾಳಿಕೆಯ ಸರಕು ಆಗಬಾರದು

ಲೋಕಾಯುಕ್ತದ ವಿಚಾರಣಾ ವರದಿಗಳನ್ನು ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಹಿಂದೇಟು ಹಾಕುವುದು ಅಥವಾ ವರದಿಗಳನ್ನೇ ತಿರಸ್ಕರಿಸಿ ಅವರಿಗೆ ರಕ್ಷಣೆ ನೀಡಿರುವ ಕುರಿತು ಹೈಕೋರ್ಟ್‌ನಲ್ಲಿ ಗಂಭೀರವಾದ ಚರ್ಚೆ ನಡೆದಿತ್ತು. ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ರಚನೆಯನ್ನು ಪ್ರಶ್ನಿಸಿದ್ದ ಅರ್ಜಿಗಳ ವಿಚಾರಣೆ ವೇಳೆ ಈ ಬಗ್ಗೆಯೂ ಹೈಕೋರ್ಟ್ ವಿಭಾಗೀಯ ಪೀಠ ಪರಾಮರ್ಶೆ ನಡೆಸಿತ್ತು. ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 12(3)ರ ಅಡಿಯಲ್ಲಿ ಲೋಕಾಯುಕ್ತ ಅಥವಾ ಉಪ ಲೋಕಾಯುಕ್ತರು ಸಲ್ಲಿಸುವ ವರದಿಗಳನ್ನು ಸಕ್ಷಮ ಪ್ರಾಧಿಕಾರವು ಪರಾಮರ್ಶಿಸಿ ಮೂರು ತಿಂಗಳೊಳಗೆ ಕ್ರಮ ಕೈಗೊಳ್ಳಬೇಕು ಎಂಬ ಅಂಶ ಸೆಕ್ಷನ್ 12(4)ರಲ್ಲಿದೆ. ಸಕ್ಷಮ ಪ್ರಾಧಿಕಾರ ಕೈಗೊಳ್ಳುವ ಕ್ರಮವು ಲೋಕಾಯುಕ್ತ ಅಥವಾ ಉಪ ಲೋಕಾಯುಕ್ತರಿಗೆ ತೃಪ್ತಿಯಾಗದಿದ್ದರೆ ವಿಶೇಷ ವರದಿಯೊಂದನ್ನು ರಾಜ್ಯಪಾಲರಿಗೆ ಕಳುಹಿಸುವುದಕ್ಕೆ ಸೆಕ್ಷನ್ 12(5)ರಲ್ಲಿ ಅವಕಾಶವಿದೆ. ಆದರೆ, ಸರ್ಕಾರವು ಲೋಕಾಯುಕ್ತದ ವಿಚಾರಣಾ ವರದಿಗಳನ್ನು ಕಡ್ಡಾಯವಾಗಿ ಒಪ್ಪಿಕೊಂಡು, ಶಿಫಾರಸಿನಂತೆ ತಪ್ಪಿತಸ್ಥರಿಗೆ ದಂಡನೆ ವಿಧಿಸುವುದನ್ನು ಖಾತರಿಪಡಿಸುವ ಅಂಶ ಕಾಯ್ದೆಯಲ್ಲಿಲ್ಲ. ಈ ಅವಕಾಶವನ್ನು ಸಕ್ಷಮ ಪ್ರಾಧಿಕಾರಗಳು ಹಾಗೂ ಆರೋಪಿತರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಲೋಕಾಯುಕ್ತದ ಅಧಿಕಾರಿಗಳ ಮಾಹಿತಿ ಪ್ರಕಾರ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 500ಕ್ಕೂ ಹೆಚ್ಚು ವಿಚಾರಣಾ ವರದಿಗಳು ಬಾಕಿ ಇವೆ. ಲೋಕಾಯುಕ್ತ ಅಥವಾ ಉಪ ಲೋಕಾಯುಕ್ತರು ಸಲ್ಲಿಸುವ ವಿಚಾರಣಾ ವರದಿಗಳನ್ನು ಸಕ್ಷಮ ಪ್ರಾಧಿಕಾರಗಳು ಒಪ್ಪಿಕೊಂಡು, ಕ್ರಮ ಜರುಗಿಸುವುದನ್ನು ಕಡ್ಡಾಯಗೊಳಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ-1984ರ ಸೆಕ್ಷನ್ 12(4)ಕ್ಕೆ ತಿದ್ದುಪಡಿ ತರುವಂತೆ ಆಗಸ್ಟ್ 11ರಂದು ನೀಡಿದ್ದ ತೀರ್ಪಿನಲ್ಲಿ ಹೈಕೋರ್ಟ್ ವಿಭಾಗೀಯ ಪೀಠ ಶಿಫಾರಸು ಮಾಡಿತ್ತು. ಹೈಕೋರ್ಟ್ ತೀರ್ಪು ಪ್ರಕಟವಾಗಿ ಆರು ತಿಂಗಳಾದರೂ ಕಾಯ್ದೆ ತಿದ್ದುಪಡಿಗೆ ಯಾವುದೇ ಪ್ರಕ್ರಿಯೆ ಆರಂಭಿಸದಿರುವುದು ಲೋಕಾಯುಕ್ತದ ಬಲವರ್ಧನೆ ಮತ್ತು ಉತ್ತಮ ಆಡಳಿತದ ವಿಚಾರದಲ್ಲಿ ಸರ್ಕಾರದ ಬದ್ಧತೆಯ ಕುರಿತೇ ಪ್ರಶ್ನೆ ಉದ್ಭವಿಸುವಂತೆ ಮಾಡಿದೆ. ಹೈಕೋರ್ಟ್ ಮಾಡಿರುವ ಶಿಫಾರಸನ್ನು ಒಪ್ಪಿಕೊಂಡು ಅನುಷ್ಠಾನಕ್ಕೆ ತರುವ ಬದ್ಧತೆಯನ್ನು ಸರ್ಕಾರ ಪ್ರದರ್ಶಿಸಬೇಕು. ಲೋಕಾಯುಕ್ತದ ಬಲವರ್ಧನೆ ಎಂಬುದು ರಾಜಕೀಯ ಪಕ್ಷಗಳಿಗೆ ಕೇವಲ ಚುನಾವಣಾ ಪ್ರಣಾಳಿಕೆಯ ಸರಕು ಆಗಬಾರದು. ಲೋಕಾಯುಕ್ತದ ವಿಚಾರಣಾ ಪ್ರಕ್ರಿಯೆಯಲ್ಲಿ ಲೋಪಗಳಿದ್ದರೆ, ವರದಿಗಳಲ್ಲಿ ದೋಷವಿದ್ದರೆ ಬಾಧಿತರು ನ್ಯಾಯಾಂಗದಲ್ಲಿ ಪ್ರಶ್ನಿಸಲು ಅವಕಾಶ ಇದೆ. ವಿಚಾರಣಾ ವರದಿಗಳನ್ನು ಗೌರವಿಸಿ ತಪ್ಪಿತಸ್ಥರನ್ನು ದಂಡನೆಗೆ ಗುರಿಪಡಿಸುವುದನ್ನು ಖಾತರಿಪಡಿಸುವುದಕ್ಕೆ ಪೂರಕವಾಗಿ ಕಾಯ್ದೆಗೆ ತಿದ್ದುಪಡಿ ತರುವ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಬೇಕು.

ದಿನದ ಟ್ವೀಟ್

ಯಾಕಿಂಥ ತಾರತಮ್ಯ?

ರಾಜ್ಯಕ್ಕೆ ಬಜೆಟ್‌ನಲ್ಲೂ ಮೋಸ, ವಿಶೇಷ ಅನುದಾನದಲ್ಲೂ ಮೋಸ, ಜಿಎಸ್‌ಟಿ ಬಾಕಿ ಕೊಡುವಲ್ಲೂ ಮೋಸ, ತೆರಿಗೆ ನಷ್ಟ ಪರಿಹಾರದಲ್ಲೂ ಮೋಸ. ಮೋದಿ ನೇತೃತ್ವದ ಸರ್ಕಾರಕ್ಕೆ ಕರ್ನಾಟಕದ ಮೇಲ್ಯಾಕೆ ಇಷ್ಟು ದ್ವೇಷ?

ದಿನೇಶ್ ಗುಂಡೂರಾವ್, ಕಾಂಗ್ರೆಸ್ ಶಾಸಕ

ಕಿಡಿನುಡಿ

ಯಾವುದೇ ರಾಜಕೀಯ ಪಕ್ಷವಾದರೂ ಕಾರ್ಪೊರೇಟ್ ಕಂಪನಿಗಳ ದೇಣಿಗೆಯಿಲ್ಲದೆ ಉಳಿಯಲು ಸಾಧ್ಯವಿಲ್ಲ- ಕೆಲವು ಕಾರ್ಪೊರೇಟ್ ಕಂಪನಿಗಳಿಗೆ ಅವುಗಳ ಹಣಬಲದ ಕಾರಣದಿಂದ ಹೆಚ್ಚು ಕೃಪೆಯನ್ನು ತೋರಿಸಲಾಗುತ್ತದೆ. ಸ್ವಾತಂತ್ರ್ಯ ಬಂದಾಗಿನಿಂದಲೂ ಇದು ನಡೆದುಬಂದಿದೆ, ಇದರಲ್ಲಿ ಹೊಸದೇನೂ ಇಲ್ಲ. ಕೆಲವು ಸಂದರ್ಭಗಳಲ್ಲಿ ಏನು ಮಾಡಬೇಕು ಎನ್ನುವುದನ್ನು ದೈತ್ಯ ಕಾರ್ಪೊರೇಟ್ ಕಂಪನಿಗಳು ನಿರ್ಧರಿಸುತ್ತವೆ, ಸರ್ಕಾರಗಳು ಅವನ್ನು ಪಾಲಿಸುತ್ತವೆ ಅಷ್ಟೆ. ಆದರೆ ಇವು ಗೊತ್ತಾಗುವುದಿಲ್ಲ!

ಚಂದ್ರ ಕುಮಾರ್ ಬೋಸ್, ಸಾಮಾಜಿಕ ಕಾರ್ಯಕರ್ತ

25 ವರ್ಷಗಳ ಹಿಂದೆ

ಸೋಮವಾರ, 9-2-1998

- **‘ಭ್ರಷ್ಟ’ ಕಾಂಗ್ರೆಸ್ಸಿಗರ ವಿರುದ್ಧ ಕ್ರಮ: ಅಟಲ್ ಬಿಹಾರಿ ವಾಜಪೇಯಿ**

ಮೋಗ, ಫೆ. 8 (ಪಿಟಿಐ)- ತಮ್ಮ ಪಕ್ಷವನ್ನು ಅಧಿಕಾರಕ್ಕೆ ತಂದಲ್ಲಿ ‘ಭ್ರಷ್ಟ’ ಕಾಂಗ್ರೆಸ್ ಮುಖಂಡರ ವಿರುದ್ಧ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳಲಾಗುವುದು ಎಂದು ಬಿಜೆಪಿ ಮುಖಂಡ ಅಟಲ್ ಬಿಹಾರಿ ವಾಜಪೇಯಿ ಹೇಳಿದರು.

ಬೊಫೋರ್ಸ್ ಫಿರಂಗಿ ಖರೀದಿ ಲಂಚ ಪ್ರಕರಣದ ‘ಸತ್ಯಾಂಶ ಇನ್ನೇನು ಬಯಲಾಗಲಿರುವುದನ್ನು ಅರಿತು ಹೆದರಿದ’ ಕಾಂಗ್ರೆಸ್ ಪಕ್ಷವು ಗುಜ್ರಾಲ್ ನೇತೃತ್ವದ ಸರ್ಕಾರಕ್ಕೆ ನೀಡಿದ್ದ ಬೆಂಬಲ ಹಿಂಪಡೆಯಿತು ಎಂದು ಲೂಧಿಯಾನ ಹಾಗೂ ಮೋಗದಲ್ಲಿ ಚುನಾವಣಾ ಸಭೆಗಳಲ್ಲಿ ವಾಜಪೇಯಿ ಅವರು ಹೇಳಿದರು.

- **ಲೋಕಶಕ್ತಿ ಪ್ರಣಾಳಿಕೆ: ಆಡಳಿತ ವಿಕೇಂದ್ರೀಕರಣಕ್ಕೆ ಒತ್ತು**

ಬೆಂಗಳೂರು, ಫೆ. 8- ಆಡಳಿತ ವಿಕೇಂದ್ರೀಕರಣ; ಗ್ರಾಮ ಸ್ವರಾಜ್ಯ; ಮಹಿಳೆಯರಿಗೆ ಮೀಸಲಾತಿ; ಕಡ್ಡಾಯ ಪ್ರಾಥಮಿಕ ಶಿಕ್ಷಣ; ಎಲ್ಲ ಗ್ರಾಮಗಳಿಗೂ ಕುಡಿಯುವ ನೀರು ಪೂರೈಕೆ ಹಾಗೂ ನೈರ್ಮಲ್ಯೀಕರಣಕ್ಕೆ ಒತ್ತು ನೀಡುವುದಾಗಿ ಲೋಕಶಕ್ತಿ ತನ್ನ ಪ್ರಣಾಳಿಕೆಯಲ್ಲಿ ಭರವಸೆ ನೀಡಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 9-2-1973

- **ಹೈಕಮಾಂಡ್ ಕರೆಗೆ ಆಂಧ್ರ ಕಾಂಗ್ರೆಸ್ ಕ್ರಿಯಾಸಮಿತಿ ತಿರಸ್ಕಾರ**

ಕರ್ನೂಲು, ಫೆ. 8- ಆಂಧ್ರಪ್ರದೇಶದ ಈಗಿನ ರಾಜಕೀಯ ಬಿಕ್ಕಟ್ಟಿನ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಜತೆ ಮಾತುಕತೆ ನಡೆಸಲು ತನ್ನ ಪರವಾಗಿ ಯಾರೊಬ್ಬರನ್ನೂ ಕಳುಹಿಸದಿರಲು ಆಂಧ್ರ ಕಾಂಗ್ರೆಸ್ ಕ್ರಿಯಾಸಮಿತಿ ನಿರ್ಧರಿಸಿದೆ.

ಸಮಿತಿಯ ಅಧ್ಯಕ್ಷರು ಮತ್ತು ಮಾಜಿ ಉಪ ಮುಖ್ಯಮಂತ್ರಿಗಳೂ ಆದ ಬಿ.ವಿ. ಸುಬ್ಬಾರೆಡ್ಡಿ ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ, ಯಾರಾದರೂ ದೆಹಲಿಗೆ ಹೋದಲ್ಲಿ ಅವರು ವೈಯಕ್ತಿಕವಾಗಿ ಹೋದಂತೆಯೇ ಹೊರತು ಕ್ರಿಯಾ ಸಮಿತಿಯ ಪರವಲ್ಲ ಎಂದೂ, ಪ್ರಧಾನಿ ಅವರಿಂದ ಆಹ್ವಾನ ಬಂದರೆ ಮಾತ್ರವೇ ಮಾತುಕತೆಗಾಗಿ ತಾವು ದೆಹಲಿಗೆ ಹೋಗುವುದಾಗಿಯೂ ತಿಳಿಸಿದರು.

ಬಾನೆತ್ತರಕ್ಕೆ ಬಲೂನುಗಳನ್ನು ಏರಿಸುವವರ, ಬೀಳಿಸುವವರ ಕತೆ ಇದು...

ಅನಿಲಗುಳ್ಳೆಗಳತ್ತ ಎಂಥೆಂಥ ಅಸ್ತ್ರ!

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಜಗತ್ತಿನ ಖಗೋಲ ವೀಕ್ಷಕರೆಲ್ಲ ಕಳೆದ ವಾರವಿಡೀ ಹಸಿರು ಧೂಮಕೇತುವನ್ನು ನೋಡುತ್ತಿದ್ದರೆ ಪಾಶ್ಚಿಮಾತ್ಯ ಮಾಧ್ಯಮಗಳು ಅಮೆರಿಕದ ಆಕಾಶದಲ್ಲಿನ ಬಿಳೀ ಬಲೂನನ್ನು ನೋಡುತ್ತಿದ್ದವು. ಹುಣ್ಣಿಮೆಯ ಚಂದದ ಚಂದ್ರನಂತೆ ಆ ಬಲೂನು ಅಮೆರಿಕದ ನೀಲಾಕಾಶದಲ್ಲಿ, 30 ಕಿ.ಮೀ. ಎತ್ತರದಲ್ಲಿ ಮೆಲ್ಲಗೆ ತೇಲುತ್ತ ಸಾಗುತ್ತಿತ್ತು. ದುರ್ಬೀನಲ್ಲಿ ಸ್ಪಷ್ಟ ಕಾಣುತ್ತಿದ್ದ ಅದು ಚೀನಾದ ಬಲೂನು ಎಂಬುದಂತೂ ಖಾತರಿಯಾಯಿತು. ಅದರ ತಳದಲ್ಲಿ ಸೋಲಾರ್ ಫಲಕಗಳನ್ನು ಜೋಡಿಸಲಾಗಿತ್ತು. ಜೊತೆಗೆ ಪೆಟ್ಟಿಗೆಯಂಥ ಇನ್ನೇನೋ ಅಲ್ಲಿ ಜೋತಾಡುತ್ತಿತ್ತು.

ಅದು ಬೇಹುಗಾರ ಬಲೂನ್ ಇದ್ದೀತೆ? ಇರಲಿಕ್ಕಿಲ್ಲ. ಚೀನಾದ ಅದೆಷ್ಟೊ ಉಪಗ್ರಹಗಳು ಬಾಹ್ಯಾಕಾಶದಲ್ಲಿ ಕಣ್ಣಿಗೆ ಕಾಣದಂತೆ ಸುತ್ತುತ್ತಿದ್ದು ನೆಲದ ಮೇಲಿನ ಎಲ್ಲವನ್ನೂ ಗಮನಿಸುತ್ತಿವೆ. ಹಾಗಿರುವಾಗ ಎಲ್ಲರ ಕಣ್ಣಿಗೂ ಕಾಣುವಂಥ ಈ ಬಲೂನು ಗುಪ್ತ ಕೆಲಸಕ್ಕೆ ಬಂದೀತೆ? ಚೀನೀಯರೇನೊ, ಅದು ಬರೀ ವಾಯುಮಾಪನ ಬಲೂನೆಂದೂ ದಾರಿ ತಪ್ಪಿ ಆ ಕಡೆ ಬಂತೆಂದೂ ಹೇಳುತ್ತಿದ್ದಾರೆ. ಹಾಗಿದ್ದರೆ ಅದು ಅಮೆರಿಕದ ಮೊಂಟಾನಾ ಪ್ರಾಂತದಲ್ಲಿ, ಪರಮಾಣು ಶಸ್ತ್ರಾಸ್ತ್ರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಚ್ಚಿಟ್ಟ ಗೂಡುಗಳಿದ್ದಲ್ಲೇ ಠಳಾಯಿಸುತ್ತಿದೆ ಏಕೆ? ಬೇಹುಗಾರ ಬಲೂನೇ ಇರಬೇಕು. ಅದನ್ನು ಹೊಡೆದು ಉರುಳಿಸೋಣವೆ? ಛೆ, ಹಾಗೆ ಮಾಡಿದರೆ ಅದರ ತುಣುಕುಗಳೆಲ್ಲ ಯಾರ ತಲೆಯ ಮೇಲೋ ಬಿದ್ದೀತು. ಮೇಲಾಗಿ, ಅದರಲ್ಲಿ ಇನ್ನೇನೇನು ಶಸ್ತ್ರಾಸ್ತ್ರ, ವಿಷಾನಿಲ ಇವೆಯೊ? ಹೊಡೆಯದೆ ಹಾಗೇ ಬಿಡೋಣವೆ? ಬಿಟ್ಟರೆ ಅದು ಸ್ವದೇಶಕ್ಕೆ ಪರಾರಿಯಾದೀತು.

ಇದೇನೊ ಮಹಾ ಅಪಾಯ ಬಂತೆಂಬಂತೆ ಅಮೆರಿಕದ ಮಿಲಿಟರಿ ವಿಮಾನಗಳು ಬಲೂನಿನ ಸುತ್ತ ಹಾರಾಟ ನಡೆಸಿದ್ದೇನು, ಅವುಗಳ ಕುರಿತು ಮಾಧ್ಯಮಗಳು ವಾರವಿಡೀ ರೋಚಕವಾಗಿ ಬಣ್ಣಿಸಿದ್ದೇನು- ಅಂತೂ ಬಲೂನು ಸಮುದ್ರ ತಟಕ್ಕೆ ಬಂದಿದ್ದೇ ತಡ, ಫೆಬ್ರುವರಿ 4ರಂದು ಅಮೆರಿಕದ ಅಧ್ಯಕ್ಷ ಬೈಡನ್ ಅದನ್ನು ಹೊಡೆದುರುಳಿಸಲು ಆದೇಶ ಕೊಟ್ಟೇಬಿಟ್ಟರು. ತಟದ ಮೂರು ನಗರಗಳ ವಿಮಾನ ಹಾರಾಟವನ್ನು ತಡೆಹಿಡಿದು, ಎಫ್-22 ವಿಮಾನ ಮೇಲಕ್ಕೇರಿತು. ಅದರ ನೆತ್ತಿಯಿಂದ ಸೈಡ್‌ವೈಂಡರ್ ಕ್ಷಿಪಣಿ ಹಾರಿತು. ಅದು ಅಡ್ಡತಿಡ್ಡ ಸುತ್ತುತ್ತ ಶಾಖಮೂಲವನ್ನು ಮೂಸುತ್ತ ಬಲೂನನ್ನು ಪತ್ತೆ ಮಾಡಿ ಚಿಂದಿ ಮಾಡಿ ಬೀಳಿಸಿತು. ಸಮುದ್ರಕ್ಕೆ ಬಿದ್ದ ಅದರ ತುಣುಕುಗಳನ್ನು ಹೆಕ್ಕಲು ಅಮೆರಿಕದ ಚದುರಂಗ ಬಲವೇ ಧಾವಿಸಿತು. ಏಕೆಂದರೆ ಚೀನೀಯರು ತಮ್ಮದಕ್ಕಿಂತ ಸುಧಾರಿತ ಟೆಕ್ನಾಲಜಿಯನ್ನು ಬಳಸುತ್ತಿದ್ದರೆ ಗೊತ್ತಾಗಬೇಕಲ್ಲ?

ಅತ್ತ ಬಿಬಿಸಿ, ಸಿಎನ್‌ಎನ್‌ಗಳಲ್ಲಿ ಅಹೋರಾತ್ರಿ ಈ ಕುರಿತು ಚರ್ಚೆ ನಡೆಯುತ್ತಿದ್ದಾಗ ಇತ್ತ ಚೀನಾ ದೇಶ ತನ್ನದೇ ಸಂಭ್ರಮದಲ್ಲಿತ್ತು. ಅಲ್ಲಿನ ಪ್ರಜೆಗಳಿಗೆ ಈಗ ಚಾಂದ್ರಮಾನ ಪಂಚಾಂಗದ ಹೊಸ ವರ್ಷ. ಅದು ಅವರಿಗೆ ದೀಪಾವಳಿ ಹಬ್ಬ (ಲ್ಯಾಂಟರ್ನ್ ಫೆಸ್ಟಿವಲ್). ಆಕಾಶದಲ್ಲಿನ ಪೂರ್ಣಚಂದ್ರನನ್ನು ಕಣ್ತುಂಬಿಕೊಳ್ಳುತ್ತ ಕೋಟಿಗಟ್ಟಲೆ ದೀಪದ ಬಲೂನ್‌ಗಳನ್ನು ಆಕಾಶಕ್ಕೆ ಹಾರಿಸುತ್ತಿತ್ತು. ಅವರ ಸಂಭ್ರಮಕ್ಕೆ ವಿಶೇಷ ಕಾರಣವೂ ಇತ್ತು. ಚಂದ್ರನತ್ತ ಅವರು ಹಾರಿಬಿಟ್ಟಿದ್ದ ‘ಚಾಂಗಿ-4’ ಹೆಸರಿನ ನೌಕೆ ಚಂದ್ರನ ಬೆನ್ನಿನ ಕತ್ತಲ ಭಾಗದಲ್ಲಿ ಸುರಕ್ಷಿತವಾಗಿ ಇಳಿದು ಇದೀಗ ನಾಲ್ಕನೆಯ ವರ್ಷಕ್ಕೆ ಪದಾರ್ಪಣೆ ಮಾಡಿತ್ತು. ಅಂಥ ಸಾಧನೆ ಮಾಡಿದ ಏಕೈಕ ರಾಷ್ಟ್ರ ಇದು. ಆ ನೌಕೆಯಿಂದ ಹೊರಬಿದ್ದ ಯುಟು-2 ಹೆಸರಿನ ಪುಟ್ಟ ಗಾಡಿಯೊಂದು ಈಗಲೂ ಅಲ್ಲಿ ಓಡಾಡುತ್ತಲೇ ಇದೆ.

1970ರ ದಶಕದಲ್ಲಿ ಸೋವಿಯತ್ ರಷ್ಯಾ ಮತ್ತು ಅಮೆರಿಕ ಎರಡೂ ರಾಷ್ಟ್ರಗಳು ಚಂದ್ರನ ಮೇಲೆ ಅಲ್ಪಾವಧಿಯ ಗಾಡಿ ಓಡಿಸಿದ್ದು ಬಿಟ್ಟರೆ ಈ 75 ವರ್ಷಗಳಲ್ಲಿ ಇಂಥ ಸಾಹಸ ಮಾಡಿದ್ದು ಚೀನಾ ಮಾತ್ರ. ಅದೆಲ್ಲ ಗೊತ್ತಿರುವ ಅಮೆರಿಕ ಈಗ ಯಃಕಶ್ಚಿತ ಚೀನೀ ಬಲೂನೊಂದನ್ನು ಹೊಡೆದುರುಳಿಸಿ ಅದರ ಚಿಂದಿಯಲ್ಲಿ ಚೀನಾದ ತಂತ್ರಜ್ಞಾನದ ರಹಸ್ಯವೇನೆಂದು ಹುಡುಕುವುದೆ? ಟರ್ಕಿ- ಸಿರಿಯಾ ಭೂಕಂಪ ಆಗಿರದಿದ್ದರೆ ಪಾಶ್ಚಾತ್ಯ ಮಾಧ್ಯಮಗಳು ಇನ್ನೂ ಒಂದು ವಾರ ಆ ಬಲೂನನ್ನೇ ಹಿಂಜುತ್ತಿರುತ್ತಿದ್ದವು.

ಈ ಮಧ್ಯೆ ಮೆಕ್ಸಿಕೊದ ‘ಮೇಕ್ ಸನ್‌ಸೆಟ್’ ಸಂಸ್ಥೆಯ ಒಂದು ಬಲೂನ್ ಸಾಹಸಕ್ಕೆ ಅಲ್ಲಿನ ಸರ್ಕಾರವೇ ಸೂಜಿ ಚುಚ್ಚಿದೆ. ಭೂಮಿ ಬಿಸಿಯೇರುವುದನ್ನು ತಡೆಯಲೆಂದು ಸನ್‌ಸೆಟ್ ಸಂಸ್ಥೆ ಹೊಸ ಪ್ರಯೋಗಕ್ಕೆ ಕೈಹಾಕಿತ್ತು. ವಾಯುಮಂಡಲದ ಅತಿ ಎತ್ತರದಲ್ಲಿ ಸಲ್ಫರ್ ಡೈಆಕ್ಸೈಡ್ (ಗಂಧಕದ ಭಸ್ಮ- SO_2) ಅನಿಲಕಣಗಳನ್ನು ಎರಚಿದರೆ ಸೂರ್ಯನ ಕಿರಣಗಳು ಭೂಮಿಗೆ ಬರುವ ಬದಲು ಪ್ರತಿಫಲನಗೊಂಡು ಆಚೆ ಹೊರಟುಹೋಗುತ್ತವೆ ಎಂದು ವಿಜ್ಞಾನ ಹೇಳುತ್ತದೆ. ಅದರ ಪರೀಕ್ಷೆಗೆಂದು ಬಲೂನಿನಲ್ಲಿ ಹೀಲಿಯಂ ಅನಿಲವನ್ನೂ ಗಂಧಕದ ಭಸ್ಮವನ್ನೂ ತುಂಬಿ ಹಾರಿಸಲು ಮೆಕ್ಸಿಕೊದ ಟೆಕಿಗಳು ಹೊರಟಿದ್ದರು. ತೀರ ಮೇಲಕ್ಕೆ ಹೋದಾಗ ಬಲೂನ್ ತಂತಾನೇ ಹಿಗ್ಗಿ ಒಡೆದು ಗಂಧಕದ ಭಸ್ಮವೂ ಹೊರಬಿದ್ದು ಭೂಮಿ ತಂಪಾಗುತ್ತದೆ ಎಂದು ಅವರು ಎಣಿಸಿದ್ದರು. ಅಂಥ ಜಿಯೊ ಎಂಜಿನಿಯರಿಂಗ್ ಪ್ರಯೋಗಕ್ಕೆ ಅಂತರರಾಷ್ಟ್ರೀಯ ಮಾನ್ಯತೆ ಸಿಕ್ಕಿಲ್ಲ. ಏಕೆಂದರೆ, ಅದರ ಅಡ್ಡ ಪರಿಣಾಮ ಎಲ್ಲೆಲ್ಲಿ ಹೇಗೆ ಆದೀತು ಎಂಬುದು ಯಾರಿಗೂ ಗೊತ್ತಿಲ್ಲ.



ವಾಯುಮಂಡಲ ಎಲ್ಲರ ಸಾಮೂಹಿಕ ಆಸ್ತಿ ಆಗಿರುವುದರಿಂದ ಅದರಲ್ಲಿ ಬೇಕಾಬಿಟ್ಟಿ ಹಸ್ತಕ್ಷೇಪ ಮಾಡುವಂತಿಲ್ಲ. ದೊಡ್ಡ ಪ್ರಮಾಣದಲ್ಲಿ ಇಂಥ ಪ್ರಯೋಗಗಳು ನಡೆದರೆ ಯಾವುದೋ ದೇಶದಲ್ಲಿ ಆಸಿಡ್ ಮಳೆ ಸುರಿದೀತು, ಫಸಲು ಇಳುವರಿ ಕುಸಿದೀತು ಎಂಬೆಲ್ಲ ಶಂಕೆಗಳಿವೆ. ಅದಕ್ಕಿಂತ ದೊಡ್ಡ ಆಕ್ಷೇಪಣೆ ಏನೆಂದರೆ, ಇಂಥ ಸರಳ ಉಪಾಯ ಗೊತ್ತಾದರೆ, ಉದ್ಯಮಿಗಳು ಎಂದಿನಂತೆ ಫಾಸಿಲ್ ಇಂಧನಗಳನ್ನು ಎಗ್ಗಿಲ್ಲದೆ ಸುಡುತ್ತ, ವಾಯುಮಂಡಲಕ್ಕೆ ಕೊಳೆಯನ್ನು ಕಕ್ಕುತ್ತಲೇ ಹೋಗುತ್ತಾರೆ. ಅವುಗಳನ್ನು ಸರಿದಾರಿಗೆ ತರುವ ಯತ್ನ ನಡೆಯಬೇಕೇ ವಿನಾ, ಸೂರ್ಯಕಿರಣವನ್ನು ಅಡ್ಡದಾರಿಗೆ ಕಳಿಸುವುದು ಒಳ್ಳೆಯದಲ್ಲ ತಾನೆ?

ಈಗ ಕೊನೆಯ ಬಲೂನಿಗೆ ಬರೋಣ. ಅದು ನಮಗೆಲ್ಲ ಈಗ ಸುಪರಿಚಿತವಾದ ‘ಹಿಂಡೆನ್‌ಬರ್ಗ್’ಗೆ ಸಂಬಂಧಿಸಿದ್ದು. ಬಲೂನಿನಲ್ಲಿ ಹೈಡ್ರೊಜನ್ ಅನಿಲವನ್ನು ತುಂಬಿ, ಅದರ ಮೇಲೆ ಸವಾರಿ ಮಾಡುವ ತಂತ್ರ 1910ರ ದಶಕದಲ್ಲಿ ಯುರೋಪ್‌ನಲ್ಲಿ ಜಾರಿಗೆ ಬಂದಿತ್ತು. ಸಣ್ಣ ಕಿಡಿ ಹೊತ್ತಿದರೂ ಹೈಡ್ರೊಜನ್ ಅನಿಲ ಸ್ಫೋಟಿಸುವ ಅಪಾಯವಿದ್ದರೂ ಅಂಥ ಏರ್ ಬಲೂನ್‌ಗಳಲ್ಲಿ ಯುರೋಪ್‌ನಿಂದ ಅಮೆರಿಕಕ್ಕೆ ಜನರು ಪ್ರಯಾಣ ಮಾಡುತ್ತಿದ್ದರು. ‘ಹಿಂಡೆನ್‌ಬರ್ಗ್’ ಹೆಸರಿನ ಕಂಪನಿಯ ಬಲೂನ್ ವಿಮಾನವೊಂದು (ಏರ್‌ಶಿಪ್) ಜರ್ಮನಿಯ ಫ್ರಾಂಕ್‌ಫರ್ಟ್ ನಗರದಿಂದ ಅಟ್ಲಾಂಟಿಕ್ ಸಾಗರವನ್ನು ದಾಟಿ, ಮೂರು ದಿನಗಳ ನಂತರ ಅಮೆರಿಕದ ನ್ಯೂಜೆರ್ಸಿಗೆ ಹೋಗಿ, ಅಲ್ಲಿ ಇನ್ನೇನು ಇಳಿಯಬೇಕೆನ್ನುವಾಗ ಇಡೀ ಬಲೂನು ಸ್ಫೋಟಿಸಿತು. ಪ್ರಯಾಣಿಕರು ಬೆಂಕಿಯ ಚೆಂಡುಗಳಂತೆ ಉದುರಿದರು. 1937ರ ಮೇ 7ರಂದು ಸಂಭವಿಸಿದ ಈ ದುರಂತಕ್ಕೆ ಮನುಷ್ಯನ ನಿರ್ಲಕ್ಷ್ಯವೇ ಕಾರಣ ತಾನೆ? ಅಂಥ ಈಗಿನ ದುಸ್ಸಾಹಸಗಳ ಮೇಲೆ ಕಣ್ಣಿಡಲೆಂದೇ ಅಮೆರಿಕದಲ್ಲಿ ಷೇರು ವ್ಯವಹಾರದ ಕಂಪನಿಯೊಂದು ಅದೇ ‘ಹಿಂಡೆನ್‌ಬರ್ಗ್’ ಹೆಸರಿನಲ್ಲಿ 2017ರಲ್ಲಿ ಅಸ್ತಿತ್ವಕ್ಕೆ ಬಂತು. ಬಲೂನಿನಂತೆ ಷೇರುಪೇಟೆಯಲ್ಲಿ ಉಬ್ಬುತ್ತ ಹೊರಟ ಕಂಪನಿಗಳ ಮೇಲೆ ಕಣ್ಣಿಡುವುದು, ಬೀಳಿಸುವುದು ಅದರ ಕೆಲಸ. ಅದು ಅದಾನಿ ಕಂಪನಿಯ ಬಲೂನಿಗೆ ಹೊತ್ತಿಸಿದ ಕಿಡಿ ಎಲ್ಲೆಲ್ಲೊ ಸ್ಫೋಟಿಸುತ್ತ ರಾಷ್ಟ್ರವ್ಯಾಪಿ ಸುದ್ದಿಯಾಗಿ, ನಮ್ಮ ಸಂಸತ್ತಿನಲ್ಲೂ ಮೊಳಗುತ್ತಿದೆ.

ವಿಜ್ಞಾನದ ಈ ಅಂಕಣದಲ್ಲಿ ಷೇರುಪೇಟೆಯನ್ನು ಪ್ರಸ್ತಾಪಿಸಲು ಒಂದು ವಿಶೇಷ ನೆಪವಿದೆ: ಹಿಂಡೆನ್‌ಬರ್ಗ್ ದುರಂತಕ್ಕೆ ಹೈಡ್ರೊಜನ್ ಅನಿಲ ಕಾರಣವಾಗಿದ್ದಂತೆ, ಅದಾನಿ ಸಮೂಹದ ‘ಟೋಟಲ್ ಗ್ಯಾಸ್’ ಮತ್ತು ಹೈಡ್ರೊಜನ್ ಉತ್ಪಾದನೆಗೆ ಹೊರಟಿದ್ದ ‘ಗ್ರೀನ್ ಎನರ್ಜಿ’ ಕಂಪನಿಗಳೇ ಷೇರ್ ಮಾರುಕಟ್ಟೆಯಲ್ಲಿ ಅತಿ ಹೆಚ್ಚಿನ ಕುಸಿತ ಕಂಡಿವೆ. ಫ್ರಾನ್ಸ್ ಜೊತೆ ಸೇರಿ ಹೈಡ್ರೊಜನ್ ಉತ್ಪಾದನೆಗೆಂದು ಅದಾನಿ ಸಮೂಹ ಜಗತ್ತಿನ ಅತಿ ದೊಡ್ಡ ಯೋಜನೆಯನ್ನು ಪ್ರಾರಂಭಿಸಿದ್ದು ಅದಕ್ಕೆ ಅನಿಲ್ (ಅದಾನಿ ನ್ಯೂ ಇಂಡಸ್ಟ್ರೀಸ್ ಲಿಮಿಟೆಡ್) ಎಂತಲೇ ಹೆಸರಿಡಲಾಗಿದೆ.

ಎಲ್ಲರಿಗೂ ಕಾಣುವಂತೆ ಚೀನೀ ಬಲೂನಿನ ಚಿಂದಿ ಉಡಾಯಿಸಿದ ಅಮೆರಿಕ, ಇನ್ನೇನೇನನ್ನು ಯಾರಿಗೂ ಗೊತ್ತಾಗದ ಹಾಗೆ ಬೀಳಿಸುತ್ತಿದೆಯೊ?

ಚುರುಮುರಿ

ನಡಿಗೆ ನಂತರ...

• ಆನಂದ

‘ನುಡಿದರೆ ಮುತ್ತಿನ ಹಾರದಂತಿರಬೇಕು, ನಡೆದರೆ ರಾಹುಲ್ ಗಾಂಧಿಯಂತೆ ನಡೆಯಬೇಕು’ ಎಂದಳು ಮಡದಿ, ಮಂಜು ಬೀಳುತ್ತಿದ್ದರೂ ಅವರು ಭಾಷಣ ಮಾಡುತ್ತಿದ್ದುದನ್ನು ಟಿ.ವಿಯಲ್ಲಿ ನೋಡುತ್ತಾ.

ವ್ಹಾ! ವ್ಹಾ! ಎಂದೆ.

‘ಅಲ್ವೇ? ಯಾರು 4,000 ಕಿ.ಮೀ. ನಡೆದಿದಾರೆ ಹೇಳಿ ನೋಡೋಣ...’

‘ಮಾಜಿ ಪ್ರಧಾನಿ ಚಂದ್ರಶೇಖರ್’.

‘ಅವರು ರಾಜ್‌ಘಾಟ್‌ವರೆಗೆ ಮಾತ್ರ. ಆದರೆ ರಾಹುಲ್‌ಜಿ ಶ್ರೀನಗರದವರೆಗೆ ನಡೆದರಲ್ಲ ಕನ್ಯಾಕುಮಾರಿಯಿಂದ, 12 ರಾಜ್ಯಗಳ ಮೂಲಕ. ಅದೊಂದು ಅಚೀವ್‌ಮೆಂಟ್ ಅಲ್ಲವೆ?’

‘ಅವರಿಗೇ ಗೊತ್ತಿರಲಿಲ್ಲವಂತೆ ತಾನು ನಡೆಯಬಲ್ಲೆ ಅಂತ. ಗಾಳಿ, ದೂಳು, ಮಳೆ, ಚಳಿ ಕೊನೆಗೆ ಹಿಮ ಸುರಿಯುತ್ತಿದ್ದರೂ ಲೆಕ್ಕಿಸದೆ ನಡೆದೇಬಿಟ್ಟರು. ಅಂದರೆ ಅವರ ನಡತೆ ಚೆನ್ನಾಗಿದೆ ಎಂದಾಯಿತು’.

‘ನಡಿಗೆ ಚೆನ್ನಾಗಿದೆ ಎನ್ನಿ. ಅವರು ದಿವಸಕ್ಕೆ ಕನಿಷ್ಠ 20 ಕಿ.ಮೀ. ನಡೀತಿದ್ದರಂತಲ್ಲ. ನೀವು 3-4 ಕಿ.ಮೀ. ನಡೆದರೆ ಹೆಚ್ಚು. ಅದೂ ನಾನು ಹೊರಡಿಸಿದ ಮೇಲೆ’.

‘ಅವರನ್ನು ಯಾರು ಹೊರಡಿಸಿದರು?’

‘ಅವರ ವಿಲ್‌ಪವರ್ ಹೊರಡಿಸಿತು. ಛಲ ನಡೆಸಿತು. ಯಾರು ಎಷ್ಟೇ ಹೀಯಾಳಿಸಬಹುದು, ಜರಿಬಹುದು, ಲೇವಡಿ ಮಾಡಬಹುದು, ಆದರೆ ಅವರು ಅದನ್ನು ತಲೆಗೆ ಹಚ್ಚಿಕೊಳ್ಳದೆ ಸುಮಾರು ನಾಲ್ಕು ತಿಂಗಳು ನಿರಂತರವಾಗಿ ನಡೆದು ತಾನೂ ಮಾಡಬಲ್ಲೆ ಅಂತ ತೋರಿಸಿದರು’.

‘ಆಗದು ಎಂದು ಕೈ ಕಟ್ಟಿ ಕುಳಿತರೆ... ಎಂಬ ಹಾಡು ನೆನಪಿಗೆ ಬರೋಲ್ವೆ? ಬಿಳಿ ಟೀ ಶರ್ಟ್, ಗಡ್ಡ, ಸೆಲೆಬ್ರಿಟಿಗಳ ಜತೆ ಸೆಲ್ಫಿಗಳು... ಅವರಿಗೊಂದು ಹೊಸ ಜನ್ಮ ಬಂದಿದೆ’.

‘ಭಾರತ್ ಜೋಡೊ ಎನ್ನುತ್ತಾ ಈ ನಡಿಗೆ ಮುಗಿಸಿದರು ನಿಜ. ಆದರೆ ಅಟ್‌ಲೀಸ್ಟ್ ಕಾಂಗ್ರೆಸ್ ಜೋಡೊನಾದರೂ ಇದರಿಂದ ಆಗಬಹುದೆ?’

‘ಅದರ ಜತೆಗೆ ಅಪೊಸಿಷನ್ ಜೋಡೊ ಸಹ ಆಗಬೇಕಿದೆ’.

‘ಮೊದಲು ಕಾಂಗ್ರೆಸ್ ಜೋಡೊ ಆಗಲಿ. ಸದ್ಯದಲ್ಲೇ ನಡೆಯಲಿರುವ ಚುನಾವಣೆಗಳಲ್ಲಿ ಈ ಜೋಡೊ ನಡಿಗೆಯಿಂದ ಪಕ್ಷಕ್ಕೆ ಅನುಕೂಲವಾಗಲಿದೆಯೆ? ನೋಡೋಣ. ದಿ ಪ್ರೂಫ್ ವಾಕಿಂಗ್ ಲೈಸ್ ಇನ್ ವೋಟಿಂಗ್.

ಸಂಗತ

ದೇಹಾಂತ್ಯಕ್ಕಿರಲಿ ಗೌರವದ ವಿದಾಯ

ಪ್ರಕೃತಿಯನ್ನು ಬರಿದುಗೊಳಿಸುವ ಅಂತ್ಯಸಂಸ್ಕಾರದ ವಿಧಿಯನ್ನು ಸರಳಗೊಳಿಸುವ ಯೋಜನೆಗಳಿಗೆ ಸರ್ಕಾರ ಮನಸ್ಸು ಮಾಡಬೇಕಾಗಿದೆ

• ಪ.ರಾಮಕೃಷ್ಣಶಾಸ್ತ್ರಿ

ಮನುಷ್ಯ ಬದುಕಿರುವಾಗ ಎಷ್ಟೇ ಕಷ್ಟಪಟ್ಟರೂ ಜೀವನಾಂತ್ಯವಾದ ಬಳಿಕ ದೇಹವು ಗೌರವದಿಂದ ಸಂಸ್ಕಾರ ಕಾಣಬೇಕು ಎಂಬುದು ಹೆಚ್ಚಿನವರ ಮನದ ಆಶಯ. ಹಾಗೆಂದು, ಅದು ಹತ್ತು ಹಲವರ ಹಿತಕ್ಕೆ ಬಳಕೆಯಾಗಬೇಕು ಎಂಬ ಹಂಬಲದಿಂದ ದೇಹದಾನ ಮಾಡುವ ಅಪೇಕ್ಷೆಯನ್ನೂ ಈಡೇರಿಸಿಕೊಳ್ಳುವವರಿದ್ದಾರೆ. ಗೌರವದ ದೇಹಾಂತ್ಯದ ತಾಣಕ್ಕೆ ರುದ್ರಭೂಮಿ ಎಂಬ ವಿಶಿಷ್ಟ ಹೆಸರನ್ನೂ ನೀಡಲಾಗಿದೆ.

ದಶಕಗಳ ಹಿಂದೆ ಅಂತ್ಯಸಂಸ್ಕಾರ ಸಮಸ್ಯೆ ಎನಿಸಿರಲಿಲ್ಲ. ತಮ್ಮದೇ ಸ್ಥಳದಲ್ಲಿ ಬೆಳೆದ ಕಟ್ಟಿಗೆಯನ್ನು ಬಳಸಿ ಹೊಲದ ಬಳಿ ದೇಹವನ್ನು ದಹಿಸುವ ವಿಧಾನ ಸುಲಭವಾಗಿತ್ತು ಅಥವಾ ಸ್ವಂತ ಜಾಗದಲ್ಲಿ ಹೊಂಡ ತೆಗೆದು ಹೂಳುತ್ತಿದ್ದರು. ಆದರೆ ಜನಸಂಖ್ಯೆ ಬೆಳೆದಂತೆ ಮನೆಗಳು ಹೆಚ್ಚಾಗುತ್ತಿವೆ. ಖಾಲಿ ಸ್ಥಳಗಳು ದೊರೆಯದ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮಾಡಳಿತಗಳು ಶವಸಂಸ್ಕಾರಕ್ಕಾಗಿ ಸ್ಮಶಾನಕ್ಕೆ ಸ್ಥಳವನ್ನು ಕಾದಿರಿಸುವುದು ಕಡ್ಡಾಯ ನಿಯಮವಾಗಿದ್ದರೂ ಇನ್ನೂ ಸ್ಥಳ ಕಾದಿರಿಸದ ಪಂಚಾಯಿತಿಗಳಿವೆ. ಬಡವರಿಗೆ ಶವಸಂಸ್ಕಾರಕ್ಕೆ ಸರ್ಕಾರ ತುರ್ತು ಹಣದ ನೆರವು ನೀಡುತ್ತಿದೆ ನಿಜ. ಆದರೆ ಸಾವಿನ ನೆರಳು ಚಾಚುವ ಸಮಯಕ್ಕೆ ಅಧಿಕಾರಿಗಳು ಕಾದಿರುವುದಿಲ್ಲ. ಅನೇಕರ ಪಾಲಿಗೆ ಒದಗದೆ ಮರಣದ ಹಣ ಮರೀಚಿಕೆಯಾಗಿ ಬಿಡುತ್ತದೆ.

ಸುಮಾರು ಹನ್ನೆರಡು ವರ್ಷಗಳ ಹಿಂದೆ ನಮ್ಮ ರಾಜ್ಯದಲ್ಲಿ ರುದ್ರಭೂಮಿಗಳ ಆಧುನೀಕರಣ ಸುದ್ದಿ ಮಾಡಿತ್ತು. ಚಿತಾಗಾರ ನಿರ್ಮಾಣ, ಆಧುನೀಕರಣ, ಅಭಿವೃದ್ಧಿ ಕಾಮಗಾರಿಗಳು ನಡೆಯುವುದಾಗಿ ಸರ್ಕಾರದ ಕಡೆಯಿಂದ ಹೇಳಿಕೆಗಳೂ ಬಂದಿದ್ದವು. ಆದರೆ ಹಲವು ಊರುಗಳಲ್ಲಿ ಶವ ಸುಡಲು ಅಥವಾ ಹೂಳಲು ಅಂಗೈಯಗಲದ ಜಾಗವೂ ಸಿಗದೆ ಹತಾಶ ಜನರು ಶವವನ್ನು ತಾಲ್ಲೂಕು ಕಚೇರಿಯ ಮುಂದೆ ಇರಿಸಿಕೊಂಡು ಧರಣಿ ನಡೆಸಿದ ಸಂದರ್ಭಗಳು ಈಗಲೂ ಸುದ್ದಿಯಾಗುತ್ತಲೇ ಇವೆ.

ರುದ್ರಭೂಮಿಗಳಲ್ಲಿ ಮೂಲ ಸೌಕರ್ಯ ಕಲ್ಪಿಸಲು ಕೆಲವು ಸ್ವಯಂ ಸೇವಾ ಸಂಸ್ಥೆಗಳು ಹಣಕಾಸಿನ ನೆರವು ನೀಡುವುದುಂಟು. ಅದರಲ್ಲಿ ರುದ್ರಭೂಮಿಗೆ ತಗಡಿನ ಚಾವಣಿ, ಶವ ದಹನಕ್ಕೆ ಕಡಿಮೆ ಕಟ್ಟಿಗೆ ಬಳಸಿ ಶೀಘ್ರವಾಗಿ ಭಸ್ಮ ಮಾಡಲು ಸಹಕಾರಿಯಾದ ಛೇಂಬರ್, ದಫನ ಮಾಡಲು ಅನುವಾಗುವಂತೆ, ಹೊಂಡ ತೆಗೆಯುವ ಸ್ಥಳವನ್ನು ಮಳೆಗಾಲದಲ್ಲಿ ನೀರು ನಿಲ್ಲದ ರೀತಿ ರಕ್ಷಿಸಲು ವ್ಯವಸ್ಥೆ ಮಾಡಿ ಎಲ್ಲ ಸಂಪ್ರದಾಯದವರಿಗೂ ಅನುಕೂಲ ಕಲ್ಪಿಸಲಾಗಿದೆ. ಆದರೆ ಇನ್ನು ಕೆಲವೆಡೆ ಮೇಲ್ಚಾವಣಿಯ ತಗಡು ತೂತು ಬಿದ್ದು, ಮಳೆ ಬಂದರೆ ಶವಸಂಸ್ಕಾರ ಮಾಡಲಾಗದ ದುಃಸ್ಥಿತಿ ಎದ್ದು ಕಾಣುತ್ತದೆ. ಇನ್ನು ಸ್ಮಶಾನವೇ ಇಲ್ಲದೆ ದೂರದ ಊರಿಗೆ ಶವವನ್ನು ಸಾಗಿಸಬೇಕಾದ ಪ್ರಸಂಗವೂ ಕಿರಿಕಿರಿಯುಂಟು ಮಾಡುವಂತಿದೆ.

ಕೇರಳದಿಂದ ಕರ್ನಾಟಕಕ್ಕೆ ಕಾಲಿಟ್ಟ ಶವದಹನದ ಪೆಟ್ಟಿಗೆಯು ಆಯ್ದ ಸಹಕಾರಿ ಸಂಘಗಳ ಮೂಲಕ ಬಾಡಿಗೆಗೆ ದೊರಕುತ್ತಿತ್ತು. ತೆಂಗಿನ ಚಿಪ್ಪು ಬಳಸಿ ಮುಚ್ಚಿದ ಪೆಟ್ಟಿಗೆಯೊಳಗೆ ಮನೆಯಂಗಳದಲ್ಲಿಯೇ ತಾಸಿನೊಳಗೆ ದೇಹವನ್ನು ಬೂದಿ ಮಾಡುವ ಈ ಸೌಲಭ್ಯ ಆರಂಭದಲ್ಲಿ ಸದ್ದು ಮಾಡಿತ್ತು. ಆದರೆ ಅದರಿಂದ ಅನನುಕೂಲಗಳು ತಲೆದೋರಲು ಆರಂಭವಾದುದು ಕಂಡು ಜನ ಅದನ್ನು ಬಳಸಲು ಹಿಂಜರಿಯುವಂತಾಯಿತು. ಈಗ ಉಡುಪಿಯಲ್ಲಿ ಸಂಚಾರಿ ಶವದಹನದ ವ್ಯವಸ್ಥೆಯೊಂದು ಆರಂಭವಾಗಿದ್ದು, ಅದು ಎಷ್ಟು ಅನುಕೂಲಕರವೆಂಬುದು ಮುಂದೆ ತಿಳಿಯಬೇಕಷ್ಟೇ.

ಇನ್ನೊಂದೆಡೆ, ಅಂತ್ಯಸಂಸ್ಕಾರಕ್ಕೆ ದಲಿತರಿಗೆ ಅವಕಾಶ ನೀಡದೆ ಸಾವಿನ ಬಳಿಕ ಭೌತಿಕ ದೇಹಕ್ಕೆ ಜಾತಿಯ ಪಟ್ಟಿ ಕಟ್ಟುವ ಜನರು, ಸ್ಮಶಾನಕ್ಕೆ ಮೀಸಲಾದ ಭೂಮಿಯನ್ನು ಸದ್ದಿಲ್ಲದೆ ಕಬಳಿಸುವ ಪ್ರಭಾವಿಗಳು, ಇವರೆಲ್ಲರೂ ಮೃತದೇಹದ ಗೌರವಯುತ ಅಂತ್ಯಕ್ಕೆ ಅಡ್ಡಿಯಾಗುತ್ತಿರುವುದೇ ವಿಪರ್ಯಾಸ. ಶವ ಹೂಳುವ ಪದ್ಧತಿ ಇರುವವರಿಗೆ ಸ್ಥಳಾವಕಾಶದ ಕೊರತೆ ಕಾಡಿದರೆ, ದಹನದ ಪದ್ಧತಿ ಇರುವವರಿಗಾಗಿ ಎಲ್ಲ ಕಡೆ ವಿದ್ಯುತ್ ಚಿತಾಗಾರಗಳ ಲಭ್ಯತೆ ಇಲ್ಲ. ಒಂದು ದೇಹ ಬೂದಿಯಾಗಲು ಕನಿಷ್ಠ ಮೂರರಿಂದ ನಾಲ್ಕು ಕ್ವಿಂಟಲ್ ಒಣ ಕಟ್ಟಿಗೆ ಬೇಕಾಗುತ್ತದೆ. ಪ್ರಕೃತಿಯನ್ನು ಬರಿದುಗೊಳಿಸುವ ಅಂತ್ಯಸಂಸ್ಕಾರದ ವಿಧಿಯನ್ನು ಸರಳಗೊಳಿಸುವ ಯೋಜನೆಗಳಿಗೆ ಸರ್ಕಾರ ಮನಸ್ಸು ಮಾಡಬೇಕಾಗಿದೆ.

ಇದರ ಜೊತೆಗೆ ಪ್ರತಿಯೊಂದು ಗ್ರಾಮದಲ್ಲೂ ರುದ್ರಭೂಮಿ ಇರಲೇಬೇಕೆಂದು ಗ್ರಾಮಾಡಳಿತಕ್ಕೆ ಕಡ್ಡಾಯಗೊಳಿಸಬೇಕು. ಅಲ್ಲಿ ನೀರಿನ ಸೌಲಭ್ಯ ಮತ್ತು ಎಲ್ಲ ಋತುಗಳಲ್ಲೂ ನಿಶ್ಚಿಂತೆಯಿಂದ ಅಂತ್ಯಸಂಸ್ಕಾರಕ್ಕೆ ಅಗತ್ಯವಾದ ಏರ್ಪಾಡುಗಳನ್ನು ಮಾಡುವ ನಿಯಮ ಇರಬೇಕು. ಸತ್ತ ಮೇಲೂ ಜಾತಿಗಾಗಿ ಹಣಾಹಣಿ ಮಾಡುವ ಪ್ರವೃತ್ತಿಗೆ ಮೋಕ್ಷ ಸಿಗಬೇಕು. ಶವ ಸಾಗಾಟಕ್ಕೆ ತಕ್ಷಣ ಸಿಗುವ ವಾಹನ ವ್ಯವಸ್ಥೆಯೂ ಇರಬೇಕು.

ಮನುಷ್ಯ ಸಾವನ್ನು ಗೆಲ್ಲಲಾರ. ಆದರೆ ಮೃತ ವ್ಯಕ್ತಿಯ ಸಂಬಂಧಿಕರ ಪಾಲಿಗೆ ಸ್ಮಶಾನದ ಅವ್ಯವಸ್ಥೆಗಳು, ಕೊರತೆಗಳು ಬದುಕಿನಲ್ಲಿ ಘೋರ ಅನುಭವ ನೀಡುವಂತಾದರೆ ಇದು ಅಸಹನೀಯ ಅಲ್ಲವೆ! ಸತ್ತ ಬಳಿಕ ದೇಹವು ಕೊಳೆಯುವ ಮೊದಲು ಮಣ್ಣು ಸೇರಲು ಸ್ಥಳವೇ ಇಲ್ಲದೆ ಪರದಾಡುವ ಗ್ರಾಮಗಳು ಎಷ್ಟಿವೆ ಎಂಬುದನ್ನು ಚುನಾವಣೆಯ ಹೊಸ್ತಿಲಿನಲ್ಲಿ ನಿಂತಿರುವವರೂ ಎಣಿಕೆ ಮಾಡಿದಂತೆ ಕಾಣಿಸದು.

ರೋಹಿತಾಶ್ವನ ದೇಹದ ಅಂತ್ಯಸಂಸ್ಕಾರಕ್ಕೆ ಶುಲ್ಕವನ್ನು ತೆರಲಾಗದ ಚಂದ್ರಮತಿಯ ಕತೆಯನ್ನು ಹೇಳುವ ಈ ನಾಡಿನಲ್ಲಿ, ಯುಗಾಂತರದ ಬಳಿಕವೂ ಶವಸಂಸ್ಕಾರವೆಂಬುದು ಅದೇ ಪ್ರಯಾಸದ ಸಂಗತಿಯಾಗಿರುವುದು ತಲೆ ತಗ್ಗಿಸಬೇಕಾದ್ದೇ ಹೌದು.

ವಾಚಕರ ವಾಣಿ

‘ನಮ್ಮ ಕ್ಲಿನಿಕ್’: ಸೇವಾವಧಿ ವಿಸ್ತರಿಸಿ

ಬೆಂಗಳೂರಿನಲ್ಲಿ 108 ಕಡೆ ‘ನಮ್ಮ ಕ್ಲಿನಿಕ್’ಗಳು ಏಕಕಾಲಕ್ಕೆ ಶುರುವಾಗಿರುವುದು ಶ್ಲಾಘನೀಯ ವಿಚಾರ. ಅಸಂಘಟಿತ ವಲಯದ ಕಾರ್ಮಿಕರು ಅನಾರೋಗ್ಯವಿದ್ದರೂ ಕೆಲವೊಮ್ಮೆ ರಜೆ ಸಿಗದ ಕಾರಣಕ್ಕೆ ಅಥವಾ ವೇತನ ಕಡಿತದ ಭೀತಿಯಿಂದ ಕೆಲಸಕ್ಕೆ ತೆರಳಿ, ಸಂಜೆ ವಾಪಸ್ ಬಂದ ನಂತರ ಆರೋಗ್ಯ ತಪಾಸಣೆಗೆ ಹೋಗುವುದಿದೆ. ಹೀಗಿರುವಾಗ ‘ನಮ್ಮ ಕ್ಲಿನಿಕ್’ಗಳು ಈಗ ನಿಗದಿಯಾಗಿರುವಂತೆ ಬೆಳಿಗ್ಗೆ 9ರಿಂದ ಸಂಜೆ 4.30ರವರೆಗಷ್ಟೇ ಕಾರ್ಯನಿರ್ವಹಿಸಿದರೆ, ಈ ವರ್ಗದ ಜನರು ಈ ಯೋಜನೆಯಿಂದ ವಂಚಿತರಾಗುತ್ತಾರೆ. ಮತ್ತೆ ಅವರು ಹೆಚ್ಚು ಹಣ ಖರ್ಚು ಮಾಡಿ ಖಾಸಗಿ ಆಸ್ಪತ್ರೆಗಳನ್ನೇ ಆಶ್ರಯಿಸಬೇಕಾಗುತ್ತದೆ ಅಥವಾ ಹಣವಿಲ್ಲದಿದ್ದರೆ ಅನಾರೋಗ್ಯದಿಂದ ನರಳಬೇಕಾಗುತ್ತದೆ. ಹೀಗಾಗಿ, ನಮ್ಮ ಕ್ಲಿನಿಕ್‌ನ ಸಮಗ್ರ ಸೇವೆಯನ್ನು ರಾತ್ರಿ 8ರವರೆಗೆ ವಿಸ್ತರಿಸಬೇಕು. ಇದಕ್ಕಾಗಿ ಪಾಳಿ ವ್ಯವಸ್ಥೆ ಅಳವಡಿಸಿಕೊಳ್ಳಬಹುದು.

ಆರ್.ಕುಮಾರ್, ಬೆಂಗಳೂರು

ನಾನು ಸಿಕ್ಕಿಬೀಳುವುದಿಲ್ಲ!

ಮಹಾಭಾರತದ ‘ಯಕ್ಷ ಪ್ರಶ್ನೆ’ ಪ್ರಸಂಗದಲ್ಲಿ ‘ಈ ಜಗತ್ತಿನ ಅತಿ ದೊಡ್ಡ ವಿಸ್ಮಯ ಯಾವುದು?’ ಅನ್ನುವ ಯಕ್ಷನ ಪ್ರಶ್ನೆಗೆ ಯುಧಿಷ್ಠಿರ, ‘ನಿತ್ಯ ನಮ್ಮ ಕಣ್ಣೆದುರೇ ಜನ ಸತ್ತು ಯಮಲೋಕಕ್ಕೆ ಹೋಗುತ್ತಿರುವುದನ್ನು ನೋಡುತ್ತಾ ಇದ್ದರೂ ‘ನಾನು ಸಾಯುವುದಿಲ್ಲ’ ಎಂದು ಮನುಷ್ಯ ಭ್ರಮಾಧೀನನಾಗಿರುವುದೇ ಈ ಜಗತ್ತಿನ ಅತಿ ದೊಡ್ಡ ವಿಸ್ಮಯ’ ಎಂದು ಉತ್ತರಿಸುತ್ತಾನೆ. ಲಂಚ ತೆಗೆದುಕೊಳ್ಳುವಾಗ ಸಿಕ್ಕಿಬಿದ್ದು ಸರ್ಕಾರಿ ನೌಕರರು, ಅಧಿಕಾರಿಗಳು ಜೈಲು ಸೇರುತ್ತಿರುವ ಹಲವಾರು ಪ್ರಕರಣಗಳು ನಿತ್ಯ ದಿನಪತ್ರಿಕೆಗಳಲ್ಲಿ ವರದಿಯಾಗುತ್ತಲೇ ಇದ್ದರೂ ‘ನಾನು ಸಿಕ್ಕಿಬೀಳುವುದಿಲ್ಲ’ ಎಂಬ ಭಂಡ ಧೈರ್ಯದಿಂದ ಅದೇ ಕೃತ್ಯದಲ್ಲಿ ತೊಡಗಿ ಜೈಲು ಸೇರುತ್ತಿರುವ ಪ್ರಕರಣಗಳು ಪುನರಾವರ್ತನೆ ಆಗುತ್ತಿರುವುದು ನಿಜವಾಗಿಯೂ ನಮ್ಮ ಕಾಲಮಾನದ ದೊಡ್ಡ ವಿಸ್ಮಯವೇ ಸರಿ.

ಶಿವರಾಮ್ ಎಚ್.ಎಸ್., ಮೈಸೂರು

ದಂತ ಯೋಜನೆ: ಕಾಗದದ ಮೇಲಷ್ಟೇ ಉಳಿಯದಿರಲಿ

ವಯಸ್ಸಾದ ಬಡವರಿಗಾಗಿ ಹಲ್ಲಿನ ಸೆಟ್ ನೀಡುವ ‘ದಂತಭಾಗ್ಯ ಯೋಜನೆ’ಯ ಸೌಲಭ್ಯ ಜಿಲ್ಲಾ ಆಸ್ಪತ್ರೆಗಳಲ್ಲಿ ಸರಿಯಾಗಿ ದೊರೆಯದಿರುವ ಬಗ್ಗೆ ಸುಭಾಸ ಯಾದವಾಡ ಅವರು ಪ್ರಸ್ತಾಪಿಸಿರುವುದು (ವಾ.ವಾ., ಫೆ. 8) ನಿಜವೇ ಹೌದು. ದಂತಭಾಗ್ಯ ಯೋಜನೆ ಕುರಿತಂತೆ ಕವಿ ಡುಂಡಿರಾಜರ ‘ಸರ್ಕಾರದಿಂದ ಹಿರಿಯ ನಾಗರಿಕರಿಗೆ ಉಚಿತ ದಂತಭಾಗ್ಯ ಯೋಜನೆ, ಅದನ್ನೇ ಅಚ್ಚಕನ್ನಡದಲ್ಲಿ ಹೇಳುವುದಾದರೆ ಹಲ್‌ಕಟ್ ಯೋಜನೆ’ ಎಂಬ ಹನಿಗವನ ನೆನಪಾಗುತ್ತದೆ. ಜನಪರ ಯೋಜನೆಗಳು ಕಾಗದದಲ್ಲಿ ಮಾತ್ರವೇ ಇರದೆ ಕಾರ್ಯರೂಪಕ್ಕೂ ಬರಲಿ ಎಂಬ ಆಶಯ ಮತ್ತು ನಿರೀಕ್ಷೆ ನಾಗರಿಕರದು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಪೂರ್ವಸಿದ್ಧತಾ ಪರೀಕ್ಷೆ ಮುಂದೂಡಿ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ವೇಳಾಪಟ್ಟಿಯಂತೆ, ಇದೇ 23ರಿಂದ ಮಾರ್ಚ್ 1ರವರೆಗೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪೂರ್ವಸಿದ್ಧತಾ ಪರೀಕ್ಷೆಯನ್ನು ನಿಗದಿಗೊಳಿಸಲಾಗಿದೆ. ಆದರೆ ಇದೇ 28ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಿದ್ದು, ಇದು ಬಹುತೇಕ ನಡೆಯುವುದು ಶಾಲೆಗಳಲ್ಲಿ. ಹೀಗಿರುವಾಗ ಅಂದು ಪರೀಕ್ಷೆಯನ್ನು ಇಟ್ಟುಕೊಂಡರೆ ಅದರಿಂದ ದಿನಾಚರಣೆಯನ್ನು ಸಂಘಟಿಸಲು ಅಡ್ಡಿಯಾಗುತ್ತದೆ. ಈ ಕಾರಣದಿಂದ ಪೂರ್ವಸಿದ್ಧತಾ ಪರೀಕ್ಷೆಯನ್ನು ಮುಂದೂಡುವುದು ಅಪೇಕ್ಷಣೀಯ.

ಈ.ಬಸವರಾಜು, ಬೆಂಗಳೂರು

ನಾಡದೇವತೆಯ ಚಿತ್ರ: ಅವರವರ ಭಾವಕ್ಕಿರಲಿ

ರಾಜ್ಯ ಸರ್ಕಾರವು ನಾಡದೇವತೆಯ ಅಧಿಕೃತ ಹಾಗೂ ಪ್ರಮಾಣಿತ ಚಿತ್ರವನ್ನು ಘೋಷಿಸಿ ಆದೇಶ ಹೊರಡಿಸಿದೆ. ವಾಸ್ತವವಾಗಿ ‘ಅವರವರ ಭಾವಕ್ಕೆ ಅವರವರ ಭಕುತಿಗೆ’ ಅನ್ನುವಂತೆ ನಾಡದೇವಿಯ ಕಲ್ಪನೆ ಇದೆಯೇ ವಿನಾ ಸಾರ್ವತ್ರಿಕವಲ್ಲ. ಈ ಕಲ್ಪನೆಯನ್ನು ಅಧಿಕೃತಗೊಳಿಸುವುದು ಎಂದರೆ ಏನು? ಕನ್ನಡ ಸಾಹಿತ್ಯ ಪರಿಷತ್ತು ಬಿ.ಕೆ.ಎಸ್. ವರ್ಮ ಅವರ ಚಿತ್ರವನ್ನು ಒಪ್ಪಿ, ಈಗ ಅದರ ಪ್ರತಿಮೆಯನ್ನೇ ಸ್ಥಾಪಿಸಿದೆ. ಹೆಚ್ಚಿನ ಕನ್ನಡಿಗರು ಅದನ್ನು ಒಪ್ಪಿದ್ದಾರೆ. ಹೀಗಿರುವಾಗ, ಸರ್ಕಾರ ರೂಪಿಸಲಿರುವ ಚಿತ್ರವನ್ನೇ ಬಳಸಬೇಕು ಎಂದು ಕಡ್ಡಾಯ ಮಾಡಲು ಸಾಧ್ಯವೇ? ನಮ್ಮಲ್ಲಿ ಒಂದೇ ದೇವರಿಗೆ ಹಲವಾರು ದೇವಸ್ಥಾನಗಳಿವೆ. ಅಲ್ಲಿರುವ ವಿಗ್ರಹಗಳು ಒಂದೇ ರೀತಿ ಇಲ್ಲ, ವಿಭಿನ್ನವಾಗಿವೆ. ಹಾಗೇ ತಮಗೆ ಇಷ್ಟವಾದ ಕನ್ನಡ ಮಾತೆಯ ಚಿತ್ರವನ್ನು ಬಳಸುವ ಸ್ವಾತಂತ್ರ್ಯವನ್ನು ಕಸಿಯಲಾದೀತೆ?

ಎಷ್ಟೋ ಕನ್ನಡ ಕಾರ್ಯಕ್ರಮಗಳಲ್ಲಿ ನಾಡದೇವಿಯ ಚಿತ್ರವನ್ನು ಇಡುವುದಿಲ್ಲ, ಪೂಜೆಯನ್ನು ಮಾಡುವುದಿಲ್ಲ. ಇಷ್ಟಕ್ಕೂ ಕನ್ನಡಿಗರು ಎಂದೂ ಕೇಳದ ಕನ್ನಡಾಂಬೆಯ ಅಧಿಕೃತ ಚಿತ್ರವನ್ನು ರೂಪಿಸುವ ಅಗತ್ಯವಾದರೂ ಏನಿತ್ತು? ಇದರಿಂದ ಕನ್ನಡಿಗರಿಗಾಗಲಿ, ಕನ್ನಡಕ್ಕಾಗಲಿ ಏನೂ ಉಪಯೋಗವಾಗುವುದಿಲ್ಲ. ಈ ಆದೇಶವನ್ನು ಹೊರಡಿಸುವ ಬದಲು ಪರಿಷ್ಕೃತ ಮಹಿಷಿ ವರದಿಗೆ ಕಾನೂನು ಬಲ ನೀಡಿದ್ದರೆ, ಕನ್ನಡಿಗರಿಗೆ ಕೆಲಸ ಸಿಗುವ ಸಾಧ್ಯತೆಯಾದರೂ ಹೆಚ್ಚುತ್ತಿತ್ತು. ಈ ದಿಸೆಯಲ್ಲಿ ಸರ್ಕಾರವು ಕನ್ನಡ ಭಾಷಾ ಕಾಯ್ದೆ ಮತ್ತು ಪರಿಷ್ಕೃತ ಮಹಿಷಿ ವರದಿಯನ್ನು ಈ ಬಜೆಟ್ ಅಧಿವೇಶನದಲ್ಲಿ ಮಂಡಿಸಿ ಅವುಗಳಿಗೆ ಕಾನೂನು ಬಲ ನೀಡುವ ಕೆಲಸವನ್ನು ಮಾಡಲಿ.

ರಾ.ನಂ.ಚಂದ್ರಶೇಖರ, ಬೆಂಗಳೂರು

ಯಾರ ಮೇಲೆ ನಂಬಿಕೆ ಇಡಬೇಕು?

ಸ್ವತಃ ಅಜ್ಜನೇ ಮೊಮ್ಮಗಳ ಮೇಲೆ ವರ್ಷಾನುಗಟ್ಟಲೆಯಿಂದ ನಿರಂತರವಾಗಿ ಲೈಂಗಿಕ ದೌರ್ಜನ್ಯ ಎಸಗುತ್ತಾ ಬಂದ ಸುದ್ದಿ ತಿಳಿದು (ಪ್ರ.ವಾ., ಫೆ. 8) ಆಘಾತವಾಯಿತು. ಎಲ್ಲಾ ತಿಳಿವಳಿಕೆ ಇರುವ ಅಜ್ಜನೇ ಮಾನವೀಯತೆ ಮರೆತು ಮೊಮ್ಮಗಳಿಗೆ ಲೈಂಗಿಕ ಕಿರುಕುಳ ನೀಡುವುದಾದರೆ ಹೆಣ್ಣುಮಕ್ಕಳು ಇನ್ನು ಯಾರ ಮೇಲೆ ನಂಬಿಕೆ ಇಡಬೇಕು?

ಮನೆ, ಕೆಲಸ ಮಾಡುವ ಸ್ಥಳ, ಸಾರ್ವಜನಿಕ ಸ್ಥಳ, ಎಲ್ಲಿ ಹೋದರೂ ಅವಳಿಗೆ ಲೈಂಗಿಕ ಕಿರುಕುಳ ತಪ್ಪಿದ್ದಲ್ಲ. ಇಂತಹ ದೌರ್ಜನ್ಯವನ್ನು ನಿಗ್ರಹಿಸಲು ಸರ್ಕಾರ ಕಠಿಣವಾದ ಕಾನೂನನ್ನು ಜಾರಿಗೆ ತರಬೇಕು. ಅವಳನ್ನು ಸದೃಢ ಮಾಡುವ ಕಾರ್ಯಯೋಜನೆ ಜಾರಿಗೊಳಿಸಬೇಕು.

ನೇಹಾ ಸಜ್ಜನ, ಮಾಲಗತ್ತಿ, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಡುಕ ಹುಟ್ಟಿಸುವ ಭೂಮಿಯಾಳದ ಕದಲಿಕೆ

● ಹಮೀದ್ ಕೆ., ಜಯಸಿಂಹ ಆರ್.

ಭೂಮಿಯ ಮೇಲ್ಪದರದಲ್ಲಿ ಉಂಟಾಗುವ ಅಲುಗಾಟವೇ ಭೂಕಂಪ. ಮೇಲ್ಮೈಯಿಂದ ನೋಡಿದರೆ ಭೂಮಿಯು ಬಹಳ ಗಟ್ಟಿ ಇರುವಂತೆ ಕಾಣಿಸುತ್ತದೆ. ಆದರೆ, ಮೇಲ್ಪದರದ ಕೆಳಗೆ ಇರುವ ಪದರಗಳು ಚಟುವಟಿಕೆಯಿಂದ ಕೂಡಿರುತ್ತವೆ. ಭೂಮಿಯು ಮುಖ್ಯವಾಗಿ ನಾಲ್ಕು ಪದರಗಳನ್ನು ಹೊಂದಿದೆ. ಅವುಗಳೆಂದರೆ, ಘನವಾದ ಮೇಲ್ಪದರ, ಗಟ್ಟಿಯಾದ ಒಳಪದರ, ದ್ರವರೂಪದಲ್ಲಿರುವ ಪದರ ಮತ್ತು ತಳಭಾಗದ ಪದರ. ಘನವಾದ ಮೇಲ್ಪದರ ಮತ್ತು ಗಟ್ಟಿಯಾದ ಒಳಪದರವನ್ನು ಭೂವಲಯ (ಲಿಥೊಸ್ಫಿಯರ್) ಎಂದು ಗುರುತಿಸಲಾಗುತ್ತದೆ. ಈ ಭೂವಲಯ ಎಂಬುದು ಇಡೀ ಭೂಮಿಯನ್ನು ಆವರಿಸಿರುವ ದೊಡ್ಡ ಹಾಳೆಯಂತಹ ಒಂದೇ ತುಣುಕು ಅಲ್ಲ. ಭೂವಲಯವು ನೂರಾರು ಬೃಹತ್ ತುಣುಕುಗಳಿಂದ ಕೂಡಿದೆ. ಭೂವಲಯದ ಬೃಹತ್ ತುಣುಕುಗಳು ತಮ್ಮ ಕೆಳಗೆ ಇರುವ ದ್ರವರೂಪದ ಪದರದಲ್ಲಿ ತೇಲಾಡುತ್ತ ಚಲಿಸುತ್ತಿರುತ್ತವೆ.

ನಿರಂತರವಾಗಿ ನಡೆಯುತ್ತಿರುವ ಈ ಚಲನೆಯು ಭೂಮಿಯ ಮೇಲ್ಪದರದ ಮೇಲೆ ಒತ್ತಡ ಸೃಷ್ಟಿಸುತ್ತದೆ. ಮೇಲ್ಪದರವು ತಾಳಿಕೊಳ್ಳಲಾರದಷ್ಟು ಈ ಒತ್ತಡವು ಹೆಚ್ಚಾದಾಗ, ಮೇಲ್ಪದರದಲ್ಲಿ ಬಿರುಕು ಮೂಡುತ್ತದೆ. ಭೂವಲಯವು ಚಲಿಸಿದಾಗ ಮೇಲ್ಪದರದ ಬಿರುಕಿನಲ್ಲಿ ಕೂಡ ಚಲನೆ ಉಂಟಾಗುತ್ತದೆ. ಬಿರುಕು ಮೂಡಿರುವ ಪ್ರದೇಶದಲ್ಲಿ ಭೂಮಿಯ ಮೇಲ್ಪದರದ ಹಠಾತ್ ಚಲನೆಯೇ ಭೂಕಂಪ.

ಕಂಪನವು ಆರಂಭಗೊಂಡ ಸ್ಥಳವನ್ನು ಕಂಪನ ಕೇಂದ್ರ ಎಂದು ಗುರುತಿಸಲಾಗುತ್ತದೆ. ಭೂಕಂಪದ ಅತ್ಯಂತ ತೀವ್ರತೆಯು ಕಂಪನ ಕೇಂದ್ರದ ಸುತ್ತ ಇರುತ್ತದೆ. ಕಂಪನ ಕೇಂದ್ರದಿಂದ ನೂರಾರು ಅಥವಾ ಸಾವಿರಾರು ಕಿಲೋಮೀಟರ್ ದೂರದಲ್ಲಿಯೂ ಕಂಪನದ ಅನುಭವ ಆಗಬಹುದು.

ಕೆಲವೊಮ್ಮೆ ದೊಡ್ಡ ಭೂಕಂಪಕ್ಕೆ ಮೊದಲು ಪೂರ್ವಕಂಪನಗಳು ಉಂಟಾಗಬಹುದು. ಇವುಗಳ ತೀವ್ರತೆ ಕಡಿಮೆ ಇರುತ್ತದೆ. ಕಡಿಮೆ ತೀವ್ರತೆಯ ಈ ಕಂಪನಗಳು ಮುಂದೆ ದೊಡ್ಡ ಭೂಕಂಪ ಸಂಭವಿಸುವುದರ ಸೂಚನೆ ಎಂಬುದನ್ನು ಭೂವಿಜ್ಞಾನಿಗಳಿಗೆ ಗುರುತಿಸಲು ಸಾಧ್ಯವಿಲ್ಲ. ದೊಡ್ಡ ಭೂಕಂಪ ನಡೆದ ಬಳಿಕ ಅದೇ ಸ್ಥಳದಲ್ಲಿ ಕಡಿಮೆ ತೀವ್ರತೆಯ ಹಲವು ಕಂಪನಗಳು ಉಂಟಾಗುತ್ತವೆ. ಒಂದು ವಾರದಿಂದ ವರ್ಷಗಳ ವರೆಗೂ ಇದು ಮುಂದುವರಿಯಬಹುದು.

ಭೂಕಂಪ ಸಂಭವಿಸಲಿದೆ ಎಂಬುದರ ಮುನ್ಸೂಚನೆಯನ್ನು ವಿಜ್ಞಾನಿಗಳು ನೀಡುವುದು ಸಾಧ್ಯವಿಲ್ಲ. ಮುನ್ಸೂಚನೆ ನೀಡಲು ಮುಂದೆ ಸಾಧ್ಯವಾಗಬಹುದೇ ಎಂಬುದರ ಕುರಿತು ಕೂಡ ಯಾವುದೇ ಖಚಿತತೆ ಇಲ್ಲ. ಭೂಕಂಪಗಳ ಮುನ್ನೆಚ್ಚರಿಕೆ ಪಡೆದುಕೊಳ್ಳಲು ವಿಜ್ಞಾನಿಗಳು ವಿವಿಧ ರೀತಿಯಲ್ಲಿ ಪ್ರಯತ್ನಿಸಿದ್ದಾರೆ. ಆದರೆ, ಅದರಲ್ಲಿ ಸಿಕ್ಕಿರುವ ಯಶಸ್ಸು ಅಲ್ಪ ಮಾತ್ರ. ಭೂಮಿಯಾಳದ ಚಲನೆಯಿಂದಾಗಿ ಬಿರುಕು ಸೃಷ್ಟಿಯಾದ ಪ್ರದೇಶದಲ್ಲಿ ಭವಿಷ್ಯದಲ್ಲಿ ಭೂಕಂಪ ಉಂಟಾಗಲಿದೆ ಎಂಬುದನ್ನು ವಿಜ್ಞಾನಿಗಳು ಹೇಳುತ್ತಾರೆ. ಆದರೆ, ಅದು ಎಂದು ಎಂಬುದು ಮಾತ್ರ ಗೊತ್ತಾಗುವುದಿಲ್ಲ.

ಹವಾಮಾನ ಮತ್ತು ಭೂಕಂಪನದ ನಡುವೆ ನಂಟು ಇದೆಯೇ ಎಂಬ ಪ್ರಶ್ನೆ ಇದೆ. ಹಾಗೆಯೇ ಕೆಲವು ಪ್ರಾಣಿಗಳಿಗೆ, ಕೆಲವು ಮನುಷ್ಯರಿಗೂ ಭೂಕಂಪನದ ಸುಳಿವು ಸಿಗುತ್ತದೆ ಎಂದು ಹೇಳುತ್ತಾರೆ. ಆದರೆ, ಇದು ಈವರೆಗೆ ದೃಢಪಟ್ಟಿಲ್ಲ.

ಭೂಮಿಯಲ್ಲಿ ಮಾತ್ರವಲ್ಲ: ಈ ರೀತಿಯ ಕಂಪನವು ಭೂಮಿಯಲ್ಲಿ ಮಾತ್ರ ನಡೆಯುವುದಲ್ಲ. ಚಂದ್ರನ ಮೇಲ್ಮೈಯಲ್ಲಿಯೂ ಇಂತಹ ಕಂಪನ ಆಗಿರುವುದನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ಮಂಗಳ, ಶುಕ್ರ ಗ್ರಹಗಳಲ್ಲಿಯೂ ಅವುಗಳ ಪದರಗಳೊಳಗೆ ನಡೆಯುವ ಚಟುವಟಿಕೆಗಳ ಪುರಾವೆಗಳನ್ನು ಸಂಗ್ರಹಿಸಲು ಯತ್ನಿಸುತ್ತಿದ್ದಾರೆ.

ಭೂಫಲಕಗಳ ಬಿರುಕು: ಭೂಫಲಕಗಳ ಸಂಘರ್ಷದಿಂದಾಗಿ, ಭೂಮಿಯ ಮೇಲ್ಮೈನಲ್ಲಿ ಕಾಣಿಸಿಕೊಳ್ಳುವ ಬಿರುಕನ್ನು ಭೂಫಲಕಗಳ ಬಿರುಕು ಎಂದು ಕರೆಯಲಾಗುತ್ತದೆ. ಇವು ಕೆಲವೇ ಅಡಿಗಳಿಂದ ಹಿಡಿದು, ಸಾವಿರಾರು ಕಿ.ಮೀ.ಉದ್ದದಷ್ಟೂ ಇವೆ. ಉತ್ತರ ಅಮೆರಿಕ, ನ್ಯೂಜಿಲೆಂಡ್, ಟಿಬೆಟ್–ಹಿಮಾಲಯ ಪ್ರದೇಶದಲ್ಲಿ ಇಂತಹ ಹಲವು ಬಿರುಕುಗಳು ಇವೆ

ಸ್ಯಾಂಡ್ ಆ್ಯಂಡರ್‌ಸನ್ ಬಿರುಕು: 1816ರಲ್ಲಿ ಉತ್ತರ ಅಮೆರಿಕ ಭೂಫಲಕ ಮತ್ತು ಪೆಸಿಫಿಕ್ ಭೂಲಕಗಳ ಘರ್ಷಣೆಯಿಂದ ಉಂಟಾದ ಬಿರುಕು ಇದು. ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಈ ಬಿರುಕು ಇದೆ. ಇದು 1,287 ಕಿ.ಮೀ.ನಷ್ಟು ಉದ್ದವಿದೆ

ಭೂಫಲಕಗಳು

ಭೂಫಲಕಗಳು ಸಂಧಿಸುವ ಪ್ರದೇಶ. ಇವನ್ನು ಭೂಫಲಕಗಳ ರೇಖೆ ಎಂದೂ ಕರೆಯಲಾಗುತ್ತದೆ

ಭೂತೊಗಟೆಯ ತುಣುಕುಗಳನ್ನು ಭೂಫಲಕಗಳು ಎಂದು ಕರೆಯಲಾಗುತ್ತದೆ. ಭೂಮಿಯಲ್ಲಿ ಇಂತಹ 14 ಫಲಕಗಳಿವೆ ಮೇಲ್ಮೈನಲ್ಲಿ ಸಮುದ್ರ ಮಾತ್ರ ಇರುವ ಫಲಕಗಳನ್ನು, ಫಲಕ ಎಂದಷ್ಟೇ ಕರೆಯಲಾಗುತ್ತದೆ. ಮೇಲ್ಮೈನಲ್ಲಿ ಭೂಮಿಯೂ ಇರುವ ಫಲಕಗಳನ್ನು ಭೂಫಲಕ ಎಂದು ಕರೆಯಲಾಗುತ್ತದೆ



① ಅಟ್ಲಾಂಟಿಕ್ ಕಂದರ

ಆಫ್ರಿಕಾ ಭೂಫಲಕ ಮತ್ತು ಯುರೇಷ್ಯಾ ಭೂಫಲಕಗಳ ಪಶ್ಚಿಮ ಭಾಗವು ಉತ್ತರ ಅಮೆರಿಕ ಭೂಫಲಕದ ಪೂರ್ವಭಾಗವನ್ನು ಸಂಧಿಸುವ ಪ್ರದೇಶದಲ್ಲೂ ಸದಾ ಭೂಕಂಪ ಸಂಭವಿಸುತ್ತಿರುತ್ತದೆ. ಈ ಪ್ರದೇಶದಲ್ಲಿ ಬರುವ ಭೂಭಾಗದ ಮೇಲ್ಮೈ ಮತ್ತು ಸಮುದ್ರದ ತಳಭಾಗವು ಹಲವು ಮೀಟರ್‌ಗಳಷ್ಟು ದೂರ ಸರಿದಿವೆ. ಈ ಭೂಕಂಪ ರೇಖೆಯ ಮೇಲ್ಮೈನ ಬಹುಪಾಲು ಸಮುದ್ರವೇ ಇದೆ. ಹೀಗಾಗಿ ಸದಾ ಭೂಕಂಪ ಸಂಭವಿಸಿದರೂ, ಅದರ ಪರಿಣಾಮ ಮಾನವ ವಸತಿ ಪ್ರದೇಶದಲ್ಲಿ ಆಗುವುದಿಲ್ಲ. ಈ ಭೂಕಂಪ ರೇಖೆಯ ಪ್ರದೇಶದಲ್ಲಿ ಬರುವ ಐಸ್‌ಲ್ಯಾಂಡ್ ದ್ವೀಪವನ್ನು, ಈ ರೇಖೆಯು ಇಬ್ಭಾಗವಾಗಿಸಿದೆ. ಈ ರೇಖೆಯು ಕಂದರದ ರೂಪದಲ್ಲಿ ಇರುವುದರಿಂದ ಮತ್ತು ಅಟ್ಲಾಂಟಿಕ್ ಸಾಗರದಲ್ಲಿ ಇರುವುದರಿಂದ ಇದನ್ನು 'ಅಟ್ಲಾಂಟಿಕ್ ಕಂದರ' ಎಂದು ಕರೆಯಲಾಗುತ್ತದೆ.

ಐಸ್‌ಲ್ಯಾಂಡ್ ದ್ವೀಪವನ್ನು ಇಬ್ಭಾಗವಾಗಿಸಿರುವ ಅಟ್ಲಾಂಟಿಕ್ ಕಂದರ

② ಆಲ್ಫೈಡ್ ಭೂಕಂಪ ರೇಖೆ

ಆಫ್ರಿಕಾ ಭೂಫಲಕ, ಇಂಡಿಯನ್ ಭೂಫಲಕ, ಅರೇಬಿಯಾ ಭೂಫಲಕಗಳು ಯುರೇಷ್ಯಾ ಭೂಫಲಕವನ್ನು ಸಂಧಿಸುವ ಪ್ರದೇಶವನ್ನು 'ಆಲ್ಫೈಡ್ ಭೂಕಂಪ ರೇಖೆ' ಎಂದು ಕರೆಯಲಾಗುತ್ತದೆ. ಎರಡನೇ ಅತಿಹೆಚ್ಚು ಭೂಕಂಪಗಳು ಸಂಭವಿಸುವ ಪ್ರದೇಶ ಇದಾಗಿದೆ. ಇಂಡೊನೇಷ್ಯಾ, ಮ್ಯಾನ್ಮಾರ್, ನೇಪಾಳ, ಭಾರತದ ಉತ್ತರ ಭಾಗ, ಟಿಬೆಟ್, ಭೂತಾನ್, ಪಾಕಿಸ್ತಾನ, ಅಫ್ಗಾನಿಸ್ತಾನ, ಇರಾನ್, ಇರಾಕ್, ಇಸ್ರೇಲ್, ಲಿಬಿಯಾ, ಟರ್ಕಿ, ಸಿರಿಯಾ, ಇಟಲಿ, ಗ್ರೀಸ್, ಸ್ಪೇನ್ ಮತ್ತು ಪೋರ್ಚುಗಲ್ ಈ ಭೂಕಂಪ ರೇಖೆಯಲ್ಲಿ ಬರುತ್ತವೆ.

ಈಚೆಗೆ ಭಾರಿ ಭೂಕಂಪಕ್ಕೆ ನಲುಗಿರುವ ಟರ್ಕಿ ಮತ್ತು ಸಿರಿಯಾ, ಆಫ್ರಿಕಾ–ಅರೇಬಿಯಾ–ಯುರೇಷ್ಯಾ ಭೂಫಲಕಗಳು ಸಂಧಿಸುವ ಪ್ರದೇಶದಲ್ಲಿವೆ. ಈ ಪ್ರದೇಶದಲ್ಲಿ ಹಲವು ವರ್ಷಗಳಿಂದ ಆಗಾಗ ಪ್ರಬಲ ಭೂಕಂಪಗಳು ಆಗಿವೆ.

③ ಬೆಂಕಿಯ ಉಂಗುರ

ಪೆಸಿಫಿಕ್ ಫಲಕವು ತನ್ನ ಸುತ್ತಲಿನ ಭೂಫಲಕಗಳನ್ನು ಸಂಧಿಸುವ ಪ್ರದೇಶದಲ್ಲಿ ಸದಾ ಸಂಘರ್ಷವಿರುತ್ತದೆ. ಈ ಪ್ರದೇಶದಲ್ಲಿ ಪ್ರತಿದಿನವೂ ಸಣ್ಣ ಪ್ರಮಾಣದ ಭೂಕಂಪ ಸಂಭವಿಸುತ್ತಿರುತ್ತದೆ ಮತ್ತು ಆಗಾಗ ದೊಡ್ಡ ಭೂಕಂಪಗಳು ಉಂಟಾಗುತ್ತವೆ. ಈ ಪ್ರದೇಶದುದ್ದಕ್ಕೂ ಹಲವು ಸಕ್ರಿಯ ಜ್ವಾಲಾಮುಖಿಗಳೂ ಇವೆ. ಸದಾ ಭೂಕಂಪ ಮತ್ತು ಜ್ವಾಲಾಮುಖಿ ಸ್ಫೋಟದ ಅಪಾಯ ಅತ್ಯಧಿಕವಾಗಿರುವ ಕಾರಣ ಈ ಪ್ರದೇಶವನ್ನು 'ರಿಂಗ್ ಆಫ್ ಫೈರ್' (ಬೆಂಕಿಯ ಉಂಗುರ) ಎಂದು ಕರೆಯಲಾಗುತ್ತದೆ.

ಉತ್ತರ ಅಮೆರಿಕದ ಪಶ್ಚಿಮ ಭಾಗದ ರಾಜ್ಯಗಳು, ಕೆನಡ, ಅಲಸ್ಕಾ, ಕೆರೀಬಿಯನ್ ದೇಶಗಳು, ದಕ್ಷಿಣ ಅಮೆರಿಕದ ದೇಶಗಳು, ನ್ಯೂಜಿಲೆಂಡ್, ಫಿಲಿಪ್ಪೀನ್ಸ್, ಜಪಾನ್, ಕೊರಿಯಾ, ವಿಯೆಟ್ನಾಂ ದೇಶಗಳು 'ರಿಂಗ್ ಆಫ್ ಫೈರ್' ಪ್ರದೇಶದಲ್ಲೇ ಬರುತ್ತವೆ. ವರ್ಷವೊಂದರಲ್ಲಿ ನಡೆಯುವ ಒಟ್ಟು ಭೂಕಂಪಗಳಲ್ಲಿ ಶೇ 70ರಷ್ಟು ಭೂಕಂಪಗಳು ಈ ಪ್ರದೇಶದಲ್ಲೇ ಸಂಭವಿಸುತ್ತವೆ ಎಂದು ಅಮೆರಿಕದ ಯುಎಸ್‌ಜಿಎಸ್‌ನ ದತ್ತಾಂಶಗಳು ಹೇಳುತ್ತವೆ.

ಭಾರತದ ಮುಂದಿರುವ ಅಪಾಯ

ಭಾರತದ ಭೂ ಪ್ರದೇಶದ ಶೇ 59ರಷ್ಟು ಭಾಗವು ಭೂಕಂಪದ ಅಪಾಯವನ್ನು ಹೊಂದಿದೆ. ಇಡೀ ಹಿಮಾಲಯ ಪ್ರದೇಶವು ರಿಕ್ಟರ್ ಮಾಪಕದಲ್ಲಿ 8ಕ್ಕಿಂತ ಹೆಚ್ಚು ತೀವ್ರತೆಯ ಭೂಕಂಪದ ಅಪಾಯವನ್ನು ತನ್ನ ಒಡಲಲ್ಲಿ ಇರಿಸಿಕೊಂಡಿದೆ. 50 ವರ್ಷಗಳ ಅವಧಿಯೊಳಗೆ ಈ ಪ್ರದೇಶದಲ್ಲಿ ಹೆಚ್ಚು ತೀವ್ರತೆಯ ನಾಲ್ಕು ಭೂಕಂಪಗಳು ನಡೆದಿದ್ದವು. 1897ರಲ್ಲಿ ಶಿಲ್ಲಾಂಗ್‌ನಲ್ಲಿ (ತೀವ್ರತೆ 8.7), 1905ರಲ್ಲಿ ಕಂಗ್ಡಾದಲ್ಲಿ (ತೀವ್ರತೆ 8.0), 1934ರಲ್ಲಿ ಬಿಹಾರ–ನೇಪಾಳದಲ್ಲಿ (ತೀವ್ರತೆ 8.3) ಮತ್ತು 1950ರಲ್ಲಿ ಅಸ್ಸಾಂ–ಟಿಬೆಟ್‌ನಲ್ಲಿ (ತೀವ್ರತೆ 8.6) ಭೂಕಂಪಗಳು ಉಂಟಾಗಿವೆ.

ಹಿಮಾಲಯ ಪ್ರದೇಶದಲ್ಲಿ ಅತ್ಯಂತ ತೀವ್ರತೆಯ ಹಲವು ಭೂಕಂಪಗಳು ಉಂಟಾಗಬಹುದು ಎಂದು ಹಲವು ಅಧ್ಯಯನಗಳು ಎಚ್ಚರಿಕೆ ಕೊಟ್ಟಿವೆ. ಕಳೆದ 15 ವರ್ಷಗಳಲ್ಲಿ ದೇಶದಲ್ಲಿ ಹೆಚ್ಚು ತೀವ್ರತೆಯ 10 ಭೂಕಂಪಗಳು ನಡೆದಿವೆ. 20 ಸಾವಿರಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ಜನಸಂಖ್ಯೆ ಹೆಚ್ಚಳವಾಗಿದೆ ಮತ್ತು ಅವೈಜ್ಞಾನಿಕವಾಗಿ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆ. ದೊಡ್ಡ ದೊಡ್ಡ ಕಟ್ಟಡಗಳ ನಿರ್ಮಾಣವು ಭೂಕಂಪದಿಂದ ಆಗಬಹುದಾದ ಅನಾಹುತವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿದೆ ಎಂದು ಭಾರತ ಸರ್ಕಾರದ ವಿಪತ್ತು ನಿರ್ವಹಣಾ ಪ್ರಾಧಿಕಾರವು ಎಚ್ಚರಿಸಿದೆ.

ಹಿಮಾಲಯ ಪ್ರದೇಶವನ್ನು ಬಿಟ್ಟರೆ ದೇಶದ ಉಳಿದ ಭಾಗವು ಅಷ್ಟೊಂದು ಅಪಾಯವನ್ನು ಹೊಂದಿಲ್ಲ ಎಂಬ ಭಾವನೆ ಹಿಂದೆ ಇತ್ತು. ಆದರೆ, ಅಪಾಯ ಇಲ್ಲ ಎಂದು ಭಾವಿಸಿದ್ದ ಪ್ರದೇಶಗಳಲ್ಲಿ ಕೂಡ ಭೂಕಂಪ ಉಂಟಾಗಿದೆ. 1967ರಲ್ಲಿ ಕೊಯ್ನಾದಲ್ಲಿ ನಡೆದ ಭೂಕಂಪವು ಇದಕ್ಕೆ ಒಂದು ಉದಾಹರಣೆ. ಕೊಯ್ನಾ ಭೂಕಂಪದ ಬಳಿಕ, ಭೂಕಂಪ ವಲಯಗಳನ್ನು ಮರುರೂಪಿಸಲಾಯಿತು. 1993ರಲ್ಲಿ ಕಿಲ್ಲಾರಿಯಲ್ಲಿ ಭೂಕಂಪ ಆದ ಬಳಿಕ ಭೂಕಂಪ ವಲಯಗಳನ್ನು ಮತ್ತೆ ಬದಲಾಯಿಸಲಾಯಿತು. ದಖ್ಖನ್ ಮತ್ತು ಪರ್ಯಾಯ ದ್ವೀಪ ಪ್ರದೇಶದ ಕೆಲವು ಭಾಗಗಳನ್ನು ಕೂಡ 'ಸಾಧಾರಣ ಅಪಾಯ' ವಲಯಕ್ಕೆ ಸೇರಿಸಲಾಗಿದೆ.

ಈಶಾನ್ಯ ಭಾರತವು ಸದಾ ಭೂಕಂಪದ ಅಪಾಯವನ್ನು ಹೊಂದಿದೆ. ಮೇಲೆ ಉಲ್ಲೇಖಿಸಿದ ಎರಡು ದೊಡ್ಡ ಭೂಕಂಪಗಳ ಜೊತೆಗೆ, ಕಡಿಮೆ ತೀವ್ರತೆಯ ಭೂಕಂಪಗಳು ಆಗಾಗ ನಡೆದಿವೆ. 1950ರ ನಂತರ ಇಲ್ಲಿ ಸತತವಾಗಿ ಭೂಕಂಪ ಉಂಟಾಗಿದೆ. ರಿಕ್ಟರ್ ಮಾಪಕದಲ್ಲಿ 6ಕ್ಕಿಂತ ಹೆಚ್ಚು ತೀವ್ರತೆಯ ಒಂದು ಭೂಕಂಪವಾದರೂ ಪ್ರತಿ ವರ್ಷವೂ ಇಲ್ಲಿ ಆಗಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಕೂಡ ಭೂವಲಯ ತಿಕ್ಕಾಟ ಪ್ರದೇಶವೇ ಆಗಿದೆ.

ನಗರೀಕರಣ, ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳು ಮತ್ತು ಅರ್ಥ ವ್ಯವಸ್ಥೆಯ ಜಾಗತೀಕರಣದಿಂದಾದ ಅಭಿವೃದ್ಧಿ ಚಟುವಟಿಕೆಗಳು ಭೂಕಂಪದ ಅಪಾಯವನ್ನು ಹೆಚ್ಚಿಸಿವೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಪ್ರತಿಪಾದಿಸುತ್ತಿದೆ. ತಯಾರಿಕೆ ಮತ್ತು ಸೇವಾ ವಲಯದಲ್ಲಿ ಬಳಸಲಾಗುವ ಬೃಹತ್ ಯಂತ್ರಗಳು ಭೂಮಿಯ ಅಲುಗಾಟವನ್ನು ಹೆಚ್ಚಿಸಿವೆ. ಈಗ ಭೂಕಂಪಗಳು ಸಂಭವಿಸಿದರೆ ಜೀವಹಾನಿಯ ಜೊತೆಗೆ, ದೊಡ್ಡ ಪ್ರಮಾಣದಲ್ಲಿ ಆರ್ಥಿಕ ನಷ್ಟವೂ ಉಂಟಾಗುತ್ತದೆ. ಜನದಟ್ಟಣೆಯ ನಗರಗಳಲ್ಲಿ ಭೂಕಂಪ ಉಂಟಾದರೆ, ಅದು ಉಂಟು ಮಾಡಬಹುದಾದ ಹಾನಿಯನ್ನು ಊಹಿಸಲೂ ಸಾಧ್ಯವಿಲ್ಲ.

ಆಧಾರ: ಯುಎಸ್ ಜಿಯೊಲಾಜಿಕಲ್ ಸರ್ವೆ ಯುಎಸ್‌ಜಿಎಸ್, ಬ್ರಿಟನ್ ಜಿಯಾಲಜಿಕಲ್ ಸರ್ವೆ, ನಾಸಾದ ಸ್ಪೇಸ್ ಪ್ಲೇಸ್, ನ್ಯಾಷನಲ್ ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಅಥಾರಿಟಿ ಜಾಲತಾಣಗಳು, ರಾಯಿಟರ್ಸ್

ಪ್ರಜಾವಾಣಿ ಗ್ರಾಫಿಕ್ಸ್: ಶಶಿಧರ ಹಳೇಮನಿ

ನಾಳೆಯಿಂದ ರಂಗಿನ ರಾಟೆ

ಭವ್ಯಾ, ರಾಜೀವ್ ರಾಥೋಡ್

ಕಮಲ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಕವಿತಾ ಅರುಣ್ ಕುಮಾರ್ ನಿರ್ಮಿಸಿರುವ ಚಿತ್ರ 'ರಂಗಿನ ರಾಟೆ'. ಈ ಚಿತ್ರ ನಾಳೆ (ಫೆ.10) ತೆರೆ ಕಾಣಲಿದೆ.

ಏನಿದೆ ರಾಟೆಯಲ್ಲಿ?: ಜೀವನ ಕೂಡಾ ರಾಟೆಯ ರೀತಿ ಸುತ್ತುತ್ತದೆ. ಸುತ್ತಿಕೊಂಡು ಅಲ್ಲಿಯೇ ಬಂದು ನಿಲ್ಲುತ್ತದೆ. ಹಾಗಾಗಿ ಈ ಚಿತ್ರಕ್ಕೆ 'ರಂಗಿನ ರಾಟೆ' ಎಂಬ ಶೀರ್ಷಿಕೆ ನೀಡಿದ್ದೇವೆ ಎಂದರು ನಾಯಕ ರಾಜೀವ್ ರಾಥೋಡ್. ಸಂತೋಷ್, ದುನಿಯಾ ರಶ್ಮಿ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ.

'ನಾಯಕ ಇಲ್ಲಿ ಮೂರು ಭಿನ್ನ ಶೇಡ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ. ನಾಯಕಿ ಭವ್ಯಾ ಕೂಡಾ ಮೂರು ಆಯಾಮಗಳಲ್ಲಿ ಕಾಣಿಸಿದ್ದಾರೆ. ಇದೊಂದು ಉತ್ತಮ ಕಂಟೆಂಟ್‌ನ ಚಿತ್ರ. ಜನ ಮೆಚ್ಚಿಕೊಳ್ಳುವ ಭರವಸೆಯಿದೆ' ಎಂದಿದ್ದಾರೆ ನಿರ್ದೇಶಕ ಆರ್ಮುಗಂ.

ಕಮಲ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಕವಿತಾ ಅರುಣ್ ಕುಮಾರ್ ಈ ಚಿತ್ರದ ನಿರ್ಮಾಪಕಿ. ಸಂತೋಷ್ ಮಳವಳ್ಳಿ ಗೀತರಚನೆ, ಚಂದ್ರು ಓಬ್ಬಯ್ಯ ಸಂಗೀತ ನಿರ್ದೇಶನ, ರವಿ ಸುವರ್ಣ ಛಾಯಾಗ್ರಹಣ ಮತ್ತು ದಾಮೋದರ್ ನಾಯಕ್ ಸಂಕಲನ ಈ ಚಿತ್ರಕ್ಕಿದೆ. ರಿಲಯನ್ಸ್ ಎಂಟರ್‌ಟೈನ್‌ಮೆಂಟ್ ಮೂಲಕ ಚಿತ್ರ ರಾಜ್ಯದಾದ್ಯಂತ ಬಿಡುಗಡೆಯಾಗುತ್ತಿದೆ.

ಫೆ.24ಕ್ಕೆ ಬರಲಿದ್ದಾನೆ ಸೌತ್ ಹೀರೊ

'ಫಸ್ಟ್ ರ‍್ಯಾಂಕ್ ರಾಜು', 'ರಾಜು ಕನ್ನಡ ಮೀಡಿಯಂ'ನಂಥ ಹಿಟ್ ಚಿತ್ರಗಳನ್ನು ನೀಡಿದ್ದ ನಿರ್ದೇಶಕ ನರೇಶ್ ಕುಮಾರ್ ಎಚ್.ಎನ್. ಹೊಸಳ್ಳಿ ಇದೀಗ ಮತ್ತೊಂದು ಸಿನಿಮಾ ಮೂಲಕ ಪ್ರೇಕ್ಷಕರ ಎದುರಿಗೆ ಬರುತ್ತಿದ್ದಾರೆ.

ನರೇಶ್ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ಆ್ಯಕ್ಷನ್ ಕಟ್ ಹೇಳಿರುವ 'ಸೌತ್ ಇಂಡಿಯನ್ ಹೀರೋ' ಸಿನಿಮಾ ಫೆ.24ರಂದು ತೆರೆಗೆ ಬರಲಿದೆ. ಇತ್ತೀಚೆಗೆ ನಟ ಉಪೇಂದ್ರ ಅವರು ಸಿನಿಮಾದ ಟ್ರೈಲರ್ ಬಿಡುಗಡೆಗೊಳಿಸಿದರು. ನಿರ್ದೇಶನದ ಜೊತೆಗೆ ಪತ್ನಿ ಶಿಲ್ಪಾ ಅವರ ಜೊತೆಗೂಡಿ ಚಿತ್ರಕ್ಕೆ ಬಂಡವಾಳವನ್ನೂ ನರೇಶ್ ಹೂಡಿದ್ದಾರೆ. 'ಅವನು ಮತ್ತು ಶ್ರಾವಣಿ' ಸೇರಿದಂತೆ ಹಲವು ಧಾರಾವಾಹಿಗಳಲ್ಲಿ ನಟಿಸಿದ್ದ ನಟ ಸಾರ್ಥಕ್ ಈ ಸಿನಿಮಾದ ನಾಯಕನಾಗಿದ್ದು, ನಾಯಕಿಯರಾಗಿ ಕಾಶಿಮಾ ಹಾಗೂ ಮುಂಬೈ ಮೂಲದ ಊರ್ವಶಿ ನಟಿಸಿದ್ದಾರೆ.

'ನನ್ನ ನಿರ್ದೇಶನದ 4ನೇ ಚಿತ್ರವಿದು. ಚಿತ್ರದ ನಾಯಕ ಭೌತಶಾಸ್ತ್ರದ ಪ್ರಾಧ್ಯಾಪಕ. ಆತನ ಹೆಸರು ಲಾಜಿಕ್ ಲಕ್ಷ್ಮಣ್ ರಾವ್. ಚಿತ್ರರಂಗದ ಯಾವುದೇ ಸಂಪರ್ಕವಿಲ್ಲದ ಆತ ಹೇಗೆ ಚಿತ್ರರಂಗಕ್ಕೆ ಬರುತ್ತಾನೆ, ಬಂದಮೇಲೆ ಆತ ಎದುರಿಸುವ ಸಂಕಷ್ಟ ಎಂತಹದ್ದು ಎಂಬುದರ ಮೇಲೆ ಚಿತ್ರದ ಕಥೆ ಹೆಣೆಯಲಾಗಿದೆ. ನಾಯಕನ ಪಾತ್ರಕ್ಕೆ ಮೂರು ಶೇಡ್ಸ್ ಇವೆ' ಎನ್ನುತ್ತಾರೆ ನರೇಶ್.

ಕಾಶಿಮಾ ಈ ಚಿತ್ರದಲ್ಲಿ ಹಳ್ಳಿಯಲ್ಲಿ ಪಾಠ ಮಾಡುವ ಶಿಕ್ಷಕಿ 'ಮಾನಸಿ' ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರದೊಳಗಿನ ಸಿನಿಮಾದ ನಿರ್ದೇಶಕನಾಗಿ ನಟ ವಿಜಯ್ ಚೆಂಡೂರು ನಟಿಸಿದ್ದಾರೆ. ಹರ್ಷವರ್ಧನ್ ಸಂಗೀತ, ರಾಜಶೇಖರ್ ಹಾಗೂ ಪ್ರವೀಣ್ ಎಸ್. ಅವರ ಛಾಯಾಗ್ರಹಣ ಚಿತ್ರಕ್ಕಿದೆ.

ಕಾಶಿಮಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅನುಭವದಿಂದ ತತ್ವ

ವನಜಂತುಗಳ ಸಸ್ಯಮೂಲಿಕಾಹಾರದಿಂ |
ಗುಣವನರಿತವರಾದಿ ವೈದ್ಯಕಾಷಧದೊಳ್ ||
ವಣತರ್ಕಗಳೇನು? ಜೀವನದ ವಿವಿಧರಸ - |
ದನುಭವದಿ ತತ್ತ್ವವೆಲೊ – ಮಂಕುತಿಮ್ಮ || 818 ||

ಪದ-ಅರ್ಥ: ವನಜಂತುಗಳ = ಕಾಡುಮೃಗಗಳ, ಸಸ್ಯಮೂಲಿಕಾಹಾರದಿಂ = ಸಸ್ಯ + ಮೂಲಿಕ (ಬೇರುಗಳು) + ಆಹಾರದಿಂ(ಆಹಾರದಿಂದ), ಗುಣವನರಿತವರಾದಿವೈದ್ಯಕಾಷಧದೊಳ್ = ಗುಣವನು- + ಅರಿತವರು + ಆದಿವೈದ್ಯರು + ಔಷಧದೊಳ್(ಔಷಧದಲ್ಲಿ), ವಿವಿಧರಸದನುಭವದಿ = ವಿವಿಧ + ರಸದ + ಅನುಭವದಿ

ವಾಚ್ಯಾರ್ಥ: ಕಾಡು ಪ್ರಾಣಿಗಳು ತಮ್ಮ ಆರೋಗ್ಯಕ್ಕಾಗಿ ಎಲೆ, ಬೇರುಗಳನ್ನು ತಿಂದದ್ದನ್ನು ಕಂಡು ಅವುಗಳ ಗುಣವನ್ನು ಅರಿತವರು ಔಷಧಶಾಸ್ತ್ರದಲ್ಲಿ ಆದಿ ವೈದ್ಯರಾದರು. ಬರೀ ತರ್ಕದಿಂದ ಯಾವ ಪ್ರಯೋಜನವೂ ಇಲ್ಲ. ನಿಜವಾದ ತತ್ತ್ವದರ್ಶನ ಸಾಧ್ಯವಾಗುವುದು, ಜೀವನದ ವಿವಿಧ ರಸಗಳ ಅನುಭವದಿಂದ.

ವಿವರಣೆ: ನಾವು ಸಣ್ಣವರಿದ್ದಾಗ ಹಳ್ಳಿಯಲ್ಲಿ ಮನೆಯಲ್ಲಿದ್ದ ನಾಯಿ ಬೆಕ್ಕುಗಳನ್ನು ಗಮನಿಸುತ್ತಿದ್ದೆವು. ಒಂದು ದಿನ ನಾಯಿ ಮನೆಯ ಮುಂದಿದ್ದ ಹುಲ್ಲನ್ನು ತಿನ್ನುತ್ತಿತ್ತು. ನನಗೆ ಬಲು ಆಶ್ಚರ್ಯ! ಸ್ವಲ್ಪ ಹೊತ್ತಿನ ನಂತರ ಎಲ್ಲ ಹುಲ್ಲನ್ನು ವಾಂತಿಮಾಡಿಕೊಂಡಿತು. ಅಜ್ಜನಿಗೆ ಇದನ್ನು ಹೇಳಿದಾಗ ಆತ, ಅದು ನಾಯಿ ತನ್ನ ಆರೋಗ್ಯ ರಕ್ಷಣೆಗೆ ಮಾಡಿಕೊಂಡ ವಿಧಾನ ಎಂದು ಹೇಳಿದ. ಪ್ರಾಣಿಗಳಿಗೆ ಅನಾರೋಗ್ಯವಾದರೆ ಯಾವ ಸಸ್ಯವನ್ನು, ಮೂಲಿಕೆಯನ್ನು ತಿನ್ನಬೇಕೆಂಬ ಅರಿವಿದೆ. ವಿಷದ ಹಾವಿನ ಜೊತೆಗೆ ಸೆಣಸಾಡುವ ಮುಂಗುಸಿ, ಹಾವಿನಿಂದ ಕಚ್ಚಿಸಿದಾಗಲೊಮ್ಮೆ ಪೊದೆಯಲ್ಲಿ ಹೋಗಿ ಯಾವುದೋ ಎಲೆಯನ್ನೋ, ಬೇರನ್ನೋ ತಿಂದು ಮರಳಿ ಬರುತ್ತದೆ. ವಿಷದ ಪರಿಣಾಮ ಅದರ ಮೇಲೆ ಆಗುವುದೇ ಇಲ್ಲ. ನಿಸರ್ಗದಲ್ಲೇ ಪ್ರತಿಯೊಂದು ಆರೋಗ್ಯ ಸಮಸ್ಯೆಗೆ ಉತ್ತರವಿದೆ. ಹಿಂದೆ ಮನುಷ್ಯ ಪ್ರಾಣಿಗಳು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಎಲೆ ಬೇರುಗಳನ್ನು ತಿನ್ನುವುದನ್ನು ಕಂಡು, ಅವು ಮನುಷ್ಯನಿಗೂ ಪ್ರಯೋಜನವಾಗಬಹುದು ಎಂದು ಪರೀಕ್ಷಿಸಿ, ಪ್ರಯೋಗಿಸಿ ಔಷಧಿಗಳನ್ನು ಸಿದ್ಧಪಡಿಸಿದ. ಅವನೇ ಪ್ರಪಂಚದ ಆದಿವೈದ್ಯನಾದ. ಅವನಿಗೆ ಔಷಧಗಳ ಸಿದ್ಧಿಯಾದದ್ದು ಎಚ್ಚರದ ಗಮನಿಸುವಿಕೆಯಿಂದ ಮತ್ತು ಪ್ರಯೋಗಗಳಿಂದ. ಅವನು ಕೇವಲ ತರ್ಕಮಾಡುತ್ತ ಕುಳಿತುಕೊಳ್ಳಲಿಲ್ಲ. ಯಾಕೆ ಪ್ರಾಣಿಗಳು ಈ ಮೂಲಿಕೆಯನ್ನು ತಿನ್ನುತ್ತವಲ್ಲ? ಮಾಂಸ ತಿನ್ನುವ ಪ್ರಾಣಿಗಳೂ ಸಸ್ಯಗಳನ್ನು ತಿನ್ನುವುದು ಏಕೆ? ಈ ಕುತೂಹಲದ ಪ್ರಶ್ನೆಗಳು ಅವಶ್ಯಕ. ಅವೇ ಮುಂದೆ ಸಂಶೋಧನೆಗೆ ದಾರಿ. ಆದರೆ ಕೇವಲ ತರ್ಕ ಮಾಡುತ್ತ, ಪ್ರಯೋಗ ಮಾಡದಿದ್ದರೆ ಅದು ಒಣ ತರ್ಕವಾಗುತ್ತದೆ. ಅದು ಕಟ್ಟೆಯ ಹರಟೆ. ಜೀವನದಲ್ಲಿ ನಮಗೆ ತತ್ವ ದೊರಕುವುದು ಅನುಭವದಿಂದ, ಒಣ ತರ್ಕದಿಂದಲ್ಲ. ಪ್ರಕೃತಿ ತನ್ನ ನೂರು, ನೂರು ಮುಖಗಳಿಂದ ವಿವಿಧ ರಸಗಳನ್ನು ತಂದು ಸುರಿಯುತ್ತದೆ. ಅವುಗಳನ್ನು ಸಂತೋಷದಿಂದ ಅನುಭವಿಸಿದಾಗ, ಆ ರಸ ನಮ್ಮ ಉಜ್ಜೀವನಕ್ಕೆ ಕಾರಣವಾಗುತ್ತದೆ. ಜೀವನದ ಪ್ರತಿಯೊಂದು ಅನುಭವ, ಸುಖ-ದುಃಖ, ಆಸೆ-ನಿರಾಸೆ, ಏರು-ಇಳಿವುಗಳು, ಮನುಷ್ಯನನ್ನು ಪಕ್ವಾಗಿಸುತ್ತವೆ. ಯಾಕೆ ಹೀಗಾಯಿತು ಎಂದು ಕೇವಲ ತರ್ಕದಲ್ಲೇ ಕಾಲ ಕಳೆಯುವುದಕ್ಕಿಂತ, ಅನುಭವದಿಂದ ತತ್ತ್ವದರ್ಶನ ಪಡೆಯುವುದು ಮೇಲು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಫೆಬ್ರುವರಿ 9, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣ ಚತುರ್ಥಿ ಅಹೋರಾತ್ರ, ನಕ್ಷತ್ರ: ಉತ್ತರಫಲ್ಗುನಿ ಗಂ. 22-27 ಯೋಗ: ಸುಕರ್ಮ ಗಂ. 16-45, ಕರಣ: ಬವ ಗಂ. 19-14, ಮಕರ ಮಾಸದ 26 ನೇ ದಿನ. ರಾಹುಕಾಲ : ಮಧ್ಯಾಹ್ನ 01-30 –03-00

ಸೂರ್ಯೋದಯ : 06-59 ಸೂರ್ಯಾಸ್ತ : 06-30

ಮುಸ್ಲಿಂ ದಿನಾಂಕ : 17 ರಜಬ್

ದಿನ ವಿಶೇಷ : ಸಂಕಷ್ಟಹರ ಚತುರ್ಥಿ (ಚಂದ್ರೋದಯ ರಾತ್ರಿ 09-28)

ಅದೃಷ್ಟ ಸಂಖ್ಯೆ : 1, 2

ಮೇಷ: ವೃತ್ತಿಯಲ್ಲಿ ಉನ್ನತ ಅಧಿಕಾರಿಗಳಿಗೆ ಸಲಹೆ ನೀಡುವ ಬಗ್ಗೆ ಹಿಂಜರಿಕೆ ಬೇಡ. ಕಫ ಪ್ರಕೋಪದಿಂದ ದೈಹಿಕವಾಗಿ ಹಲವು ಸಮಸ್ಯೆಗಳು ಕಾಡುವ ಸಾಧ್ಯತೆ ಇದೆ.

ವೃಷಭ: ವಿದೇಶಿ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಲಭಿಸುವುದು. ಆಸ್ಪತ್ರೆ ಸಿಬ್ಬಂದಿಗೆ ಸರ್ಕಾರದಿಂದ ಹೆಚ್ಚಿನ ಅನುಕೂಲ ಲಭಿಸಬಹುದು. ಸಣ್ಣಮಟ್ಟದ ಗುತ್ತಿಗೆದಾರರಿಗೆ ಸರ್ಕಾರಿ ಕಾಮಗಾರಿಗಳು ದೊರೆಯುವ ಸಂಭವವಿದೆ.

ಮಿಥುನ: ವೃತ್ತಿಯಲ್ಲಿ ಅಭಿಪ್ರಾಯಗಳು ಬೇರೆಯವರ ಆಲೋಚನೆಗೆ ಹೊಂದಿಕೊಳ್ಳುವುದರಿಂದ ಪರಸ್ಪರ ಮಿತ್ರತ್ವ ಅಭಿವೃದ್ಧಿಯಾಗಲಿದೆ. ಆಫೀಸಿನಲ್ಲಿ ಧನಾತ್ಮಕ ನಿರ್ಣಯಗಳನ್ನು ತೆಗೆದುಕೊಳ್ಳಲು ಉತ್ತಮ ಸಮಯ.

ಕರ್ಕಾಟಕ: ವ್ಯಾಪಾರಸ್ಥರಿಗೆ ಇಂದು ಸಾಧಾರಣವಾದ ದಿನ. ಆಸೆ ಆಕಾಂಕ್ಷೆಗಳಿಗೆ ಸಣ್ಣ-ಪುಟ್ಟ ಅಡ್ಡಿ ಆತಂಕಗಳು ಎದುರಾಗಬಹುದು. ಸಾಮರ್ಥ್ಯವು ಉತ್ತಮ ಯೋಜನೆಗೆ ಬಳಕೆಯಾಗುವಂತ ನಡೆ ಇರಲಿ.

ಸಿಂಹ: ವಾಣಿಜ್ಯ ಸಂಸ್ಥೆಯೊಂದರಲ್ಲಿ ಕೆಲಸ ಕೊಡಿಸಲು ಅಣ್ಣನ ಸಹಾಯ ಪಡೆಯುವುದರಿಂದ ಯಶಸ್ವಿ ಯಾಗುವಿರಿ. ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ಬಂದಿದೆ. ಇದರಿಂದ ಸುಲಭವಾಗಿ ಕೆಲಸ ಪೂರೈಸುವಿರಿ.

ಕನ್ಯಾ: ವಿವಾಹದ ಅಥವಾ ದಾಂಪತ್ಯದ ವಿಚಾರದಲ್ಲಿ ಅಂತಿಮವಾಗಿ ತೀರ್ಮಾನಕ್ಕೆ ಬರುವುದು ಉತ್ತಮವೆಂದು ಕಾಣುತ್ತದೆ. ತಂಗಿಗಾಗಿ ಖರ್ಚು ಮಾಡಬೇಕಾದ ಸಂದರ್ಭ ಬರುವುದು. ಮೋಸ ಹೋಗುವ ಸಾಧ್ಯತೆಯಿದೆ.

ತುಲಾ: ಉತ್ತಮವಾದ ಪೂರ್ವತಯಾರಿಯೊಂದಿಗೆ ಈಗಿರುವ ಎಲ್ಲಾ ಸಮಸ್ಯೆಯನ್ನು ಬಗೆಹರಿಸಿಕೊಂಡು ಮುಂದಿನ ಹೆಜ್ಜೆ ಹಾಕುವುದು ಸರಿಯಾದ ತೀರ್ಮಾನವಾಗಿರುತ್ತದೆ. ಇಂದು ಗೃಹಿಣಿಗೆ ಸಂತೋಷದ ಸಮಯ.

ವೃಶ್ಚಿಕ: ಚರ್ಮದ ವಸ್ತುಗಳ ಮಾರಾಟಗಾರರಿಗೆ ವಿದೇಶದಿಂದ ಹೆಚ್ಚಿನ ಕೆಲಸದ ಅವಕಾಶಗಳು ಅಥವಾ ರಫ್ತು ವ್ಯವಹಾರದಲ್ಲಿ ಅತ್ಯಂತ ಲಾಭ ಬರುವುವು. ಹೊಸ ಜನರ ಸಂಪರ್ಕ ಸ್ನೇಹಗಳು ನೂತನ ಸಂಬಂಧಗಳಿಗೆ ದಾರಿ.

ಧನು: ರಾಜಕೀಯ ವ್ಯಕ್ತಿಗಳು ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹೆಚ್ಚಿನ ಅಧಿಕಾರವನ್ನು ಪಡೆದುಕೊಳ್ಳುವಲ್ಲಿ ಸಫಲರಾಗುವಿರಿ. ಆದರೆ, ಶತ್ರುಗಳ, ವಿರೋಧಿಗಳ ಮಧ್ಯದಲ್ಲೇ ವಾಸಸ್ಥಾನವಿದೆವೆಂಬುವುದನ್ನು ಮರೆಯದಿರಿ.

ಮಕರ: ವಾಹನದ ಬಿಡಿಭಾಗಗಳ ಮಾರಾಟ ಮತ್ತು ಸೇವೆಯಲ್ಲಿ ನಿರೀಕ್ಷೆಗೂ ಮೀರಿದ ಆದಾಯ ಪ್ರಾಪ್ತಿ. ಕಲಾವಿದರು ಅದರಲ್ಲೂ ಹೆಚ್ಚಾಗಿ ಮಾತುಗಾರರು ಸಾಮಾಜಿಕ ಜೀವನದಲ್ಲಿ ಹೆಚ್ಚಿನ ಮನ್ನಣೆ ಪಡೆದುಕೊಳ್ಳುವಿರಿ.

ಕುಂಭ: ಅನಿವಾರ್ಯಗಳಿಗೆ ಬಂಧು-ಮಿತ್ರರ ಸಹಕಾರ ದೊರೆಯಲಿದೆ. ತೆರಿಗೆ ಅಧಿಕಾರಿಗಳಿಗೆ ಪ್ರಶಂಸೆಯ ಮಾತುಗಳು ಕೇಳಲು ಸಿಗುವುದು. ಶ್ರೀದೇವಿ ಸ್ತುತಿಯಿಂದ ಮನಸ್ಸಿಗೆ ಹೆಚ್ಚಿನ ಸಂತಸ ಉಂಟಾಗುತ್ತದೆ.

ಮೀನ: ನಾಳೆಯ ಯೋಜನೆಗಳಿಗೆ ಗಮನ ಕೊಡುವುದರಿಂದ ಕೆಲಸ ಪೂರ್ಣಗೊಳಿಸಲು ಸಹಾಯ ಮಾಡಲಿದೆ. ವ್ಯಾಪಾರ ವ್ಯವಹಾರಗಳಿಗೆ ಹೊಸ ತಿರುವು ಮೂಡಲಿದೆ. ಸಮಯ ಪರಿಪಾಲನೆಯ ಬಗ್ಗೆ ಗಮನವಿರಲಿ.

ಪದಬಂಧ 5225

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮರದಲ್ಲಿ ಮಾಡಿದ ಹೆಬ್ಬಾಗಿಲು (4)
3.ಮಗನೊಡನಿರುವ ಪುತ್ರಿ (3)
5.ಅದೇ ತಾನೆ ಲಗ್ನವಾದ ಗಂಡ ಹೆಂಡಿರು (5)
7.ನರಿಯೊಳಗೆ ಉತ್ತಮ ಜಾತಿಯ ಜೇನುತುಪ್ಪ ಸಿಕ್ಕೀತೇ? (3)
9.ರತಿಪತಿಯಿಂದ ಮೂಡಿದ ಆಸೆ (3)
11.ಕದಕ್ಕೆ ಒರಗಿಸಿರುವ ಕೆನ್ನೆ (3)
13.ಸಾಯುವ ಸಮಯವಿದು (5)
15.ಒಳ್ಳೆಯ ದಿನ (3)
16.ಕತ್ತು ಕೊನೆಗಿರಿಸಿ ಮಾಡಿದ ಜೋಡಣೆ (4)

ಮೇಲಿಂದ ಕೆಳಕ್ಕೆ

1.ಓಟನ್ನು ನೀಡುವಿಕೆ (4)
2.ರಸ ಒಸರುವ ನಾಲಿಗೆ (3)
4.ಗರ ಬಡಿದಂತಿರುವ ಪತಿವ್ರತೆ (3)
6.ದಂಡ ನೀಡಿ ಶಿಕ್ಷಿಸುವುದು (3)
8.ತಿರುಳು ಇಲ್ಲಿದೆ (2)
9.ಕಾಣದಂತೆ ಇರುವ ಉದ್ದೇಶ! (3)
10.ಮನದಲ್ಲೇ ಮೂಡಿದ ಗರ್ವ (2)
12.ಬಿಡುವು ಈ ರೀತಿ ಬಂದಿದೆ (4)
13.ಬಿಡದಿ ಹತ್ತಿರವಿರುವ ಪತ್ನಿ (3)
14.ಜನಪದರ ಮಾತಲ್ಲಿನ ಸಿರಿದೇವತೆ (3)



5224ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವರಮಾನ 3.ವನ್ಯಮೃಗ 5.ದುರಾಸೆ 6.ರವಾನೆ 8.ತವರ 10.ಮಂಕರಿ 11.ಸರಕು 13.ಕಳಸ 15.ಸಹೋದರಿ 16.ಪರದಾಟ

ಮೇಲಿಂದ ಕೆಳಕ್ಕೆ: 1.ವನಚರ 2.ನಗದು 3.ವರಸೆ 4.ಗಡಿಯಾರ 7.ವಾದಕ 9.ವಕ್ತಾರ 10.ಮಂದಹಾಸ 12.ಕುಡಿನೋಟ 13.ಕಮರಿ 14.ಸಲ್ಲಾಪ

ಸುಡೊಕು 5611

3		2	1		4		6	7
							3	2
7			6		2	5		
2					3			5
				4		2	9	
			9					1
	4	1	2				8	
9				7	8		5	
	6			5		4		9

5610 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಐದನೇ ವರ್ಷದ ಪುಣ್ಯಸ್ಮರಣೆ

09-02-2023
ನಮ್ಮೆಲ್ಲರಿಗೂ ಆದರ್ಶ ಹಾಗೂ ಸ್ಪೂರ್ತಿಯ ಚಿಲುಮೆಯಾಗಿದ್ದ ಪ್ರೀತಿಯ
ದಿ. ಎಂ. ಪುಟ್ಟಪ್ಪನವರ
ಐದನೇ ವರ್ಷದ ಪುಣ್ಯಸ್ಮರಣೆ.
ನಿಮ್ಮ ಆಶೀರ್ವಾದವೇ ನಮಗೆ ಶ್ರೀರಕ್ಷೆ.
ಇಂತಿ: ಡಾ. ಗೋಪಾಲಕೃಷ್ಣ ಪಿ. & ಪಿ. ಕುಮಾರಸ್ವಾಮಿ ಮತ್ತು ಕುಟುಂಬದವರು
ಮೊ. 9980028888, 9845173106

5ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಎಂ.ಸಿ. ಗೌರಮ್ಮನವರು
(ಜನನ: 07-12-1956 – ಮರಣ: 09-02-2018)
ನಿಮ್ಮ ನೆನಪು ಸದಾ ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ:
ಮಗ: ಉದಯ್ ಎನ್, ಸರಳಶ್ರೀ ಎನ್,
ಮಗಳು: ಉಷಾ ಎನ್, ರಮೇಶ್ ಬಾಬು ಆರ್.
ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ಭಾವಪೂರ್ಣ ಶ್ರದ್ಧಾಂಜಲಿ

ಅತೀ ವಂದನೀಯ ಡಾ. ಇಗ್ನೇಷಿಯಸ್ ಪೌಲ್ ಪಿಂಟೋ
ಬೆಂಗಳೂರಿನ ನಿವೃತ್ತ ಮಹಾಧರ್ಮಾಧ್ಯಕ್ಷರು
ಜನನ : 18.05.1925
ಯಾಜಕ ದೀಕ್ಷೆ : 24.08.1952
ಧರ್ಮಾಧ್ಯಕ್ಷ ದೀಕ್ಷೆ : 31.01.1989
ಮರಣ : 08.02.2023
ದಿನಾಂಕ: 08.02.2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಪಾರ್ಥಿವ ಶರೀರವನ್ನು 10.02.2023 ಶುಕ್ರವಾರ ಬೆಳಿಗ್ಗೆ 8 ರಿಂದ 9.45 ಗಂಟೆಯವರೆಗೆ ಬೆಂಗಳೂರಿನ ಸಂತ ಫ್ರಾನ್ಸಿಸ್ ಕ್ಸೇವಿಯರ್ ಪ್ರಧಾನಾಲಯ, ಕ್ಲೀವ್‌ಲ್ಯಾಂಡ್ ಟೌನ್ ನಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ತದನಂತರ ಬೆಳಿಗ್ಗೆ 10.00 ಗಂಟೆಗೆ ಬಲಿಪೂಜೆಯನ್ನು ನೆರವೇರಿಸಿ, ಅಂತಿಮ ಸಂಸ್ಕಾರವನ್ನು ಮಾಡಲಾಗುವುದು.
ದಯಾಮಯ ದೇವರು ದಿವಂಗತರಿಗೆ ಚಿರಶಾಂತಿಯನ್ನು ದಯಪಾಲಿಸಲಿ!
ಬೆಂಗಳೂರು ಮಹಾಧರ್ಮಕ್ಷೇತ್ರ

For Online Classified Booking
Name Change / Education / Property / Job / Services & many more
Log on to :
dhclassifieds.com

ಎಂಎಚ್‌17 ವಿಮಾನ ಪತನ: ತನಿಖೆ ಸ್ಥಗಿತಕ್ಕೆ ನಿರ್ಧಾರ

ದಿ ಹೇಗ್ (ಎಎಫ್‌ಪಿ): ಉಕ್ರೇನ್‌ನಲ್ಲಿ ಕ್ಷಿಪಣಿ ದಾಳಿಯಿಂದಾಗಿ ಮಲೇಷ್ಯಾ ಏರ್‌ಲೈನ್ಸ್‌ನ ಎಂಎಚ್‌17 ವಿಮಾನ ಪತನಗೊಂಡಿದ್ದ ಘಟನೆ ಕುರಿತ ತನಿಖೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಅಂತರರಾಷ್ಟ್ರೀಯ ತನಿಖಾಧಿಕಾರಿಗಳ ತಂಡ ಬುಧವಾರ ಹೇಳಿದೆ.

‘ಈ ಪ್ರಕರಣದಲ್ಲಿ ಶಂಕಿತರ ವಿರುದ್ಧ ಕಾನೂನುಕ್ರಮ ಕೈಗೊಳ್ಳಲು ಅಗತ್ಯದಷ್ಟು ಸಾಕ್ಷ್ಯಗಳು ಲಭ್ಯವಾಗದ ಕಾರಣ ತನಿಖೆಯನ್ನು ಸ್ಥಗಿತಗೊಳಿಸಲು ತೀರ್ಮಾನಿಸಲಾಗಿದೆ’ ಎಂದು ತಂಡ ತಿಳಿಸಿದೆ.

2014ರಲ್ಲಿ, ಆಮ್‌ಸ್ಟರ್‌ಡ್ಯಾಮ್‌ನಿಂದ ಕ್ವಾಲಾಲಂಪುರಕ್ಕೆ ಹೊರಟಿದ್ದ ಎಂಎಚ್ 17 ವಿಮಾನವನ್ನು ಹೊಡೆದುರುಳಿಸಲಾಗಿತ್ತು. ವಿಮಾನದಲ್ಲಿದ್ದ ಎಲ್ಲಾ 298 ಜನರು ಸಾವನ್ನಪ್ಪಿದ್ದರು.

190 ಹಿಂದೂಗಳ ಭಾರತ ಪ್ರಯಾಣಕ್ಕೆ ಪಾಕ್ ತಡೆ

ಇಸ್ಲಾಮಾಬಾದ್ (ಪಿಟಿಐ): ಸಿಂಧ್ ಪ್ರಾಂತ್ಯದ 190 ಹಿಂದೂಗಳು ಭಾರತಕ್ಕೆ ಪ್ರಯಾಣಿಸುವುದಕ್ಕೆ ಪಾಕಿಸ್ತಾನದ ಅಧಿಕಾರಿಗಳು ತಡೆಯೊಡ್ಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

‘ನೆರೆಯ ದೇಶಕ್ಕೆ ಭೇಟಿ ನೀಡುವುದರ ಉದ್ದೇಶ ಕುರಿತು ಸಮರ್ಪಕ ಉತ್ತರ ನೀಡಲು ಈ ಹಿಂದೂ ಕುಟುಂಬಗಳು ವಿಫಲವಾಗಿರುವ ಹಿನ್ನೆಲೆಯಲ್ಲಿ ವಲಸೆ ಅಧಿಕಾರಿಗಳು ಅವರ ಪ್ರಯಾಣಕ್ಕೆ ತಡೆಯೊಡ್ಡುವಂತಹ ಕ್ರಮ ಕೈಗೊಂಡಿದ್ದಾರೆ’ ಎಂದು ‘ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್’ ವರದಿ ಮಾಡಿದೆ.

ಮಕ್ಕಳು, ಮಹಿಳೆಯರು ಸೇರಿದಂತೆ ಹಿಂದೂ ಕುಟುಂಬಗಳು ವಾಘಾ ಗಡಿ ತಲುಪಿದ್ದವು. ಭಾರತದಲ್ಲಿನ ಧಾರ್ಮಿಕ ಸ್ಥಳಗಳಿಗೆ ಯಾತ್ರೆ ಕೈಗೊಳ್ಳುವುದಕ್ಕೆ ಸಂಬಂಧಿಸಿದ ವೀಸಾ ಹೊಂದಿದ್ದವು ಎಂದೂ ಪತ್ರಿಕೆ ವರದಿ ಮಾಡಿದೆ.

ಭೂಕಂಪದಿಂದ ಸಾವು: ಪುತ್ರಿಯ ಕೈಬಿಡಲು ಒಪ್ಪದ ತಂದೆ

ಟರ್ಕಿ: ಮಡುಗಟ್ಟಿದ ಸಂತ್ರಸ್ತರ ಸಂಕಟ

ಅಂಕಾರಾ(ಟರ್ಕಿ)/ಪ್ಯಾರಿಸ್ (ಎಪಿ/ಎಎಫ್‌ಪಿ): ಅವಶೇಷಗಳಡಿ ಸಿಲುಕಿ ಅರೆ ಜೀವವಾಗಿ ನರಳಾಡುತ್ತಿರುವ ನತದೃಷ್ಟರು, ನವಜಾತ ಶಿಶುಗಳು, ಮಕ್ಕಳನ್ನು ರಕ್ಷಿಸಲು ರಕ್ಷಣಾ ಸಿಬ್ಬಂದಿಯ ಹರಸಾಹಸ, ಮೃತ ಮಗಳ ಕೈ ಹಿಡಿದು ‘ಕಲ್ಲಾಗಿ’ ಕುಳಿತ ದುಃಖತಪ್ತ ತಂದೆ....... ಇಂತಹ ದೃಶ್ಯಗಳು ಒಂದೇ, ಎರಡೇ... ಭೂಕಂಪದಿಂದ ತತ್ತರಿಸಿರುವ ಟರ್ಕಿ ಮತ್ತು ಸಿರಿಯಾದಲ್ಲಿ ಹೆಜ್ಜೆ ಹೆಜ್ಜೆಗೂ ಹೃದಯವಿದ್ರಾವಕ ದೃಶ್ಯಗಳು ಗೋಚರಿಸುತ್ತಿವೆ.

ಟರ್ಕಿಯ ಕಹ್ರಮನ್ಮರಸ್ ನಗರದಲ್ಲಿ ನಿವಾಸಿ ಮೆಸುಟ್ ಹ್ಯಾನ್ಸರ್ ಎಂಬಾತ, ಕಾಂಕ್ರೀಟ್ ಚಪ್ಪಡಿಗಳ ಅಡಿ ಸಿಲುಕಿ, ಜೀವಬಿಟ್ಟ ತನ್ನ 15 ವರ್ಷದ ಮಗಳು ಇರ್ಮಾಕ್ ಕೈ ಹಿಡಿದುಕೊಂಡು, ಮೈಕೊರೆವ ಚಳಿಯಲ್ಲೇ ಕದಲದೇ ಕುಳಿತಿದ್ದಾರೆ. ಯಾರೇ ಬಂದು, ಎಷ್ಟೇ ಮನವೊಲಿಸಿದರೂ ಮೆಸುಟ್ ತಮ್ಮ ಪುತ್ರಿಯ ಕೈಬಿಟ್ಟು ಮೇಲೇಳಲು ಒಪ್ಪುತ್ತಿಲ್ಲ.

ಟರ್ಕಿಯ ಅಂಟಾಕ್ಯಾದಲ್ಲಿ ಭೂಕಂಪ ಸಂತ್ರಸ್ತರಿಗೆ ಬುಧವಾರ ಸ್ವಯಂಸೇವಕರು ಪರಿಹಾರ ಸಾಮಗ್ರಿಗಳನ್ನು ನೀಡಿದರು –ಎಪಿ/ಪಿಟಿಐ ಚಿತ್ರ

ಇದೇ ನಗರದ ಮತ್ತೊಂದು ಕಡೆ ಅಲಿ ಸಗಿರೊಗ್ಲು ಎಂಬಾತ ‘ಸುತ್ತಲೂ ಒಮ್ಮೆ ನೋಡಿ. ಇಲ್ಲಿ ನಮ್ಮ ರಕ್ಷಣೆಗೂ ಒಬ್ಬನೇ ಒಬ್ಬ ಅಧಿಕಾರಿ, ಸಿಬ್ಬಂದಿ ಇಲ್ಲ. ನಮ್ಮ ಮಕ್ಕಳು ರಕ್ತ ಹೆಪ್ಪುಗಟ್ಟುವ ಚಳಿಯಲ್ಲಿ ತತ್ತರಿಸುತ್ತಿದ್ದಾರೆ. ಅವಶೇಷಗಳಡಿ ಸಿಲುಕಿರುವ ನನ್ನ ಸಹೋದರ, ಸೋದರಳಿಯನನ್ನು ಬದುಕಿಸಿಕೊಳ್ಳಲು ಸಾಧ್ಯವಿಲ್ಲದಂತಾಗಿದೆ. ನಮಗೆ ದೇವರೇ ದಿಕ್ಕು’ ಎಂದು ಅಲ್ಲಿನ ಕರುಣಾಜನಕ ಸ್ಥಿತಿಯನ್ನು ತೆರೆದಿಟ್ಟರು.

ಬಾಲಕನ ದೇಹದ ಕೆಳಭಾಗ ಕಾಂಕ್ರೀಟ್ ಮತ್ತು ಚಪ್ಪಡಿಗಳ ಅಡಿ ಸಿಲುಕಿತ್ತು. ಎಚ್ಚರಿಕೆಯಿಂದ ಅವಶೇಷ ತೆರವುಗೊಳಿಸಿ, ಬಾಲಕನನ್ನು ರಕ್ಷಿಸಿದರು. ಭೂಕಂಪದಲ್ಲಿ ಮನೆಗಳನ್ನು ಕಳೆದುಕೊಂಡವರು, ಹಿಮಮಳೆ ಮತ್ತು ಚಳಿಯಿಂದ ಪಾರಾಗಲು ಶಾಲೆಗಳು, ಮಸೀದಿಗಳು ಮತ್ತು ಬಸ್ ನಿಲ್ದಾಣಗಳನ್ನು ಆಶ್ರಯಿಸಿದ್ದಾರೆ.

ಶೇ 90ಕ್ಕೂ ಹೆಚ್ಚು ಸಂತ್ರಸ್ತರ ರಕ್ಷಣೆ: ಟರ್ಕಿ ಮತ್ತು ಸಿರಿಯಾದಲ್ಲಿ ಭೂಕಂಪದ ಅವಶೇಷಗಳಲ್ಲಿ ಸಿಲುಕಿದವರ ರಕ್ಷಣೆಯ ನಿರ್ಣಾಯಕ 72 ಗಂಟೆಗಳ ಅವಧಿ ಮುಗಿದಿದೆ ಎಂದು ವಿಪತ್ತು ಸ್ಪಂದನೆಯ ರಕ್ಷಣಾ ತಜ್ಞರು ಬುಧವಾರ ತಿಳಿಸಿದ್ದಾರೆ.

ಮೊದಲ ಮೂರು ದಿನಗಳಲ್ಲಿ ಭೂಕಂಪದಿಂದ ಬದುಕುಳಿದವರಲ್ಲಿ ಶೇ 90ಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ ಎಂದು ಲಂಡನ್‌ನ ಯೂನಿವರ್ಸಿಟಿ ಕಾಲೇಜಿನಲ್ಲಿ ವಿಪತ್ತು ಮತ್ತು ಆರೋಗ್ಯದ ಪ್ರಾಧ್ಯಾಪಕರಾಗಿರುವ ಇಲಾನ್ ಕೆಲ್ಮನ್ ಹೇಳಿದ್ದಾರೆ.

ಭೂಕಂಪ: 11,200ಕ್ಕೂ ಅಧಿಕ ಸಾವು

ಒಂದನೇ ಪುಟದಿಂದ...

ಸೋಮವಾರ ನಸುಕಿನಲ್ಲಿ ಕಂಪನ ಸಂಭವಿಸಿತ್ತು. ರಿಕ್ಟರ್ ಮಾಪಕದಲ್ಲಿ 7.8 ತೀವ್ರತೆ ಇತ್ತು. ಇದರಿಂದ ಟರ್ಕಿಯಲ್ಲಿ 8,574 ಜನರು ಮತ್ತು ಸಿರಿಯಾದಲ್ಲಿ 2,662 ಜನರು ಈವರೆಗೆ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಂಪನದ ಕೇಂದ್ರಬಿಂದು ವಿದ್ದ ಪಟ್ಟಣ ಪರ್ಝಾರಿಕ್ ಮತ್ತು ತೀವ್ರ ಹಾನಿಗೀಡಾದ ಹತಾಯ್‌ಗೆ ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್ ಬುಧವಾರ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು. ಮೊದಲ ದಿನದ ರಕ್ಷಣಾ ಕಾರ್ಯದಲ್ಲಿ ಆದ ನ್ಯೂನತೆಗಳನ್ನು ಒಪ್ಪಿಕೊಂಡ ಅವರು, ವಿಪತ್ತು ಬಾಧಿತ ಪ್ರದೇಶಕ್ಕೆ ಹೆಚ್ಚಿನ ನೆರವು ಕಲ್ಪಿಸಲು ಸ್ಥಳದಲ್ಲೇ ಆದೇಶಿಸಿದರು. ಜತೆಗೆ, ಯಾವುದೇ ಸಂತ್ರಸ್ತ ಬೀದಿಪಾಲಾಗಲು ಅಸ್ಪದ ನೀಡುವುದಿಲ್ಲವೆಂದೂ ವಾಗ್ದಾನ ಮಾಡಿದರು.

ಶೋಧ ಮತ್ತು ರಕ್ಷಣಾ ಕಾರ್ಯದಲ್ಲಿ ಸುಮಾರು 60 ಸಾವಿರ ಸಿಬ್ಬಂದಿ ತೊಡಗಿದ್ದಾರೆ. ಆದರೆ, ಈ ವಿನಾಶದಲ್ಲಿ ಸಿಲುಕಿರುವ ಅನೇಕ ಸಂತ್ರಸ್ತರು ಜೀವ ಬಿಗಿಹಿಡಿದು ನೆರವಿಗಾಗಿ ಇನ್ನೂ ಕಾಯುತ್ತಿದ್ದಾರೆ. ಅವಶೇಷಗಳಡಿ ಸಿಲುಕಿರುವವರ ತುರ್ತು ರಕ್ಷಣೆ, ಗಾಯಾಳುಗಳಿಗೆ ತಕ್ಷಣದ ನೆರವು ಸಿಗುತ್ತಿಲ್ಲವೆನ್ನುವ ಆಕ್ರೋಶ ಮತ್ತು ಹತಾಶೆ ಸಂತ್ರಸ್ತರಿಂದ ವ್ಯಕ್ತವಾಗುತ್ತಿರುವುದೂ ವರದಿಯಾಗಿದೆ.

ಏರುತ್ತಲೇ ಇದೆ ಸಾವು–ನೋವು: ಟರ್ಕಿಯಲ್ಲಿ ಮಂಗಳವಾರದವರೆಗೆ ಸಾವಿನ ಸಂಖ್ಯೆ 7,108 ಇತ್ತು. ಇದು ಬುಧವಾರ 9,638ಕ್ಕೆ ಏರಿಕೆಯಾಯಿತು. 40,910 ಜನರು ಗಾಯಗೊಂಡಿದ್ದಾರೆ ಎಂದು ವಿಪತ್ತು ನಿರ್ವಹಣಾ ಏಜೆನ್ಸಿ ಹೇಳಿದೆ.

ಜೋಶಿಮಠ: ಭೂಕಂಪ ಸಾಧ್ಯತೆ

ಒಂದನೇ ಪುಟದಿಂದ...

ಉತ್ತರಾಖಂಡವನ್ನು ಭೂಕಂಪ ಸಂಭವಿಸಬಹುದಾದ ಪ್ರದೇಶ ಎಂದೇ ಗುರುತಿಸಲಾಗುತ್ತದೆ. ಟರ್ಕಿ ಮತ್ತು ಸಿರಿಯಾದಲ್ಲಿ ಭಾರಿ ಜೀವಹಾನಿಗೆ ಕಾರಣವಾಗಿರುವ ಭೂಕಂಪನ ದುರಂತದ ಹಿನ್ನೆಲೆಯಲ್ಲಿ ಈ ಎಚ್ಚರಿಕೆಯು ಮಹತ್ವ ಪಡೆದಿದೆ.

‘ಹಿಮಾಚಲ ಪ್ರದೇಶ ಮತ್ತು ನೇಪಾಳ ನಡುವಿನ ಭೂಭಾಗದಲ್ಲಿ ಭಾರಿ ಭೂಕಂಪನದ ಸಾಧ್ಯತೆ ಇದೆ. ಈ ಪ್ರದೇಶದಲ್ಲಿಯೇ ಉತ್ತರಾಖಂಡವೂ ಇದೆ’ ಎಂದು ಎನ್‌ಜಿಆರ್‌ಐನ ಭೂಕಂಪನವಿಜ್ಞಾನ ವಿಭಾಗದ ಮುಖ್ಯ ವಿಜ್ಞಾನಿ ಡಾ.ಪೂರ್ಣಚಂದ್ರ ರಾವ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ಉತ್ತರಾಖಂಡದಲ್ಲಿ ಭಾರಿ ತೀವ್ರತೆಯ ಭೂಕಂಪನದ ಸಾಧ್ಯತೆಯನ್ನು ಹಲವು ಅಧ್ಯಯನಗಳು, ವಿಶ್ಲೇಷಣೆಗಳು ಹೇಳುತ್ತವೆ. ಭೂಪದರಗಳ ಚಲನೆಯ ಪರಿಣಾಮ ಹಿಮಾಲಯದಲ್ಲಿ ಭಾರಿ ಒತ್ತಡ ಸೃಷ್ಟಿಯಾಗಿದೆ. ಈ ಒತ್ತಡ ಬಿಡುಗಡೆಯಾದಾಗ ಕಂಪನದ ಅನುಭವವಾಗುತ್ತದೆ. ಈ ಪ್ರಕ್ರಿಯೆಯು ಯಾವಾಗ ಸಂಭವಿಸಲಿದೆ ಎಂದು ಅಂದಾಜಿಸಲಾಗದು. ಆದರೆ, ಭೂಕಂಪನ ರೂಪದಲ್ಲಿ ಒತ್ತಡವು ಬಿಡುಗಡೆಗೊಳ್ಳುವುದು ಸನ್ನಿಹಿತ’ ಎಂದು ಹೇಳಿದ್ದಾರೆ.

‘ಭೂಪದರಗಳ ಚಲನೆಯನ್ನು ಅಳೆಯುವ ಸಲುವಾಗಿ ಜೋಶಿಮಠದಲ್ಲಿ ಕಂಪನ ತೀವ್ರತೆ ಹಾಗೂ ಭೂಮಿ ಒಳಗಿನಿಂದ ಹೊಮ್ಮುವ ಶಬ್ದಗಳನ್ನು ದಾಖಲಿಸುವ ಸಾಧನಗಳನ್ನು ಅಳವಡಿಸಲಾಗಿದೆ. ಭೂಕಂಪನಕ್ಕೆ ಸಂಬಂಧಿಸಿದ ಸಂಕೇತಗಳಲ್ಲಿ ಏರಿಳಿತ ಕಂಡುಬಂದಿದ್ದು, ಈ ಬಗ್ಗೆ ಇನ್ನಷ್ಟು ವಿಶ್ಲೇಷಣೆಯ ಅಗತ್ಯವಿದೆ’ ಎಂದಿದ್ದಾರೆ.

ಈ ಹಿಂದೆ 1934ರಲ್ಲಿ ಬಿಹಾರ–ನೇಪಾಳ ಗಡಿಯಲ್ಲಿ ಹಾಗೂ 1905ರಲ್ಲಿ ಹಿಮಾಚಲ ಪ್ರದೇಶದ ಕಾಂಗ್ರಾದಲ್ಲಿ ತೀವ್ರ ಭೂಕಂಪನ ಸಂಭವಿಸಿತ್ತು. ರಿಕ್ಟರ್ ಮಾಪಕದಲ್ಲಿ ಇದರ ತೀವ್ರತೆ 8ರಷ್ಟು ದಾಖಲಾಗಿತ್ತು. ಆಗ, ಉತ್ತರಾಖಂಡದಲ್ಲಿ ಭಾರಿ ಪ್ರಮಾಣದ ಹಾನಿ ಸಂಭವಿಸಿರಲಿಲ್ಲ.

ಕನ್ನಡಿಗರ ನೆರವಿಗೆ ನೋಡಲ್ ಅಧಿಕಾರಿ

ಶಿವಮೊಗ್ಗ: ಟರ್ಕಿ ಮತ್ತು ಸಿರಿಯಾಗಳಲ್ಲಿ ಭೂಕಂಪನದ ಅವಘಡದಲ್ಲಿ ಸಿಲುಕಿರುವ ಕನ್ನಡಿಗರಿಗೆ ನೆರವಾಗಲು ನೋಡಲ್ ಅಧಿಕಾರಿಯಾಗಿ ದೆಹಲಿ ಕರ್ನಾಟಕ ಭವನದ ಆಯುಕ್ತರನ್ನು ಸರ್ಕಾರ ನೇಮಕ ಮಾಡಿದೆ.

‘ಭೂಕಂಪದಲ್ಲಿ ಸಂತ್ರಸ್ತರಾದವರ ಕನ್ನಡಿಗರ ಮಾಹಿತಿ ದೊರೆತಿಲ್ಲ. ಆಯಾ ರಾಯಭಾರ ಕಚೇರಿಗಳಿಂದ ವಿವರ ಸಂಗ್ರಹಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಾಟ್ಸ್‌ಆ್ಯಪ್‌ನಲ್ಲಿ ಸಿಗಲಿವೆ ಎಲ್‌ಐಸಿ ಸೇವೆಗಳು

ಒಂದನೇ ಪುಟದಿಂದ...

ಚಾಟ್‌ಬಾಟ್ ಮೂಲಕ ಸಿಗುವ ಪ್ರಮುಖ ಸೇವೆಗಳು:

1. ಸಾಲಕ್ಕೆ ಅರ್ಹತೆ ಕುರಿತ ಮಾಹಿತಿ
2. ಮರುಪಾವತಿಸಬೇಕಿರುವ ಮೊತ್ತದ ಅಂದಾಜು
3. ವಿಮೆ ಯೋಜನೆಯ ಸ್ಥಿತಿ
4. ಬೋನಸ್ ಕುರಿತು ಮಾಹಿತಿ
5. ಯುಲಿಪ್-ಯುನಿಟ್‌ಗಳ ಲೆಕ್ಕ
6. ಎಲ್‌ಐಸಿ ಸೇವೆಗಳ ಲಿಂಕ್
7. ಪ್ರೀಮಿಯಂ ಪಾವತಿಗೆ ಕಡೆಯ ದಿನಾಂಕದ ಮಾಹಿತಿ
8. ಸಾಲದ ಬಡ್ಡಿ ಪಾವತಿಗೆ ಕಡೆಯ ದಿನಾಂಕದ ಸೂಚನೆ
9. ಪಾವತಿಸಿರುವ ಪ್ರೀಮಿಯಂಗೆ ಪ್ರಮಾಣಪತ್ರ

ಈ ಸೇವೆಗಳನ್ನು ಪಡೆದುಕೊಳ್ಳಲು ಪಾಲಿಸಿದಾರರು ಮೊದಲಿಗೆ www.licindia.in ಜಾಲತಾಣದ ಮೂಲಕ ನೋಂದಾಯಿಸಿಕೊಳ್ಳಬೇಕು. ಬಳಿಕ ನೋಂದಣಿ ಆಗಿರುವ ಮೊಬೈಲ್ ನಂಬರ್‌ನಿಂದ +91 89768 62090 ಸಂಖ್ಯೆಗೆ ವಾಟ್ಸ್‌ಆ್ಯಪ್ ಮೂಲಕ ‘Hi’ ಎಂದು ಮೆಸೇಜ್ ಕಳುಹಿಸಬೇಕು. ಪಾಲಿಸಿದಾರರು ವಾಟ್ಸ್‌ಆ್ಯಪ್ ಮೂಲಕವೇ ಸುಲಭವಾಗಿ ಹಾಗೂ ಸುರಕ್ಷಿತವಾಗಿ ಮಾಹಿತಿ ಪಡೆದುಕೊಳ್ಳಬಹುದು ಎಂದು ಎಲ್‌ಐಸಿ ತಿಳಿಸಿದೆ.

ವಿಮೆಗೆ ಸಂಬಂಧಿಸಿದ ಅಗತ್ಯವಾದ ಹಣಕಾಸು ಸೇವೆಗಳನ್ನು ನೀಡುವ ಉದ್ದೇಶದಿಂದ ಎಲ್‌ಐಸಿಯಂತಹ ಪ್ರತಿಷ್ಠಿತ ಸಂಸ್ಥೆಯೊಂದಿಗೆ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ ಎಂದು ವಾಟ್ಸ್‌ಆ್ಯಪ್ ಇಂಡಿಯಾದ ಬಿಸಿನೆಸ್ ಮೆಸೆಜಿಂಗ್ ವಿಭಾಗದ ನಿರ್ದೇಶಕ ರವಿ ಗರ್ಗ್ ಹೇಳಿದ್ದಾರೆ.

‘ಭಾರತ ಸೇರಿ ಹಲವು ದೇಶಗಳ ಮೇಲೂ ಚೀನಾ ಕಣ್ಗಾವಲು ಬಲೂನ್‌ಗಳ ಹಾರಾಟ’

ವಾಷಿಂಗ್ಟನ್ (ಪಿಟಿಐ): ಭಾರತ ಹಾಗೂ ಜಪಾನ್ ಸೇರಿದಂತೆ ಹಲವು ದೇಶಗಳ ವಾಯುಪ್ರದೇಶಗಳಲ್ಲಿ ಚೀನಾ ತನ್ನ ಗೂಢಚಾರಿಕೆ ಬಲೂನ್‌ಗಳ ಹಾರಾಟ ನಡೆಸಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ರಕ್ಷಣಾ ಹಾಗೂ ಗುಪ್ತಚರ ಇಲಾಖೆಗಳ ಕೆಲ ಅಧಿಕಾರಿಗಳು ಸಂದರ್ಶನ ವೇಳೆ ನೀಡಿರುವ ಮಾಹಿತಿಯನ್ನು ಉಲ್ಲೇಖಿಸಿ ವಾಷಿಂಗ್ಟನ್ ಪೋಸ್ಟ್ ಪತ್ರಿಕೆ ವರದಿ ಮಾಡಿದೆ.

ಚೀನಾದ ದಕ್ಷಿಣ ಕರಾವಳಿಗೆ ಹೊಂದಿಕೊಂಡಿರುವ ಹೆನಾನ್ ಪ್ರಾಂತ್ಯದ ಮೂಲಕ ಈ ಕಣ್ಗಾವಲು ಬಲೂನ್‌ಗಳ ಕಾರ್ಯಾಚರಣೆ ನಡೆಸಲಾಗಿದೆ. ಜಪಾನ್, ಭಾರತ, ವಿಯೆಟ್ನಾಂ, ತೈವಾನ್ ಹಾಗೂ ಫಿಲಿಪ್ಪೀನ್ಸ್ ದೇಶಗಳ ಮಿಲಿಟರಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲು ಚೀನಾ ಇವುಗಳನ್ನು ಬಳಸಿದೆ ಎಂದೂ ಪತ್ರಿಕೆ ವರದಿ ಮಾಡಿದೆ.

‘ಪೀಪಲ್ಸ್ ಲಿಬರೇಷನ್ ಆರ್ಮಿಯ (ಪಿಎಲ್‌ಎ) ವಾಯುನೆಲೆಯಿಂದಲೂ ಕೆಲವು ಬಲೂನ್‌ಗಳ ಕಾರ್ಯಾಚರಣೆ ನಡೆದಿದೆ. ಐದು ಖಂಡಗಳ ವಾಯುಪ್ರದೇಶಗಳಲ್ಲಿ ಈ ಕಣ್ಗಾವಲು ಬಲೂನ್‌ಗಳು ಹಾರಾಟ ನಡೆಸಿರುವುದನ್ನು ಪತ್ತೆ ಮಾಡಲಾಗಿದೆ’ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಚೀನಾಕ್ಕೆ ತಕ್ಕ ಉತ್ತರ: ಬೈಡನ್

ವಾಷಿಂಗ್ಟನ್ (ಪಿಟಿಐ): ದೇಶದ ಸಾರ್ವಭೌಮತೆಗೆ ಚೀನಾ ಬೆದರಿಕೆವೊಡ್ಡಿದ್ದೇಯಾದರೆ, ಅದಕ್ಕೆ ಅಮೆರಿಕ ತಕ್ಕ ಪ್ರತ್ಯುತ್ತರ ನೀಡುವುದು ಎಂದು ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಅಮೆರಿಕ ಸಂಸತ್‌ನ ಉಭಯ ಸದನಗಳನ್ನು ಉದ್ದೇಶಿಸಿ ಮಂಗಳವಾರ ಅವರು ಮಾತನಾಡಿದರು. ನೂತನ ವರ್ಷ ಆರಂಭದಲ್ಲಿ ಅಮೆರಿಕದ ಅಧ್ಯಕ್ಷರು ಸಂಸತ್‌ನ ಎರಡೂ ಸದನಗಳ ಸದಸ್ಯರನ್ನು ಉದ್ದೇಶಿಸಿ ಮಾತನಾಡುವುದು ಸಂಪ್ರದಾಯ. ದೇಶದ ಪ್ರಸಕ್ತ ವಿದ್ಯಮಾನಗಳ ಕುರಿತು ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸುತ್ತಾರೆ.

‘ವಲಸೆ ನೀತಿ’: ‘ವಲಸೆ ನೀತಿಯಲ್ಲಿ ಸಮಗ್ರ ಸುಧಾರಣೆ ತರುವುದು ಅಗತ್ಯವಿದೆ. ಇದರಿಂದ ಅಕ್ರಮ ವಲಸಿಗರು ಹಾಗೂ ಎಚ್–1ಬಿ ವೀಸಾ ಪಡೆದು ದೇಶದಲ್ಲಿ ವಾಸಿಸುವವರಿಗೆ ಅಮೆರಿಕದ ಪೌರತ್ವ ಪಡೆಯಲು ಸುಲಭವಾಗುತ್ತದೆ’ ಎಂದು ಬೈಡನ್ ಹೇಳಿದರು.

ಮಗುವಿಗೆ ಜನ್ಮ ನೀಡಿದ ಲಿಂಗತ್ವ ಅಲ್ಪಸಂಖ್ಯಾತ

ಕೋಯಿಕ್ಕೋಡ್: ಕೇರಳದ ಸರ್ಕಾರಿ ಆಸ್ಪತ್ರೆಯೊಂದರಲ್ಲಿ ಲಿಂಗತ್ವ ಅಲ್ಪಸಂಖ್ಯಾತರೊಬ್ಬರು ಬುಧವಾರ ಮಗುವಿಗೆ ಜನ್ಮ ನೀಡಿದ್ದು, ಇದು ದೇಶದ ಮೊದಲ ಪ್ರಕರಣ ಎನ್ನಲಾಗಿದೆ.

‘ಇಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಬುಧವಾರ ಬೆಳಿಗ್ಗೆ 9.30ರ ವೇಳೆಗೆ ಸಿಸೇರಿಯನ್ ಶಸ್ತ್ರಚಿಕಿತ್ಸೆಯ ಮೂಲಕ ಜಹಾದ್ ಮಗುವಿಗೆ ಜನ್ಮ ನೀಡಿದ್ದಾರೆ’ ಎಂದು ಜಹಾದ್ ಅವರ ಸಂಗಾತಿ ಜಿಯಾ ಪಾವಲ್ ತಿಳಿಸಿದ್ದಾರೆ.

‘ಮಗು ಮತ್ತು ಜಹಾದ್ ಇಬ್ಬರೂ ಆರೋಗ್ಯವಾಗಿದ್ದಾರೆ’ ಎಂದು ಮಾಧ್ಯಮಗಳಿಗೆ ಮಾಹಿತಿ ನೀಡಿರುವ ಜಿಯಾ, ನವಜಾತ ಶಿಶುವಿನ ಲಿಂಗವನ್ನು ಬಹಿರಂಗಪಡಿಸಲು ನಿರಾಕರಿಸಿದ್ದು, ಅದನ್ನು ಇದೀಗ ಸಾರ್ವಜನಿಕಗೊಳಿಸಲು ಬಯಸುವುದಿಲ್ಲ ಎಂದು ಹೇಳಿದ್ದಾರೆ.

ಇತ್ತೀಚೆಗಷ್ಟೇ ಜಿಯಾ ತಮ್ಮ ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ಜಹಾದ್ ಅವರೀಗ ಎಂಟು ತಿಂಗಳ ಗರ್ಭಿಣಿ ಎಂದು ಘೋಷಿಸಿದ್ದರು. ಹುಟ್ಟಿನಿಂದ ಹೆಣ್ಣಾಗಿದ್ದ ಜಹಾದ್, ಲಿಂಗ-ಪರಿವರ್ತಿತ ಪುರುಷನಾಗಿದ್ದು, ಹಾರ್ಮೋನ್ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ, ಮಗು ಹೊಂದಬೇಕೆಂಬ ಆಸೆಯಿಂದ ಹಾರ್ಮೋನ್ ಚಿಕಿತ್ಸೆಯನ್ನು ನಿಲ್ಲಿಸಿದ್ದರು. ಜಹಾದ್ ಅವರ ಸಂಗಾತಿ ಜಿಯಾ ಪಾವಲ್ ಹುಟ್ಟಿನಿಂದ ಗಂಡಾಗಿದ್ದು, ಲಿಂಗಪರಿವರ್ತನೆಯ ಮೂಲಕ ಹೆಣ್ಣಾಗಿದ್ದಾರೆ.

‘ಮುಸ್ಲಿಂ ಮಹಿಳೆಗೆ ಮಸೀದಿ ಪ್ರವೇಶ: ನಿಷೇಧ ಇಲ್ಲ’

ನವದೆಹಲಿ: ಮುಸ್ಲಿಂ ಮಹಿಳೆಯರು ಮಸೀದಿಯನ್ನು ಪ್ರವೇಶಿಸುವುದು ಹಾಗೂ ನಮಾಜ್ ಸಲ್ಲಿಸುವುದರ ಮೇಲೆ ನಿಷೇಧ ಇಲ್ಲ ಎಂದು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ (ಎಐಎಂಪಿಎಲ್‌ಬಿ) ಹೇಳಿದೆ.

ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಮತ್ತೊಂದು ಪ್ರಮಾಣಪತ್ರದಲ್ಲಿ ಈ ಕುರಿತು ವಿವರಣೆ ನೀಡಲಾಗಿದೆ ಎಂದು ಮಂಡಳಿಯು ಬುಧವಾರ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ಇಸ್ಲಾಂ ಧರ್ಮಗ್ರಂಥದಲ್ಲಿ ಇದೇ ಮಾತನ್ನು ಹೇಳಲಾಗಿದ್ದು, ತನ್ನ ಅಭಿಪ್ರಾಯವೂ ಇದೇ ಆಗಿದೆ ಎಂದು ಮಂಡಳಿ ಹೇಳಿದೆ.

ಮುಸ್ಲಿಂ ಮಹಿಳೆಯರಿಗೆ ಮಸೀದಿಗಳಿಗೆ ಪ್ರವೇಶ ನೀಡಬೇಕು ಹಾಗೂ ನಮಾಜ್ ಸಲ್ಲಿಸಲು ಅವಕಾಶ ಒದಗಿಸುವಂತೆ ನಿರ್ದೇಶನ ನೀಡಲು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಗೆ ಸಂಬಂಧಿಸಿ ಮಂಡಳಿ ಈ ಪ್ರಮಾಣಪತ್ರ ಸಲ್ಲಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868

General

BANGALORE, INDIRA Nagara, HAL, Alassor 150years old Biggest / Financial Group requires urgently Life planners, Financial Advisors, Business Associate, Development Officers & others. 30-65years, PUC+, Interview Tuesday 14th. Ph:8861636491 / 8277059719

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree - Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000 -56,000/- ವಸತಿಯೂಟದೊಂದಿಗೆ 9035520339/ 9036125229

ಬೆಂಗಳೂರು, ಇಂದಿರಾನಗರ, HAL, ಅಲ್ಸೂರ್ ಭಾರತದ ಅತೀ ದೊಡ್ಡ ಕಂಪೆನಿಯೊಂದರಲ್ಲಿ ಉದ್ಯೋಗಗಳು. PUC ಆಗಿರಬೇಕು. 30-70 ವರ್ಷಗಳು, Part/Fulltime, ಸಂದರ್ಶನ 14ನೇ ಮಂಗಳವಾರ. PH: 8861636491/ 8277059719

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Hotel

ಬೇಕಾಗಿದ್ದಾರೆ: ಮಂಗಳೂರಿನ ಪ್ರತಿಷ್ಠಿತ ಕ್ಲಬ್ ಗೆ *ಅಕೌಂಟೆಂಟ್(with GST knowledge- Evening/ Second shift) *ರಿಸೆಪ್ಷನಿಸ್ಟ್(Evening/Second Shift) *ವೈಟರ್ಸ್(Part time & Full time) *ಸೌತ್ ಇಂಡಿಯನ್ ಕುಕ್ (ಎಣ್ಣೆ ತಿಂಡಿ, ವೆಜ್/ನಾನ್ ವೆಜ್) *ಚೈನೀಸ್ ಕಾಮಿ1 & ಕಾಮಿ11. ಉತ್ತಮ ವೇತನದೊಂದಿಗೆ ESI, PF, Bonus ಮತ್ತು ಊಟ/ವಸತಿ ವ್ಯವಸ್ಥೆ ಇರುತ್ತದೆ. ಕೂಡಲೇ ಸಂಪರ್ಕಿಸಿ. ವಾಟ್ಸಾಪ್ ನಂ: 9900812850/ 9880947146

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9611225388/ 9611225266

Wanted

PART TIME work ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಬರವಣಿಗೆಯ ಮೂಲಕ ತಿಂಗಳಿಗೆ 12,000 ರಿಂದ 20,000ವರೆಗೂ ಸಂಪಾದಿಸಿ ಕೊರಿಯರ್ ಸೌಲಭ್ಯವಿದೆ 8749098879

ವ್ಯಾಪಾರ

Business Offers

Finance

ನಾವು ಎಲ್ಲಾರೀತಿಯ ವೈಯಕ್ತಿಕ, ಆಸ್ತಿ, ವ್ಯಾಪಾರ, ಕೃಷಿ ಮತ್ತು ಅಡಮಾನ ಸಾಲಗಳನ್ನು ಒದಗಿಸುತ್ತೇವೆ. ಏಜೆಂಟ್ ಸ್ವಾಗತ. Ph: 7992783372, 8901923173

ಶಿಕ್ಷಣ

Coaching Classes

ACE INDIA IAS Rajarajeshwarinagar Banglore coaching for IAS/KAS/ Banking started admissions. Contact: 9019308383 9845655761

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

HEALTH SPECIAL

ಆರೋಗ್ಯ

ಎಲ್ಲಾ ತರಹದ ಕ್ಯಾನ್ಸರ್, ಸಕ್ಕರೆ ಕಾಯಿಲೆ, ಕೀಲುಗಳ ನೋವು, ಲಕ್ವಾ, ಕಿಡ್ನಿದೋಷ, ಲೈಂಗಿಕ ನಿಶ್ಯಕ್ತಿ, ಮಕ್ಕಳಾಗದಿರುವಿಕೆ, ಇತ್ಯಾದಿ ಕಾಯಿಲೆಗಳಿಗೆ ಬೇಗನೇ ಗುಣಪಡಿಸುವ ಗಿಡಮೂಲಿಕೆ ಔಷಧಿ – ಚಿಕಿತ್ಸೆಗಾಗಿ ಸಂಪರ್ಕಿಸಿರಿ

ಡಾ|| ಹನುಮಂತ ಮುರನಾಳ
(Govt.Regd.)
Mob: 9448816993 / 9980394503

ಪ್ರತಿ ಬುಧವಾರ ಕೊಣ್ಣೂರ (ತಾ|| ನರಗುಂದ) ಕೆ.ಎಸ್.ಆರ್.ಟಿ.ಸಿ ಬಸ್‌ಸ್ಟ್ಯಾಂಡ್ ಎದುರಿನ ಕಾಂಪ್ಲೆಕ್ಸ್‌ನಲ್ಲಿ “ಸಂಜೀವಿನಿ ಕ್ಲಿನಿಕ್”ದಲ್ಲಿ ಹಾಗೂ ಉಳಿದ ದಿನಗಳಲ್ಲಿ ಬೀಳಗಿ / ಭಗವತಿ ಬ್ರಾಂಚ್‌ನಲ್ಲಿ ಇರುತ್ತಾರೆ.

ಪ್ರವಾಸ

Travel

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 25.04.2023 16.05.2023 28.05.2023 ರಿಂದ 10/13/16 ದಿನಗಳ ಯುರೋಪ್ ಪ್ರವಾಸಗಳು. 29.03.2023 09.04.2023 27.04.2023 ರಿಂದ 11 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 27.03.2023 11.04.2023 ರಿಂದ 6 ದಿನಗಳ ದುಬೈ,ಅಬುಧಾಬಿ. 24.03.2023 23.04.2023 ರಿಂದ 8 ದಿನಗಳ ಕಾಶಿ,ಗಯಾ. 09.04.2023 22.04.2023 ರಿಂದ 11 ದಿನಗಳ ಕಾಶಿ,ನೇಪಾಳ ಮುಕ್ತಿನಾಥ. 12.04.2023 ರಿಂದ 12 ದಿನಗಳ ವೈಷ್ಣೋದೇವಿ ಕಾಶ್ಮೀರ್ 22.04.2023 13.05.2023 ರಿಂದ 12 ದಿನಗಳ ಶಿಮ್ಲಾ,ಮನಾಲಿ. ಅಮೃತ್‌ಸರ್ 27.04.2023 03.05.2023 ರಿಂದ 15 ದಿನಗಳ ಚಾರ್‌ಧಾಮ್ ಪ್ರವಾಸಗಳಿಗೆ ಇಂದೇ ವಿಚಾರಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

12 ದಿನಗಳ ದೆಹಲಿ ಆಗ್ರಾ,ಮಥುರ ಕಾಶಿ,ಗಯಾ ಅಲಹಾಬಾದ್ ಅಯೋಧ್ಯ ಹಾಗೂ ಇತರೆ ಬುಕ್ಕಿಂಗ್‌ಗಾಗಿ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9880079588 9900080793

ನಮ್ಮ ಕಾಶಿಯಾತ್ರೆಗೆ ಅಥವಾ ಮುಕ್ತಿನಾಥ ನೇಪಾಳ ಯಾತ್ರೆಗೆ ನಿಮ್ಮ ಹೆತ್ತವರನ್ನು ಕಳಿಸಿಕೊಡಿ. ಕಾಳಜಿಯಿಂದ ಪ್ರವಾಸ ಮಾಡಿಸುತ್ತೇವೆ. ನಾಲಂದಾ, ಕುಂದಾಪುರ 8310028157.

21-2-2023ಗುರುವಾಯುರು, ಮುನ್ನಾರ್,ತೆಕಡಿ,ಕೊಚ್ಚಿ,ಅಲಪೇ, ತಿರುವಂತಪುರಂ2-3-2023 ನೇಪಾಳ,ಕಾಶಿ ಅಯೋಧ್ಯಾ30-3-2023 ಗುಜರಾತ್,ಮಧ್ಯಪ್ರದೇಶ 23-4-2023 ಯಮೋನೋತ್ರಿ ಗಂಗೋತ್ರಿ,ಕೇದಾರನಾಥ್, ಬದ್ರಿನಾಥ್ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

Holiday Package Tours

ಊಟ, ಏಸಿ ರೂಂ ನೊಂದಿಗೆ 22.02.2023: ಕೇರಳ ಬಸ್ ಪ್ರವಾಸ, 25.03.2023: ಮೂರು ಜ್ಯೋತಿರ್ಲಿಂಗ, ಶಿರಡಿ ಬಸ್ ಪ್ರವಾಸ, 13.04.2023: ಗುಜರಾತ್ ವಿಮಾನ ಪ್ರವಾಸ, 28.04.2023: ಕಾಶಿ, ಹರಿದ್ವಾರ, ದೆಹಲಿ ವಿಮಾನ ಪ್ರವಾಸ. ಮಲ್ಲಿಕಾರ್ಜುನ ಟೂರ್ಸ್, ತುಮಕೂರು. 8496044942, 8277409101

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್.23/02/23 ವೈಷ್ಣೋದೇವಿ, ದೆಹಲಿ, ಅಮೃತಸರ, ಇತ್ಯಾದಿ. 06/03/23 ಕಾಶಿ, ಅಯೋಧ್ಯ. 09/03/23 ನೇಪಾಳ, ಮುಕ್ತಿನಾಥ 9591017782/9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD — BOOK YOUR CLASSIFIEDS ONLINE — ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH | MATRI | AUTO | ASTRO | NOTICE | TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಷೇರುಪೇಟೆ ವಹಿವಾಟು ▲ 377



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,721
ಇಂದಿನ ಅಂತ್ಯ	17,871
▲	150
ದಿನದ ಗರಿಷ್ಠ	17,898

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹448

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1630)
ಸೋಯಾ (ರಿಫೈನ್ಡ್)	₹1170 (1160)
ಸೂರ್ಯಕಾಂತಿ (ರಿಫೈನ್ಡ್)	₹1170 (1160)
ಪಾಮೋಲಿನ್	₹965 (945)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹400-669
ದ್ವಿತಳಿ (ಬಿ.ವಿ)	₹526-799

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹139.50
ಆರ್‌ಎಸ್‌ಎಸ್-5	₹134.50
ಗುಡ್ ಲಾಟ್	₹129.50

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹1000-1200
ಸಣ್ಣ	₹600-1000

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹15000
ಎಸಿ	₹7140
ಆರ್‌ಪಿ	₹10050
ಆರ್‌ಸಿ	₹5000

ಅಡಿಕೆ ಆಮದು ಗಣನೀಯ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಅಡಿಕೆ ಆಮದು ಪ್ರಮಾಣ ಗಣನೀಯವಾಗಿ ಹೆಚ್ಚಳ ಆಗಿದೆ. 2022–23ರ ಆರ್ಥಿಕ ವರ್ಷ ನವೆಂಬರ್ ಅಂತ್ಯದ ವರೆಗೆ 61,450 ಟನ್ ಅಡಿಕೆ ಆಮದು ಮಾಡಿಕೊಳ್ಳಲಾಗಿದೆ.

ಲೋಕಸಭೆಯಲ್ಲಿ ಸಂಸದ ನಳಿನ್ ಕುಮಾರ್ ಕಟೀಲು ಬುಧವಾರ ಕೇಳಿರುವ ಪ್ರಶ್ನೆಗೆ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಖಾತೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ನೀಡಿರುವ ಲಿಖಿತ ಉತ್ತರದಲ್ಲಿ ಈ ಮಾಹಿತಿ ಇದೆ.

ಸಿಂಗಪುರ, ಯುಎಇ ಸೇರಿದಂತೆ ಹಲವು ದೇಶಗಳಿಂದ ಅಡಿಕೆ ಆಮದು ಮಾಡಿಕೊಳ್ಳಲಾಗುತ್ತಿದೆ. ಆದರೆ, ಕಳೆದ ನಾಲ್ಕು ವರ್ಷಗಳಿಂದ ಭೂತಾನ್‌ನಿಂದ ಅಡಿಕೆ ಆಮದು ಮಾಡಿಕೊಂಡಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಅಡಿಕೆಯ ದೇಶೀಯ ಬೆಲೆ ನಿರಂತರವಾಗಿ ಹೆಚ್ಚುತ್ತಿದೆ. ಕೋಯಿಕ್ಕೋಡ್ ಮಾರುಕಟ್ಟೆಯಲ್ಲಿ 2017–18ರಲ್ಲಿ ಕ್ವಿಂಟಲ್ ಅಡಿಕೆಗೆ ₹19,038 ಇತ್ತು. 2021–22ರಲ್ಲಿ ಅದು ₹35,481 ಕ್ಕೆ ಏರಿದೆ. ಸಾಗರದ ಚಾಲಿ ಅಡಿಕೆ ಮಾರುಕಟ್ಟೆ ಹಾಗೂ ದೇಶೀಯ ಮಾರುಕಟ್ಟೆಯಲ್ಲಿ ಸಹ ಬೆಲೆ ಏರಿಕೆ ಆಗಿದೆ. 2017–18ರಲ್ಲಿ ಕ್ವಿಂಟಲ್‌ಗೆ ₹20,847 ಇದ್ದ ಬೆಲೆ 2021–22ರಲ್ಲಿ ₹39,019 ಆಗಿದೆ. ದೇಶದ ಅಡಿಕೆ ಬೆಳೆಗಾರರ ಹಿತಾಸಕ್ತಿ ರಕ್ಷಿಸಲು ಹಾಗೂ ಆಮದು ನಿಯಂತ್ರಿಸಲು ಕೇಂದ್ರ ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ ಎಂದು ಅವರು ತಿಳಿಸಿದ್ದಾರೆ.

ಅಡಿಕೆ ಆಮದು ಮೇಲಿನ ಮೂಲ ಕಸ್ಟಮ್ಸ್ ಸುಂಕವು ಶೇ 100 ಇದೆ. ದೇಶೀಯ ಮಾರುಕಟ್ಟೆಗೆ ಕಳಪೆ ಗುಣಮಟ್ಟದ ಅಡಿಕೆ ಪ್ರವೇಶಿಸದಂತೆ ತಡೆಯಲು ಉಪಕ್ರಮಗಳನ್ನು ಕೈಗೊಳ್ಳಲಾಗಿದೆ. ಕಡಿಮೆ ಗುಣಮಟ್ಟದ ಅಡಿಕೆ ಆಮದನ್ನು ನಿರ್ಬಂಧಿಸಲು ಭಾರತೀಯ ಆಹಾರ ಸುರಕ್ಷತೆ ಹಾಗೂ ಗುಣಮಟ್ಟ ಪ್ರಾಧಿಕಾರವು ಗುಣಮಟ್ಟದ ಮಾನದಂಡಗಳನ್ನು ಅಭಿವೃದ್ಧಿಪಡಿಸಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕರ್ನಾಟಕದಲ್ಲಿ ಅಡಿಕೆ ತೋಟಗಳಲ್ಲಿ ಹಬ್ಬಿರುವ ಎಲೆಚುಕ್ಕಿ ರೋಗದಿಂದ ಕೃಷಿಕರಿಗೆ ತೊಂದರೆಯಾಗಿರುವುದು ಗಮನಕ್ಕೆ ಬಂದಿದೆ. ಈ ರೋಗದ ಬಗ್ಗೆ ಅಧ್ಯಯನ ನಡೆಸಲು ಏಳು ತಜ್ಞರನ್ನು ಒಳಗೊಂಡ ಸಮಿತಿಯನ್ನು ಕೇಂದ್ರ ಕೃಷಿ ಸಚಿವಾಲಯ ರಚಿಸಿದೆ ಎಂದು ಅವರು ತಿಳಿಸಿದ್ದಾರೆ.

ಅಡಿಕೆ ಆಮದು ಪ್ರಮಾಣ

ವರ್ಷ	ಪ್ರಮಾಣ (ಟನ್‌ಗಳಲ್ಲಿ)
2019–20	4,975
2020–21	9,982
2021–22	7,698
2022–23	25,891

ಎಲ್ಲಿಂದ ಆಮದು: ಕೆನಡಾ, ಇಂಡೋನೇಷ್ಯಾ, ಮಾಲ್ಡೀವ್ಸ್, ಬರ್ಮಾ, ಸಿಂಗಪುರ, ಶ್ರೀಲಂಕಾ, ತಾಂಜಾನಿಯಾ, ವಿಯೆಟ್ನಾಂ

ಇತರ ಅಡಿಕೆ ಆಮದು ಪ್ರಮಾಣ

ವರ್ಷ	ಪ್ರಮಾಣ (ಟನ್‌ಗಳಲ್ಲಿ)
2019–20	11,855
2020–21	13,998
2021–22	18,274
2022–23	35,559

ಎಲ್ಲಿಂದ ಆಮದು: ಇಂಡೋನೇಷ್ಯಾ, ಬರ್ಮಾ, ಸಿಂಗಪುರ, ಶ್ರೀಲಂಕಾ ಮತ್ತು ಯುಎಇ

ಗೌತಮ್ ಅದಾನಿ ಸಮೂಹದ ₹ 4.10 ಲಕ್ಷ ಕೋಟಿ ಮೊತ್ತದ 'ಹೈಡ್ರೋಜನ್ ಯೋಜನೆ'

'ಅದಾನಿ–ಟೋಟಲ್ ಒಪ್ಪಂದಕ್ಕೆ ತಡೆ'

ಪ್ಯಾರಿಸ್ (ರಾಯಿಟರ್ಸ್/ಪಿಟಿಐ): ಅದಾನಿ ಸಮೂಹದ ₹ 4.10 ಲಕ್ಷ ಕೋಟಿ ಮೊತ್ತದ ಹೈಡ್ರೋಜನ್ ಯೋಜನೆಯಲ್ಲಿ ಸದ್ಯದ ಮಟ್ಟಿಗೆ ಪಾಲುದಾರ ಆಗದಿರಲು ಫ್ರಾನ್ಸ್‌ನ ತೈಲ ಮತ್ತು ಇಂಧನ ಕಂಪನಿ ಟೋಟಲ್ ಎನರ್ಜೀಸ್ ನಿರ್ಧರಿಸಿದೆ.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಮಾಡಿರುವ ಆರೋಪಗಳಿಗೆ ಪ್ರತಿಯಾಗಿ ಅದಾನಿ ಸಮೂಹವು ಲೆಕ್ಕಪತ್ರ ಪರಿಶೀಲನೆ ನಡೆಸುತ್ತಿದೆ. ಅದರ ವರದಿಗಾಗಿ ಕಾಯುತ್ತಿರುವುದಾಗಿ ಟೋಟಲ್ ಎನರ್ಜೀಸ್‌ನ ಸಿಇಒ ಪ್ಯಾಟ್ರಿಕ್ ಪೊಯನ್ನೆ ಹೇಳಿದ್ದಾರೆ.

ಆರೋಪದ ಕುರಿತು ಸ್ಪಷ್ಟನೆ ಸಿಗದ ಹೊರತು ಹೆಚ್ಚಿನ ಯೋಜನೆಗಳನ್ನು ಹೊಂದುವುದರಲ್ಲಿ ಅರ್ಥ ಇಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

2022ರ ಜೂನ್‌ನಲ್ಲಿ ಅದಾನಿ ಸಮೂಹದೊಂದಿಗೆ ಪಾಲುದಾರಿಕೆ ಮಾಡಿಕೊಳ್ಳುತ್ತಿರುವುದಾಗಿ ಘೋಷಿಸಲಾಗಿತ್ತು. ಆದರೆ, ಈವರೆಗೂ ಒಪ್ಪಂದಕ್ಕೆ ಸಹಿ ಹಾಕಿಲ್ಲ ಎಂದು ತಿಳಿಸಿದ್ದಾರೆ.

ಟೋಟಲ್ ಎನರ್ಜೀಸ್, ಅದಾನಿ ಸಮೂಹದ ವಹಿವಾಟುಗಳಲ್ಲಿ ಬಂಡವಾಳ ತೊಡಗಿಸುತ್ತಿರುವ ಅತಿದೊಡ್ಡ ವಿದೇಶಿ ಕಂಪನಿ ಆಗಿದೆ. ಕಂಪನಿಯು ಈಗಾಗಲೇ ಅದಾನಿ ಗ್ರೀನ್ ಎನರ್ಜಿ ಮತ್ತು ಅದಾನಿ ಟೋಟಲ್ ಗ್ಯಾಸ್ ಕಂಪನಿಗಳಲ್ಲಿನ ಷೇರುಗಳನ್ನು ಖರೀದಿ ಮಾಡಿದೆ.

ಟೋಟಲ್ ಗ್ಯಾಸ್ ಮತ್ತು ಅದಾನಿ ಗ್ರೀನ್ ಎನರ್ಜಿಯಲ್ಲಿ ಕಂಪನಿ ಹೊಂದಿರುವ ಷೇರುಗಳ ಮೌಲ್ಯವು ಈ ಹಿಂದೆ ಖರೀದಿ ಮಾಡಿದ್ದಕ್ಕಿಂತಲೂ ಹೆಚ್ಚಿಗೆ ಇದೆ ಎಂದು ಪ್ಯಾಟ್ರಿಕ್ ಹೇಳಿದ್ದಾರೆ.

ಅದಾನಿ ಗ್ರೀನ್ ಕಂಪನಿಯು ನಾವು ಹೂಡಿಕೆ ಮಾಡಿದ್ದಕ್ಕಿಂತಲೂ ಎರಡುಪಟ್ಟು ಹೆಚ್ಚು ಮೌಲ್ಯಯುತವಾಗಿದೆ. ಅದಾನಿ ಗ್ಯಾಸ್ ಕಂಪನಿಯು ಎಂಟುಪಟ್ಟು ಹೆಚ್ಚು ಮೌಲ್ಯಯುತವಾಗಿದೆ ಎಂದು ವಿವರಿಸಿದ್ದಾರೆ.

ಅದಾನಿ ವಿಲ್ಮರ್ ಲಾಭ ಹೆಚ್ಚಳ

ಅಡುಗೆ ಎಣ್ಣೆ ತಯಾರಿಸುವ ಅದಾನಿ ವಿಲ್ಮರ್ ಕಂಪನಿಯು ಡಿಸೆಂಬರ್ ತ್ರೈಮಾಸಿಕದಲ್ಲಿ ₹246 ಕೋಟಿ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯ ಲಾಭ ₹211 ಕೋಟಿಯಷ್ಟು ಇತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 15ರಷ್ಟು ಹೆಚ್ಚಾಗಿದೆ ಎಂದು ಷೇರುಪೇಟೆಗೆ ತಿಳಿಸಿದೆ.

ವರಮಾನ ಹೆಚ್ಚಳವೇ ಲಾಭಕ್ಕೆ ಕಾರಣ ಎಂದು ಕಂಪನಿ ಹೇಳಿದೆ. ಒಟ್ಟು ವರಮಾನ ₹14,398 ಕೋಟಿಯಿಂದ ₹15,515 ಕೋಟಿಗೆ ಏರಿಕೆ ಆಗಿದೆ. ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ನಿವ್ವಳ ಲಾಭ ₹569 ಕೋಟಿಯಿಂದ ₹488 ಕೋಟಿಗೆ ಇಳಿಕೆ ಆಗಿದೆ. ಆದರೆ, ವರಮಾನ ₹39,347 ಕೋಟಿಯಿಂದ ₹44,501 ಕೋಟಿಗೆ ಏರಿಕೆ ಕಂಡಿದೆ.

ಅದಾನಿ ಪವರ್ ಲಾಭ ಕುಸಿತ: ಅದಾನಿ ಪವರ್ ಕಂಪನಿಯು ಡಿಸೆಂಬರ್ ತ್ರೈಮಾಸಿಕದಲ್ಲಿ ₹8.77 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹214 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇ 96ರಷ್ಟು ಕುಸಿತ ಆಗಿದೆ.

ವೆಚ್ಚವು ₹5,389 ಕೋಟಿಯಿಂದ ₹8,078 ಕೋಟಿಗೆ ಏರಿಕೆ ಆಗಿರುವುದೇ ಲಾಭದಲ್ಲಿ ಕುಸಿತಕ್ಕೆ ಕಾರಣ ಎಂದು ಕಂಪನಿ ತಿಳಿಸಿದೆ.

ಅದಾನಿ ಎಂಟರ್‌ಪ್ರೈಸ್ ಶೇ 23ರಷ್ಟು ಗಳಿಕೆ: ಅದಾನಿ ಸಮೂಹದ ಏಳು ಕಂಪನಿಗಳ ಷೇರುಗಳು ಬುಧವಾರದ ವಹಿವಾಟಿನಲ್ಲಿ ಗಳಿಕೆ ಕಂಡುಕೊಂಡವು. ಅದಾನಿ ಎಂಟರ್‌ಪ್ರೈಸಸ್ ಷೇರು ಮೌಲ್ಯ ಶೇ 23ರಷ್ಟು ಹೆಚ್ಚಾಯಿತು.

ಅದಾನಿ ಎಂಟರ್‌ಪ್ರೈಸಸ್‌ನ ಮಾರುಕಟ್ಟೆ ಮೌಲ್ಯವು ₹40,601 ಕೋಟಿಯಷ್ಟು ಹೆಚ್ಚಾಗಿದ್ದು ಒಟ್ಟಾರೆ ಮೌಲ್ಯವು ₹2.46 ಲಕ್ಷ ಕೋಟಿಗೆ ತಲುಪಿದೆ. ಅದಾನಿ ಟೋಟಲ್ ಗ್ಯಾಸ್, ಅದಾನಿ ಗ್ರೀನ್ ಎನರ್ಜಿ ಮತ್ತು ಎಸಿಸಿ ಕಂಪನಿಗಳ ಷೇರು ಮೌಲ್ಯ ಇಳಿಕೆ ಕಂಡಿತು.

'ಎರಡು ದಿನಗಳ ವಹಿವಾಟಿನಲ್ಲಿ ಸಮೂಹದ ಕಂಪನಿಗಳ ಮಾರುಕಟ್ಟೆ ಮೌಲ್ಯ ₹70 ಸಾವಿರ ಕೋಟಿಯಷ್ಟು ಹೆಚ್ಚಾಗಿದೆ. ಜನವರಿ 24ರಿಂದ ಸಮೂಹದ ಕಂಪನಿಗಳ ಮಾರುಕಟ್ಟೆ ಮೌಲ್ಯವು ₹8.7 ಲಕ್ಷ ಕೋಟಿಯಷ್ಟು ಅಥವಾ ಒಟ್ಟು ಬಂಡವಾಳ ಮೌಲ್ಯದ ಶೇ 45ರಷ್ಟು ಕಡಿಮೆ ಆಗಿತ್ತು' ಎಂದು ಸ್ಟ್ಯಾಕ್ಸ್‌ಬಾಕ್ಸ್ ಕಂಪನಿಯ ಸಂಶೋಧನಾ ಮುಖ್ಯಸ್ಥ ಮನಿಷ್ ಚೌಧರಿ ಹೇಳಿದ್ದಾರೆ.

ಜೋಸ್ ಅಲುಕ್ಕಾಸ್: 'ಹಾರ್ಟ್ಸ್' ಸಂಗ್ರಹ

ಬೆಂಗಳೂರು: ಜೋಸ್ ಅಲುಕ್ಕಾಸ್ ಕಂಪನಿಯು ಪ್ರೇಮಿಗಳ ದಿನದ ಪ್ರಯುಕ್ತ ವಜ್ರದ ಆಭರಣಗಳ ಸಂಗ್ರಹ 'ಹಾರ್ಟ್ಸ್' ಬಿಡುಗಡೆ ಮಾಡಿದೆ.

ಈ ಸಂಗ್ರಹದ ಆಭರಣಗಳ ಬೆಲೆಯು ₹ 5,999ರಿಂದ ಆರಂಭ ಆಗುತ್ತದೆ. ಹೀಗಾಗಿ ಗ್ರಾಹಕರು ಕಡಿಮೆ ಬೆಲೆಗೆ ವಿಶ್ವದರ್ಜೆಯ ವಜ್ರಗಳನ್ನು ಖರೀದಿಸಬಹುದು. ಅಲ್ಲದೆ, ಪ್ರತಿ ವಜ್ರದ ಆಭರಣಗಳಿಗೆ ಶೇ 20ರಷ್ಟು ರಿಯಾಯಿತಿಯನ್ನೂ ಪಡೆಯಬಹುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ. ₹ 1 ಲಕ್ಷ ಮೌಲ್ಯದ ವಜ್ರ ಖರೀದಿಸುವವರಿಗೆ ವಜ್ರದ ಪೆಂಡೆಂಟ್ ಉಚಿತವಾಗಿ ಸಿಗಲಿದೆ. ₹ 2.5 ಲಕ್ಷ ಮೌಲ್ಯದ ವಜ್ರ ಖರೀದಿಸುವವರಿಗೆ ವಜ್ರದ ಕಿವಿಯೋಲೆ ಸೆಟ್ ಸಿಗಲಿದೆ ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ 8–2–2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11800-11900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1640)
ಒಂದು ವಾರದ ಡೆಲಿವರಿ	1665 (1635)
ಸೋಯಾ ಕಚ್ಚಾ	1080 (1070)
ಪಾಮ್ ವಾರದ ಡೆಲಿವರಿ	963 (943)
ಸೂರ್ಯಕಾಂತಿ ಎಣ್ಣೆ ಕಚ್ಚಾ	1070 (1070)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	57,000 (57,000)
ಬೆಳ್ಳಿ ಕೆ.ಜಿ	67,450 (67,050)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಅದಾನಿ ಸಮೂಹಕ್ಕೆ ಸಾಲ ದೊಡ್ಡ ಮಟ್ಟದಲ್ಲಿಲ್ಲ'

ಮುಂಬೈ (ಪಿಟಿಐ): ದೇಶಿ ಬ್ಯಾಂಕ್‌ಗಳು ಅದಾನಿ ಸಮೂಹಕ್ಕೆ ನಿಡಿರುವ ಸಾಲದ ಮೊತ್ತವು 'ಬಹಳ ದೊಡ್ಡದೇನೂ ಅಲ್ಲ' ಎಂದು ಆರ್‌ಬಿಐ ಡೆಪ್ಯುಟಿ ಗವರ್ನರ್ ಎಂ.ಕೆ. ಜೈನ್ ಹೇಳಿದ್ದಾರೆ.

ಅದಾನಿ ಸಮೂಹಕ್ಕೆ ಬ್ಯಾಂಕ್‌ಗಳು ನೀಡಿರುವ ಸಾಲದ ವಿಚಾರವಾಗಿ ಆರ್‌ಬಿಐ ಮಾರ್ಗದರ್ಶನ ನೀಡಲಿದೆಯೇ ಎಂಬ ಪ್ರಶ್ನೆಗೆ ಜೈನ್ ಅವರು ಈ ಉತ್ತರ ನೀಡಿದ್ದಾರೆ. 'ನಮ್ಮ ಬ್ಯಾಂಕ್‌ಗಳು ಆಸ್ತಿ, ನಗದು ಹರಿವಿನ ಪ್ರಮಾಣ ಹಾಗೂ ಅನುಷ್ಠಾನದ ಹಂತದಲ್ಲಿರುವ ಯೋಜನೆಗಳನ್ನು ಗಮನಿಸಿ ಸಾಲ ನೀಡುತ್ತವೆ. ಮಾರುಕಟ್ಟೆ ಬಂಡವಾಳವನ್ನು ಗಮನಿಸಿ ಸಾಲ ಕೊಡುವುದಿಲ್ಲ' ಎಂದು ಜೈನ್ ಅವರು ಹಣಕಾಸು ನೀತಿ ಸಮಿತಿಯ ಸಭೆಯ ನಂತರ ಸುದ್ದಿಗಾರರ ಬಳಿ ಹೇಳಿದ್ದಾರೆ.

'ದೇಶದ ಬ್ಯಾಂಕಿಂಗ್ ವ್ಯವಸ್ಥೆಯ ಶಕ್ತಿ, ಗಾತ್ರ ಮತ್ತು ಸ್ಥಿತಿಸ್ಥಾಪಕತ್ವ ಗುಣವು ಈಗ ಬೃಹತ್ ಆಗಿ ಬೆಳೆದಿದೆ. ಅದು ಯಾವುದೇ ಒಂದು ಘಟನೆಯಿಂದ ತೊಂದರೆಗೆ ಒಳಗಾಗದು' ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಬ್ಯಾಂಕ್‌ಗಳು ಯಾವುದೇ ಕಂಪನಿಯ ಮಾರುಕಟ್ಟೆ ಬಂಡವಾಳವನ್ನು ಗಮನಿಸಿ ಸಾಲ ಕೊಡುವ ತೀರ್ಮಾನ ಕೈಗೊಳ್ಳುವುದಿಲ್ಲ. ಕಂಪನಿಯ ಆರ್ಥಿಕ ಸ್ಥಿತಿ, ನಗದು ಹರಿವಿನ ಅಂದಾಜು ಮತ್ತು ಇತರ ಅಂಶಗಳನ್ನು ಆಧರಿಸಿ ತೀರ್ಮಾನ ಕೈಗೊಳ್ಳುತ್ತವೆ ಎಂದು ದಾಸ್ ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		**ಶಿವಮೊಗ್ಗ**		ಬೆಟ್ಟೆ	30899-43839
ಕೋಕ	12500-25000	ಬೆಟ್ಟೆ	47299-53109	ಬಿಳಿಗೋಟು	22899-32899
ಹಳತು	48000-54500	ಗೊಬರಲು	17001-35609	ಚಾಲಿ	28699-41000
ಹೊಸತು	22500-40000	ರಾಶಿ	38000-46750	ಕೆಂಪುಗೋಟು	27009-36099
ಕುಮಟ		ಸರಕು	50000-82030	ರಾಶಿ	30796-46310
ಚಿಪ್ಪು	27019-31899	**ಸಿದ್ದಾಪುರ**		**ಯಲ್ಲಾಪುರ**	
ಕೋಕ	17509-29019	ಬಿಳಿಗೋಟು	27000-32699	ಬಿಳಿಗೋಟು	23699-32501
ಫ್ಯಾಕ್ಟರಿ	12019-19700	ಚಾಲಿ	37699-39909	ಕೋಕ	16301-30899
ಹಳೆಚಾಲಿ	34699-38299	ಕೋಕ	26099-31899	ಹಳೆಚಾಲಿ	38899-40699
ಹೊಸಚಾಲಿ	33899-35729	ಕೆಂಪುಗೋಟು	31019-33469	ಹೊಸಚಾಲಿ	32299-38001
ಕುಂದಾಪುರ		ರಾಶಿ	42099-45699	ಕೆಂಪುಗೋಟು	24899-34969
ಹಳೆಚಾಲಿ	40000-49500	ತಟ್ಟಿಬೆಟ್ಟೆ	36299-39899	ರಾಶಿ	41699-48919
ಹೊಸಚಾಲಿ	35000-40000	**ಶಿರಸಿ**		ತಟ್ಟಿಬೆಟ್ಟೆ	38100-44019

ಕೆನರಾ ಬ್ಯಾಂಕ್‌ನ ಹೊಸ ಎಂ.ಡಿ. ಸತ್ಯನಾರಾಯಣ ರಾಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ. ಸತ್ಯನಾರಾಯಣ ರಾಜು ಅವರನ್ನು ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಸತ್ಯನಾರಾಯಣ ರಾಜು ಅವರು ಮಂಗಳವಾರ ಅಧಿಕಾರ ವಹಿಸಿಕೊಂಡಿದ್ದಾರೆ. ಹಿಂದೆ ಈ ಹುದ್ದೆಯಲ್ಲಿದ್ದ ಎಲ್.ವಿ. ಪ್ರಭಾಕರ್ ಅವರ ಅಧಿಕಾರ ಅವಧಿಯು ಡಿಸೆಂಬರ್ 31ಕ್ಕೆ ಕೊನೆಗೊಂಡಿದೆ.

ಸತ್ಯನಾರಾಯಣ ರಾಜು ಅವರು ಕೆನರಾ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕರಾಗಿಯೂ ಕರ್ತವ್ಯ ನಿಭಾಯಿಸಿದ್ದಾರೆ. ಅವರಿಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ 33 ವರ್ಷಗಳ ಅನುಭವ ಇದೆ ಎಂದು ಪ್ರಕಟಣೆ ತಿಳಿಸಿದೆ.

ತಿಪಟೂರು ಕೊಬ್ಬರಿ (ಕ್ವಿಂಟಲ್‌ಗೆ)

ಕನಿಷ್ಠ	₹9500
ಗರಿಷ್ಠ	₹10600
ಮಾದರಿ	₹10600
ಒಟ್ಟು ಆವಕ (ಚೀಲ)	4758

ಜಿ–20 ದೇಶಗಳಿಂದ ಭಾರತಕ್ಕೆ ಬರುವವರಿಗೆ ಯುಪಿಐ ಸೇವೆ

ಮುಂಬೈ (ಪಿಟಿಐ): ಜಿ–20 ದೇಶಗಳಿಂದ ಭಾರತಕ್ಕೆ ಬರುವವರು ಯುಪಿಐ ಸೇವೆಗಳನ್ನು ಭಾರತದಲ್ಲಿ ಬಳಸಲು ಆರ್‌ಬಿಐ ಅವಕಾಶ ಕಲ್ಪಿಸಿದೆ. ಆಯ್ದ ವಿಮಾನ ನಿಲ್ದಾಣಗಳ ಮೂಲಕ ಭಾರತ ಪ್ರವೇಶಿಸುವವರಿಗೆ ಮಾತ್ರ ಈ ಸೇವೆಯು ಈಗ ಲಭ್ಯವಿರಲಿದೆ.

ಮುಂದಿನ ದಿನಗಳಲ್ಲಿ ಈ ಸೇವೆಯನ್ನು ಎಲ್ಲ ದೇಶಗಳಿಂದ ಬರುವ ಪ್ರಯಾಣಿಕರಿಗೆ ವಿಸ್ತರಿಸುವ ಇರಾದೆಯನ್ನು ಆರ್‌ಬಿಐ ವ್ಯಕ್ತಪಡಿಸಿದೆ.

ನಾಣ್ಯ ವಿತರಿಸಲು ಯಂತ್ರ: ನಾಣ್ಯಗಳನ್ನು ವಿತರಿಸಲು ಕ್ಯೂಆರ್ ಕೋಡ್ ಆಧಾರಿತ ಯಂತ್ರವನ್ನು (ಕ್ಯೂಸಿವಿಎಮ್) ದೇಶದ 12 ನಗರಗಳ 19 ಸ್ಥಳಗಳಲ್ಲಿ ಪ್ರಾಯೋಗಿಕವಾಗಿ ಸೇವೆಗೆ ಮುಕ್ತವಾಗಿಸಲಾಗುವುದು ಎಂದು ದಾಸ್ ತಿಳಿಸಿದ್ದಾರೆ. ರೈಲು ನಿಲ್ದಾಣಗಳು, ಶಾಪಿಂಗ್ ಮಾಲ್‌ಗಳು ಹಾಗೂ ಮಾರುಕಟ್ಟೆಗಳಲ್ಲಿ ಇದನ್ನು ಇರಿಸಲಾಗುವುದು ಎಂದು ಹೇಳಿದ್ದಾರೆ.

ಈ ಯಂತ್ರಗಳು, ಯುಪಿಐ ಮೂಲಕ ಗ್ರಾಹಕರಿಂದ ಹಣ ಪಡೆದು ಅದಕ್ಕೆ ಪ್ರತಿಯಾಗಿ ನಾಣ್ಯಗಳನ್ನು ನೀಡುತ್ತವೆ. ಇಲ್ಲಿ, ಭೌತಿಕವಾಗಿ ನೋಟುಗಳನ್ನು ನೀಡಿ, ನಾಣ್ಯಗಳನ್ನು ಪಡೆಯುವ ಪ್ರಮೇಯ ಇರುವುದಿಲ್ಲ.

'ಈ ಯಂತ್ರಗಳಿಂದಾಗಿ ನಾಣ್ಯಗಳನ್ನು ಪಡೆದುಕೊಳ್ಳುವುದು ಸುಲಭವಾಗುತ್ತದೆ' ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ಪ್ರಾಯೋಗಿಕ ಬಳಕೆಯ ನಂತರದಲ್ಲಿ, ಈ ಯಂತ್ರಗಳ ಮೂಲಕ ನಾಣ್ಯಗಳನ್ನು ಗ್ರಾಹಕರಿಗೆ ನೀಡುವ ವ್ಯವಸ್ಥೆಯನ್ನು ಪ್ರಚುರಪಡಿಸುವ ಬಗ್ಗೆ ಬ್ಯಾಂಕ್‌ಗಳಿಗೆ ಮಾರ್ಗಸೂಚಿ ಹೊರಡಿಸಲಾಗುವುದು ಎಂದು ಅವರು ಹೇಳಿದ್ದಾರೆ.

ನೋಟುಗಳನ್ನು ಪಡೆದು ನಾಣ್ಯ ನೀಡುತ್ತಿದ್ದ ಯಂತ್ರಗಳಲ್ಲಿ ನಕಲಿ ನೋಟುಗಳು ಸಿಗುವುದು ಹೆಚ್ಚಾಯಿತು. ಇದನ್ನು ನಿವಾರಿಸುವ ಉದ್ದೇಶದಿಂದ ಯುಪಿಐ ಆಧಾರಿತ ಯಂತ್ರದ ಮೊರೆ ಹೋಗಬೇಕಾಯಿತು ಎಂದು ಡೆಪ್ಯುಟಿ ಗವರ್ನರ್ ಟಿ. ರವಿಶಂಕರ್ ಹೇಳಿದ್ದಾರೆ.

ಕೆಲವು ತರಕಾರಿ ಮಾರುಕಟ್ಟೆಗಳಲ್ಲಿ ನಾಣ್ಯ ವಿತರಿಸುವ ಯಂತ್ರ ಅಳವಡಿಸಲಾಗಿತ್ತು. ಆದರೆ ಅಲ್ಲಿ ನಕಲಿ ನೋಟುಗಳು ಸಿಗುವುದು ಹೆಚ್ಚಾಯಿತು.

ಡಿಜಿಟಲ್ ಕರೆನ್ಸಿ ಬಳಕೆದಾರರು 50 ಸಾವಿರ: ಆರ್‌ಬಿಐ ಈಚೆಗೆ ಚಿಲ್ಲರೆ ವಹಿವಾಟುಗಳಲ್ಲಿ ಪ್ರಾಯೋಗಿಕ ಬಳಕೆಗೆ ತಂದಿರುವ ಡಿಜಿಟಲ್ ಕರೆನ್ಸಿಯನ್ನು 50 ಸಾವಿರ ಜನ ಹಾಗೂ 5 ಸಾವಿರ ವರ್ತಕರು ಎಂಟು ಬ್ಯಾಂಕ್‌ಗಳ ಮೂಲಕ ಬಳಸುತ್ತಿದ್ದಾರೆ ಎಂದು ರವಿಶಂಕರ್ ಹೇಳಿದ್ದಾರೆ. ಇನ್ನೂ ಐದು ಬ್ಯಾಂಕ್‌ಗಳು ಈ ಸೇವೆಯನ್ನು ಆರಂಭಿಸಲಿವೆ.

ಚಿಲ್ಲರೆ ವಹಿವಾಟುಗಳಲ್ಲಿ ಡಿಜಿಟಲ್ ಕರೆನ್ಸಿಯ ಪ್ರಾಯೋಗಿಕ ಬಳಕೆಯು ಡಿಸೆಂಬರ್ 1ರಿಂದ ಶುರುವಾಗಿದೆ. ಇದುವರೆಗೆ 7.70 ಲಕ್ಷ ವಹಿವಾಟುಗಳು ನಡೆದಿವೆ.

ಈಗ 5 ನಗರಗಳಲ್ಲಿ ಪ್ರಾಯೋಗಿಕ ಬಳಕೆ ಜಾರಿಯಲ್ಲಿದೆ. ಇನ್ನೂ ಒಂಬತ್ತು ನಗರಗಳಿಗೆ ಇದನ್ನು ಹಂತ ಹಂತವಾಗಿ ವಿಸ್ತರಿಸುವ ಆಲೋಚನೆ ಇದೆ.

ದಂಡ ವಿಧಿಸುವುದಕ್ಕೆ ಮಾರ್ಗಸೂಚಿ

ಸಾಲದ ಕಂತನ್ನು ಸಕಾಲದಲ್ಲಿ ಪಾವತಿಸದೆ ಇದ್ದವರಿಗೆ ವಿಧಿಸುವ ದಂಡದ ವಿಚಾರವಾಗಿ ಪಾರದರ್ಶಕತೆ ಹೆಚ್ಚಿಸುವ ಹಾಗೂ ಗ್ರಾಹಕರ ಹಿತ ರಕ್ಷಿಸುವ ಉದ್ದೇಶದಿಂದ ಕರಡು ಮಾರ್ಗಸೂಚಿಯನ್ನು ಹೊರಡಿಸಲಾಗುತ್ತದೆ. ಈ ಮಾರ್ಗಸೂಚಿಗೆ ಸಂಬಂಧಪಟ್ಟ ಎಲ್ಲರಿಂದ ಪ್ರತಿಕ್ರಿಯೆ ಪಡೆಯಲಾಗುತ್ತದೆ ಎಂದು ದಾಸ್ ಹೇಳಿದ್ದಾರೆ.

ಸಾಲಕ್ಕೆ ಸಂಬಂಧಿಸಿದ ದಂಡಗಳನ್ನು ವಿಧಿಸುವ ವಿಚಾರದಲ್ಲಿ ನೀತಿಯನ್ನು ಹೊಂದಬೇಕು ಎಂಬ ನಿಯಮ ಈಗ ಇದೆ. ಆದರೆ, ಸಾಲ ನೀಡುವ ಸಂಸ್ಥೆಗಳ ನಡುವೆ ಏಕರೂಪದ ನೀತಿ ಇಲ್ಲ. 'ಕೆಲವು ಪ್ರಕರಣಗಳಲ್ಲಿ ಅತಿಯಾದ ದಂಡ ವಿಧಿಸಿರುವುದೂ ಇದೆ' ಎಂದು ಗವರ್ನರ್ ದಾಸ್ ಹೇಳಿದ್ದಾರೆ.

ರೆಪೊ ದರ ಮತ್ತೆ ಹೆಚ್ಚಿಸಿದ ಆರ್‌ಬಿಐ

ಒಂದನೇ ಪುಟದಿಂದ...

ಹೀಗಿದ್ದರೂ, ಆಹಾರ ಹಾಗೂ ಇಂಧನ ವಲಯ ಹೊರತುಪಡಿಸಿ ಇತರ ಉತ್ಪನ್ನಗಳು ಮತ್ತು ಸೇವೆಗಳ ಹಣದುಬ್ಬರ ದರವು 15 ತಿಂಗಳುಗಳಿಂದ ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿದೆ. 'ಇದು ಕಳವಳಕ್ಕೆ ಕಾರಣವಾಗಿದೆ. ಈ ಹಣದುಬ್ಬರದಲ್ಲಿ ನಿರ್ಣಾಯಕ ಇಳಿಕೆ ಕಾಣಬೇಕಿದೆ' ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಹಣದುಬ್ಬರದ ಪ್ರಮಾಣವನ್ನು ಪರಿಗಣಿಸಿ ಲೆಕ್ಕ ಹಾಕಿದರೆ, ರೆಪೊ ದರವು ಈಗಲೂ ಕೋವಿಡ್ ಪೂರ್ವದ ಮಟ್ಟಕ್ಕಿಂತ ಕಡಿಮೆ ಇದೆ ಎಂದು ಅವರು ತಿಳಿಸಿದ್ದಾರೆ.

ಏಪ್ರಿಲ್ 1ರಿಂದ ಶುರುವಾಗುವ ಹೊಸ ಆರ್ಥಿಕ ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಶೇ 6.4ಕ್ಕೆ ಇಳಿಕೆಯಾಗಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಈ ವರ್ಷದಲ್ಲಿ ಶೇ 7ರಷ್ಟು ಬೆಳವಣಿಗೆ ಆಗುವ ಅಂದಾಜು ಇದೆ.

'ಜಾಗತಿಕ ಆರ್ಥಿಕ ಮುನ್ನೋಟವು ಈಗ ಕೆಲವು ತಿಂಗಳುಗಳ ಹಿಂದೆ ಕಂಡಷ್ಟು ಕರಾಳವಾಗಿ ಕಾಣುತ್ತಿಲ್ಲ. ಪ್ರಮುಖ ಅರ್ಥ ವ್ಯವಸ್ಥೆಗಳಲ್ಲಿನ ಬೆಳವಣಿಗೆ ಸಾಧ್ಯತೆಯು ಈಗ ಸುಧಾರಿಸಿದೆ' ಎಂದು ಅವರು ಹೇಳಿದ್ದಾರೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 6.5ರಷ್ಟು ಇರಲಿದೆ ಎಂದು ಅಂದಾಜು ಮಾಡಲಾಗಿದೆ.

ಅಂಧರ ಕ್ರಿಕೆಟ್ ಟೂರ್ನಿ: ನಾಸಿರುದ್ದೀನ್ ಶತಕ

ಪಶ್ಚಿಮ ಬಂಗಾಳ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಆರಂಭಿಕ ಬ್ಯಾಟರ್ ನಾಸಿರುದ್ದೀನ್ ಅಹ್ಮದ್ (ಔಟಾಗದೆ 100 ರನ್, 71 ಎಸೆತ, 9 ಬೌಂಡರಿ) ಶತಕದ ನೆರವಿನಿಂದ ಪಶ್ಚಿಮ ಬಂಗಾಳ ಪುರುಷರ ವಿಭಾಗದ ರಾಷ್ಟ್ರಮಟ್ಟದ ಅಂಧರ ಟಿ20 ಟೂರ್ನಿಯಲ್ಲಿ ಗೋವಾ ತಂಡದ ವಿರುದ್ಧ 9 ರನ್‌ಗಳಿಂದ ಜಯಿಸಿತು.

ಸಮರ್ಥನಂ ಅಂಗವಿಕಲರ ಸಂಸ್ಥೆ, ಪ್ರಜಾವಾಣಿ, ಇಂಡಸ್‌ಇಂಡ್ ಬ್ಯಾಂಕ್, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ, ಕ್ರಿಕೆಟ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ ಸಹಯೋಗದಲ್ಲಿ ನಡೆದ 'ನಾಗೇಶ ಟ್ರೋಫಿ'ಯ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಶ್ಚಿಮ ಬಂಗಾಳ ತಂಡದವರು 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 197 ರನ್ ಕಲೆಹಾಕಿದರು. ಶಂಕರ್ ಮಹಾತೊ(39 ರನ್, 28 ಎಸೆತ, 4 ಬೌಂಡರಿ) ಉತ್ತಮ ಆಟವಾಡಿದರು.

ಪಶ್ಚಿಮ ಬಂಗಾಳ ತಂಡದ ಬ್ಯಾಟರ್ ನಾಸಿರುದ್ದೀನ್ ಅಹ್ಮದ್ ಸಂಭ್ರಮ

ಇದಕ್ಕೆ ಪ್ರತಿಯಾಗಿ ಗೋವಾ ತಂಡ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 188 ರನ್ ಗಳಿಸಿತು. ಅಫ್ತಾಬ್ ಪಟೇಲ್(54 ರನ್, 40 ಎಸೆತ), ಸಂದೀಪ ಘುಗೆ(57 ರನ್, 47 ಎಸೆತ, 7 ಬೌಂಡರಿ) ಅರ್ಧಶತಕ ಬಾರಿಸಿದರೂ ಗೆಲುವಿನ ದಡ ಮುಟ್ಟಲಿಲ್ಲ.

ಸಂಕ್ಷಿಪ್ತ ಸ್ಕೋರು: ಪಶ್ಚಿಮ ಬಂಗಾಳ: 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 197(ಶಂಕರ್ ಮಹಾತೊ 39, ನಾಸಿರುದ್ದೀನ್ ಅಹ್ಮದ್ 100, ಸುವೆಂದು ಮಹತಾ 12, ಮಾಂತು ದಾಸ್ 13)

ಗೋವಾ: 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 188(ಅಫ್ತಾಬ್ ಪಟೇಲ್ 54, ಗೌರವ ಝೂಡೆ 25, ಸಂದೀಪ ಘುಗೆ ಔಟಾಗದೆ 57, ಅಶುತೋಷ ಮಾವಸ್ಕರ್ 16, ಸುವೆಂದು ಮಹತಾ 32ಕ್ಕೆ 1). ಪಂದ್ಯಶ್ರೇಷ್ಠ: ನಾಸಿರುದ್ದೀನ್ ಅಹ್ಮದ್.

ಭಾರತ ಬಾಕ್ಸಿಂಗ್ ತಂಡ: ಕೋಚ್ ಸ್ಥಾನಕ್ಕೆ ಕುಟ್ಟಪ್ಪ ಮರು ನೇಮಕ

ನವದೆಹಲಿ (ಪಿಟಿಐ): ಕನ್ನಡಿಗ ಸಿ.ಎ.ಕುಟ್ಟಪ್ಪ ಅವರು ಭಾರತ ಪುರುಷರ ಬಾಕ್ಸಿಂಗ್ ತಂಡದ ಮುಖ್ಯ ಕೋಚ್ ಆಗಿ ಮತ್ತೊಂದು ಅವಧಿಗೆ ನೇಮಕಗೊಂಡಿದ್ದಾರೆ.

ಭಾರತ ತಂಡದ ಹೈ ಪರ್ಫಾಮೆನ್ಸ್ ನಿರ್ದೇಶಕ ಬರ್ನಾರ್ಡ್ ಡಾನ್ ಅವರ ಸಲಹೆಯ ಮೇರೆಗೆ ದ್ರೋಣಾಚಾರ್ಯ ಪ್ರಶಸ್ತಿ ವಿಜೇತ ಕುಟ್ಟಪ್ಪ ಅವರನ್ನು ನೇಮಿಸುವ ನಿರ್ಧಾರವನ್ನು ಭಾರತ ಬಾಕ್ಸಿಂಗ್ ಫೆಡರೇಷನ್ (ಬಿಎಫ್‌ಐ) ತೆಗೆದುಕೊಂಡಿದೆ.

ಮೈಸೂರಿನ ಕುಟ್ಟಪ್ಪ ಅವರು 2018 ರಿಂದ 2021ರ ಅಕ್ಟೋಬರ್‌ವರೆಗೆ ಪುರುಷರ ತಂಡದ ಮುಖ್ಯ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು. ಆ ಬಳಿಕ ನರೇಂದರ್ ರಾಣಾ ಅವರನ್ನು ಕೋಚ್ ಆಗಿ ನೇಮಕ ಮಾಡಲಾಗಿತ್ತು.

'ಫೆಡರೇಷನ್‌ನ ಆಡಳಿತ ಮಂಡಳಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕುಟ್ಟಪ್ಪ ಅವರು ಕೋಚಿಂಗ್ ತಂಡದಲ್ಲಿರಬೇಕು ಎಂಬುದು ಬರ್ನಾರ್ಡ್ ಬಯಸಿದ್ದರು' ಎಂದು ಬಿಎಫ್‌ಐ ಕಾರ್ಯದರ್ಶಿ ಹೇಮಂತ್ ಕಲಿತಾ ಹೇಳಿದ್ದಾರೆ.

ಸಿ.ಎ ಕುಟ್ಟಪ್ಪ

ಮುಖ್ಯ ಕೋಚ್ ಆಗಿ ಅಧಿಕಾರ ವಹಿಸಿದ್ದ ಬೆನ್ನಲ್ಲೇ ರಾಣಾ ಅವರು ಕೋಚಿಂಗ್ ತಂಡದಲ್ಲಿದ್ದ ಎಲ್ಲರನ್ನೂ ಬದಲಾಯಿಸಿ ಹೊಸ ತಂಡವನ್ನು ಕಟ್ಟಿದ್ದರು. ಮುಖ್ಯ ಕೋಚ್ ಹುದ್ದೆ ಕಳೆದುಕೊಂಡಿದ್ದರೂ, ಕುಟ್ಟಪ್ಪ ಅವರು ಕೋಚಿಂಗ್ ತಂಡಲ್ಲಿದ್ದರು.

ಮುಂದಿನ ದಿನಗಳಲ್ಲಿ ಪುರುಷರ ವಿಶ್ವ ಚಾಂಪಿಯನ್‌ಷಿಪ್, ಏಷ್ಯನ್ ಕ್ರೀಡಾಕೂಟ ಮತ್ತು ಒಲಿಂಪಿಕ್ಸ್ ಒಳಗೊಂಡಂತೆ ಪ್ರಮುಖ ಕೂಟಗಳು ಇರುವುದರಿಂದ ಕುಟ್ಟಪ್ಪ ಅವರು 2024ರ ಪ್ಯಾರಿಸ್ ಒಲಿಂಪಿಕ್ಸ್‌ವರೆಗೆ ಮುಖ್ಯ ಕೋಚ್ ಹುದ್ದೆಯಲ್ಲಿ ಮುಂದುವರಿಯುವ ಸಾಧ್ಯತೆಯಿದೆ.

ಸ್ಕ್ವಾಷ್: ಭಾರತ ತಂಡಗಳಿಗೆ ಜಯ

ಚೆನ್ನೈ (ಪಿಟಿಐ): ಭಾರತದ ತಂಡಗಳು ಬುಧವಾರ ಇಲ್ಲಿ ಆರಂಭವಾದ 21ನೇ ಏಷ್ಯನ್ ಜೂನಿಯರ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದವು.

ಪುರುಷರ ವಿಭಾಗದಲ್ಲಿ ಭಾರತ ತಂಡ 3–0 ರಲ್ಲಿ ಸಿಂಗಪುರ ಮತ್ತು ಚೀನಾ ತೈಪೆ ತಂಡಗಳನ್ನು ಮಣಿಸಿತು. ಎರಡನೇ ಶ್ರೇಯಾಂಕ ಹೊಂದಿರುವ ಆತಿಥೇಯ ತಂಡದ ಪಾರ್ಥ್ ಅಂಬಾನಿ, ಶೌರ್ಯ ಬಾವಾ ಮತ್ತು ಕೃಷ್ಣ ಮಿಶ್ರಾ ಅವರು ಎದುರಾಳಿಗಳ ವಿರುದ್ಧ ಗೆದ್ದರು.

ಮಹಿಳಾ ತಂಡದವರು 3–0 ರಲ್ಲಿ ಶ್ರೀಲಂಕಾ ತಂಡವನ್ನು ಸೋಲಿಸಿದರು. ಅನಾಹತ್ ಸಿಂಗ್ 11–6, 11–3, 11–2 ರಲ್ಲಿ ಚನಿತ್ಮಾ ಸಿನಯ್ ವಿರುದ್ಧ ಜಯಿಸಿದರು. ಪೂಜಾ ಆರತಿ ಮತ್ತು ಯುವ್ನಾ ಗುಪ್ತಾ ಅವರೂ ತಮ್ಮ ಎದುರಾಳಿಗಳನ್ನು ಮಣಿಸಿದರು.

ಏಷ್ಯಾ ಬ್ಯಾಡ್ಮಿಂಟನ್: ಧ್ರುವ್ ಕಪಿಲಾಗೆ ಸ್ಥಾನ

ನವದೆಹಲಿ (ಪಿಟಿಐ): ಧ್ರುವ್ ಕಪಿಲಾ ಅವರು ಫೆ.14 ರಿಂದ 19ರ ವರೆಗೆ ದುಬೈನಲ್ಲಿ ನಡೆಯಲಿರುವ ಬ್ಯಾಡ್ಮಿಂಟನ್ ಏಷ್ಯಾ ಮಿಶ್ರ ತಂಡ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಭಾರತ ತಂಡದಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಅವರು ಗಾಯಗೊಂಡಿರುವುದರಿಂದ ಬದಲಿ ಆಟಗಾರನಾಗಿ ಧ್ರುವ್‌ಗೆ ಅವಕಾಶ ಲಭಿಸಿದೆ. ಪುರುಷರ ಡಬಲ್ಸ್‌ನಲ್ಲಿ ಚಿರಾಗ್ ಶೆಟ್ಟಿ ಜತೆಗೆ ಆಡಬೇಕಿದ್ದ ಸಾತ್ವಿಕ್, ತೊಡೆಯ ಸ್ನಾಯು ಸೆಳೆತಕ್ಕೆ ಒಳಗಾಗಿದ್ದರಿಂದ ಕೂಟದಿಂದ ಹಿಂದೆ ಸರಿದಿದ್ದಾರೆ.

'ಬಿ' ಗುಂಪಿನಲ್ಲಿರುವ ಭಾರತ ತಂಡ, ತನ್ನ ಮೊದಲ ಪಂದ್ಯದಲ್ಲಿ ಫೆ.16 ರಂದು ಮಲೇಷ್ಯಾ ವಿರುದ್ಧ ಪೈಪೋಟಿ ನಡೆಸಲಿದೆ. ಯುಎಇ ಮತ್ತು ಕಜಕಸ್ತಾನ ಇದೇ ಗುಂಪಿನಲ್ಲಿವೆ.

ಲಕ್ಷ್ಯ ಸೇನ್ ಮತ್ತು ಎಚ್.ಎಸ್.ಪ್ರಣಯ್ ಪುರುಷರ ಸಿಂಗಲ್ಸ್‌ನಲ್ಲಿ ಹಾಗೂ ಪಿ.ವಿ.ಸಿಂಧು ಅವರು ಮಹಿಳಾ ವಿಭಾಗದ ಸಿಂಗಲ್ಸ್‌ನಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಗಾಯತ್ರಿ ಗೋಪಿಚಂದ್– ತ್ರಿಷಾ ಜೋಲಿ ಅವರು ಮಹಿಳೆಯರ ಡಬಲ್ಸ್‌ನಲ್ಲಿ ಹಾಗೂ ಇಶಾನ್ ಭಟ್ನಾಗರ್– ತನಿಷಾ ಕ್ರಾಸ್ಟೊ ಮಿಶ್ರ ಡಬಲ್ಸ್‌ನಲ್ಲಿ ಆಡಲಿದ್ದಾರೆ.

ಹಾಲಿ ಚಾಂಪಿಯನ್ ಚೀನಾ ಒಳಗೊಂಡಂತೆ ಒಟ್ಟು 17 ತಂಡಗಳು ಕಣದಲ್ಲಿವೆ. ತಂಡಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಿದ್ದು, ಪ್ರತಿ ಗುಂಪಿನಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆಯುವ ತಂಡಗಳು ಕ್ವಾರ್ಟರ್ ಫೈನಲ್ ಪ್ರವೇಶಿಸಲಿವೆ.

ಮೈಸೂರು ರೇಸ್

ಮಿಸ್ಟಿಕ್ ಬಾಂಡ್ ಗೆಲ್ಲುವ ನಿರೀಕ್ಷೆ

ವಿಕ್ಟೋರಿಯಾ ಜೋನ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಿಸ್ಟಿಕ್ ಬಾಂಡ್ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಡಬಲ್ ಟ್ರಬಲ್ 6, ಚಿಲ್ಲಿ ಬ್ರೀಝ್ 1, ಅಂಬಿಕ 3
2ನೇ ರೇಸ್: ಸ್ಟ್ಯಾಂಟೊ 7, ಡಿ ಅಡ್ಮಿರಲ್ 3, ಇಂಪೀರಿಯಸ್ 1
3ನೇ ರೇಸ್: ಸ್ಪಿರಿಚ್ಯುಯಲ್ ಫೋರ್ಸ್ 2, ಕ್ಯಾಲಿಫೋರ್ನಿಯಾ ಗೋಲ್ಡ್ 11, ಮಿಸ್ಟಿಕಲ್ ಮರ್ಲಿನ್ 9
4ನೇ ರೇಸ್: ಸಮಯ್ ಬಲ್ವಾನ್ 3, ಕೊಯೊಟೆ ಗರ್ಲ್ 2, ಎನ್.ಆರ್.ಐ ಪ್ಲಾನ್ 1
5ನೇ ರೇಸ್: ಮಿಸ್ಟಿಕ್ ಬಾಂಡ್ 5, ಟಾಮ್ ಕ್ರೂಸರ್ 8, ಅಂಕುಶ್ 1
6ನೇ ರೇಸ್: ಇಂಡಿಯನ್ ಪೇಟ್ರಿಯಾಟ್ 7, ಸ್ಮಾರ್ಟ್ ಕ್ಯಾಡಿಲಾಕ್ 8, ಎಡ್ಡಿ ದಿ ಈಗಲ್ 6
7ನೇ ರೇಸ್: ಸೆಫ್ಟಿನ 6, ಡಿಮಸ್ 13, ಕಂಟ್ರೀಸ್ ಲೈಟ್ 9

ಉತ್ತಮ ಬೆಟ್: ಸ್ಪಿರಿಚ್ಯುಯಲ್ ಫೋರ್ಸ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
3,4,5,6,7	2,3,4	5.6,7

ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೆಸ್ಟ್ ಸರಣಿ ಇಂದಿನಿಂದ; ಭಾರತ–ಆಸ್ಟ್ರೇಲಿಯಾ ಹಣಾಹಣಿ

ಸ್ಪಿನ್ ‘ಟೆಸ್ಟ್’ಗೆ ವೇದಿಕೆ ಸಿದ್ಧ

ಪ್ರಜಾವಾಣಿ ವಾರ್ತೆ

ನಾಗಪುರ: ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮೊದಲ ಪಂದ್ಯ ಗುರುವಾರ ಜಮ್ತಾದ ವಿಸಿಎ ಕ್ರೀಡಾಂಗಣದಲ್ಲಿ ಆರಂಭವಾಗಲಿದೆ. ಉಭಯ ತಂಡಗಳ ನಡುವಣ ’ಪೈಪೋಟಿ‘ಯ ಉತ್ತುಂಗಕ್ಕೇರುವ ಸರಣಿ ಇದು.

ಅದರಲ್ಲೂ ಆಸ್ಟ್ರೇಲಿಯಾ ತಂಡದ ಬ್ಯಾಟರ್‌ಗಳು ಹಾಗೂ ಭಾರತದ ಸ್ಪಿನ್ನರ್‌ಗಳ ನಡುವಣ ಜಿದ್ದಾಜಿದ್ದಿ ತಾರಕಕ್ಕೇರುವುದೇ ಈ ಸರಣಿಯ ಸಂಪ್ರದಾಯ. ಈ ಬಾರಿಯೂ ಭಾರತದ ಅನುಭವಿ ಆಫ್ ಸ್ಪಿನ್ನರ್ ಆರ್. ಅಶ್ವಿನ್ ಮತ್ತು ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಅವರನ್ನು ಎದುರಿಸುವ ಬಗ್ಗೆಯೇ ಆಸ್ಟ್ರೇಲಿಯಾ ಬ್ಯಾಟರ್‌ಗಳು ಚಿತ್ತ ನೆಟ್ಟಿದ್ದಾರೆ. ಅದಕ್ಕಾಗಿಯೇ ಈ ಇಬ್ಬರೂ ಸ್ಪಿನ್ನರ್‌ಗಳ ಶೈಲಿಯಲ್ಲಿ ಬೌಲಿಂಗ್ ಮಾಡುವ ಇಬ್ಬರು ಭಾರತೀಯರ ನೆರವು ಪಡೆದಿದೆ ಪ್ಯಾಟ್ ಕಮಿನ್ಸ್ ಬಳಗ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಆಡುವುದರಿಂದ ಆಸ್ಟ್ರೇಲಿಯಾ ಆಟಗಾರರಿಗೆ ಇಲ್ಲಿಯ ವಾತಾವಾರಣ ಮತ್ತು ಪಿಚ್‌ಗಳ ಸ್ಥಿತಿ ಗೊತ್ತಿದೆ. ಆದರೂ ಬಿಸಿಲಿನ ಝಳ ಹಾಗೂ ದೂಳೆಬ್ಬಿಸುವ ಪಿಚ್‌ನಲ್ಲಿ ಆಡುವ ಸವಾಲು ಆಸ್ಟ್ರೇಲಿಯಾ ಮುಂದಿದೆ.

ಇದೆಲ್ಲದರೆ ಜೊತೆಗೆ ಈ ಸರಣಿಯಲ್ಲಿ ಜಯಿಸುವುದು ಉಭಯ ತಂಡಗಳಿಗೂ ಮುಖ್ಯವಾಗಿದೆ. ಏಕೆಂದರೆ, ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಟ್ಟಿಯಲ್ಲಿ ಆಸ್ಟ್ರೇಲಿಯಾ ಮತ್ತು ಭಾರತ, ಅಗ್ರ ಎರಡು ಸ್ಥಾನಗಳಲ್ಲಿವೆ.

ಬಾರ್ಡರ್–ಗಾವಸ್ಕರ್ ಟ್ರೋಫಿಯೊಂದಿಗೆ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹಾಗೂ ಆಸ್ಟ್ರೇಲಿಯಾದ ನಾಯಕ ಪ್ಯಾಟ್ ಕಮಿನ್ಸ್ –ಎಎಫ್‌ಪಿ ಚಿತ್ರ

ತಮ್ಮ ಸ್ಥಾನಗಳನ್ನು ಉಳಿಸಿಕೊಂಡರೆ ಮಾತ್ರ ಫೈನಲ್ ಹಾದಿ ಸುಗಮವಾಗಲಿದೆ. ಅದಕ್ಕೆ ಬೇಕಾಗಿರುವ ಅಂಕಗಳನ್ನು ಗಳಿಸಲು ಈ ಸರಣಿ ನಿರ್ಣಾಯಕವಾಗಿದೆ.

ಇದಲ್ಲದೆ, ಆಸ್ಟ್ರೇಲಿಯಾ ತಂಡಕ್ಕೆ ಸೇಡು ತೀರಿಸಿಕೊಳ್ಳುವ ಛಲವೂ ಇದೆ. 2018–19 ಹಾಗೂ 2020–21ರಲ್ಲಿ ತಮ್ಮದೇ ನೆಲದಲ್ಲಿ ಆಸ್ಟ್ರೇಲಿಯಾ ತಂಡವು ಭಾರತಕ್ಕೆ ಮಣಿದಿದ್ದು ಇತಿಹಾಸ. 2004ರಲ್ಲಿ ಭಾರತದಲ್ಲಿ ನಡೆದಿದ್ದ ಸರಣಿಯಲ್ಲಿ ಮ್ಯಾಥ್ಯೂ ಹೇಡನ್, ಜಸ್ಟಿನ್ ಲ್ಯಾಂಗರ್, ಗ್ಲೆನ್ ಮೆಕ್‌ಗ್ರಾ ಅಥವಾ ಆ್ಯಡಂ ಗಿಲ್‌ಕ್ರಿಸ್ಟ್ ಅವರು ಆಡಿದ್ದ ಶೈಲಿಯನ್ನು ಅನುಕರಿಸಿದರೆ ಆಸ್ಟ್ರೇಲಿಯಾ ಯಶಸ್ಸು ಗಳಿಸಬಹುದು.

ಅದಕ್ಕಾಗಿಯೇ ಸ್ಟೀವ್ ಸ್ಮಿತ್, ‘ಭಾರತದಲ್ಲಿ ಟೆಸ್ಟ್ ಸರಣಿ ಜಯಿಸುವುದೆಂದರೆ ಆ್ಯಷಸ್‌ಗಿಂತಲೂ ಮಹತ್ವದ್ದು’ ಎಂದಿದ್ದಾರೆ.

ಈ ಸರಣಿಯು ರೋಹಿತ್ ನಾಯಕತ್ವಕ್ಕೂ ‘ಟೆಸ್ಟ್’ ಆಗಲಿದೆ. ತಮ್ಮ ನಿಕಟಪೂರ್ವ ನಾಯಕ ವಿರಾಟ್ ಕೊಹ್ಲಿ ಸಾಧನೆಯನ್ನು ಸರಿಗಟ್ಟುವ ಸವಾಲು ಅವರ ಮುಂದಿದೆ.

ಈಚೆಗೆ ಕಾರು ಅಪಘಾತವೊಂದರಲ್ಲಿ ಗಾಯಗೊಂಡಿರುವ ರಿಷಭ್ ಪಂತ್ ಹಾಗೂ ಫಿಟ್‌ನೆಸ್ ಶಿಬಿರದಲ್ಲಿರುವ ವೇಗಿ ಜಸ್‌ಪ್ರೀತ್ ಬೂಮ್ರಾ ಅವರಿಲ್ಲದ ತಂಡವನ್ನು ರೋಹಿತ್ ಮುನ್ನಡೆಸುತ್ತಿದ್ದಾರೆ. ಉತ್ತಮ ಲಯದಲ್ಲಿರುವ ಶುಭಮನ್ ಗಿಲ್, ಕೊಹ್ಲಿ, ಚೇತೇಶ್ವರ್ ಪೂಜಾರ ಅವರ ಮೇಲೆ ಹೆಚ್ಚು ನಿರೀಕ್ಷೆಗಳಿವೆ. ಪದಾರ್ಪಣೆ ಮಾಡುತ್ತಿರುವ ಸೂರ್ಯಕುಮಾರ್ ಯಾದವ್ ಟೆಸ್ಟ್‌ನಲ್ಲಿಯೂ ಮಿಸ್ಟರ್ 360 ಡಿಗ್ರಿ ಬ್ಯಾಟರ್ ಖ್ಯಾತಿ ಉಳಿಸಿಕೊಳ್ಳುವರೇ ಎಂಬ ಕುತೂಹಲ ಗರಿಗೆದರಿದೆ.

ಪಿಚ್ ಪರಿಸ್ಥಿತಿ ಆಧಾರದಲ್ಲಿ ಎಡಗೈ ಸ್ಪಿನರ್‌ಗಳಾದ ರವೀಂದ್ರ ಜಡೇಜ, ಅಕ್ಷರ್ ಪಟೇಲ್ ಮತ್ತು ಕುಲದೀಪ್ ಯಾದವ್ ಅವರಲ್ಲಿ ಒಬ್ಬರು ಅಥವಾ ಇಬ್ಬರು ಅವಕಾಶ ಪಡೆಯಬಹುದು. ಪ್ರವಾಸಿ ಬಳಗದಲ್ಲಿ ಅನುಭವಿ ನೇಥನ್ ಲಯನ್ ಆತಿಥೇಯರಿಗೆ ಸ್ಪಿನ್ ಅಸ್ತ್ರ ಪ್ರಯೋಗಿಸಲು ಸಿದ್ಧರಾಗಿದ್ದಾರೆ. ಕೋನಾ ಭರತ್ ಅಥವಾ ಕನ್ನಡಿಗ ಕೆ.ಎಲ್. ರಾಹುಲ್ ಅವರಿಗೆ ವಿಕೆಟ್‌ಕೀಪಿಂಗ್ ಹೊಣೆ ಲಭಿಸಬಹುದು. ಮೇಲ್ನೋಟಕ್ಕೆ ಸ್ಪಿನ್ ಸ್ನೇಹಿಯಂತೆಯೇ ಕಾಣುತ್ತಿರುವ ಪಿಚ್‌ನಲ್ಲಿ ಟಾಸ್ ಗೆದ್ದ ತಂಡದ ನಿರ್ಣಯವೂ ಪ್ರಮುಖವಾಗಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬಲಾಬಲ

102	ಪಂದ್ಯಗಳು
30	ಭಾರತ ಜಯ
43	ಆಸ್ಟ್ರೇಲಿಯಾ ಜಯ
1	ಟೈ
28	ಡ್ರಾ

ಭಾರತದ ಆರ್. ಅಶ್ವಿನ್ ಬೌಲಿಂಗ್ ಅಭ್ಯಾಸ ನಡೆಸಿದರು –ಎಎಫ್‌ಪಿ ಚಿತ್ರ

ರಾಹುಲ್‌ಗಿಂತ ಶುಭಮನ್‌ಗೆ ಅವಕಾಶ ಕೊಡಲಿ: ರವಿಶಾಸ್ತ್ರಿ

ನಾಗಪುರ (ಪಿಟಿಐ): ಉಪನಾಯಕರಾದ ಕಾರಣಕ್ಕಾಗಿ ಕಣಕ್ಕಿಳಿಯುವ ಹನ್ನೊಂದು ಆಟಗಾರರ ಬಳಗದಲ್ಲಿ ಸ್ಥಾನ ನೀಡಲೇಬೇಕಾದ ಅನಿವಾರ್ಯತೆ ಇರಬಾರದು. ಅವರ ಪ್ರದರ್ಶನಕ್ಕೆ ಅನುಗುಣವಾಗಿ ಅವಕಾಶ ನೀಡಬೇಕು ಎಂದು ಕ್ರಿಕೆಟ್ ವೀಕ್ಷಕ ವಿವರಣೆಗಾರ ರವಿಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ.

ಬಾರ್ಡರ್–ಗಾವಸ್ಕರ್ ಟೆಸ್ಟ್ ಸರಣಿಯ ಮುನ್ನಾದಿನವಾದ ಬುಧವಾರ ‘ಐಸಿಸಿ ರಿವೀವ್’ನಲ್ಲಿ ಮಾತನಾಡಿದ ಅವರು, ‘ಉತ್ತಮ ಫಾರ್ಮ್‌ನಲ್ಲಿರುವ ಶುಭಮನ್ ಗಿಲ್ ಅವರಿಗೆ ಅಂತಿಮ ಹನ್ನೊಂದರಲ್ಲಿ ಸ್ಥಾನ ಲಭಿಸಬೇಕು. ಕೆ.ಎಲ್. ರಾಹುಲ್‌ಗೆ ಉಪನಾಯಕನೆಂಬ ಕಾರಣಕ್ಕೆ ಸ್ಥಾನ ನೀಡುವುದಕ್ಕಿಂತ ಸಾಧನೆ ಮತ್ತು ಫಾರ್ಮ್‌ನ ಆಧಾರದಲ್ಲಿ ಅವಕಾಶ ಕೊಡಬೇಕು’ ಎಂದರು.

‘ಇತ್ತೀಚೆಗೆ ನಿಗದಿಯ ಓವರ್‌ಗಳ ಪಂದ್ಯಗಳಲ್ಲಿ ಶುಭಮನ್ ಅಮೋಘ ಆಟವಾಡಿದ್ದಾರೆ. ಆದ್ದರಿಂದ ಅವರನ್ನೇ ಪರಿಗಣಿಸುವುದು ಉಚಿತ. ಆದರೆ ಈ ನಿರ್ಧಾರ ತಂಡದ ವ್ಯವಸ್ಥಾಪಕ ಸಮಿತಿಯ ಮೇಲೆ ಬಿಟ್ಟಿದ್ದು’ ಎಂದರು.

‘ಟೆಸ್ಟ್‌ಗೆ ಪದಾರ್ಪಣೆ ಮಾಡುತ್ತಿರುವ ಸೂರ್ಯಕುಮಾರ್ ಯಾದವ್ ಐದನೇ ಕ್ರಮಾಂಕಕ್ಕೆ ಸೂಕ್ತ’ ಎಂದೂ ಶಾಸ್ತ್ರಿ ಹೇಳಿದ್ದಾರೆ.

ಜೂನ್ 7 ರಿಂದ ಡಬ್ಲ್ಯುಟಿಸಿ ಫೈನಲ್

ದುಬೈ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ (ಡಬ್ಲ್ಯುಟಿಸಿ) ಫೈನಲ್ ಪಂದ್ಯ ಇಂಗ್ಲೆಂಡ್‌ನ ದಿ ಓವಲ್ ಮೈದಾನದಲ್ಲಿ ಜೂನ್ 7 ರಿಂದ 11ರ ವರೆಗೆ ನಡೆಯಲಿದೆ. ಜೂನ್ 12 ರಿಸರ್ವ್ ದಿನವಾಗಿ ಮೀಸಲಿಡಲಾಗಿದೆ ಎಂದು ಐಸಿಸಿ ಹೇಳಿದೆ.

ಐಸಿಸಿ ವಿಶ್ವ ಟೆಸ್ಟ್ ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಮೊದಲ ಎರಡು ಸ್ಥಾನಗಳಲ್ಲಿರುವ ತಂಡಗಳು ಡಬ್ಲ್ಯುಟಿಸಿ ಫೈನಲ್‌ನಲ್ಲಿ ಆಡಲಿವೆ. ಇದೀಗ ಆಸ್ಟ್ರೇಲಿಯಾ ಮತ್ತು ಭಾರತ ಕ್ರಮವಾಗಿ ಮೊದಲ ಎರಡು ಸ್ಥಾನಗಳಲ್ಲಿವೆ. ಆದರೆ ಜೂನ್‌ಗೆ ಮುನ್ನ ಇನ್ನೂ ಕೆಲವು ಟೆಸ್ಟ್ ಸರಣಿಗಳು ನಡೆಯಲಿರುವುದರಿಂದ ರ‍್ಯಾಂಕಿಂಗ್ ಪಟ್ಟಿಯಲ್ಲಿ ಏರುಪೇರು ಉಂಟಾಗಬಹುದು.

ಆಸ್ಟ್ರೇಲಿಯಾ ಮತ್ತು ಭಾರತ ತಂಡಗಳು ನಾಲ್ಕು ಪಂದ್ಯಗಳ ‘ಬಾರ್ಡರ್–ಗಾವಸ್ಕರ್’ ಟ್ರೋಫಿ ಸರಣಿಯಲ್ಲಿ ಎದುರಾಗಲಿವೆ. ಭಾರತ ಮತ್ತು ಆಸ್ಟ್ರೇಲಿಯಾ ಒಳಗೊಂಡಂತೆ ಒಟ್ಟು ಆರು ತಂಡಗಳಿಗೆ ಡಬ್ಲ್ಯುಟಿಸಿ ಫೈನಲ್‌ಗೆ ಅರ್ಹತೆ ಪಡೆಯಲು ಅವಕಾಶವಿದೆ.

ಶ್ರೀಲಂಕಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಕ್ರಮವಾಗಿ 3 ಹಾಗೂ 4ನೇ ಸ್ಥಾನಗಳಲ್ಲಿವೆ. ಇವೆರಡು ತಂಡಗಳು ಎರಡು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಕ್ರಮವಾಗಿ ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳನ್ನು ಎದುರಿಸಲಿವೆ. ಶ್ರೀಲಂಕಾ ಮತ್ತು ದಕ್ಷಿಣ ಆಫ್ರಿಕಾ ಗೆಲುವು ಪಡೆದರೆ ಫೈನಲ್‌ಗೆ ಅರ್ಹತೆ ಪಡೆಯಲು ಅವಕಾಶವಿದೆ.

ಫೈನಲ್‌ನಲ್ಲಿ ಸ್ಥಾನ ಖಚಿತಪಡಿಸಿಕೊಳ್ಳಲು ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳಿಗೆ ‘ಬಾರ್ಡರ್–ಗಾವಸ್ಕರ್’ ಟ್ರೋಫಿ ಸರಣಿ ಮಹತ್ವದ್ದಾಗಿವೆ.

ರಣಜಿ ಟ್ರೋಫಿ ಸೆಮಿಫೈನಲ್: ಸೌರಾಷ್ಟ್ರ ಬೌಲರ್‌ಗಳಿಗೆ ಅಗರವಾಲ್–ಶರತ್ ದಿಟ್ಟ ಉತ್ತರ

ಮಯಂಕ್ ಅಗರವಾಲ್ ಮನಮೋಹಕ ಶತಕ

• ಗಿರೀಶ ದೊಡ್ಡಮನಿ

ಬೆಂಗಳೂರು: ಆರಂಭಿಕ ಬ್ಯಾಟರ್ ಮಯಂಕ್ ಅಗರವಾಲ್ ಬುಧವಾರ ಸೌರಾಷ್ಟ್ರ ಎದುರು ರಣಜಿ ಟ್ರೋಫಿ ಸೆಮಿಫೈನಲ್‌ನಲ್ಲಿ ಗಳಿಸಿದ ಶತಕವು ಅವರು ಈ ಮೊದಲು ಗಳಿಸಿದ ಎಲ್ಲ ಶತಕಗಳಿಗಿಂತಲೂ ವಿಶೇಷವಾದದ್ದು.

ಅವರ ಆಟದಿಂದಾಗಿ ಕರ್ನಾಟಕ ತಂಡವು ಪಂದ್ಯದ ಮೊದಲ ದಿನವೇ ಅಲ್ಪಮೊತ್ತಕ್ಕೆ ಮುಗ್ಗರಿಸುವುದು ತಪ್ಪಿತು. ಗುಂಪು ಹಂತದಲ್ಲಿ ಮಿಂಚಿದ್ದ ಬ್ಯಾಟರ್‌ಗಳೆಲ್ಲರೂ ಸೌರಾಷ್ಟ್ರ ಬೌಲರ್‌ಗಳ ಶಿಸ್ತಿನ ದಾಳಿಗೆ ಶರಣಾದರು. ಕೇವಲ 112 ರನ್‌ಗಳಿಗೆ ಐದು ವಿಕೆಟ್‌ಗಳು ಪತನವಾದವು. ಆದರೆ, ಆತ್ಮವಿಶ್ವಾಸಭರಿತರಾಗಿ ಆಡಿದ ಮಯಂಕ್ (ಬ್ಯಾಟಿಂಗ್ 110) ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ ಶರತ್ ಶ್ರೀನಿವಾಸ್ (ಬ್ಯಾಟಿಂಗ್ 50) ಅವರೊಂದಿಗೆ 117 ರನ್ ಸೇರಿಸಿದರು.

ಇದರಿಂದಾಗಿ ದಿನದಾಟದ ಕೊನೆಗೆ ತಂಡವು 87 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 229 ರನ್ ಗಳಿಸಲು ಸಾಧ್ಯವಾಯಿತು.

ಈ ಪಂದ್ಯದಲ್ಲಿ ಮಯಂಕ್ ಬ್ಯಾಟಿಂಗ್ ಶೈಲಿ ಕೊಂಚ ಭಿನ್ನವಾಗಿತ್ತು. ಬಹುತೇಕ ಪ್ರತಿ ಓವರ್‌ನಲ್ಲಿಯೂ ಒಂದೆರಡು ಎಸೆತಗಳನ್ನು ಕ್ರೀಸ್‌ನಿಂದ ಮುಂದೆ ಬಂದು ಎದುರಿಸುವ ಆಕ್ರಮಣಕಾರಿ ಶೈಲಿ ಅನುಸರಿಸಿದರು. ಇದು ಫೀಲ್ಡರ್‌ಗಳ ಮೇಲೆ ಒತ್ತಡ ಹೆಚ್ಚಿಸಿತು. ಅಲ್ಲದೇ ಒಂಟಿ ಮತ್ತು ಎರಡು ರನ್ ಪಡೆಯುವಲ್ಲಿ ಅವರು ಅಪಾರ ಚುರುಕುತನ ಮೆರೆದರು. ಅಂದದ ಡ್ರೈವ್ ಮತ್ತು ಕಲಾತ್ಮಕ ಕಟ್ ಅವರ ಬ್ಯಾಟಿಂಗ್‌ನಲ್ಲಿತ್ತು. 105 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಶತಕ ಪೂರೈಸಲು ಒಟ್ಟು 215 ಎಸೆತಗಳನ್ನು ಎದುರಿಸಿದರು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 15ನೇ ಹಾಗೂ ಈ ಸರಣಿಯಲ್ಲಿ ಮೂರನೇ ಬಾರಿ ಶತಕ ಗಳಿಸಿದರು.

ಇನ್ನೊಂದೆಡೆ ಬಿ.ಆರ್. ಶರತ್ ಅನಾರೋಗ್ಯದ ಕಾರಣ ವಿಶ್ರಾಂತಿ ಪಡೆದಿದ್ದರಿಂದ ಕಣಕ್ಕಿಳಿದ ಶರತ್ ಶ್ರೀನಿವಾಸ್ 120 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಅದಕ್ಕಾಗಿ 177 ನಿಮಿಷಗಳನ್ನು ಕ್ರೀಸ್‌ನಲ್ಲಿ ಕಳೆದರು. ಇಬ್ಬರ ಜೊತೆಯಾಟವು ಕ್ರೀಡಾಂಗಣದಲ್ಲಿ ಸೇರಿದ್ದ ಅಭಿಮಾನಿಗಳಿಗೆ ಮುದ ನೀಡಿತು.

ಶಿಸ್ತಿನ ಬೌಲಿಂಗ್: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಸೌರಾಷ್ಟ್ರ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬೌಲರ್‌ಗಳು ಆತಿಥೇಯ ಬ್ಯಾಟರ್‌ಗಳ ದೌರ್ಬಲ್ಯಗಳನ್ನು ಬಹಿರಂಗಗೊಳಿಸಿದರು. ಭಾರತ ತಂಡದಲ್ಲಿ ಆಡಲು ತೆರಳಿರುವ ಜೈದೇವ್ ಉನದ್ಕತ್ ಗೈರುಹಾಜರಿಯಲ್ಲಿ ಹೊಣೆ ಹಂಚಿಕೊಂಡ ಮಧ್ಯಮವೇಗಿ ಖುಷಾಂಗ್ ಪಟೇಲ್ ಹಾಗೂ ಎಡಗೈ ಬೌಲರ್ ಚೇತನ್ ಸಕಾರಿಯಾ ಕರ್ನಾಟಕಕ್ಕೆ ಪೆಟ್ಟುಕೊಟ್ಟರು.

ಆರನೇ ಓವರ್‌ನಲ್ಲಿ ಸಮರ್ಥ್ ವಿಕೆಟ್ ಗಳಿಸಿದ ಪಟೇಲ್ ಸಂಭ್ರಮಿಸಿದರು. ಎರಡು ಬೌಂಡರಿ ಹೊಡೆದು ವಿಶ್ವಾಸ ಮೂಡಿಸಿದ್ದ ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್, ವಿಕೆಟ್ ಕಬಳಿಸುವಲ್ಲಿ ಸಕಾರಿಯಾ ಯಶಸ್ವಿಯಾದರು. ಯುವ ಬ್ಯಾಟರ್ ನಿಕಿನ್ ಜೋಸ್ (18; 66ಎ) ಅವರ ಏಕಾಗ್ರತೆಯನ್ನು ಭಂಗಗೊಳಿಸಿದ ಪಟೇಲ್ ವಿಕೆಟ್ ಗಳಿಸಿದರು. ಅನುಭವಿ ಮನೀಷ್ ಪಾಂಡೆ ಜೊತೆಗೆ ಮಯಂಕ್ ತಾಳ್ಮೆಯಿಂದ ಆಡಿದರು. ಆದರೆ ಊಟ ಮುಗಿಸಿ ಬಂದ ನಂತರ ಮೊದಲ ವಿಕೆಟ್ ಪತನವಾಗಿದ್ದು ಪಾಂಡೆಯರದ್ದೇ!

ಕಳೆದ ಪಂದ್ಯದಲ್ಲಿ ಶತಕ ಗಳಿಸಿದ್ದ ಶ್ರೇಯಸ್ ಗೋಪಾಲ್ (15; 29ಎ) ಇಲ್ಲಿ ರನೌಟ್ ಆದರು.

ಶತಕ ಗಳಿಸಿದ ಸಂಭ್ರಮದಲ್ಲಿ ಕರ್ನಾಟಕದ ಮಯಂಕ್ ಅಗರವಾಲ್ –ಪ್ರಜಾವಾಣಿ ಚಿತ್ರ/ವಿ.ಪುಷ್ಕರ್

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ: 5ಕ್ಕೆ229 (87 ಓವರ್‌ಗಳಲ್ಲಿ)

ಸಮರ್ಥ್ ಸಿ ವಿಶ್ವರಾಜ್ ಸಿಂಹ ಬಿ ಪಟೇಲ್ 3 (20ಎ), ಮಯಂಕ್ ಬ್ಯಾಟಿಂಗ್ 110 (246ಎ, 4X11,6X1), ದೇವದತ್ತ ಸಿ ಜ್ಯಾಕ್ಸನ್ ಬಿ ಸಕಾರಿಯಾ 9 (8ಎ, 4X2), ನಿಕಿನ್ ಸಿ ದೇಸಾಯಿ ಬಿ ಪಟೇಲ್ 18 (66ಎ,4X2), ಮನೀಷ್ ಸಿ ಸ್ನೆಲ್ ಬಿ ಮಂಕಡ್ 7 (13ಎ, 4X1), ಶ್ರೇಯಸ್ ರನ್‌ಔಟ್ (ಬದಲೀ) ವ್ಯಾಸ್ 15 (29ಎ, 4X2), ಶರತ್ ಬ್ಯಾಟಿಂಗ್ 58 (143ಎ, 4X4)

ಇತರೆ: 9 (ಬೈ 5, ಲೆಗ್‌ಬೈ 1, ನೋಬಾಲ್ 3)

ವಿಕೆಟ್ ಪತನ: 1–12 (ಸಮರ್ಥ್; 5.5), 2–21 (ದೇವದತ್ತ ಪಡಿಕ್ಕಲ್; 8.1), 3–68 (ನಿಕಿನ್ ಜೋಸ್; 28.3), 4–79 (ಮನೀಷ್ ಪಾಂಡೆ;31.6), 5–112 (ಶ್ರೇಯಸ್ ಗೋಪಾಲ್; 40.3)

ಬೌಲಿಂಗ್: ಚೇತನ್ ಸಕಾರಿಯಾ 17–5–39–1, ಖುಷಾಂಗ್ ಪಟೇಲ್ 16–0–64–2, ಚಿರಾಗ್ ಜಾನಿ 15–5–25–0, ಪ್ರೇರಕ್ ಮಂಕಡ್ 18–3–42–1, ಧರ್ಮೇಂದ್ರಸಿಂಹ ಜಡೇಜ 14–2–28–0, ಪಾರ್ಥ್ ಭುತ್ 7–1–25–0.

ಸುದೀಪ್, ಮಜುಂದಾರ್ ಶತಕ

ಇಂದೋರ್ (ಪಿಟಿಐ): ಸುದೀಪ್ ಕುಮಾರ್ ಘರಮಿ ಹಾಗೂ ಅನುಸ್ಟುಪ್ ಮಜುಂದಾರ್ ಅವರ ಶತಕಗಳ ನೆರವಿನಿಂದ ಬಂಗಾಳ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎರಡನೇ ಸೆಮಿಫೈನಲ್‌ನಲ್ಲಿ ಮೊದಲ ದಿನ ಉತ್ತಮ ಮೊತ್ತ ಗಳಿಸಿತು.

ಹೋಳ್ಕರ್ ಕ್ರಿಕೆಟ್ ಮೈದಾನದಲ್ಲಿ ಬುಧವಾರ ಆರಂಭವಾದ ಪಂದ್ಯದಲ್ಲಿ ಬಂಗಾಳ ತಂಡವು ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಸುದೀಪ್ (112; 213ಎ, 4X12, 6X2) ಹಾಗೂ ಅನುಸ್ಟುಪ್ (120; 206ಎ, 3X13, 6X1) ಮೂರನೇ ವಿಕೆಟ್ ಜೊತೆಯಾಟದಲ್ಲಿ 241 ರನ್ ಸೇರಿಸಿದರು. ಇದರಿಂದಾಗಿ ತಂಡವು ದಿನದಾಟದ ಕೊನೆಗೆ 87 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 307 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಂಗಾಳ: 87 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 307 (ಅಭಿಮನ್ಯು ಈಶ್ವರನ್ 27, ಕರಣ್ ಲಾಲ್ 23, ಸುದೀಪಕುಮಾರ್ ಘರಮಿ 112, ಅನುಸ್ಟುಪ್ ಮಜುಂದಾರ್ 120, ಅನುಭವ್ ಅಗರವಾಲ್ 21ಕ್ಕೆ2) ವಿರುದ್ಧ ಮಧ್ಯಪ್ರದೇಶ.

ಸೂಪರ್ ಡಿವಿಷನ್ ಹಾಕಿ ಲೀಗ್‌ನಲ್ಲಿ ಚಾಂಪಿಯನ್ ಆದ ವಿ.ರಾಜಾ ಹಾಕಿ ಕ್ಲಬ್ ತಂಡಕ್ಕೆ ಟ್ರೋಫಿ ವಿತರಿಸಲಾಯಿತು

ಹಾಕಿ: ವಿ.ರಾಜಾ ತಂಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿ.ರಾಜಾ ಹಾಕಿ ಕ್ಲಬ್ ತಂಡದವರು ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ (ಕೆಎಸ್‌ಎಚ್‌ಎ) ಆಶ್ರಯದ ಸೂಪರ್ ಡಿವಿಷನ್ ಲೀಗ್‌ನಲ್ಲಿ ಚಾಂಪಿಯನ್ ಆದರು.

ಬುಧವಾರ ನಡೆದ ಕೊನೆಯ ಲೀಗ್ ಪಂದ್ಯದಲ್ಲಿ ವಿ. ರಾಜಾ ತಂಡ 3–0 ಗೋಲುಗಳಿಂದ ರೇನ್‌ಬೋ ಹಾಕಿ ಕ್ಲಬ್ ತಂಡವನ್ನು ಮಣಿಸಿತು. ಕರಣ್ (5ನೇ ನಿ.), ವಿ.ರಾಜಾ (14) ಮತ್ತು ಪುಲಕಿತ್ (20) ಅವರು ಗೋಲು ಗಳಿಸಿ ಗೆಲುವಿನ ರೂವಾರಿಗಳಾದರು.

ದಿನದ ಮತ್ತೊಂದು ಪಂದ್ಯದಲ್ಲಿ ಮೆಟ್ರೊ ಹಾಕಿ ಕ್ಲಬ್ ತಂಡ 7–2 ಗೋಲುಗಳಿಂದ ಜೂಡ್ ಫೆಲಿಕ್ಸ್ ಹಾಕಿ ಅಕಾಡೆಮಿ (ಜೆಎಫ್‌ಎಚ್‌ಎ) ತಂಡವನ್ನು ಸೋಲಿಸಿತು.

ವಿ.ರಾಜಾ ಮತ್ತು ರೇನ್‌ಬೋ ತಂಡಗಳು ಐದು ಪಂದ್ಯಗಳಿಂದ ತಲಾ 12 ಪಾಯಿಂಟ್ಸ್ ಸಂಗ್ರಹಿಸಿದವು. ಉತ್ತಮ ಗೋಲು ಸರಾಸರಿಯಲ್ಲಿ ರಾಜಾ ತಂಡ ಕಿರೀಟ ಮುಡಿಗೇರಿಸಿಕೊಂಡರೆ, ರೇನ್‌ಬೋ ತಂಡ ‘ರನ್ನರ್ಸ್ ಅಪ್’ ಆಯಿತು. ಮೆಟ್ರೊ ಹಾಕಿ ಕ್ಲಬ್ ಮತ್ತು ಫೈವ್‌ಸಿ ಹಾಕಿ ಕ್ಲಬ್ ತಂಡಗಳು ಕ್ರಮವಾಗಿ ಮೂರು ಹಾಗೂ ನಾಲ್ಕನೇ ಸ್ಥಾನ ಗಳಿಸಿದವು.

‘ಎ’ ಡಿವಿಷನ್, ‘ಬಿ’ ಡಿವಿಷನ್ ಮತ್ತು ‘ಸಿ’ ಡಿವಿಷನ್ ಲೀಗ್ ಗೆದ್ದುಕೊಂಡ ತಂಡಗಳಿಗೆ ಇದೇ ವೇಳೆ ಟ್ರೋಫಿ ವಿತರಿಸಲಾಯಿತು. ವಿಜೇತ ತಂಡಕ್ಕೆ ಟ್ರೋಫಿ ಹಾಗೂ ₹ 30 ಸಾವಿರ ನಗದು ಬಹುಮಾನ ನೀಡಲಾಯಿತು. ರನ್ನರ್ಸ್ ಅಪ್ ತಂಡ ₹20 ಸಾವಿರ, ಮೂರು ಹಾಗೂ ನಾಲ್ಕನೇ ಸ್ಥಾನ ಪಡೆದ ತಂಡಗಳು ತಲಾ ₹ 10 ಸಾವಿರ ನಗದು ಬಹುಮಾನ ಪಡೆದುಕೊಂಡವು.

‘ಎ’ ಡಿವಿಷನ್: 1. ಕರ್ನಾಟಕ ಅರಣ್ಯ ಇಲಾಖೆ, 2. ಯಂಗ್ ಸ್ಟಾರ್ ಹಾಕಿ ಕ್ಲಬ್ ರಾಯಚೂರು, 3. ಗುರು ಹಾಕಿ ಕ್ಲಬ್, 4. ಎಚ್‌ಎಂಟಿ

‘ಬಿ’ ಡಿವಿಷನ್: 1. ಸಂದೀಪ್ ಹಾಕಿ ಕ್ಲಬ್, 2. ಬಿಸಿವೈಎ, 3. ಬಳ್ಳಾರಿ ಹಾಕಿ ಕ್ಲಬ್, 4. ಟೀಮ್ ವೈಲ್ಡ್‌ಬೋರ್

‘ಸಿ’ ಡಿವಿಷನ್: 1. ಡೆಲ್ಲಿ ಪಬ್ಲಿಕ್ ಸ್ಕೂಲ್ (ಈಸ್ಟ್), 2. ಬ್ಲೂ ಸ್ಟಾರ್ ಹಾಕಿ ಕ್ಲಬ್, 3. ಸಹ್ಯಾದ್ರಿ ಹಾಕಿ ಕ್ಲಬ್, ಶಿವಮೊಗ್ಗ, 4. ಈಸ್ಟ್ ಇಂಡಿಯಾ ಹಾಕಿ ಕ್ಲಬ್

ಕೋಲ್ಕತ್ತ ಥಂಡರ್‌ಬೋಲ್ಟ್ಸ್ ತಂಡದ ರಾಹುಲ್ ಅವರ ಸ್ಮಾಷ್ ಅನ್ನು ಎದುರಾಳಿ ಹೈದರಾಬಾದ್ ತಂಡದ ಮಾನ್ ಮತ್ತು ಪ್ರಶಾಂತ್ ತಡೆಯುವ ಪ್ರಯತ್ನ ಮಾಡಿದರು. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಖೇಲೊ ಇಂಡಿಯಾ ಈಜು: ಕರ್ನಾಟಕಕ್ಕೆ ಮತ್ತೆ 8 ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖೇಲೊ ಇಂಡಿಯಾ ಯೂತ್ಸ್ ಗೇಮ್ಸ್‌ನ ಈಜು ಸ್ಪರ್ಧೆಯಲ್ಲಿ ಉತ್ತಮ ಸಾಮರ್ಥ್ಯ ತೋರಿದ ಕರ್ನಾಟಕದ ಈಜುಪಟುಗಳು ಮತ್ತೆ ಎಂಟು ಪದಕಗಳನ್ನು ಜಯಿಸಿದ್ದಾರೆ.

ಬುಧವಾರ ನಡೆದ ಮಹಿಳೆಯರ 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಹಷಿಕಾ ರಾಮಚಂದ್ರ ಚಿನ್ನ ಗೆದ್ದರು. ಅವರು 4 ನಿಮಿಷ, 37.84 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಅಶ್ಮಿತಾ ಚಂದ್ರ (4 ನಿ. 41.36 ಸೆ.) ಇದೇ ವಿಭಾಗದಲ್ಲಿ ಕಂಚು ಗೆದ್ದುಕೊಟ್ಟರು.

4X100 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕರ್ನಾಟಕ ಚಿನ್ನ ಜಯಿಸಿತು. ಹಷಿಕಾ ರಾಮಚಂದ್ರ, ಎಸ್.ರುಜುಲಾ, ಶಾಲಿನಿ ಆರ್.ದೀಕ್ಷಿತ್ ಮತ್ತು ಧೀನಿಧಿ ದೇಸಿಂಗು ಅವರನ್ನೊಳಗೊಂಡ ತಂಡ 4 ನಿ. 6.10 ಸೆ.ಗಳಲ್ಲಿ ಗುರಿ ತಲುಪಿತು.

ಮಹಿಳೆಯರ 100 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ನೀನಾ ವೆಂಕಟೇಶ್ (1 ನಿ. 7.89 ಸೆ.) ಬೆಳ್ಳಿ ಗೆದ್ದರೆ, ಮಹಿಳೆಯರ 100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಧೀನಿಧಿ (1 ನಿ. 6.85 ಸೆ.) ಹಾಗೂ ಪುರುಷರ 1,500 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಅಮೋಘ್ ಆನಂದ್ ವೆಂಕಟೇಶ್ (16 ನಿ. 38.27 ಸೆ.) ಕಂಚು ಜಯಿಸಿದರು.

ಮಹಿಳೆಯರ 200 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ವಿಹಿತಾ ನಯನಾ (2 ನಿ. 42.19 ಸೆ.) ಮತ್ತು ಎಸ್.ಲಕ್ಷ್ಯಾ (2 ನಿ. 43.38 ಸೆ.) ಅವರು ಕರ್ನಾಟಕಕ್ಕೆ ಕ್ರಮವಾಗಿ ಬೆಳ್ಳಿ ಹಾಗೂ ಕಂಚು ತಂದುಕೊಟ್ಟರು.

ಕರ್ನಾಟಕದ ಈಜುಪಟುಗಳು ಎರಡು ದಿನಗಳಲ್ಲಿ ತಲಾ ನಾಲ್ಕು ಚಿನ್ನ, ಬೆಳ್ಳಿ ಮತ್ತು ಕಂಚು ಸೇರಿದಂತೆ ಒಟ್ಟು 12 ಪದಕಗಳನ್ನು ಜಯಿಸಿದ್ದಾರೆ.

ಕೋಲ್ಕತ್ತಕ್ಕೆ ಸತತ ಎರಡನೇ ಜಯ

ಬೆಂಗಳೂರು: ಹಾಲಿ ಚಾಂಪಿಯನ್ ಕೋಲ್ಕತ್ತ ಥಂಡರ್‌ಬೋಲ್ಟ್ಸ್ ತಂಡದವರು ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಸತತ ಎರಡನೇ ಗೆಲುವು ಸಾಧಿಸಿದರು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಅಶ್ವಲ್ ರೈ ನೇತೃತ್ವದ ತಂಡ 4–1 ರಲ್ಲಿ ಹೈದರಾಬಾದ್ ಬ್ಲ್ಯಾಕ್‌ಹಾಕ್ಸ್ ತಂಡವನ್ನು ಮಣಿಸಿತು.

ಮೊದಲ ನಾಲ್ಕು ಸೆಟ್‌ಗಳನ್ನು ಕೋಲ್ಕತ್ತದ ತಂಡ 15-13, 15-7, 15-9, 15–12 ರಲ್ಲಿ ಜಯಿಸಿತು. ಆದರೆ ಕೊನೆಯ ಸೆಟ್ 15–8 ರಲ್ಲಿ ಗೆದ್ದ ಬ್ಲ್ಯಾಕ್‌ಹಾಕ್ಸ್ ತಂಡ ಎದುರಾಳಿಗೆ ಬೋನಸ್ ಪಾಯಿಂಟ್ ನಿರಾಕರಿಸಿತು.

ಅತ್ಯುತ್ತಮ ಪ್ರದರ್ಶನ ನೀಡಿದ ವಿನೀತ್ ಕುಮಾರ್ ಅವರು ಕೋಲ್ಕತ್ತ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಟಾರ್ಪಿಡೋಸ್‌ಗೆ ಡಿಫೆಂಡರ್ಸ್‌ಗೆ ಸವಾಲು: ಗುರುವಾರ ನಡೆಯುವ ಪಂದ್ಯದಲ್ಲಿ ಬೆಂಗಳೂರು ಟಾರ್ಪಿಡೋಸ್ ತಂಡ ಅಹಮದಾಬಾದ್ ಡಿಫೆಂಡರ್ಸ್ ತಂಡದ ಸವಾಲು ಎದುರಿಸಲಿದೆ.

ಆರಂಭ: ಸಂಜೆ 7; ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್